**Volume XX : July to December – 2022, ISSN 2250-1711**
**Journal of Veda Samskrita Academy [Recognised in the UGC-CARE List]**

# ವಿದ್ವಾನ್ ಡಾ. ಎಚ್. ವಿ. ನಾಗರಾಜ್ ರಾವ್ ವಿರಚಿತ 'ನಾಗರಾಜಶತಕಮ್' ಕೃತಿಯಲ್ಲಿ ವ್ಯಕ್ತವಾದ ಭರ್ತೃಹರಿಯ ಶತಕಗ್ರಂಥಗಳ ಪ್ರಭಾವ ಮತ್ತು ಪ್ರೇರಣೆ

## विद्वान् डा. एच्. वि. नागराजराव् विरचितस्य 'नागराजशतकम्' ग्रन्थस्योपरि भर्तृहरेः शतकानां प्रभावः, प्रेरणा च

**श्रीमति कविता बि., बेङ्गळूरु**
ನೋಂದಣಿ ಸಂಖ್ಯೆ: **Ph.D./RG-LF/19-20/28**

ಪ್ರಬಂಧಲೇಖದ ಮುಖ್ಯಾಂಶಗಳು:-

೧. ಸಂಸ್ಕೃತಸಾಹಿತ್ಯದ ವಿವಿಧ ಪ್ರಕಾರಗಳ ವೈವಿಧ್ಯತೆಯನ್ನು ಅರಿಯುವುದು.
೨. ಸಂಸ್ಕೃತಸಾಹಿತ್ಯದಲ್ಲಿ ಪದ್ಯಸಾಹಿತ್ಯ ಮತ್ತು ಶತಕಸಾಹಿತ್ಯೇತಿಹಾಸದ ಸಂಕ್ಷಿಪ್ತ ಪರಿಚಯ.
೩. ಸಂಸ್ಕೃತಸಾಹಿತ್ಯದಲ್ಲಿ ಶತಕಗ್ರಂಥಗಳ ಸ್ಥಾನಮಾನ ಮತ್ತು ಮಹತ್ತ್ವ.
೪. ಆಧುನಿಕ ಸಂಸ್ಕೃತಸಾಹಿತ್ಯಕ್ಕೆ ವಿದ್ವಾನ್ ಡಾ. ಎಚ್. ವಿ. ನಾಗರಾಜರಾವ್ ಅವರ ಯೋಗದಾನ.
೫. ಸಂಸ್ಕೃತಶತಕಸಾಹಿತ್ಯೇತಿಹಾಸದಲ್ಲಿ ವಿದ್ವಾನ್ ಡಾ. ಎಚ್. ವಿ. ನಾಗರಾಜರಾವ್ ಅವರ ಕೃತಿಗಳ ಮಹತ್ತ್ವ.

## ಪೀಠಿಕಾ:-

ಸಮುದ್ರೋಪಮವಾದ ಸಂಸ್ಕೃತಸಾಹಿತ್ಯವು ವಿಶ್ವಸಾಹಿತ್ಯದಲ್ಲೇ ಅತ್ಯಂತ ಪ್ರಧಾನ ಮತ್ತು ಉತ್ಕೃಷ್ಟವೆನಿಸಿದೆ. ತನ್ನ ವೈವಿಧ್ಯಮಯವಾದ ಪ್ರಕಾರಗಳಿಂದಾಗಿ ಭಿನ್ನತೆಯನ್ನೂ, ವಿಪುಲತೆಯನ್ನೂ ಒಳಗೊಂಡು ಅನನ್ಯವೆನಿಸಿದೆ. ತನ್ನಲ್ಲಿನ ಬತ್ತದ, ಬರಿದಾಗದ ಕಾವ್ಯಸೌರಭದಿಂದಾಗಿ ಅನಂತವಾದ ಅದಮ್ಯತೆಯನ್ನೂ ಮೈಗೂಡಿಸಿಕೊಂಡಿದೆ. ಸಂಸ್ಕೃತಸಾಹಿತ್ಯವು ಪ್ರಾಚೀನಕಾಲದಲ್ಲಿ ಹೊಂದಿದ್ದ ಪ್ರಧಾನ ಗುರಿಯೆಂದರೆ ಆದರ್ಶಜೀವನದ ಪ್ರದರ್ಶನ ಹಾಗೂ ನಿದರ್ಶನದ ಮೂಲಕ ಜನತೆಯ ಜೀವನವನ್ನು ಉನ್ನತಗೊಳಿಸುವುದಾಗಿತ್ತು. ವರ್ಣಾಶ್ರಮಗಳ ವಿಶಿಷ್ಟ ಧರ್ಮಗಳಂತೆ ಸತ್ಯ, ಅಹಿಂಸೆ, ನೀತಿ, ಪ್ರಾಮಾಣಿಕತೆ, ನಿಷ್ಠೆ ಮುಂತಾದ ಸಾರ್ವತ್ರಿಕ ಧರ್ಮಗಳನ್ನೂ ಮತ್ತು ಅವುಗಳು ಸರ್ವಜನರಿಗೂ ಸುಲಭವೇದ್ಯವಾದ ಭಾಷೆಯಲ್ಲಿ ಅರ್ಥವಾಗುವಂತೆ ರಚಿಸಲ್ಪಟ್ಟು; ಕಾವ್ಯಾಧ್ಯಯನದೊಂದಿಗೆ ಧರ್ಮಾರ್ಥಕಾಮ -ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳ ಸಾಧನೆಗೂ ಸಾಧಕವಾಗಿರುವುದು ಸರ್ವಥಾ ಪ್ರಶಂಸನೀಯ ಮತ್ತು ಅನುಕರಣೀಯ. ಕಾವ್ಯಪ್ರಯೋಜನವನ್ನು ಕುರಿತ ಈ ಶ್ಲೋಕ ಇಲ್ಲಿ ವಿಶ್ವಸನೀಯವೆನಿಸಿದೆ. ಯಥಾ,

"काव्यं यशसेऽर्थकृते व्यवहारविदे शिवेतरक्षतये । सद्यःपरनिर्वृतये कान्तासम्मिततया उपदेशयुजे ॥
(मम्मटभट्टस्य काव्यप्रकाशे-1.2 )

ವೈದಿಕಸಾಹಿತ್ಯದ ನಂತರದಲ್ಲಿ ರಾಮಾಯಣ, ಮಹಾಭಾರತ, ಪುರಾಣಾದಿ ಗ್ರಂಥಗಳೂ ನಮ್ಮ ಭಾರತೀಯ ಸಂಸ್ಕೃತಿಯ ಅಗಾಧತೆಯನ್ನೂ, ಆಳದ ಅರಿವನ್ನೂ ಸುಸ್ಪಷ್ಟವಾಗಿ ಹೊರ ಸೂಸಿವೆ. ಇಲ್ಲಿ ಧೀರೋದಾತ್ತ, ಸರ್ವಗುಣಸಂಪನ್ನ, ಧರ್ಮನಿರತನಾದ ನಾಯಕನ ಸಮಗ್ರ ಚಿತ್ರಣದೊಡನೆ, ಸಾಂಸಾರಿಕಜೀವನದ ಪರಿಧಿಗಿಂತಲೂ ಹೊರಗೆ ನಿಲ್ಲುವ ಅನೇಕಾನೇಕ ಸಾಮಾಜಿಕ, ರಾಜಕೀಯ, ನೈತಿಕ, ಧಾರ್ಮಿಕ ವಿಷಯಗಳೂ ಸಮ್ಮಿಳಿತವಾಗಿದ್ದು, ನೂರಾರು ಉಪನ್ಯಾಸಗಳೂ ನೀತಿಬೋಧಕ ಪಾತ್ರಗಳನ್ನು ಆದ್ಯಂತ ಸಕ್ರಿಯವಾಗಿ ನಿರ್ವಹಿಸುತ್ತಾ ಬಂದಿವೆ. ಸಾಹಿತ್ಯದಲ್ಲಿನ ಅಪಾರ ಪ್ರತಿಭಾಶಕ್ತಿಯನ್ನುದ್ದೇಶಿಸಿ ಕವಿ ಶ್ರೀಹರ್ಷನು ಈ ರೀತಿ ಪ್ರಶಂಸಿಸಿದ್ದಾನೆ.

"साहित्ये सुकुमारवस्तुनि दृढन्यायग्रहग्रन्थिले । तर्के वा मयि संविधातरि समं लीलायते भारती ॥"
(ಉಲ್ಲೇಖ- 'ಸಂಸ್ಕೃತ ಕಾವ್ಯ', ಡಾ|| ಕೆ.ಕೃಷ್ಣಮೂರ್ತಿ)

ಹೀಗೆ, ಸಾಹಿತ್ಯ ಅಥವಾ ಕಾವ್ಯವೆಂಬುದು ಭಾರತೀಯರ ಮನೋಮಂದಿರದಲ್ಲಿ ಚಿರಸ್ಥಾಯಿಯಾಗಿ ನಿಂತಿವೆ. ಅಖಂಡ ಭಾರತೀಯ ಆದರ್ಶಗಳನ್ನು ಅರಿಯುವವರಿಗೆ ಕಾವ್ಯಗಳ ಅನುಶೀಲನೆ ಮತ್ತು ಅಧ್ಯಯನ ಸರ್ವಥಾ ಅತ್ಯಗತ್ಯ. ಇಂತಹ ಅಪೂರ್ವ ಕಾವ್ಯಪ್ರಕಾರಗಳಲ್ಲಿ ಪದ್ಯಸಾಹಿತ್ಯದ ಆಕರ್ಷಕಭಾಗವಾಗಿರುವ ಶತಕಗ್ರಂಥಗಳೂ ಪ್ರಧಾನವೆನಿಸಿವೆ. ಹೆಚ್ಚು ಹೆಚ್ಚು ಜನಾನುರಾಗೀ ಎನಿಸಿವೆ. ಕಾರಣ ಇವುಗಳ ಸಹಜಭಾಷೆ ಮತ್ತು ಸರಳೋದಾಹರಣೆಗಳು ಎನ್ನಬಹುದು. ಗದ್ಯಕಾವ್ಯಗಳಲ್ಲದೇ ವಿಡಂಬನೆ, ನೀತಿ, ವೈರಾಗ್ಯ, ಶೃಂಗಾರಾದಿ ಪ್ರಧಾನವಾದ ಲಘುಕಾವ್ಯಗಳೂ ಜನಮಾನಸದಲ್ಲಿ ರಾರಾಜಿಸಿದವು. ಲಘುಕಾವ್ಯಗಳಂತಹ ಸ್ವತಂತ್ರ ಗ್ರಂಥಗಳ ಸಂಖ್ಯೆ ಸಣ್ಣದೆನಿಸಿದರೂ ಉಪಲಬ್ಧವಿರುವ ಹಲವು ಸುಭಾಷಿತಸಂಗ್ರಹಗಳಲ್ಲಿ ಸಮಗ್ರವಾದ ರಚನೆಯನ್ನು ಪಾಠಕರು, ವಿದ್ಯಾರ್ಥಿಗಳು, ಪಂಡಿತರೂ ಸ್ಪಷ್ಟವಾಗಿ ಗುರುತಿಸಬಹುದಾಗಿದೆ.

ಇದರಂತೆ ಸಂಸ್ಕೃತದಲ್ಲಿರುವ ಸ್ತೋತ್ರಸಾಹಿತ್ಯವೂ ಅತಿ ವಿಪುಲವಾಗಿದ್ದು, ಸ್ತೋತ್ರಗಳಲ್ಲಿ ಕೆಲವು ಕೇವಲ ನಾಮಾವಳಿಗಳಿರುವಂತೆಯೇ ಅತಿ ದೀರ್ಘಸಮಾಸಗಳಿಂದಲೂ ಶ್ಲಿಷ್ಟಾಲಂಕಾರಗಳಿಂದಲೂ ಪ್ರೌಢಸ್ತೋತ್ರಕಾವ್ಯಗಳಾಗಿವೆ. ಇನ್ನು ಭಕ್ತಿಪ್ರಚೋದಕವಾದ ಸ್ತೋತ್ರಗಳಿಗಿಂತಲೂ ಮಿತಿಯೇ ಇಲ್ಲದಂತೆ ಅಸಂಖ್ಯಾತವೆನಿಸಿವೆ. ಸಾಮಾನ್ಯರ ನಿತ್ಯಜೀವನವನ್ನೇ ಆಧಾರವಾಗಿಟ್ಟುಕೊಂಡು ರಚಿತವಾದ ಮಹಾಕಾವ್ಯಗಳಂತೆಯೇ, ದೀರ್ಘಪರಿಮಿತಿಯ ಲಘುಕಾವ್ಯಗಳೂ, ಆಕರ್ಷಕ ನಿದರ್ಶನಗಳಿಂದ ಸಮೃದ್ಧವಾದ ಸ್ತೋತ್ರಕಾವ್ಯಾಧಾರಿತ ಗ್ರಂಥಗಳು ಅನಂತವಾಗಿವೆ. ಹೀಗೆ, 'ವ್ಯಂಗ್ಯಚಮತ್ಕೃತಿಗಳನ್ನೂ, ರಸದ ಗತಿಗಳನ್ನೂ, ಅರ್ಥದ ಔಚಿತ್ಯವನ್ನೂ ಪರಿಭಾವಿಸಿ ಸಹೃದಯನು ಅಂತರಂತದಲ್ಲಿ ಪಡೆಯುವ ಆನಂದವೇ ಕವಿಯ ಜೀವನಾಡಿ' ಎಂಬ ತಥ್ಯವನ್ನು ತಿಳಿಸುವ ಸುಭಾಷಿತವು ಸಂಸ್ಕೃತಕಾವ್ಯಾಭಿರುಚಿಯನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ. –

"अन्धीभूय गुणागुणेषु तरवो वातावधूता इव श्लाघन्ते यदि साहितीं रसवतीमज्ञाः ततः किं फलम् ।
जानन् व्यङ्ग्यचमत्कृतीः रसगतीरर्थोचितीरादरात् अन्तश्शर्म यदश्नुते सहृदयः सा जीवनाडी कवेः ॥"

(ಉಲ್ಲೇಖ- 'ಸಂಸ್ಕೃತ ಕಾವ್ಯ', ಡಾ|| ಕೆ.ಕೃಷ್ಣಮೂರ್ತಿ)

ಹೀಗೆ, ಕವಿಯು ಅಂತಃಸ್ಫೂರ್ತಿಯಿಂದ, ಅಂತಃಶಕ್ತಿಯಿಂದ ಬರೆದದ್ದರಿಂದಲೇ ಸಂಸ್ಕೃತಕಾವ್ಯದ ವೃದ್ಧಿ ಅವ್ಯಾಹತವಾಗಿ ಸಾಗುತ್ತಾ ಬಂದಿದೆ. ಈ ಅಂತಃಸ್ಫೂರ್ತಿ ಧರ್ಮದಿಂದಲೂ, ಕೆಲಮೊಮ್ಮೆ ಸೌಂದರ್ಯಾರಾಧನೆಯಿಂದಲೂ, ಭಕ್ತಿಯಿಂದಲೂ, ಪ್ರೇಮದಿಂದಲೂ, ಕಾರುಣ್ಯದಿಂದಲೂ ಸೃಜಿಸಿ ಹೊರ ಹೊಮ್ಮುವಂತಹದ್ದಾಗಿದೆ. ಆರ್ಷವಾಣಿಯು ಕವಿಯ ಕಲಾವಿಲಾಸದ ಪಾರಮ್ಯವನ್ನು ಮುಟ್ಟಿ, ಪಾಂಡಿತ್ಯದೊಡನೆ ಮುಂದ್ರಾಕಿತವಾದರೂ ಕಾವ್ಯಗುಣಗಳನ್ನು ಕಳೆದುಕೊಳ್ಳದೇ ಹೊಸದಾದ ನದಿ-ಉಪನದಿಗಳಾಗಿ ಪ್ರವಹಿಸುತ್ತಾ ಬಂದಿವೆ. ಸಂಸ್ಕೃತಸಾಹಿತ್ಯವು ಸಕಲ ಭಾರತೀಯ ಹೃದಯಗಳಲ್ಲಿ ಸ್ಪಂದಿಸುವ ಸಜೀವಭಾಷೆಯಾಗಿ ಬೆಳೆದು ಬಂದಿದೆ. ರಾಷ್ಟ್ರದ ಪುನರ್ನಿರ್ಮಾಣದಲ್ಲಿ ಪ್ರಧಾನಪಾತ್ರವಹಿಸಿದೆ. ವಿಶ್ವದಲ್ಲೇ ಅಭೂತಪೂರ್ವವಾದ ಮಹಾಸಾಹಿತ್ಯವೆನಿಸಿ ವಿಶ್ವವಂದ್ಯವೆನಿಸಿದೆ. ಸಂಸ್ಕೃತದ ಅತುಲ್ಯ ಅಂತಃಸತ್ತ್ವವು ಪ್ರಕಾಶಮಯವಾಗಿ ವಿಶ್ವದೆಲ್ಲೆಡೆ ಶೋಭಿಸುತ್ತಿದೆ.

"प्राचेतसे या जगति प्ररूढा या पुष्पिता सत्यवतीकुमारे । या कालिदासे फलिता कवीनामेकोपमाने कविता लताभूत् ॥"

(ಉಲ್ಲೇಖ- 'ಸಂಸ್ಕೃತ ಕಾವ್ಯ', ಡಾ|| ಕೆ.ಕೃಷ್ಣಮೂರ್ತಿ )

ಇದರಂತೆ ಸಂಸ್ಕೃತ ಕವಿತೆಯ ಲತಾವಿಶೇಷವು ವಾಲ್ಮೀಕಿಯಲ್ಲಿ ಹುಟ್ಟಿ ಬೆಳೆದು, ವ್ಯಾಸರಲ್ಲಿ ಹೂ ಬಿಟ್ಟು, ಕಾಳಿದಾಸನಲ್ಲಿ ಬಣ್ಣ ಕೊಟ್ಟಿತಷ್ಟೇ ಅಲ್ಲ; ಎಲ್ಲಾ ಕವಿಗಳಿಗೂ ಒಂದೇ ನಿರುಪಮ ಆದರ್ಶವನ್ನೊದಗಿಸಿತು ಎಂಬ ಪ್ರಥಿತ ವಾಕ್ಯವಿದೆ.

(V. Raghavan; Report of Sahithya Akademi, Delhi)

*ಭರ್ತೃಹರಿಯ ನೀತಿ-ವೈರಾಗ್ಯಶತಕಗಳ ವೈಶಿಷ್ಟ್ಯತೆ:-

(संस्कृतशतकसाहित्ये भर्तृहरेः नीति-वैराग्यशतकयोः वैशिष्ट्यता :- )

ಭಾರತೀಯ ಸಾಹಿತ್ಯದಲ್ಲಿ ಲೋಕಾನುಭವವನ್ನೂ ಜೀವನೋನ್ನತಿಗೆ ಸಾಧಕವಾದ ಅಂಶಗಳನ್ನೂ ಕಾವ್ಯದಲ್ಲಿ ಸಮರ್ಥವಾಗಿ ಕ್ರೋಡೀಕರಿಸುವ ವೈಶಿಷ್ಟ್ಯ ಆದಿಕಾಲದಿಂದಲೂ ರೂಢಿಯಲ್ಲಿದೆ. ಇಂತಹ ನೀತಿಪರ ಶ್ಲೋಕಗಳ ಮಹಾಪೂರವೇ ರಾಮಾಯಣ, ಮಹಾಭಾರತ, ಪುರಾಣಾದಿ ಪ್ರಧಾನಗ್ರಂಥಗಳಲ್ಲೂ ಅನುಸ್ಯೂತವಾಗಿ ಕಂಡುಬರುತ್ತವೆ. ಪಾಳೀಭಾಷೆಯ 'ದಮ್ಮಪದ'ದಲ್ಲೂ ತತ್ತ್ವಜ್ಞಾನ, ನೀತಿ, ಜೀವನಾನುಭವ ಕುರಿತ ಲೋಕಾನುಭವದ ಸಂಗ್ರಹವುಂಟು. ಸಂಸ್ಕೃತದಲ್ಲಿ ಇಂತಹ ಲೋಕೋಕ್ತಿಗಳ ಪ್ರಥಮ ಸಂಕಲನ ಚಾಣಕ್ಯನ ಹೆಸರಿನಲ್ಲಿ ಪ್ರಚಾರದಲ್ಲಿದ್ದು 'ವೃದ್ಧಚಾಣಕ್ಯನೀತಿ', 'ಚಾಣಕ್ಯನೀತಿ', 'ರಾಜನೀತಿಸಮುಚ್ಚಯ' ಎಂಬ ನಾಮಾಂತರಗಳೆಲ್ಲವೂ ಈ ಸಂಕಲನಕ್ಕೆ ಹೆಸರಿಸಲ್ಪಟ್ಟಿವೆ. ಇಲ್ಲಿ ಲೋಕವ್ಯವಹಾರದ ಪರಿಜ್ಞಾನಕ್ಕೆ ಅಗತ್ಯವಾದ ಎಲ್ಲಾ ಮಾರ್ಮಿಕ ಸಾಮಗ್ರಿಗಳೂ ಈ ನೀತಿಕಾವ್ಯದಲ್ಲಿದೆ. ಇಲ್ಲಿನ ಶ್ಲೋಕಗಳನ್ನು ಭಾರತದ ವ್ಯವಹಾರಜ್ಞಾನದ ಗುಳಿಗೆಗಳೆಂದು ಪ್ರಶಂಸಿಸಲಾಗಿದೆ. ಉದಾಹರಣೆಗೆ-

"सकृत् जल्पन्ति राजानः सकृत् जल्पन्ति पण्डिताः । सकृत् प्रदीयते कन्या त्रीण्येतानि सकृत् सकृत् ॥"
"परवादं परद्रव्यं परहानिं परस्त्रियाम् । परवेश्मनिवासं च दूरतः परिवर्जयेत् ॥"

(ಉಲ್ಲೇಖ- 'ಸಂಸ್ಕೃತ ಕಾವ್ಯ', ಡಾ|| ಕೆ.ಕೃಷ್ಣಮೂರ್ತಿ )

ಇದರಂತೆ ವರರುಚಿ, ಘಟಕರ್ಪರ, ವೇತಾಲಭಟ್ಟ ಮುಂತಾದವರ ಹೆಸರಿನಲ್ಲೂ 'ನೀತಿರತ್ನ', 'ನೀತಿಸಾರ', 'ನೀತಿಪ್ರದೀಪ' ಮುಂತಾದ ವಿವಿಧ ಸಂಗ್ರಹಗಳಿವೆ. ಇವುಗಳಲ್ಲೆಲ್ಲಾ ಪ್ರಸಿದ್ಧವಾದವು ಭರ್ತೃಹರಿಯ ನೀತಿ ಮತ್ತು ವೈರಾಗ್ಯಶತಕಗಳು. ಭರ್ತೃಹರಿಯ ಶೈಲಿ ಸುಲಭವೂ, ಸುಂದರವೂ, ಮನೋಜ್ಞವೂ ಆಗಿದೆ. ಯಥಾ-

"यदा किञ्चिज्ज्ञोऽहं गज इव मदान्धः समभवं तदा सर्वज्ञोऽस्मीत्यभवदवलिप्तं मम मनः ।
यदा किञ्चित् किञ्चित् बुधजनसकाशादवगतं तदा मूर्खोऽस्मीति ज्वर इव मदो व्यपगतः ॥" (नीतिशतकम्- )

ಭರ್ತೃಹರಿಯ 'ವೈರಾಗ್ಯಶತಕ'ದ ಅನುಕರಣೆಯಲ್ಲೇ ಬಿಲ್ಹಣನ 'ಶಾಂತಿಶತಕ'ವೂ ರಚಿತವಾಗಿದೆ. ಸಮಸ್ತ ಸಂಸ್ಕೃತ ಶತಕಸಾಹಿತ್ಯೇತಿಹಾಸದಲ್ಲಿ ಭರ್ತೃಹರಿಯ ಶತಕಗ್ರಂಥಗಳ ಪ್ರಭಾವ ಅನನ್ಯ ಮತ್ತು ಅಪ್ರತಿಮವಾದುದು. ಅದರಲ್ಲೂ ನೀತಿ ಮತ್ತು ವೈರಾಗ್ಯಶತಕಗಳಲ್ಲಿ ಅಡಗಿರುವ ಜೀವನಮೌಲ್ಯಗಳು, ವಾಸ್ತವ ಸಂಗತಿಗಳು ಮತ್ತು ಪ್ರಾಪಂಚಿಕ ಸತ್ಯಾಸತ್ಯತೆಗಳು ಇಂದಿಗೂ ಸಾಹಿತ್ಯಾಸಕ್ತರಲ್ಲಿ, ಸಾಹಿತ್ಯಾರಾಧಕರಲ್ಲಿ ಮತ್ತು ಸಾಹಿತ್ಯಸಂಧರಲ್ಲಿ ಅನುಸ್ಯೂತವಾದ ಉತ್ಸಾಹವನ್ನೂ, ಪ್ರೇರಣೆಯನ್ನೂ, ಪ್ರಭಾವವನ್ನೂ, ಮಾರ್ಗದರ್ಶನವನ್ನೂ, ಪರಿವರ್ತನೆಯನ್ನೂ, ರೀತಿ-ನೀತಿಯನ್ನೂ ಮತ್ತು ಅನುಭವವನ್ನೂ ಪಸರಿಸುತ್ತಾ, ಪ್ರೇರೇಪಿಸುತ್ತಾ ಬಂದಿರುವುದು ವಿಶ್ವಸನೀಯ ವಿಚಾರಧಾರೆ ಮತ್ತು ಪ್ರಶಂಸನೀಯ ಸಂಗತಿ ಎನಿಸಿದೆ.

"अज्ञः सुखमाराध्यः सुखतरमाराध्यते विशेषज्ञः । ज्ञानलवदुर्विदग्धं ब्रह्मापि नरं न रञ्जयति ॥" – ३
"साहित्यसङ्गीतकलाविहीनः साक्षात्पशुः पुच्छविषाणहीनः । तृणं न खादन्नपि जीवमानस्तद्भागदेयं परमं पशूनाम् ॥"- १२

ಇತ್ಯಾದಿ ಅನೇಕಾನೇಕ ಶ್ಲೋಕಗಳು ಸಮಸ್ತ ಸೃಷ್ಟಿ ಮತ್ತು ಮನುಷ್ಯ ಜೀವನದ ಸಾರಸರ್ವಸ್ವವನ್ನೇ ತನ್ನ ಗ್ರಂಥಗರ್ಭದಲ್ಲಿ ಭರ್ತೃಹರಿ ಮಹಾಕವಿಯ ಅದಮ್ಯ ಜೀವನಾನುಭವವನ್ನು ಸ್ಪಷ್ಟಪಡಿಸುತ್ತವೆ. ಇಂತಹ ಮಹಾಜ್ಞಾನಧಾರೆ ಅಮೋಘವಾದ ಕಾವ್ಯರಚನೆಗಳಿಗೆ ಮುಕ್ತಾವಕಾಶ ಮತ್ತು ಪ್ರೇರಣಾದಾಯಕವಾಯಿತು. ಇದಕ್ಕೆ ಅಸಂಖ್ಯಾತ ಸಂಸ್ಕೃತ ಮತ್ತು ಸಂಸ್ಕೃತೇತರ ಶ್ರೇಷ್ಠಕೃತಿಗಳು ಸಾಕ್ಷಿಯಾಗಿವೆ.

## *<u>ನಾಗರಾಜಶತಕದ ಮೇಲೆ ಭರ್ತೃಹರಿಯ ಶತಕಗ್ರಂಥಗಳ ಪ್ರಭಾವವನ್ನು ಕುರಿತ ಸೂಕ್ಷ್ಮಾವಲೋಕನ</u>:-
## (नागराजशतकस्योपरि भर्तृहरेः शतकग्रन्थानां प्रभावाः कीदृशाः वर्तन्ते इति सूक्ष्मावलोकनम् : -)

ಅನಂತವಾದ ಸಂಸ್ಕೃತಸಾಹಿತ್ಯದಲ್ಲಿ ಅತ್ಯಂತ ಮನೋಜ್ಞವಾದ ಮತ್ತು ಮಾನಸೋಲ್ಲಾಸವನ್ನುಂಟು ಮಾಡುವ ಅಸಂಖ್ಯಾತ ಜ್ಞಾನಖಜಾನೆಗಳು ಸಮೃದ್ಧವಾಗಿ ರಾರಾಜಿಸುತ್ತಿವೆ. ಅವುಗಳಲ್ಲಿ ಶತಕಸಾಹಿತ್ಯವೆಂಬ ಅನನ್ಯರಚನೆಯು ಕವಿ ಮತ್ತು ಕವಿತ್ವ ಶಕ್ತಿ, ಯುಕ್ತಿ, ಸ್ಫೂರ್ತಿ, ರೀತಿ, ಪ್ರೀತಿ, ನೀತಿ, ಸ್ತುತಿ, ಗತಿ, ಕಾಂತಿ, ಶಾಂತಿ, ದೀಪ್ತಿ, ಪ್ರಗತಿ, ಪ್ರಮತಿ, ಪ್ರಸ್ತುತಿ, ಸಂಗತಿಗಳ ಮಹಾಸಂಗಮವನ್ನು ಪ್ರತಿನಿಧಿಸುವ ವಿಶಿಷ್ಟಕಾವ್ಯಶೈಲಿ ಎನಿಸಿರುವುದು ಸರ್ವವಿದಿತ. ಸಂಸ್ಕೃತಭಾಷೆಯ ಶತಕಗ್ರಂಥೇತಿಹಾಸದಲ್ಲಿ ಅಜರಾಮರವಾದ ಲೋಕಪ್ರಸಿದ್ಧಿಗೆ ಪಾತ್ರನಾದವನು ಪಂಡಿತ ಭರ್ತೃಹರಿ ಮತ್ತವನ ಶತಕಗ್ರಂಥಗಳು. ಸಾರ್ವತ್ರಿಕವಾದ ವ್ಯಾವಹಾರಿಕಜೀವನದ ಪ್ರೀತಿ-ರೀತಿ-ನೀತಿಗಳನ್ನು ಯಥಾವತ್ತಾಗಿ ವರ್ಣಿಸುತ್ತಾ, ಸಾಮಾನ್ಯ ಲೌಕಿಕವ್ಯವಹಾರಗಳ ಮೇಲೆ ವಿಮರ್ಶಾತ್ಮಕವೂ, ವಿಶ್ಲೇಷಣಾತ್ಮಕವೂ, ವೈಚಾರಿಕವೂ ಆದ ವಿವರಣೆಯನ್ನು ನೀಡಿ, ಪ್ರಬುದ್ಧವಾದ ಚಿಂತನ-ಮಂಥನವನ್ನು ಪ್ರತಿಬಿಂಬಿಸಿರುವುದು ಭರ್ತೃಹರಿಯ ಪ್ರತಿಭಾವೈಶಿಷ್ಟ್ಯತೆ ಹಾಗೂ ಕವಿತ್ವಶ್ರೇಷ್ಠತೆ ಎನ್ನಬಹುದು. ಯಥಾ,

"यदा किञ्चिज्ज्ञोऽहं गज इव मदान्धः समभवम् तदा सर्वज्ञोऽस्मीत्यभवदवलिप्तं मम मनः ।
यदा किञ्चित् किञ्चित् बुधजनसकाशादवगतम् तदा मूर्खोऽस्मीति ज्वर इव मदो मे व्यपगतः ॥"

ಇಂತಹ ಅನನ್ಯ ಶತಕಗ್ರಂಥಗಳ ಪ್ರಭಾವ ಮುಂದಿನ ಅನೇಕ ಸಂಸ್ಕೃತಕವಿಗಳ ಕೃತಿಗಳ ಮೇಲೂ ವಿಶೇಷವಾದ ಪ್ರಭಾವ ಹಾಗೂ ಪ್ರೇರಣೆಯನ್ನುಂಟು ಮಾಡಿವೆ. ಅದರಂತೆ, ಆಧುನಿಕ ಸಂಸ್ಕೃತವಿದ್ವಾನ್, ಶತಕಕವಿ ಡಾ. ಎಚ್. ವಿ. ನಾಗರಾಜರಾವ್ ಅವರ 'ನಾಗರಾಜಶತಕಮ್' ಎಂಬ ಅಪರೂಪ ವಿಚಾರಧಾರೆ ಮತ್ತು ವಾಸ್ತವ ವಸ್ತುವಿಷಯಾಧಾರಿತ ಸಂಗತಿಗಳನ್ನು ಒಳಗೊಂಡಿರುವ ಚರ್ಚಾಸ್ಪದ ಹಾಗೂ ಚಿಂತನಾಯೋಗ್ಯ ವಿಚಾರಸಂದೋಹಗಳಿರುವ ಕೃತಿಯ ಮೇಲೂ ಭರ್ತೃಹರಿಯ ಶತಕಕೃತಿಗಳ ಅದಮ್ಯ ಪ್ರಭಾವ ಹಾಗೂ ಪ್ರೇರಣೆಯನ್ನು ಗುರುತಿಸಬಹುದಾಗಿದೆ. ಈ ಗ್ರಂಥದ ಆದ್ಯಂತವೂ ಸಮಾಜದ ಪುನರುತ್ಥಾನ, ವೈಯಕ್ತಿಕಜೀವನದ ಪರಿಶುದ್ಧತೆ ಮತ್ತು ವಿಡಂಬನಾತ್ಮಕ ಜೀವನಸಂಗತಿಗಳು ಅವಿಚ್ಛಿನ್ನವಾಗಿ ಪ್ರವಹಿಸುತ್ತಾ ಬಂದಿವೆ. ಸಮಸ್ತ ಗ್ರಂಥಭಾಗದಲ್ಲೂ ಕವಿಯ ಅನನ್ಯ ಜೀವಾನಾನುಭವ, ಜೀವನಾನುಭೂತಿ, ಜೀವನಪ್ರೀತಿ ಮತ್ತು ತೀಕ್ಷ್ಣವಾದ ಸಾಹಿತ್ಯಾಧ್ಯಯನ ಹಾಗೂ ಸಾಹಿತ್ಯಾಭಿರುಚಿ ಅನುಸ್ಯೂತವಾಗಿ ವಿರಾಜಿಸುತ್ತದೆ. ಗ್ರಂಥಾರಂಭದಲ್ಲಿ ಲೋಕದಲ್ಲಿನ ವಿಡಂಬನಾತ್ಮಕವಾದ ಲೌಕಿಕತೆಯನ್ನುದ್ದೇಶಿಸಿ ಚಿಂತನೆಯನ್ನು ಮಾಡಲಾಗಿದೆ.

"सन्त्येव सज्जनाः सन्त्येव पण्डिताः सन्त्येव देवालया योगिनश्च ।
दौर्जन्यमज्ञानमपि नास्तिकत्वं च कस्मान्नु वर्धते नागराज ॥" (नागराजशतकम्-१)

ಅನಗತ್ಯವಾಗಿ ಚಿನ್ನದ ವಿಷಯದಲ್ಲಿ ಮನುಷ್ಯರಿಗಿರುವ ಅತಿಯಾಸೆ ಹಾಗೂ ದೌರ್ಬಲ್ಯವು ವಿಚಿತ್ರವೇ ಸರಿ ಎಂದು ಸ್ವಗತದೊಂದಿಗೆ ವಿಮರ್ಶೆಗೆ ಹಚ್ಚಿದಂತಿದೆ.

"कस्माज्जना हेम्नि रक्षन्ति मोहमिति चिन्तां विधायापि नैव जाने ।
नैव तद् भोज्यमिह नैव पेयं तथा तत्र मोहं जहिहि नागराज ॥" (नागराजशतकम्-२)

ಪರರ ದುಃಖವನ್ನು, ಕಷ್ಟವನ್ನು ಕಂಡು ಸುಖಿಸುವಂತಹ ನರರಾಕ್ಷಸರೆಂದು ದೂಷಿಸಿ, ಕಾಲದ ಪರಿಣಾಮವನ್ನು ಅವಗಣಿಸುವವರನ್ನು ಹೀಗೆ ಎಚ್ಚರಿಸಿದ್ದಾರೆ. ಲೌಕಿಕ ಮತ್ತು ಪಾರಲೌಕಿಕ ಜೀವನದ ಅನೇಕಾನೇಕ ನಿತ್ಯ-ಸತ್ಯ ಸಂಗತಿಗಳು ಗ್ರಂಥದ ಆದ್ಯಂತವಾಗಿ ಅರ್ಥಪೂರ್ಣವಾದ ನಿದರ್ಶನಗಳೊಂದಿಗೆ ಮೂಡಿ ಬಂದಿರುವುದು ಪ್ರಶಂಸನೀಯ ಮತ್ತು ಪ್ರಭಾವಪೂರ್ಣವಾದುದು. ಜೀವನದ ಸೂಕ್ಷ್ಮಾತಿಸೂಕ್ಷ್ಮ ವಿಷಯ-ವಿಚಾರಗಳು ಎಡಬಿಡದೆ ಓದುಗರ ಜ್ಞಾನಪಿಪಾಸೆಯನ್ನು ತಣಿಸುವಲ್ಲಿ ಯಶಸ್ವಿಯಾಗಿರುವುದು ನಿಸ್ಸಂಶಯ. ಇನ್ನು ಭರ್ತೃಹರಿಯ ವಿಚಾರಧಾರೆಯೊಡನೆ ಪರಾಮರ್ಶಿಸುವುದಾದರೆ ಕಾಲಮಾನಕ್ಕೆ ತಕ್ಕಂತೆ ಸಮಾಜಜೀವನದಲ್ಲುಂಟಾದ ಬದಲಾವಣೆಗಳನ್ನು ಯಥಾವತ್ತಾಗಿ, ವಿಮರ್ಶಾತ್ಮಕವಾಗಿ, ತಾರ್ಕಿಕವಾಗಿ, ವಿಶ್ಲೇಷಣಾತ್ಮಕವಾಗಿ ಮತ್ತು ವಿಬುದ್ಧವಾಗಿ ರಚಿಸಿರುವುದು ಅತ್ಯಂತ ಆದರಣೀಯ ವಿಚಾರ ಮತ್ತು ಸಾಹಿತ್ಯಕ್ಷೇತ್ರಕ್ಕೆ ಸಂದ ಮನ್ನಣೆ.

ಉಭಯ ಕವಿವರ್ಯರ ಗ್ರಂಥಗಳ ವಿಚಾರಧಾರೆಗಳನ್ನು ಈ ರೀತಿಯಾಗಿ ಅವಲೋಕಿಸಿ, ಪರಾಮರ್ಶಿಸಬಹುದಾಗಿದೆ.

| ಭರ್ತೃಹರಿಯ ಶತಕತ್ರಯೀ ಸಾರ | ನಾಗರಾಜಶತಕಸಾರ |
|---|---|
| ೧.ಖಲ ಅಥವಾ ದುರ್ಜನರ ಸ್ವಭಾವವನ್ನು ನೀತಿಶತಕದಲ್ಲಿ ಈ ರೀತಿ ವಿಮರ್ಶಿಸಲಾಗಿದೆ:-<br>ಸಮಾಜದಲ್ಲಿ ಅಮೃತೋಪಮವಾದ ಉತ್ತಮ ಮಾತುಗಳಿಂದ ಖಲರನ್ನು ತಿದ್ದುವುದು ಅಸಾಧ್ಯದ ಕೆಲಸವೇ ಸರಿ. ಕಾರಣ ದುಷ್ಟ ಆನೆಯನ್ನು ತಾವರೆಯ ದಂಟಿನಿಂದ ಕಟ್ಟಿ ಎಳೆದು ನಿಯಂತ್ರಿಸುವುದು ಕಠಿಣ; ಕಠೋರವಾದ ವಜ್ರವನ್ನು ಕೋಮಲವಾದ ಶಿರೀಷಪುಷ್ಪದಿಂದ ಕತ್ತಿ ಹೊಳಪು ನೀಡುವುದು ಕಷ್ಟ; ಉಪ್ಪಿನ ಸಮುದ್ರಕ್ಕೆ ಒಂದು ಬಿಂದು ಜೇನು ಹಾಕಿ ಸಿಹಿನೀರನ್ನಾಗಿಸುವುದೂ ವ್ಯರ್ಥವೆಂದು ಪರಾಮರ್ಶಿಸಲಾಗಿದೆ. (ನೀತಿಶತಕ- ೬) | ೧.ದುರ್ಜನರ ಸ್ವಭಾವ ದೋಷಗಳನ್ನು ಈ ಕ್ರಮದಲ್ಲಿ ವಿಮರ್ಶಿಸಲಾಗಿದೆ:-<br>ಈ ಲೋಕದಲ್ಲಿ ಸಜ್ಜನರು, ಪಂಡಿತರು ಮತ್ತು ಯೋಗಿಗಳಿದ್ದಾರೆ; ಅನೇಕಾನೇಕ ದೇವಾಲಯಗಳಿವೆ; ನೀತಿಶಾಸ್ತ್ರಗಳಿವೆ! ಹೀಗಿದ್ದರೂ ಎಲ್ಲೆಡೆ ದೌರ್ಜನ್ಯ, ಅಜ್ಞಾನ ಮತ್ತು ನಾಸ್ತಿಕತ್ವವು ಹೆಚ್ಚುತ್ತಿರಲು ಕಾರಣವೇನೆಂದು ಜಿಜ್ಞಾಸೆ ವ್ಯಕ್ತಪಡಿಸಲಾಗಿದೆ. (೧)<br>ಶ್ರೀರಾಮಕೃಷ್ಣರಂತಹ ಮಹಾನುಭಾವ ದೇವಮಾನವರು ಲೋಕ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರೂ, ಅಂತಹ ವರಲ್ಲೂ ದೋಷಗಳನ್ನು ಎತ್ತಿ ಹಿಡಿದು ದೂರುವುದೇ ದುರ್ಜನರ ವಿಚಿತ್ರ ಸ್ವಭಾವ! ಇಂತಹ ಗರ್ವಿಷ್ಠರಿಗೆ ಏನು ಮಾಡಬೇಕೆಂದು ಪ್ರಶ್ನಿಸಲಾಗಿದೆ! (೪೪) |
| ೨.ಭೋಗವಿಷಯ ಅಥವಾ ವಿಷಯಸುಖ/ಸಾಂಸಾರಿಕ ವಿಷಯಗಳು:- (ವೈರಾಗ್ಯಶತಕ)<br>ಮನುಷ್ಯನಿಗೆ ಮುಖವೆಲ್ಲಾ ಮುಪ್ಪಿನಿಂದ ಸುಕ್ಕುಗಟ್ಟಿದ್ದರೂ; ತಲೆಯು ನೆರೆಗೂದಲಿನಿಂದ ಕೂಡಿದ್ದರೂ; ಶರೀರವು ದುರ್ಬಲವಾಗಿದರೂ ಆಸೆ ಮಾತ್ರ ತಾರುಣ್ಯಾವಸ್ಥೆಯಲ್ಲಿರುತ್ತದೆ! (೮)<br>ಭೋಗಕ್ಕೆ ರೋಗಭಯ, ಕುಲೀನನಿಗೆ ಭ್ರಷ್ಟನಾಗುವ ಭಯ, ಹಣವಿದ್ದಲ್ಲಿ ರಾಜಭಯ, ಅಭಿಮಾನಿಗೆ ದೀನತೆಯ ಭಯ, ಬಲಿಷ್ಠನಿಗೆ ಶತ್ರುಭಯ, ಸುಂದರನಿಗೆ ಮುಪ್ಪಿನ ಭಯ, ಶಾಸ್ತ್ರಜ್ಞನಿಗೆ ವಾದಿಗಳ ಭಯ, ಗುಣವಂತರಿಗೆ ದುರ್ಜನರ ಭಯ, ಎತ್ತರ ಶರೀರವುಳ್ಳುವನಿಗೆ ಯಮನ ಭಯ! ಹೀಗೆ, ಈ ಭೂಮಿಯಲ್ಲಿ ಎಲ್ಲವೂ ಭಯದಿಂದ ಕೂಡಿದೆ. ಆದರೆ, ಮನುಷ್ಯರಿಗೆ ವೈರಾಗ್ಯವೊಂದೇ ಅಭಯದಾಯಕವೆನ್ನಲಾಗಿದೆ! (೩೧) | ೨.ಮೋಹಾದಿ ವಿಷಯಸುಖ/ ಸಾಂಸಾರಿಕ ವಿಚಾರಗಳು:-<br>ಮನುಷ್ಯರ ಜ್ಞಾನೋದಯಕ್ಕಾಗಿ ನಮ್ಮ ಪರಂಪರೆಯಲ್ಲಿ ಎಷ್ಟೆಲ್ಲಾ ಶಾಸ್ತ್ರಗಳಿವೆ; ಪುರಾಣಗಳಿವೆ; ಕಥೆಗಳಿವೆ; ಪಂಡಿತರಿದ್ದಾರೆ! ಇಷ್ಟೆಲ್ಲಾ ಓದಿ, ನೋಡಿ, ತಿಳಿದ ಮೇಲೂ ಮನುಷ್ಯರಿಂದ ಮೋಹವನ್ನು ತ್ಯಜಿಸಲು ಸಾಧ್ಯವಾಗುತ್ತಿಲ್ಲ! (೧೬)<br>ಪ್ರತಿನಿತ್ಯ ಕಣ್ಣ ಮುಂದೆ ಜೀವಿಗಳು ಮತ್ತು ವಸ್ತುಗಳು ನಶಿಸುತ್ತಿರುವುದನ್ನು ಕಂಡ ಮೇಲೂ; ಲೋಕದ ಶೋಕವನ್ನು ನೋಡಿದ ಮೇಲೂ; ಭೂಮಿಯ ಮೇಲೆ ಯಾಕೆ ಯಾರಿಗೂ ವೈರಾಗ್ಯ ಎಂಬುದು ಉಂಟಾಗದು!(೧೭)<br>ಪ್ರಾಪಂಚಿಕ ಜೀವನದಲ್ಲಿ ಸಾಮಾನ್ಯರಾದ ನಾವೆಲ್ಲಾ ಅತ್ಯಂತ ಮೋಹದಿಂದ ಚಿನ್ನವನ್ನು ರಕ್ಷಿಸುತ್ತಾ ಚಿಂತೆಗೆ ಒಳಗಾಗುತ್ತೇವೆ! ಆದರೆ, ಚಿನ್ನವನ್ನು ತಿನ್ನಲು ಅಥವಾ ಕುಡಿಯಲು ಸಾಧ್ಯವಿಲ್ಲವೆಂದು ತಿಳಿದಿದ್ದರೂ ಮೋಹವೇಕೆಂಬುದೇ ನಮಗೆ ತಿಳಿಯುತ್ತಿಲ್ಲ! (೨) |

| | |
|---|---|
| ೩.ವಿದ್ಯಾಮಹತ್ವ ಮತ್ತು ವಿದ್ಯಾವಿಹೀನತೆ:-<br>ವಿದ್ವಾಂಸರಿಗೆ ವಿದ್ಯೆಯೇ ಅಲಂಕಾರ; ಕೇಯೂರಾದಿ ಅಲಂಕಾರ ವಾಗಲೀ; ಚಂದ್ರನಂತೆ ಬಿಳುಪಾದ ಮುತ್ತಿನ ಹಾರವಾಗಲೀ; ಸ್ನಾನ-ಗಂಧ-ಚಂದನಾದಿ ಶರೀರ ಲೇಪನವಾಗಲೀ; ಹೂಗಳ ಧಾರಣೆ, ಶಿರೋಲಂಕಾರವಾಗಲೀ ಶೋಭಿಸುವುದಿಲ್ಲ! ಸಂಸ್ಕೃತ ಭಾಷೆಯೇ ಪುರುಷರಿಗೆ ಅಲಂಕಾರಪ್ರಾಯ ಮತ್ತು ಉಳಿದವುಗಳು ಶಾಶ್ವತವಲ್ಲವೆಂದರ್ಥ. ((೧೫) | ೩.ವಿದ್ಯಾವಿಹೀನತೆ ಅಥವಾ ವಿದ್ಯಾಶೂನ್ಯತೆ:-<br>ಶತಕದಲ್ಲಿ ಕವಿಯು ಅತ್ಯಂತ ವಿನಯದಿಂದ ತನ್ನ ಕವಿತ್ವಶಕ್ತಿಯ ಪರಿಮಿತಿಯನ್ನು ವರ್ಣಿಸುತ್ತಾ, ಸುಂದರ ಪದ್ಯಗಳನ್ನು ಬರೆಯುವ ಸುಕವಿಗಳಿದ್ದಾರೆ; ಅನೇಕರು ಅನವದ್ಯ ಪದ್ಯಗಳನ್ನು ರಚಿಸಿದ್ದಾರೆ; ಆದರೆ, ವಿದ್ಯಾವಿಹೀನ ಮತ್ತು ವಿಜ್ಞಾನಶೂನ್ಯನಾದ ನನ್ನಿಂದ ಯಾವ ಸಾಹಿತ್ಯಸೇವೆ ಸಾಧ್ಯವಾದೀತು?! ಎಂದು ಪರಾಮರ್ಶಿಸಿದ್ದಾರೆ. (೨೧) |
| ೪.ತಾರುಣ್ಯ ಅಥವಾ ಸೌಂದರ್ಯ ವಿಚಾರ:- (ವೈರಾಗ್ಯಶತಕ)<br>ಪ್ರೀತಿ-ಅಸೂಯೆಗಳಿಗೆ ಮೂಲಸ್ಥಾನವಾಗಿ; ನೂರಾರು ನರಕಗಳ ದುಃಖಗಳನ್ನನುಭವಿಸಿ; ಮೋಹೋತ್ಪತ್ತಿಗೆ ಕಾರಣವಾಗಿ; ಜಾತನೆಂಬ ಚಂದ್ರನಿಗೆ ಅಡ್ಡವಾಗಿರುವ ಮೋಡದಂತಾಗಿ; ಮನ್ಮಥನ ಮಿತ್ರನಂತಾಗಿ; ಅನೇಕಾನೇಕ ದೋಷಗಳಿಂದ ಕೂಡಿದ್ದು ಅನರ್ಥಪರಂಪರೆಗಳ ಹಟ್ಟಿಯಂತಿರುವ ಯೌವನಕ್ಕಿಂತ ಬೇರೊಂದು ಈ ಲೋಕದಲ್ಲಿಲ್ಲ! (೨೯)<br>ಪ್ರಿಯ ಸ್ತ್ರೀಯು ಕಣ್ಣ ಮುಂದಿದ್ದಾಗ ಅಮೃತಮಯಿಯಂತೆ ಕಂಡರೆ, ಕಣ್ಣೆದುರಿನಿಂದ ದೂರವಾದಾಗ ವಿಷಕ್ಕಿಂತಲೂ ತೀಕ್ಷ್ಣಳಾಗಿ ಭಾಸವಾಗುತ್ತಾಳೆ! (೪೩) | ೪. ತಾರುಣ್ಯದ ನಶ್ವರತೆ:-<br>ಎಷ್ಟೇ ಸುಂದರವಾದ ನೀಳಕೇಶವಿದ್ದರೂ, ಆಕರ್ಷಕವಾದ ಅವಯವಗಳಿಂದ ಕೂಡಿದ್ದರೂ, ಪೂರ್ಣಚಂದ್ರನಂತಹ ಕೋಮಲವಾದ ಮುಖವಿದ್ದರೂ, ಹೆಚ್ಚು ಗರ್ವಾದಿ ಅಹಂಕಾರಗುಣಗಳಿಂದ ಮೆರೆದರೂ ಸೌಂದರ್ಯವತಿಯರ ಶರೀರ ಕ್ಷಣಕಾಲದಲ್ಲಿ ಒಂದಿಲ್ಲೊಂದು ದಿನ ನಶಿಸಿ ಹೋಗುವಂತಹದು. ಹಾಗಾಗಿ, ಅಂತಹ ನಶ್ವರ ಶರೀರದ ಬಗೆಗೆ ಅತೀವ ಮೋಹ ಸರ್ವಥಾ ಸಲ್ಲದು!(೬)<br>ಲಾವಣ್ಯದ ಮಹಾಸಿಂಧುವೆಂದು; ಸೌಂದರ್ಯದ ಮಹಾಮೇರು ಪರ್ವತವೆಂದು; ಪ್ರೇಮಮೂರ್ತಿಯೆಂದಲ್ಲಾ ಬಗೆ ಬಗೆಯಾಗಿ ವರ್ಣಿಸಿದರೂ ಕೂಡ ಸ್ತ್ರೀಯರಿಗೂ ಜರಾವಸ್ಥೆ, ರೋಗಾದಿಗಳಿಂದ ಶರೀರದ ಜೀರ್ಣತೆ ಮತ್ತು ಕಳಾಹೀನತೆಗಳು ಸಹಜವಾಗಿಯೇ ಉಂಟಾಗುತ್ತವೆ ಎಂಬುದೇ ಸತ್ಯ! (೯೬) |
| ೫.ಅರ್ಥ/ ಸಂಪತ್ತಿನ ಮಹತ್ವ:- (ನೀತಿಶತಕ)<br>ಯಾರಲ್ಲಿ ಹಣವಿದೆಯೋ ಅವನೇ ಕುಲೀನನೆಂದು; ಅವನೇ ಜ್ಞಾನಿ, ಪಂಡಿತ, ಗುಣಗ್ರಾಹಿ, ವಾಗ್ಮೀ, ಸುಂದರನೆಂದು ಜನ ಹೊಗಳುತ್ತಾರೆ. ಕಾರಣ ಲೋಕದ ಎಲ್ಲಾ ಗುಣಗಳೂ ಕಾಂಚನವನ್ನಾಶ್ರಯಿಸಿವೆ. (೩೨)<br>ಹಣಕ್ಕೆ ದಾನ, ಭೋಗ ಮತ್ತು ನಾಶವೆಂಬ ಮೂರು ಗತಿಗಳಿದ್ದು; ಯಾರು ದಾನ ಮಾಡುವುದಿಲ್ಲವೋ ಅಥವಾ ಸ್ವಯಂ ಅನುಭವಿಸುವುದಿಲ್ಲವೋ ಆ ಹಣಕ್ಕೆ ನಾಶವೆಂಬ ಗತಿಯುಂಟಾಗುತ್ತದೆ. (೩೪) | ೫.ಅರ್ಥದ ವಿಚಾರ:-<br>"ಸರ್ವಂ ಧನಮಯಮ್" ಎಂಬಂತೆ ಲೋಕವ್ಯವಹಾರದಲ್ಲಿ ಹಣಕ್ಕಾಗಿ ವೈದ್ಯರು ಚಿಕಿತ್ಸೆ ನೀಡುತ್ತಾರೆ; ವಿಪ್ರರು ಧನಕ್ಕಾಗೆ ಪಠಿಸುತ್ತಾರೆ; ಮತ್ತೆ ಕೆಲವರು ಹಣಕ್ಕಾಗಿ ಸರ್ಪಗಳೊಂದಿಗೆ ಆಟವಾಡಿ ಜೀವಿಸುತ್ತಾರೆ! (೧೦)<br>ಲೋಕದ ವಿಡಂಬನೆಯಂತೆ ಕೆಲವರು ವಿತ್ತದ ರಾಶಿಯಿಂದ ಅತಿಗರ್ವಪಡುತ್ತಲೇ ಅತ್ಯಂತ ಉಜ್ವಲವಾದ ವೈಭವದ ಬಟ್ಟೆಗಳನ್ನು ಧರಿಸುತ್ತಾರೆ; ಆದರೆ, ಶ್ರೀಮಂತರಾಗಲೀ ಅಥವಾ ದರಿದ್ರರಾಗಲಿ ಕೊನೆಗೆ ಭೂಮಿಯಲ್ಲೇ ಲೀನವಾಗಬೇಕು! (೩೫) |
| ೬.ವಿಧಿ ಮತ್ತು ಮನುಷ್ಯಪ್ರಯತ್ನ:- (ನೀತಿಶತಕ)<br>ನೀರಿನಲ್ಲಿ ಮುಳುಗಲಿ, ಮೇರುಪರ್ವತದ ತುದಿಯನ್ನೇರಲಿ, ಯುದ್ಧದಲ್ಲಿ ಜಯಗಳಿಸಲಿ, ವ್ಯಾಪಾರ, ವಿದ್ಯೆ, ಕೃಷಿ, ಸೇವೆ, ಸಕಲ ಕಲೆಗಳನ್ನೆಲ್ಲಾ ಕಲಿಯಲಿ, ಶ್ರಮಪಟ್ಟು ಆಕಾಶದಲ್ಲಿ ಪಕ್ಷಿಯಂತೆ ಹಾರಾಡಲಿ, ಕರ್ಮಫಲದಿಂದ ಎಲ್ಲವೂ ಸಾಧ್ಯ! (೯೮) | ೬.ವಿಧಿ ಮತ್ತು ಮನುಷ್ಯಪ್ರಯತ್ನ:-<br>ಲೋಕದಲ್ಲಿ ಶ್ರೀರಾಮನಂತಹ ಧೀರರಿಲ್ಲ; ಸೀತೆಯಂತಹ ಸಾಧ್ವೀಮಣಿಯಿಲ್ಲ; ಹೀಗಿದ್ದರೂ ಕೂಡ ಅವರಿಬ್ಬರಲ್ಲಿ ವಿರಹ ಮತ್ತು ವಿಯೋಗವನ್ನುಂಟುಮಾಡಿದ ಅವರ ಅದೃಷ್ಟವನ್ನು ನಿಂದಿಸಲೇಬೇಕು! (೪೨)<br>ಈ ಪ್ರಪಂಚದಲ್ಲಿ ಎಲ್ಲವೂ ಪೂರ್ವನಿರ್ಧಾರಿತ; ದೈವಗತಿಯಿಂದಲೇ ಎಲ್ಲವೂ ನಿಶ್ಚಿತವಾಗಿರುವುದರಿಂದ ಪ್ರಾಜ್ಞರು ಹೇಳುವಂತೆ ಮನುಷ್ಯಪ್ರಯತ್ನ ಇಲ್ಲಿ ನಿಷ್ಫಲವೇ ಸರಿ! (೧೦೧) |

*ಉಪಸಂಹಾರ:-

ಒಟ್ಟಿನಲ್ಲಿ ಭಾರತೀಯ ಸಾಹಿತ್ಯಪರಂಪರೆಯೆಂಬುದು ಕೇವಲ ಪಾಂಡಿತ್ಯಪ್ರೌಢಿಮೆಯ ಪ್ರದರ್ಶನಕ್ಕೆ ಸೀಮಿತವಾದದ್ದಾಗಲಿ, ಮನೋರಂಜನೆಯ ಸಾಮಾನ್ಯೋದ್ದೇಶವನ್ನಾಗಲಿ, ಧರ್ಮಪ್ರಚಾರದ ಸಂಕುಚಿತತೆಯನ್ನಾಗಲಿ, ಪ್ರಸಿದ್ಧಿ ಮತ್ತು ಪ್ರಚಾರದ ಆಡಂಬರವನ್ನಾಗಲಿ ಹೊಂದಿರದೆ ಸಮಸ್ತ ಜಗತ್ತಿನ ಒಳಿತಿಗಾಗಿ ಸರ್ವದಾ ಹಾತೊರೆಯುವ ಅನಂತಶಕ್ತಿಯ ಚೈತನ್ಯಚಿಲುಮೆ ಮತ್ತು ಜೀವನಮೌಲ್ಯಗಳನ್ನು ಕ್ರಮಿಸಬಲ್ಲ ಸಾಕಾರಮೂರ್ತಿಯಾಗಿದೆ. ಮಹಾಕವಿಕಾಳಿದಾಸನು ವಿವರಿಸುವಂತೆ 'ನಿರಂತರ ಸುಖವಾಗಲಿ, ದುಃಖವಾಗಲಿ ಯಾರಿಗೂ ಬಾರದು! ಸುಖ-ದುಃಖಗಳು ಗಾಲಿಯ ನೇಮಿಯಂತೆ ಮೇಲೆ ಹೋಗುವುವು, ಕೆಳಗೂ ಇಳಿಯುವುವು' ಎಂಬ ನಿತ್ಯಸತ್ಯವೇ ನಮ್ಮನ್ನು ಕಾರ್ಯೋನ್ಮುಖರನ್ನಾಗಿ ಮಾಡುವ ಆದರ್ಶ ಜೀವನಾನುಭೂತಿ.

"कस्यात्यन्तं सुखमुपनतं दुःखमेकान्ततो वा नीचैर्गच्छत्युपरि च दशा चक्रनेमिक्रमेण" । (मेघदूतम्-१०६)

ಇಂತಹುದೇ ಅಸಂಖ್ಯಾತ ಮೌಲ್ಯಯುತಾದರ್ಶ ಜೀವನಾನುಭವಗಳು ಅನುಸ್ಯೂತವಾಗಿ ಸಾಹಿತ್ಯಸ್ರೋತದಲ್ಲಿ ಹರಿದು ಬಂದಿದೆ. ಇದಕ್ಕೆ ಮತ್ತಷ್ಟು ಪುಷ್ಟಿದಾಯಕ ಉದಾಹರಣೆಗಳೆಂದರೆ ಭರ್ತೃಹರಿಯ 'ಶತಕತ್ರಯೀ' ಮತ್ತು ಆಧುನಿಕ ಶತಕಪರಂಪರೆಯ ವಿದ್ವಾನ್ ಡಾ. ಎಚ್.ವಿ.ನಾಗರಾಜರಾವ್ ಮಹೋದಯರ ಅಪೂರ್ವ ಕೃತಿ 'ನಾಗರಾಜಶತಕ'. 'ನಾಗರಾಜಶತಕ' ಗ್ರಂಥವಂತೂ ಸಮಸ್ತ ಜಗತ್ತಿನ ಪ್ರಸಕ್ತ ವಿದ್ಯಮಾನಗಳಿಗೆ ಕೈಗನ್ನಡಿಯಂತೆ ಭಾಸವಾಗುತ್ತದೆ. ಪ್ರಪಂಚದ ಪ್ರತಿಯೊಂದು ಆಗು-ಹೋಗುಗಳ ಸೂಕ್ಷ್ಮ ಮತ್ತು ಸಮಗ್ರ ಚಿತ್ರಣ ಕಣ್ಕಟ್ಟುವಂತಿದೆ. ಸಮಾಜದ ಸಕಾರಾತ್ಮಕ, ನಕಾರಾತ್ಮಕ, ವಿಮರ್ಶಾತ್ಮಕ, ವಿಶ್ಲೇಷಣಾತ್ಮಕ ಮತ್ತು ವಿಡಂಬನಾತ್ಮಕ ಆಚಾರ-ವಿಚಾರ, ಅನುಚರಣೆಗಳ ನಿದರ್ಶನ ಮತ್ತು ವಿವರಣೆಗಳು ಆಮೂಲಾಗ್ರವಾಗಿ ಚರ್ಚಿಸಲ್ಪಟ್ಟಿದ್ದು, ಓದುಗರ ಚಿಂತನಾತ್ಮಕ ಬುದ್ಧಿಗೆ ಒರೇಗಲ್ಲಿನಂತಿದೆ.

*ಪರಾಮರ್ಶನ ಗ್ರಂಥಗಳು*

೧. 'ಸಂಸ್ಕೃತ ಸಾಹಿತ್ಯ ಇತಿಹಾಸ'- ಆಚಾರ್ಯ ಬಲದೇವ ಉಪಾಧ್ಯಾಯ (ಮೂಲ), ಎಸ್. ರಾಮಚಂದ್ರಶಾಸ್ತ್ರೀ (ಅನುವಾದ)- ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು (ಪ್ರಕಟಿತ ವರ್ಷ- ೧೯೮೦)

೨. 'ಸಂಸ್ಕೃತ ಕಾವ್ಯ'- ಡಾ|| ಕೆ. ಕೃಷ್ಣಮೂರ್ತಿ- ವಿದ್ಯುತ್ ಪ್ರಕಾಶನ, ಕೃಷ್ಣಮೂರ್ತಿ ಲೇ ಔಟ್, ಮೈಸೂರು- ೫೭೦೦೦೯ (ಪ್ರಕಟಿತ ವರ್ಷ- ೨೦೦೩)

೩. 'ಶಾಸ್ತ್ರಜೀವಿತ' ಪ್ರೊ. ಜಿ.ವಿ. ಅಭಿವಂದನ ಸಂಪುಟ- (ಸಂಪಾದಕರು) ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಮತ್ತು ಡಾ. ಶ್ರೀನಿವಾಸ ವರಖೇಡಿ- (ಪ್ರಕಾಶಕರು) ನಾಡೋಜ ಪ್ರೊ. ಜಿ. ವೆಂಕಟಸುಬ್ಬಯ್ಯ ಜನ್ಮಶತಾಬ್ದಿ ಸ್ವಾಗತ ಸಮಿತಿ, ಜಯನಗರ, ಬೆಂಗಳೂರು- ೫೬೦೦೭೦ (ಪ್ರಕಟಿತ ವರ್ಷ- ೨೦೧೩)

೪. 'ಭರ್ತೃಹರಿಯ ಶತಕಗಳು' (ಶತಕತ್ರಯ)- ಅವಿನಾಶ್ ಕೊಡಂಕೇರಿ- ವಿಜಯವಾಹಿನಿ ಪಬ್ಲಿಕೇಷನ್ಸ್, ಹೊನ್ನಾಳಿ ಮುಖ್ಯರಸ್ತೆ, ಶಿವಮೊಗ್ಗ (ಪ್ರಕಟಿತ ವರ್ಷ-೨೦೧೦)

**ಪ್ರೊ. ವಿ. ಗಿರೀಶಚಂದ್ರ**
ಕುಲಸಚಿವರು (ಪ್ರಭಾರಿ)
ಪ್ರೊಫೆಸರ್ ಮತ್ತು ಡೀನ್, ಭಾಷಾನಿಕಾಯ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜಪೇಟೆ, ಬೆಂಗಳೂರು-೫೬೦೦೧೮
ದೂರವಾಣೀ ಸಂಖ್ಯೆ: 9481213240
ಈ-ಮೇಲ್ ವಿಳಾಸ:
vgirishkgl@gmail.com

**ಶ್ರೀಮತಿ ಕವಿತಾ ಬಿ.**
ಸಂಶೋಧನಾ ವಿದ್ಯಾರ್ಥಿನೀ (ಭಾಷಾವಿಭಾಗ)
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜಪೇಟೆ, ಬೆಂಗಳೂರು-೫೬೦೦೧೮
ದೂರವಾಣೀ ಸಂಖ್ಯೆ: 8088710623
ಈ-ಮೇಲ್ ವಿಳಾಸ:
kavithopadhya@gmail.com

**********

**Volume XX : July to December – 2022, ISSN 2250-1711**

**Journal of Veda Samskrita Academy [Recognised in the UGC-CARE List]**

# ಪೂರ್ವಮೀಮಾಂಸಾಶಾಸ್ತ್ರದ ಅನಿವಾರ್ಯತೆ

**ಡಾ॥ ಸುರೇಶ ಹೆಗಡೆ (ಮೈಸೂರು)**

ಪೂರ್ವಮೀಮಾಂಸಾಶಾಸ್ತ್ರವು ಅನಿವಾರ್ಯವೇ ಆಗಿದೆ. ಅನಿವಾರ್ಯವೆಂದರೆ ಎಲ್ಲಿ? ಹೇಗೆ? ಏಕೆ? ಎಂಬಿತ್ಯಾದಿ ಪ್ರಶ್ನೆಗಳು ಮೂಡುವುದು ಸಹಜ. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾದರೆ ಮೊದಲಿಗೆ ಶಾಸ್ತ್ರದ ಸ್ವರೂಪ, ಅವುಗಳಲ್ಲಿ ಮೀಮಾಂಸೆಯ ಸ್ಥಾನ ಇತ್ಯಾದಿಗಳನ್ನು ಅರಿತಾಗ ಮಾತ್ರ ಸಾಧ್ಯ. ಜ್ಞಾನಜ್ಯೋತಿಯಿಂದ ಬೆಳಗುತ್ತಿರುವ ರಾಷ್ಟ್ರವೆಂದರೆ ನಮ್ಮ ಭಾರತ. ಪ್ರಾಚೀನ ಋಷಿ-ಮುನಿಗಳು ತಮ್ಮ ತಪಃಶಕ್ತಿಯಿಂದ ಸಾಕ್ಷಾತ್ಕರಿಸಿಕೊಂಡ ಶಾಸ್ತ್ರಗಳಿಂದ ಈ ಭಾರತವನ್ನು ಜ್ಞಾನವೆಂಬ ಬೆಳಕಿನ ಅಂಗಣವಾಗಿರಿಸಿದರು. ಇಂತಹ ಮಹಾತ್ಮರು ವೇದವೆಂಬ ಜ್ಞಾನಖಜಾನೆಯನ್ನು ಉದ್ಘಾಟಿಸಲು ಶಾಸ್ತ್ರಗಳೆಂಬ ಕೀಲಿಕೈಯನ್ನು ನಮಗಿತ್ತಿದ್ದಾರೆ. ಹಾಗಾದರೆ ಶಾಸ್ತ್ರವೆಂದರೇನು ಎಂಬ ಪ್ರಶ್ನೆಗೆ ಶಾಸ್ತ್ರಜ್ಞರೇ ಹೀಗೆ ವಿವರಿಸಿದ್ದಾರೆ.

**ಪ್ರವೃತ್ತಿಶ್ಚ ನಿವೃತ್ತಿಶ್ಚ ಪುಂಸಾಂ ಯೇನೋಪದಿಶ್ಯತೇ । ತದ್ಧರ್ಮಾಶ್ಚೋಪದಿಶ್ಯಂತೇ ಶಾಸ್ತ್ರಂ ಶಾಸ್ತ್ರವಿದೋ ವಿದುಃ ॥** [1]

ಧರ್ಮವನ್ನು ಪ್ರವೃತ್ತಿ ನಿವೃತ್ತಿ ರೂಪಗಳೆಂದು ಎರಡು ವಿಧದಲ್ಲಿ ತಿಳಿಯಬಹುದು. ಯಾವುದು ಧರ್ಮಾಧರ್ಮ ಜ್ಞಾನವನ್ನು ತಿಳಿಸಿ ಕೊಡುವುದೋ ಅದನ್ನೇ ಶಾಸ್ತ್ರವೆನ್ನುತ್ತಾರೆ. **'ಶಸ್ಯತೇ ಅನೇನ ಇತಿ ಶಾಸ್ತ್ರಂ'** ಎಂಬ ಅರ್ಥದಲ್ಲಿ **'ಶಸು ಹಿಂಸಾಯಾಂ'** [2] ಎಂಬ ಧಾತುವಿಗೆ ಷ್ಟ್ರನ್ ಪ್ರತ್ಯಯ ಯೋಗವಾದಾಗ ಶಾಸ್ತ್ರಶಬ್ದ ಸಿದ್ಧಿಯಾಗುವುದು. **"ದೃಶ್ಯತೇ ಯಥಾರ್ಥತತ್ವಂ ಅನೇನ"** ಎಂಬ ವ್ಯುತ್ಪತ್ತಿಯಿಂದ ತತ್ವಾರ್ಥಸಿದ್ಧಿಗಾಗಿ ಪ್ರಮಾಣಗಳಿಂದ ವಿಷಯವನ್ನು ವಿವೇಚಿಸುವ ಶಾಸ್ತ್ರಭಾಗವನ್ನು ದರ್ಶನವೆನ್ನುವರು. ದರ್ಶನವು ಆಸ್ತಿಕ ಮತ್ತು ನಾಸ್ತಿಕವೆಂಬ ಭೇದಗಳಿಂದ ಎರಡು ವಿಧವಾಗಿದೆ. ವೇದಾದಿಗಳನ್ನೇ ಪ್ರಮಾಣವನ್ನಾಗಿರಿಸಿಕೊಂಡು ತತ್ವಾರ್ಥವನ್ನು ನಿರೂಪಿಸುವ ಶಾಸ್ತ್ರಭಾಗವನ್ನು ಆಸ್ತಿಕದರ್ಶನಗಳೆನ್ನಬಹುದು. ವೇದಾದಿಗಳನ್ನು ಒಪ್ಪದೇ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸ್ವಮತವನ್ನು ಪ್ರತಿಪಾದಿಸುವ ದರ್ಶನವು ನಾಸ್ತಿಕದರ್ಶನವೆಂಬುದಾಗಿ ಪ್ರಸಿದ್ಧವಾಗಿದೆ. ಆಸ್ತಿಕದರ್ಶನವು ಆರು ವಿಧವಾಗಿದೆ.

**ಮೀಮಾಂಸಾ ನ್ಯಾಯವೇದಾಂತೌ ಯೋಗೋ ವೈಶೇಷಿಕಂ ತಥಾ । ಸಾಂಖ್ಯಂಚೇತಿ ಷಡೇತಾನಿ ದರ್ಶನಾನಿ ಬುಧೈಃ ಸ್ಮೃತಂ ॥** [3]

ಈ ಎಲಾ ದರ್ಶನಗಳು ತತ್ವಾರ್ಥನಿರ್ಣಯಕ್ಕಾಗಿ ಋಷಿಮುನಿಗಳಿಂದ ಪ್ರತಿಪಾದಿಸಲ್ಪಟ್ಟಿದ್ದರೂ, ದರ್ಶನಗಳ ಮುಖ್ಯೋ-ದ್ದೇಶವು ವಿಭಿನ್ನವಾಗಿರುವುದರಿಂದ ಕೆಲವು ಕಡೆ ಪರಸ್ಪರ ವಿರೋಧಗಳೂ ಕಂಡು ಬರುತ್ತವೆ. ಈ ದರ್ಶನಗಳಲ್ಲಿ ವೇದಾರ್ಥ ವಿಚಾರಕ್ಕಾಗಿಯೇ ಆವಿರ್ಭೂತವಾದ ದರ್ಶನವೆಂದರೆ ಮೀಮಾಂಸಾ ದರ್ಶನವಾಗಿದೆ.

## ಮೀಮಾಂಸಾ ದರ್ಶನ :-

ಮೀಮಾಂಸಾ ಶಾಸ್ತ್ರವೆಂದರೆ ವೇದಾರ್ಥ ವಿಚಾರಶಾಸ್ತ್ರ. ವೇದಗಳಲ್ಲೇ ಈ ಪದವು ವಿಚಾರಾರ್ಥದಲ್ಲಿ ಹಲವು ಕಡೆ ಪ್ರಯೋಗಿಸಲ್ಪಟ್ಟಿದೆ. **"ಉತ್ಸೃಜ್ಯಾಂ ನೋತ್ಸೃಜ್ಯಾಂ ಇತಿ ಮೀಮಾಂಸತೇ ಬ್ರಹ್ಮವಾದಿನಃ ತದ್ಧಾಹುಃ ಉತ್ಸೃಜ್ಯಾಮೇವೇತಿ"**[4] ಎಂದು ತೈತ್ತಿರೀಯ ಸಂಹಿತೆಯಲ್ಲೂ, **"ಬ್ರಾಹ್ಮಣು ಪಾತ್ರೇ ನ ಮೀಮಾಂಸೇತ"**[5] ಎಂದು ತಾಂಡ್ಯಬ್ರಾಹ್ಮಣದಲ್ಲಿಯೂ, ಕೌಷೀತಕಿ ಬ್ರಾಹ್ಮಣದಲ್ಲಿ **"ಉದಿತೇ ಹೋತವ್ಯಂ ಅನುದಿತೇ ಇತಿ ಮೀಮಾಂಸತೇ"**[6] ಎಂದೂ ಉಲ್ಲೇಖಿಸಲ್ಪಟ್ಟಿದೆ. ಇನ್ನು ಉಪನಿಷತ್ತುಗಳಲ್ಲಿಯೂ ಈ ಮೀಮಾಂಸಾ ಪದ ಬಳಕೆಯಾಗಿರುವುದನ್ನು ನಾವು ಕಾಣಬಹುದು. **"ಮಹಾಶ್ರೋತ್ರಿಯಾಃ ಸಮೇತ್ಯ ಮೀಮಾಂಸಾಂ ಚಕ್ರುः"**[7] ಎಂದು ಛಾಂದೋಗ್ಯದಲ್ಲಿ, **"ಸೈಷಾ ಆನಂದಸ್ಯ ಮೀಮಾಂಸಾ ಭವತಿ"** [8] ಎಂದು ತೈತ್ತಿರೀಯ ಉಪನಿಷತ್ತಿನಲ್ಲಿ, **"ಅಥ ನು ಮೀಮಾಂಸ್ಯಮೇವತೇ ಮನ್ಯೇ ವಿದಿತಮ್"**[9] ಎಂದು ಕೇನೋಪನಿಷತ್ತಿನಲ್ಲಿಯೂ ಈ ಪದ ಪ್ರಯೋಗವಿದೆ. ಪ್ರಾಚೀನ ಧರ್ಮಶಾಸ್ತ್ರಗಳಲ್ಲಿಯೂ ಧರ್ಮವಿಚಾರ ಹಾಗೂ ಯಾಗವಿಚಾರಗಳಲ್ಲಿ ಉಂಟಾದ ಸಂಶಯಗಳನ್ನು ಕುರಿತಂತೆ ಚರ್ಚೆಗಳು ನಡೆಯುತ್ತಿದ್ದವೆಂಬುದನ್ನು ಇದರಿಂದ ನಾವು ತಿಳಿಯಬಹುದು.

ಪೂರ್ವಮೀಮಾಂಸಾ ದರ್ಶನಕ್ಕೆ ಕರ್ಮಮೀಮಾಂಸಾ ಅಥವಾ ಧರ್ಮಮೀಮಾಂಸಾ ಎಂಬ ಹೆಸರು ರೂಢಿಯಲ್ಲಿದೆ. ಮೀಮಾಂಸೆಯು ಮುಖ್ಯವಾಗಿ ಯಾಗಾದಿಗಳ ಪರಿಶೀಲನೆ ನಡೆಸುತ್ತದೆ. **ಮಾನ ಪೂಜಾಯಾಂ** ಎಂಬ ಧಾತುವಿಗೆ ಜಿಜ್ಞಾಸಾರ್ಥಕ **ಸನ್** ಪ್ರತ್ಯಯದ ಯೋಗದಿಂದ ಮೀಮಾಂಸಾ ಶಬ್ದದ ನಿಷ್ಪತ್ತಿಯಾಗಿದೆ. ಮೀಮಾಂಸಾ ಅಂದರೆ ವಿಚಾರ ಎಂದರ್ಥ. **"ವಿಚಾರೋ ನಾಮ ಪ್ರಮಾಣೇನ ತತ್ವಪರೀಕ್ಷಾ"** ಎಂಬುದಾಗಿ ವಾಚಸ್ಪತಿ ಭಟ್ಟಾಚಾರ್ಯರು ವಿವರಿಸಿದ್ದಾರೆ. ಇದರಿಂದ ಪ್ರಾಮಾಣಿಕ ವಿಚಾರಶಾಸ್ತ್ರವೆಂದರೆ ಮೀಮಾಂಸಾ ಶಾಸ್ತ್ರವೆಂದು ಸಿದ್ಧವಾಗುತ್ತದೆ. ಅತಿಪ್ರಾಚೀನವಾದಂತಹ ಈ ಮೀಮಾಸಾದರ್ಶನವನ್ನು ಮೊದಲು ವ್ಯವಸ್ಥಿತ ಸೂತ್ರರೂಪದಲ್ಲಿ ಪ್ರತಿಪಾದಿಸಿದವರು ಜೈಮಿನಿ ಮಹರ್ಷಿಗಳು. ಈ ಶಾಸ್ತ್ರದಲ್ಲಿ ಸುಮಾರು 2745 ಸೂತ್ರಗಳು ಪ್ರಸಿದ್ಧವಾಗಿವೆ. 12 ಅಧ್ಯಾಯಗಳಿದ್ದು ಪ್ರತಿಯೊಂದು ಅಧ್ಯಾಯದಲ್ಲೂ ಒಂದೊಂದು ವಿಷಯಗಳು ಅಧಿಕರಣ ರೂಪದಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಒಟ್ಟೂ ಸರಿಸುಮಾರು ಸಾವಿರ ಅಧಿಕರಣಗಳಿದ್ದು ಸಹಸ್ರಾಧಿಕರಣನ್ಯಾಯ ಎಂಬ ಹೆಸರನ್ನೂ ಪಡೆದಿದೆ.

ಪ್ರಥಮಾಧ್ಯಾಯದಲ್ಲಿ ಧರ್ಮಪ್ರಮಾಣವು, ದ್ವಿತೀಯಾಧ್ಯಾಯದಲ್ಲಿ ಕರ್ಮಭೇದ, ತೃತೀಯಾಧ್ಯಾಯದಲ್ಲಿ ಅಂಗತ್ವ ನಿರೂಪಣೆ, ನಾಲ್ಕನೇ ಅಧ್ಯಾಯದಲ್ಲಿ ಕೃತ್ವರ್ಥ-ಪುರುಷಾರ್ಥಸ್ವರೂಪ, ಐದನೇ ಅಧ್ಯಾಯದಲ್ಲಿ ಕ್ರಮ, ಆರನೇ ಅಧ್ಯಾಯದಲ್ಲಿ ಅಧಿಕಾರ, ಏಳನೇ ಅಧ್ಯಾಯದಲ್ಲಿ ಸಾಮಾನ್ಯಾತಿದೇಶ, ಎಂಟನೇ ಅಧ್ಯಾಯದಲ್ಲಿ ವಿಶೇಷಾತಿದೇಶ, ಒಂಬತ್ತರಲ್ಲಿ ಊಹ, ಹತ್ತನೇ ಅಧ್ಯಾಯದಲ್ಲಿ ಬಾಧ, ಹನ್ನೊಂದರಲ್ಲಿ ತಂತ್ರ ಮತ್ತು ಹನ್ನೆರಡನೇ ಅಧ್ಯಾಯದಲ್ಲಿ ಪ್ರಸಂಗವು ನಿರೂಪಿಸಲ್ಪಟ್ಟಿದೆ.

## ವಿಭಿನ್ನಶಾಸ್ತ್ರಗಳಲ್ಲಿ ಮೀಮಾಂಸಾದರ್ಶನದ ಪಾತ್ರ :-

ವಿಚಾರದಿಂದ ಹೊರತಾಗಿ ಯಾವುದೇ ವಿಷಯವನ್ನು ಸಮರ್ಪಕವಾಗಿ ನಿರೂಪಿಸಲು ಸಾಧ್ಯವಿಲ್ಲ. ನಿಯಮಿತ ವಿಚಾರಕ್ರಮವು ಮೀಮಾಂಸಾಶಾಸ್ತ್ರದಲ್ಲಿ ಸಮರ್ಪಕವಾಗಿ ನಿರೂಪಿಸಲ್ಪಟ್ಟಿವೆ. ಪೂರ್ವಮೀಮಾಂಸಾ ಹಾಗೂ ಉತ್ತರಮೀಮಾಂಸಾ ದರ್ಶನಗಳ ನಡುವೆ ಹಲವೆಡೆ ಪರಸ್ಪರ ವಿರೋಧಗಳು ಕಂಡುಬಂದರೂ ದರ್ಶನದ ಪ್ರತಿಪಾದನಾ ಶೈಲಿಯಲ್ಲಿ ಸಾಮ್ಯತೆಯನ್ನು ನೋಡಬಹುದು. ಪೂರ್ವಮೀಮಾಂಸಾಶಾಸ್ತ್ರದ ಶಾಬರಭಾಷ್ಯ ಮತ್ತು ಉತ್ತರಮೀಮಾಂಸಾಶಾಸ್ತ್ರ ಶಾಂಕರಭಾಷ್ಯಗಳೆರಡೂ ಒಂದೇ ಶೈಲಿಯನ್ನು ಹೊಂದಿವೆ. ಮೀಮಾಂಸಾಶಾಸ್ತ್ರದಲ್ಲಿ ಪ್ರತಿಪಾದ್ಯ ವಿಷಯ ನಿರೂಪಣೆಯ ಉದ್ದೇಶದಿಂದ ಅಧಿಕರಣವೆಂಬ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ವ್ಯವಸ್ಥೆಯು ಉತ್ತರಮೀಮಾಂಸಾದರ್ಶನದಲ್ಲಿಯೂ ಉಪಯೋಗಿಸಲ್ಪಟ್ಟಿದೆ. ಇನ್ನು ಪೂರ್ವಮೀಮಾಂಸಾ ದರ್ಶನದಂತೆ ಬಲಾಬಲ ನಿರೂಪಣೆ, ಪ್ರಾಮಾಣ್ಯ-ಅಪ್ರಾಮಾಣ್ಯ ನಿರ್ಣಯ, ಅಧಿಕಾರ-ಅನಧಿಕಾರ ನಿರ್ಣಯಗಳು ಇವೆಲ್ಲವೂ ಧರ್ಮಶಾಸ್ತ್ರದಲ್ಲಿ ಯಥಾವತ್ ಅನುವಾದಿಸಲ್ಪಟ್ಟಿವೆ. ಇನ್ನು ಪ್ರಸಿದ್ಧಧರ್ಮಶಾಸ್ತ್ರಕಾರರಾದ ವೀರಮಿತ್ರಮಿಶ್ರ, ವಿಜ್ಞಾನೇಶ್ವರ, ಹರದತ್ತಾದಿಗಳು ಮೀಮಾಂಸಾ ಶಾಸ್ತ್ರನ್ಯಾಯವನ್ನು ಆಧರಿಸಿಯೇ ತಮ್ಮ ವ್ಯಾಖ್ಯೆಯನ್ನು ರಚಿಸಿರುವುದಾಗಿ ಹೇಳಿಕೊಂಡಿರುವುದನ್ನು ನಾವು ಗಮನಿಸಬಹುದು. ನ್ಯಾಯಶಾಸ್ತ್ರದಲ್ಲೂ ಕೂಡ ವ್ಯಾಕ್ಯಶೇಷಾದಿಗಳ ನಿರೂಪಣಾ ಸಂದರ್ಭಗಳಲ್ಲಿ ಮೀಮಾಂಸಾ ಶಾಸ್ತ್ರವನ್ನಾಧರಿಸಿರುವುದು ಕಾಣಸಿಗುತ್ತದೆ. ಸಹೃದಯರ ಮನತಣಿಸುವ ಸಾಹಿತ್ಯಶಾಸ್ತ್ರದಲ್ಲಿಯೂ ಅನ್ವಿತಾಭಿದಾನವಾದ ಹಾಗೂ ಅಭಿಹಿತಾನ್ವಯವಾದ, ಆಕೃತಿವಾದ ಮತ್ತು ಲಕ್ಷಣಾವಾದಗಳೂ ಕೂಡ ಮೀಮಾಂಸಾನುಸಾರವಾಗಿಯೇ ನಿರೂಪಿಸಲಾಗಿದೆ. ವ್ಯಾಕರಣ ಶಾಸ್ತ್ರದಲ್ಲಿಯೂ ಕೆಲವೆಡೆ ಮೀಮಾಂಸಾನ್ಯಾಯದ ಪ್ರಸಕ್ತಿಯನ್ನು ನಾವು ಅರಿಯಬಹುದಾಗಿದೆ. ಹೀಗೆ ವೇದಾರ್ಥನಿರ್ಣಯಕ್ಕಾಗಿ ಉಗಮವಾದ ಮೀಮಾಂಸಾಶಾಸ್ತ್ರವು ವೇದವನ್ನಾಶ್ರಯಿಸಿರುವ ಎಲ್ಲಾ ಶಾಸ್ತ್ರಗಳಿಗೂ ಒಂದಲ್ಲಾ ಒಂದು ರೀತಿಯಲ್ಲಿ ಪ್ರಯೋಜಕವೆನಿಸಿದೆ.

## ಆಗಮಾದಿ ತಂತ್ರಕರ್ಮಗಳಲ್ಲಿ ಮೀಮಾಂಸಾಶಾಸ್ತ್ರದ ಮಹತ್ವ :-

ಯಾಗಾದಿಗಳಲ್ಲಿ ಮೀಮಾಂಸಕರು ವಿಗ್ರಹಗಳನ್ನು ಒಪ್ಪುವುದಿಲ್ಲವೆಂಬುದು ಎಷ್ಟು ಸತ್ಯವೋ ಅದೇ ರೀತಿ ಧ್ಯಾನಾದಿಗಳಲ್ಲಿ ವಿಗ್ರಹಗಳನ್ನು ಒಪ್ಪುತ್ತಾರೆ ಎಂಬುದು ಅಷ್ಟೇ ಸತ್ಯ. ಪೂರ್ವಮೀಮಾಂಸಾಶಾಸ್ತ್ರದ ಒಂದನೇ ಅಧ್ಯಾಯದಲ್ಲಿ ಸ್ಮೃತಿ ಮತ್ತು ಆಚಾರಗಳಿಗೂ ಪ್ರಮಾಣವನ್ನು ಪ್ರತಿಪಾದಿಸಲಾಗಿದೆ. ಇದರಿಂದಾಗಿ ಸ್ಮೃತ್ಯುಕ್ತ, ಶ್ರುತಿಗೆ ಅವಿರೋಧವಾದ ಆಗಮಾದಿ ತಂತ್ರಕರ್ಮ ಗಳಲ್ಲಿಯೂ ಮೀಮಾಂಸಾಶಾಸ್ತ್ರದ ಪ್ರಸಕ್ತಿಯನ್ನು ನಾವು ಕಾಣಬಹುದು. ಆಗಮಶಾಸ್ತ್ರದಲ್ಲಿ ಉಕ್ತವಾದ ಸ್ಥಂಡಿಲ ಲಕ್ಷಣಗಳು, ಯಜ್ಞಪಾತ್ರೆಗಳ ಲಕ್ಷಣಗಳು ಇತ್ಯಾದಿಗಳಿಗೆ ಮೀಮಾಂಸಾಶಾಸ್ತ್ರವೇ ಪ್ರಕೃತಿಯೆನಿಸಿದೆ. ಹಾಗೆಯೇ ಮೀಮಾಂಸಾಶಾಸ್ತ್ರದಲ್ಲಿ ಪ್ರತಿಪಾದಿ-ಸಲ್ಪಟ್ಟ ಅಂಗಾಂಗೀಭಾವ ನಿರ್ಣಯ, ಪ್ರಯೋಗಕ್ರಮನಿರ್ಣಯ, ಅಧಿಕಾರ ನಿರ್ಣಯ, ಅತಿದೇಶನಿರ್ಣಯ ಮತ್ತು ಊಹ ಇತ್ಯಾದಿಗಳನ್ನು ಆಗಮಶಾಸ್ತ್ರದಲ್ಲೂ ನಾವು ಗಮನಿಸಬಹುದು.

## ನ್ಯಾಯಾಲಯಗಳಲ್ಲಿ ಮೀಮಾಂಸಾ :-

1987 ರಲ್ಲಿ ಉತಾರಪ್ರದೇಶದ ಉಚ್ಚ ನ್ಯಾಯಾಲಯವು ಮೀಮಾಂಸಾಶಾಸ್ತ್ರದ **ಜಟೇಷ್ಟಿ ನ್ಯಾಯ**[10] ವನ್ನು ಆಧರಿಸಿ ತೀರ್ಪನ್ನು ಘೋಷಿಸಿದೆ. ಜೈಲಿನಲ್ಲಿರುವ ವ್ಯಕ್ತಿಗಳು ಜಾಮೀನನ್ನು ಪಡೆಯಬೇಕಾದಲ್ಲಿ ಜಿಲ್ಲಾ ಹೆಚ್ಚುವರೀ ನ್ಯಾಯಾಧೀಶರಿಂದ ಅನುಮೋದಿತ ಪತ್ರವನ್ನು ಪಡೆಯಬೇಕಾಗುತ್ತದೆ. ಉತ್ತರಪ್ರದೇಶ ಸರ್ಕಾರವು ಹಲವಾರು ವರ್ಷಗಳಿಂದ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿರದ ಕಾರಣ ಜೈಲಿನಲ್ಲಿರುವ ವ್ಯಕ್ತಿಗಳಿಗೆ ಜಾಮೀನನ್ನು ಸಲ್ಲಿಸಲು ಅವಕಾಶವೇ ದೊರಕಲಿಲ್ಲ. ಇದನ್ನು ಮನಗೊಂಡ ನ್ಯಾಯಾಲಯವು ತನ್ನ ಅಧಿನಿಯಮಗಳನ್ನು ಶೋಧಿಸಿತು. ಆದರೆ ಯಾವುದೇ ಪರಿಹಾರ ದೊರಕದ ಕಾರಣ ಅಂತಹ ಸಂದರ್ಭದಲ್ಲಿ ಮೀಮಾಂಸಾಶಾಸ್ತ್ರದ ಜಟೇಷ್ಟಿನ್ಯಾಯವನ್ನು **(ಯದಿ ಸೋಮಂ ನ ವಿಂದೇತ ಪೂತಿಕಾಂ ಅಭಿಶೃಣುಯಾತ್ ಅಂದರೆ ಸೋಮಲತೆಯು ಸಿಗದ ಪಕ್ಷದಲ್ಲಿ ಪೂತಿಕವೆಂಬ ಲತೆಯನ್ನು ಬಳಸಿ ಹೋಮ ಮಾಡಬಹುದು)** ಆಧರಿಸಿ ನ್ಯಾಯಾಲಯವು ಜಿಲ್ಲಾ ನ್ಯಾಯಾಧೀಶರ ಅಭಾವದಲ್ಲಿ ನೇರವಾಗಿ ಉಚ್ಚನ್ಯಾಯಾಲಯದ ನ್ಯಾಯಾಧೀಶರು ಜಾಮೀನನ್ನು ಕೊಡಬಹುದು ಎಂಬುದಾಗಿ ತೀರ್ಪನ್ನು ನೀಡಿತು.

ಈ ತೀರ್ಪನ್ನು ಹಲವರು ಒಪ್ಪಿಕೊಳ್ಳಲಿಲ್ಲ. ಕಾರಣ ಎರಡು ಸಾವಿರ ವರ್ಷದಷ್ಟು ಹಳೆಯದಾದ ಈ ನಿಯಮಗಳು ಈಗಿನ ಕಾಲಕ್ಕೆ ಅನ್ವಯವಾಗುವುದಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು. ಆದರೆ ನ್ಯಾಯಾಲಯವು ಪೂರ್ವಮೀಮಾಂಸಾಶಾಸ್ತ್ರವು ನ್ಯಾಯಪರೀಕ್ಷಾ ಶಾಸ್ತ್ರವಾಗಿರುವುದರಿಂದ ಎಷ್ಟೇ ಹಳೆಯದಾದರೂ ಕೂಡ ಅಂಗೀಕರಿಸಬಹುದೆಂದು ತೀರ್ಪನ್ನಿತ್ತು ಕಾನೂನನ್ನು

ಜಾರಿಗೊಳಿಸಿತು. ಹೀಗೆಯೇ ಸುಮಾರು 180 ತೀರ್ಪುಗಳು ವಿವಿಧ ನ್ಯಾಯಾಲಯಗಳಿಂದ ಈ ಶಾಸ್ತ್ರವನ್ನಾಧರಿಸಿ ಹೊರಬಂದಿವೆ.

## ಸಮಾಜದಲ್ಲಿ ಮೀಮಾಂಸಾ:–

ಆಧುನಿಕತೆಯ ತುತ್ತತುದಿಯನ್ನೇರುತ್ತಿರುವ ಈ ವಿಶ್ವದಲ್ಲಿ ಪ್ರತಿಯೊಂದು ವಿಷಯವನ್ನು ನಾವು ಅಂತರ್ಜಾಲ ಮಾಧ್ಯಮದ ಮೂಲಕ ತಿಳಿದುಕೊಳ್ಳಬಹುದು. ಮೀಮಾಂಸಾಶಾಸ್ತ್ರವು ಲೋಕದಲ್ಲಿ ಎಷ್ಟು ಉಪಯುಕ್ತವಾದುದೆಂಬುದನ್ನು ತಿಳಿಯಬೇಕೆಂದರೆ ಒಮ್ಮೆ ಅಂತರ್ಜಾಲ ಪುಟದಲ್ಲಿ **'ಮೀಮಾಂಸಾದರ್ಶನಂ'** ಎಂದು ನಮೂದಿಸಿದಾಗ ಸರಿಸುಮಾರು 91200! ಸಂಖ್ಯೆಯ ಫಲಿತಾಂಶವನ್ನು ಕಾಣಬಹುದು. ಇದರಿಂದ ಜಗತ್ತಿನಲ್ಲಿ ಅದೆಷ್ಟು ಜನರು ಮೀಮಾಂಸಾಶಾಸ್ತ್ರವನ್ನು ಆದರಿಸುತ್ತಾರೆ ಎಂಬ ಮಾಹಿತಿಯು ನಮಗೆ ಲಭಿಸುತ್ತದೆ. ಲೋಕದಲ್ಲಿ ಉತ್ತಮಸ್ಥಾನವನ್ನು ಹೊಂದಲು ವಿಚಾರ–ವಿಮರ್ಶೆಗಳು ಅತ್ಯಗತ್ಯ. ಇಂತಹ ವಿಚಾರಕ್ರಮವನ್ನು ಮೀಮಾಂಸಾಶಾಸ್ತ್ರದಿಂದ ನಾವು ಪಡೆಯಬಹುದು. ಆದ್ದರಿಂದಲೇ ಜನರು ಮೀಮಾಂಸಾಶಾಸ್ತ್ರವನ್ನು ತಿಳಿಯಲು ಬಯಸುತ್ತಾರೆ. ಮೀಮಾಂಸಾಶಾಸ್ತ್ರವು ಮಾನವನ ಸ್ವಭಾವವನ್ನು ಅರಿತು ರೂಪುಗೊಂಡಿದೆ ಎಂದರೆ ತಪ್ಪಾಗಲಾರದು. ತಿಳಿದೋ ತಿಳಿಯದೆಯೋ ಪ್ರತಿಯೊಬ್ಬನೂ ಲೋಕದಲ್ಲಿ ಮೀಮಾಂಸಕನೇ ಆಗಿದ್ದಾನೆ. ತನಗೆ ಬೇಕಾದ ವಸ್ತುಗಳನ್ನು ಕೊಳ್ಳುವಾಗ ಅಥವಾ ವಿಕ್ರಯಿಸುವಾಗ ಅದರ ಒಳಿತು ಕೆಡಕುಗಳನ್ನು ಗಮನಿಸಿಯೇ ವ್ಯವಹರಿಸುತ್ತಾನೆ. ವಿಧಿವಾಕ್ಯಗಳನ್ನು ಕೇಳಿದ ತಕ್ಷಣ ಕ್ರಿಯೆಯಲ್ಲಿ ಪ್ರವೃತ್ತನಾಗುತ್ತಾನೆ. ನಿಷೇಧ ವಾಕ್ಯವನ್ನು ಕೇಳಿದ ತಕ್ಷಣ ನಿವೃತ್ತನಾಗುತ್ತಾನೆ (ಪ್ರಮಾಣಾಧ್ಯಾಯ). ತನ್ನ ಜೀವನದಲ್ಲಿ ಮಾಡುವ ಅನೇಕ ಕಾರ್ಯಗಳ ಮಧ್ಯೆ ಇರುವ ವ್ಯತ್ಯಾಸ ಮತ್ತು ಸ್ವರೂಪವನ್ನು ಅರಿಯುತ್ತಾನೆ (ಕರ್ಮಭೇದಾಧ್ಯಾಯ). ಕೆಲಸ ಕಾರ್ಯಗಳನ್ನು ಮಾಡುವಾಗ ಪ್ರಸಕ್ತ ಕಾರ್ಯಕ್ಕನುಗುಣವಾಗಿ ನಿಯಮವನ್ನಾಚರಿಸುತ್ತಾನೆ. ಉದ್ದಿಷ್ಟಕಾರ್ಯವನ್ನು ಸಾಧಿಸುವ ಉದ್ದೇಶದಿಂದ ತದಂಗವಾಗಿ ಮಾಡಲೇ ಬೇಕಾದ ಕಾರ್ಯಗಳನ್ನು ತಪ್ಪದೇ ನೆರವೇರಿಸುತ್ತಾನೆ (ಅಂಗಾಧ್ಯಾಯ). ತನ್ನ ಇಷ್ಟಸಿದ್ಧಿಗೋಸ್ಕರ ಮಾಡುವಕಾರ್ಯ ಹಾಗೂ ಆ ಕಾರ್ಯಸಿದ್ಧಿಗೆ ಸಹಕಾರಿ ಕಾರಣಗಳನ್ನು ತಿಳಿದು ಇಷ್ಟ ಸಿದ್ಧಿಯನ್ನು ಹೊಂದುತ್ತಾನೆ (ಪ್ರಯುಕ್ತ್ಯಧ್ಯಾಯ). ಕಾರ್ಯವನ್ನು ವ್ಯವಸ್ಥಿತವಾಗಿ ಮುಗಿಸುವ ಉದ್ದೇಶದಿಂದ ಯಾವ ಕಾರ್ಯವಾದ ನಂತರ ಯಾವ ಕಾರ್ಯವನ್ನು ಅನುಸರಿಸಬೇಕೆಂಬುದನ್ನು ತಿಳಿದು ಕ್ರಮವನ್ನು ರೂಪಿಸಿಕೊಳ್ಳುತ್ತಾನೆ (ಕ್ರಮಾಧ್ಯಾಯ). ತನ್ನ ಹಾಗೂ ಬೇರೆಯವರ ಅಧಿಕಾರವ್ಯಾಪ್ತಿಯನ್ನು ಅರಿತು ವ್ಯವಹರಿಸುತ್ತಾನೆ (ಅಧಿಕಾರಾಧ್ಯಾಯ). ಬೇರೆಯವರಿಂದ ಮಾಡಲ್ಪಟ್ಟ ಉತ್ತಮ ಕಾರ್ಯಗಳನ್ನು ತಾನು ಅನುಸರಿಸುವುದರ ಮೂಲಕ ತನ್ನ ಜೀವನದಲ್ಲೂ ಅಳವಡಿಸಿಕೊಳ್ಳುತ್ತಾನೆ (ಅತಿದೇಶಾಧ್ಯಾಯ). ಸಮಾಜದಲ್ಲಿರುವ ಹಲವು ಉತ್ತಮ ಅಂಶಗಳನ್ನು ತನಗೆ ಅನುಕೂಲವಾಗುವಂತೆ ನಿರೂಪಿಸಿಕೊಳ್ಳುತ್ತಾನೆ (ಊಹಾಧ್ಯಾಯ). ತನಗೆ ಅವಶ್ಯಕತೆ ಇಲ್ಲದ ಅಂಶಗಳು ಪ್ರಾಪ್ತವಾದರೂ ಅದನ್ನು ಬಯಸದೇ ನಿರಾಕರಿಸುತ್ತಾನೆ (ಬಾಧಾಧ್ಯಾಯ). ವಿಭಿನ್ನ ಕಾರ್ಯಗಳನ್ನು ಒಂದೇ ಸಲ ಮುಗಿಸುವಂತೆ ಸುಲಭ ಉಪಾಯವನ್ನು ಅನುಸರಿಸುತ್ತಾನೆ (ತಂತ್ರಾಧ್ಯಾಯ). ಒಂದು ಕಾರ್ಯದಿಂದ ಹಲವು ಪ್ರಯೋಜನಗಳು ಸಿಗುವಂತಿದ್ದರೆ ಅಂತಹ ಕರ್ಮದಲ್ಲಿ ಶೀಘ್ರವಾಗಿ ಪ್ರವೃತ್ತನಾಗುತ್ತಾನೆ (ಪ್ರಸಂಗಾಧ್ಯಾಯ). ಹೀಗೆ ಪ್ರತೀ ಅಧ್ಯಾಯದ ಪ್ರತಿ ಅಧಿಕರಣನ್ಯಾಯಗಳು ಇಂದಿನ ಸಮಾಜದಲ್ಲಿ ಹಾಸುಹೊಕ್ಕಾಗಿ ಇರುವುದನ್ನು ನಾವು ನೋಡಬಹುದು.

**ಉಪಸಂಹಾರ:–**

**ಹತಂ ಜ್ಞಾನಂ ಕ್ರಿಯಾ ಹೀನಂ ಹತಂ ಅಜ್ಞಾನಿನಾಂ ಕ್ರಿಯಾ । ಅಪಶ್ಯನ್ಅಂಧಕೋ ದಗ್ಧಃ ಪಶ್ಯನ್ನಪಿ ಚ ಪಂಗುಕಃ ॥** [11]

ಹೇಗೆ ಕಣ್ಣಿಲ್ಲದ ಕುರುಡನು ಕಾಲಿಲ್ಲದ ಕುಂಟನು ಹೊತ್ತಿ ಉರಿಯುತ್ತಿರುವ ಅರಣ್ಯದಲ್ಲಿ ಭಸ್ಮವಾಗುತ್ತಾರೋ ಅದೇ ರೀತಿ ಕ್ರಿಯಾ ಶೂನ್ಯ ಜ್ಞಾನಿಗಳು ಹಾಗು ಅಜ್ಞಾನಿಗಳ ಕ್ರಿಯೆಯೂ ಕೂಡ ವ್ಯರ್ಥವಾಗುತ್ತವೆ. ಸುಜ್ಞಾನದೊಂದಿಗೆ ಕ್ರಿಯೆಯನ್ನು ಆಚರಿಸಿ ಕ್ರಿಯಾಫಲವನ್ನು ಸಂಪೂರ್ಣ ಅನುಭವಿಸಬೇಕೆಂದರೆ ಮೀಮಾಂಸಾದರ್ಶನವು ಅತ್ಯಗತ್ಯ. ಜ್ಞಾನಕರ್ಮ ಸಮುಚ್ಚಯದಿಂದ ಕಾರ್ಯಸಾಧ್ಯವೆಂಬುದು ಮೀಮಾಂಸಾಶಾಸ್ತ್ರದ ತತ್ತ್ವಾರ್ಥವಾಗಿದೆ. ಆದುದರಿಂದ ನಮ್ಮ ಜೀವನದಲ್ಲಿ ಮೀಮಾಂಸಾಶಾಸ್ತ್ರ ಅನಿವಾರ್ಯವೇ ಆಗಿದೆ.

## ಟಿಪ್ಪಣಿಗಳು :

1. ಮೀಮಾಂಸಾನಯೋದ್ಯೋತ.
2. ಸಿದ್ಧಾಂತಕೌಮುದೀ.
3. ಸರ್ವದರ್ಶನಸಂಗ್ರಹ
4. ತೈ. ಸಂ– ೭–೫–೭–೧
5. ತಾಂ. ಬ್ರಾ– ೬–೫–೯
6. ಕೌ. ಬ್ರಾ– ೨–೯
7. ಛಾಂ. ಉ– ೫–೧೧–೧

8. ತೈ. ಉ. ಬ್ರ– ೮ ಅ
9. ಕೇನ. ಉ– ೨–೧
10. ಪೂ. ಮೀ. ಅ– ೬–೩–೩೯
11. ಪಂಗ್ವಂಧನ್ಯಾಯ

**ಗ್ರಂಥಋಣ:–**


1. ಸರ್ವದರ್ಶನಸಂಗ್ರಹ, ಜಗದ್ಗುರು ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.
2. ಭಾರತೀಯ ದರ್ಶನ, ಕರ್ನಾಟಕ ಸರ್ಕಾರ ಪ್ರಕಟಿತ.
3. ಹಿಂದೂ ದರ್ಶನ ಸಾರ, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
4. ಭಾಟ್ಟದೀಪಿಕಾ, ದೆಹಲಿ ಪ್ರಕಾಶನ.
5. ಮೀಮಾಂಸಾನ್ಯಾಯಪ್ರಕಾಶ, ಪುಣೆ
6. ವೈಯ್ಯಾಕರಣಸಿದ್ಧಾಂತಕೌಮುದಿ, ವಾರಾಣಸಿ.
7. ಶಬ್ದಾರ್ಥಕೌಸ್ತುಭ, ಬಾಪ್ಕೋ ಪ್ರಕಾಶನ.
8. ಮೀಮಾಂಸಾನಯೋದ್ಯೋತ, ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ.



**ಡಾ|| ಸುರೇಶ ಹೆಗಡೆ**

ಅತಿಥಿ ಉಪನ್ಯಾಸಕರು,
ಸಂಸ್ಕೃತ ಅಧ್ಯಯನ ವಿಭಾಗ,
ಮೈಸೂರು ವಿಶ್ವವಿದ್ಯಾಲಯ, ಮಾನಸ ಗಂಗೋತ್ರಿ,
ಮೈಸೂರು–570006, ಕರ್ನಾಟಕ
Mobile No. : 8277520695,
E-mail : sheegdi@gmail.com


*********

**Volume XX : July to December – 2022, ISSN 2250-1711**
**Journal of Veda Samskrita Academy [Recognised in the UGC-CARE List]**

# ಸಂಸ್ಕೃತ ಭಾಷೆಗೆ ಗಂಗರಾಜರ ಕೊಡುಗೆ

**ಕೆ. ಎಸ್. ವಸಂತ, ಬೆಂಗಳೂರು, ಕರ್ನಾಟಕ**
**ಸಂಶೋಧನಾ ವಿದ್ಯಾರ್ಥಿ**

ಸಂಸ್ಕೃತಿ ಮತ್ತು ಇತಿಹಾಸದಲ್ಲಿ ಭಾರತವು ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇಂತಹ ವಿಶೇಷ ಸ್ಥಾನವನ್ನು ಪಡೆಯಲು ಅನೇಕ ರಾಜವಂಶಗಳು, ಪ್ರಜೆಗಳು ಕಾರಣರಾಗಿದ್ದಾರೆ. ಇತಿಹಾಸವು ಒದಗಿಸುವ ಪಾಠಗಳನ್ನು ಕಲಿಯಲೆಂದೇ ನಾವು ಇತಿಹಾಸದ ಅಧ್ಯಯನವನ್ನು ಮಾಡುತ್ತೇವೆ. ಪ್ರಾಚೀನ ಕಾಲದಿಂದಲೂ ಭಾರತ ದೇಶವನ್ನು ಹಲವಾರು ರಾಜರುಗಳು ಆಳಿದರು. ಹಲವಾರು ರಾಜಮನೆತನಗಳು ತಮ್ಮ ಆಳ್ವಿಕೆಯಲ್ಲಿ ಉತ್ತುಂಗ ಶ್ರೇಣಿಯನ್ನು ತಲುಪಿದ್ದು, ಇಂದಿಗೂ ಅದರ ಛಾಪನ್ನು ನಾವು ಕಾಣುತ್ತೇವೆ.

ಹೀಗೆಯೇ ಕರ್ನಾಟಕದಲ್ಲೂ ಅನೇಕ ಅರಸು ಮನೆತನಗಳು ರಾಜ್ಯವನ್ನಾಳಿ ನಮ್ಮ ದೇಶದ ಸನಾತನ ಧರ್ಮ, ಸಂಸ್ಕೃತಿ ಮತ್ತು ಸಾಹಿತ್ಯವನ್ನು ಬೆಳೆಸಿದ್ದಾರೆ. ಅಂದಿನ ಕಾಲದಲ್ಲಿ ಅರಸರೆಂದರೆ ದೇವರಿಗೆ ಸಮಾನ ಎಂದು ಪ್ರಜೆಗಳು ನಂಬಿದ್ದರು. ರಾಜರುಗಳು ತಮ್ಮ ಶೌರ್ಯ ಸಾಹಸಗಳಿಂದ ರಾಜ್ಯವನ್ನು ದಕ್ಷತೆಯಿಂದ ಆಳಿ, ಜನರಿಗೆ ಶಾಂತಿಯುಕ್ತ ಜೀವನವನ್ನು ನೀಡುತ್ತಿದ್ದರು. ರಾಜರುಗಳು ತಮ್ಮ ಆಳ್ವಿಕೆಯಲ್ಲಿ ತಮ್ಮ ದೇಶದ ಶಾಂತಿ ರಕ್ಷಣೆಗಾಗಿ ಹಲವಾರು ಆಜ್ಞೆಗಳನ್ನು ಹೊರಡಿಸುತ್ತಿದ್ದರು. ಯಾವ ಪ್ರಜೆಯೂ ಈ ಆಜ್ಞೆಗಳನ್ನು ಉಲ್ಲಂಘಿಸುವಂತಿರಲಿಲ್ಲ. ರಾಜಾಜ್ಞೆಯನ್ನು ಮೀರಿದ ಪೌರರಿಗೆ ದಂಡನೆಯೂ ಸಹ ವಿಧಿಸಲಾಗುತ್ತಿತ್ತು. ಹೀಗೆ ರಾಜರುಗಳು ತಮ್ಮ ಶಕ್ತಿ-ಸಾಮರ್ಥ್ಯಗಳಿಂದ ರಾಜ್ಯದ ಎಲ್ಲೆಡೆ ಪ್ರಜೆಗಳ ಸೌಖ್ಯಕ್ಕಾಗಿ ಶ್ರಮಿಸುತ್ತಿದ್ದರು. ಪ್ರಜಾಪಾಲನೆಗಾಗಿಯೇ ರಾಜ್ಯವನ್ನು ಧರ್ಮದಿಂದ ಆಳುತ್ತಿದ್ದರು. ಹೀಗೆ ಸಾವಿರಾರು ವರ್ಷಗಳಿಂದ ನಡೆದು ಬಂದ ದಾರಿಯನ್ನು ಅಧ್ಯಯನ ಮಾಡಲು ನಮಗೆ ಸಿಗುವ ಪುರಾವೆಗಳು ಶಿಲಾಶಾಸನಗಳು ಮತ್ತು ತಾಮ್ರಪಟಗಳು, ಶಿಲಾಶಾಸನಗಳು ವೈವಿಧ್ಯಪೂರ್ಣವಾಗಿದ್ದು, ಅವುಗಳಲ್ಲಿ ಸಾಹಿತ್ಯಿಕ ಸಾಧನೆಗಳ ಪೈಕಿ ಕನ್ನಡ ಮತ್ತು ಸಂಸ್ಕೃತ ಕೃತಿಗಳು ವಿಪುಲವಾಗಿವೆ.

ಭಾರತ ದೇಶದ ಇತಿಹಾಸವನ್ನು ತಿಳಿಯಲು ಸಂಸ್ಕೃತ ಭಾಷೆಯು ಅಮೂಲ್ಯವಾದ ಆಕರವಾಗಿದೆ (source). ವ್ಯಾಕರಣ, ಜ್ಯೋತಿಷ್ಯ, ಆಯುರ್ವೇದ ಮುಂತಾದ ಕ್ಷೇತ್ರಗಳಲ್ಲಿ ಸಂಸ್ಕೃತ ಭಾಷೆಯ ಕೊಡುಗೆ ಅತ್ಯಮೂಲ್ಯವಾದದ್ದು. ನಮ್ಮ ಐತಿಹಾಸಿಕ ಅಧ್ಯಯನಕ್ಕೆ ಮತ್ತು ಶಾಸನಗಳ ಅಧ್ಯಯನವನ್ನು ಮಾಡಲು ಸಂಸ್ಕೃತ ಭಾಷೆಯು ಸಹಕಾರಿಯಾಗಿದೆ. ಬೇರೆ ಬೇರೆ ಪ್ರಾಂತ್ಯಗಳಲ್ಲಿ ದೊರಕಿರುವ ಶಾಸನಗಳನ್ನು ಅಧ್ಯಯನ ಮಾಡಿದ ಮೇಲೆ ನಮಗೆ ತಿಳಿದುಬರುವ ಒಂದು ಮುಖ್ಯಾಂಶವೇನೆಂದರೆ – "ಭಾರತದ ಐಕ್ಯತೆ", ಸಾಧಾರಣವಾಗಿ ಎಲ್ಲಾ ಶಾಸನಗಳಲ್ಲೂ "ಭಾರತ ವರ್ಷ", "ಮೇರು ಪರ್ವತ", "ಹಿಮಾಲಯ", "ಗಂಗಾನದಿ", "ವಿಂಧ್ಯ ಪರ್ವತ" ಇವುಗಳ ವರ್ಣನೆಯಿದ್ದೇ ಇರುತ್ತದೆ. ಹಿಂದೆ ಸಂಸ್ಕೃತ ಮತ್ತು ಅದರ ಸಾಹಿತ್ಯವನ್ನು ತಿಳಿದವರೇ ಈ ಶಾಸನಗಳ ರಚನಾಕಾರರಾಗಿದ್ದರು.

ಶಾಸನಗಳಲ್ಲಿ ಅವು ರಚನೆಯಾದ ಕಾಲ, ರಾಜರ ಆಳ್ವಿಕೆಯ ವರ್ಷ, ಶಕ, ಸಂವತ್ಸರ, ಸಂವತ್ಸರಗಳ ಹೆಸರು, ಆಯನ, ಮಾಸ, ತಿಥಿ, ವಾರ, ನಕ್ಷತ್ರ ಮುಂತಾದ ವಿವರಗಳಿರುತ್ತವೆ. ಈ ವಿವರಗಳ ಆಧಾರದಿಂದ ನಾವು ಶಾಸನದ ಕಾಲವನ್ನು ಸರಿಯಾಗಿ ನಿರ್ಧರಿಸಬಹುದು. ಶಾಸನಗಳಲ್ಲಿ ಉಕ್ತವಾಗಿರುವ ಈ ಎಲ್ಲಾ ಅಂಶಗಳನ್ನು ಕ್ರಿಸ್ತಶಕದೊಂದಿಗೆ ಸರಿಹೊಂದಿಸಲು ಬೇಕಾಗಿರುವ ಪಂಚಾಂಗಗಳನ್ನು ಹಲವಾರು ವಿದ್ವಾಂಸರು ತಯಾರಿಸಿದ್ದಾರೆ. ಅವುಗಳಲ್ಲಿ ಪ್ರಸಿದ್ಧವಾದ ಪಂಚಾಂಗವು "ಸ್ವಾಮಿಕಣ್ಣುಪಿಳ್ಳೈ" ಯವರ "ಇಂಡಿಯನ್ ಎಫಿಮೆರೀಸ್" ಎಂಬ ಪಂಚಾಂಗ. ಅದರಲ್ಲಿ ಶಾಲಿವಾಹನ ಶಕೆ, ಹಿಜರಶಕೆ ಮತ್ತು ಕ್ರಿಸ್ತಶಕೆ – ಈ ಮೂರೂ ಸಂವತ್ಸರಗಳನ್ನು ಸರಿಹೊಂದಿಸಿ, ಸಂವತ್ಸರ, ಮಾಸ, ಪಕ್ಷ, ದಿನ, ವಾರ, ನಕ್ಷತ್ರ, ತಿಥಿ ಮುಂತಾದವುಗಳ ವಿವರಗಳನ್ನು ಶಾಸನೋಲ್ಲೇಖಿತ ಕಾಲದ ವಿವರಗಳನ್ನು ಸರಿಯಾಗಿ ಗುರುತಿಸಬಹುದು.

ಕರ್ನಾಟಕದಲ್ಲಿ ಎಲ್ಲೆಡೆ ಪ್ರಸ್ತಾಪಿಸಿರುವ ರವಿಕೀರ್ತಿಯ "ಐಹೊಳೆ ಶಾಸನ", ಮತ್ತು ಕುಬ್ಜನ "ತಾಳಗುಂದ" ಶಾಸನಗಳನ್ನು ಬಿಟ್ಟು ಇನ್ನೂ ಅನೇಕ ಶಾಸನಗಳಲ್ಲಿ ಸಂಸ್ಕೃತ ಕಾವ್ಯಗಳನ್ನು ಗದ್ಯ-ಪದ್ಯ ರೂಪಗಳಲ್ಲಿ ಕಾಣಬಹುದು. ಈ ಶಾಸನಗಳ ರಚನಾಕಾರರು ತಮ್ಮ ಕವಿತ್ವದಲ್ಲಿ ತಮ್ಮ ಪ್ರತಿಭೆಯನ್ನು ನವೀನತೆಯನ್ನು ಪ್ರಕಾಶಪಡಿಸಿದ್ದಾರೆ. ಇದಲ್ಲದೆ, ಸಾಂಸ್ಕೃತಿಕ ವಿಭಾಗದಲ್ಲೂ ಕರ್ನಾಟಕದ ಶಿಲಾಶಾಸನಗಳು ವೇದಪಠನ ಮತ್ತು ಶಾಸ್ತ್ರಾಧ್ಯಯನದ ಮಹಿಮೆ ಮತ್ತು ಮಹತ್ವಗಳನ್ನು ತಿಳಿಸುತ್ತವೆ. ಕನ್ನಡ ಮತ್ತು ಸಂಸ್ಕೃತದಲ್ಲಿ ಪಂಡಿತರಾದ "ಉಭಯ ಕವಿಗಳು" ಇದ್ದರೆಂದು ಕೆಲವು ಶಾಸನಗಳು ತಿಳಿಸುತ್ತವೆ. ವಿವಿಧ ಮತಗಳ ಜನರು ರಾಜ್ಯದಲ್ಲಿದ್ದರೂ, ರಾಜರುಗಳು ತಮ್ಮ ಎಲ್ಲಾ ಪ್ರಜೆಗಳನ್ನು ಸಮದೃಷ್ಟಿಯಿಂದ ನೋಡುತ್ತಿದ್ದರೆಂದು ಅನೇಕ ಶಾಸನಗಳು ತಿಳಿಸುತ್ತವೆ.

**ರಾಜಮನೆತನಗಳಲ್ಲಿ ಸಂಸ್ಕೃತ:**

ಬೌದ್ಧ ಮತಸ್ಥರು ತಮ್ಮ ಮತಪ್ರಚಾರಕ್ಕಾಗಿ ಪಾಲಿ, ಪ್ರಾಕೃತ ಭಾಷೆಗಳನ್ನು ಬಳಸಿದ ಕಾರಣ ವೇದಗಳೂ ಮತ್ತು ಸಂಸ್ಕೃತ ಭಾಷೆಯು ಹಿಂದುಳಿಯಿತು. ನಂತರ ಶಾತವಾಹನರ ಕಾಲದಲ್ಲಿ ಅವರು ನಡೆಸಿದ ಯಜ್ಞ-ಯಾಗಾದಿಗಳಲ್ಲಿ ಸಂಸ್ಕೃತ ಭಾಷೆಯನ್ನೇ ಬಳಸಿದರು. 4 ನೇ ಶತಮಾನದಲ್ಲಿ ಕದಂಬರು ಆಳ್ವಿಕೆಗೆ ಬಂದಾಗ ಅವರು ಬ್ರಾಹ್ಮಣರೆಂದು ತಾಳಗುಂದ ಶಾಸನದ ಮೂಲಕ ತಿಳಿದುಬರುತ್ತದೆ.

**ಕದಂಬಕಾಲೇ ಶ್ರೀಮಾನ್ ಬಭೂವ ದ್ವಿಜೋತ್ತಮಃ**

ಈ ಎರಡೂ ಮನೆತನಗಳ ಮೂಲಕ ಸಂಸ್ಕೃತ ಶಾಸನಗಳ ಅಧ್ಯಯನ ಪ್ರಾರಂಭವಾಯಿತೆನ್ನಬಹುದು. ಕದಂಬರು ಸಂಸ್ಕೃತಕ್ಕೆ ಪೂರ್ತಿ ಬೆಂಬಲವನ್ನು ನೀಡಿದರು. ಕದಂಬರ ನಂತರ ಗಂಗರು ಕರ್ನಾಟಕದ ಕಾವೇರಿ ನದಿಯ ಆಗ್ನೇಯ ಭಾಗದಲ್ಲಿ ಪ್ರಪ್ರಥಮವಾಗಿ ಸ್ವತಂತ್ರ ರಾಜ್ಯವನ್ನು ಸುಮಾರು 200 ವರ್ಷಗಳು ಸ್ವತಂತ್ರವಾಗಿ, ನಂತರ ಆದಿ-ಚಾಲುಕ್ಯ, ರಾಷ್ಟ್ರಕೂಟ ಅರಸು ಮನೆತನಗಳ ಅಧೀನರಾಗಿ ದೀರ್ಘಕಾಲ ರಾಜ್ಯವಾಳಿದರು.

**ಗಂಗರು:**

ಗಂಗವಂಶದ ಸ್ಥಾಪಕರು ದಡಿಗ ಮತ್ತು ಮಾಧವ. ಇವರು ಗಂಗಪೇರೂರಿಗೆ ಬಂದಾಗ ಜೈನಾಚಾರ್ಯರಾದ ಸಿಂಹನಂದಿಯ ದರ್ಶನವಾಗಿ, ಅವರಿಂದ ರಾಜೋಚಿತ ವಿದ್ಯಾ ಸಂಸ್ಕಾರವನ್ನು ಪಡೆದರು.

ರಾಜ್ಯವು ಸ್ಥಾಪಿತವಾದ ಕಾಲಕ್ಕೆ "ಕುವಲಾಲ" (ಈಗಿನ ಕೋಲಾರ) ಇವರ ರಾಜಧಾನಿಯಾಗಿತ್ತು. ಕಾಲಾಂತರದಲ್ಲಿ "ತಳವನಪುರ" ಇಲ್ಲವೇ "ತಲಕಾಡು" ಇವರ ರಾಜಧಾನಿಯಾಯಿತು. "ದಕ್ಷಿಣ ಗಂಗೆ" ಎನಿಸಿದ ಕಾವೇರಿ ನದಿಯ ದಡದ ಮೇಲೆ "ತಲಕಾಡು" ಇದ್ದುದರಿಂದ, ಇವರು ಶಿವಭಕ್ತರೂ ಆದ ಕಾರಣ ತಮ್ಮನ್ನು "ಗಂಗ"ರೆಂದು ಕರೆದುಕೊಂಡರು.

ಗಂಗರ ಕಾಲದಲ್ಲಿ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಭಾಷೆಗಳಲ್ಲಿ ಗ್ರಂಥಗಳು ವಿಪುಲವಾಗಿ ರಚನೆಯಾದವು. ಉನ್ನತ ವಿದ್ಯಾಭ್ಯಾಸಕ್ಕೆ ಬ್ರಹ್ಮಪುರಿಗಳು ಮತ್ತು ಘಟಕಸ್ಥಾನಗಳಿದ್ದವು. ತಲಕಾಡು, ಶ್ರವಣಬೆಳಗೊಳ, ಬಂಡೀಪುರ ಮುಂತಾದ ಸ್ಥಳಗಳು ಅಧ್ಯಯನದ ಕೇಂದ್ರಗಳಾಗಿದ್ದವು. ತಮ್ಮ ಪಾಂಡಿತ್ಯವನ್ನು ಮುಂದುವರೆಸಲು ಬ್ರಾಹ್ಮಣರಿಗೆ, ಪಂಡಿತರಿಗೆ ಅಗ್ರಹಾರಗಳನ್ನು ನಿಯಮಿಸಲಾಗಿತ್ತು. ವಿಶೇಷ ಸಂದರ್ಭಗಳಲ್ಲಿ ವಿದ್ವಾಂಸರಿಗೆ ಪ್ರೋತ್ಸಾಹ ನೀಡಲು ಗ್ರಾಮಗಳನ್ನು ಭೂಮಿಯನ್ನು ದಾನವಾಗಿ ನೀಡಲಾಗುತ್ತಿತ್ತು.

ಗಂಗರ ಕಾಲದ ಶಿಲಾಶಾಸನಗಳು ಕನ್ನಡದಲ್ಲಿದ್ದರೆ, ಅವರ ಕಾಲದ ಎಲ್ಲಾ ತಾಮ್ರಪಟಗಳು ಸಂಸ್ಕೃತದಲ್ಲಿಯೇ ಇವೆ. ನ್ಯಾಯಸ್ಥಾನದಲ್ಲಿ ಮತ್ತು ರಾಜಾಶ್ರಯವನ್ನು ಹೊಂದಿದ್ದ ಭಾಷೆ ಸಂಸ್ಕೃತವಾಗಿದ್ದಿತು. ಆದಕಾರಣ ತಮ್ಮ ಪ್ರೌಢತೆಯನ್ನು ತಿಳಿಸಲೋ ಎಂಬಂತೆ ಎಲ್ಲಾ ಪಟಗಳನ್ನು ಸಂಸ್ಕೃತ ಭಾಷೆಯಲ್ಲೇ ಬರೆಸಿದ್ದಾರೆ. ಆ ಸಮಯದಲ್ಲಿ ಕನ್ನಡ ಭಾಷೆಯು ಆಡುಭಾಷೆಯಾಗಿ ಪ್ರಗತಿ ಹೊಂದುತ್ತಿದ್ದುದರಿಂದ ಹಲವು ತಾಮ್ರಪಟಗಳಲ್ಲಿ ದಾನದ ವಿಷಯವು ಸಂಸ್ಕೃತ ಮಿಶ್ರಿತ ಕನ್ನಡ ಭಾಷೆಯಲ್ಲಿದೆ.

**ಗಂಗರಾಜರ ತಾಮ್ರಪಟಗಳ ನಮೂನೆ:**

ಗಂಗರಾಜರು ಶಿಲಾಶಾಸನಗಳಲ್ಲಿ ಕನ್ನಡ ಭಾಷೆಯನ್ನು, ತಾಮ್ರಪಟಗಳಲ್ಲಿ ಸಂಸ್ಕೃತ ಭಾಷೆಯನ್ನೇ ಬಳಿಸಿದ್ದಾರೆ. ಸಾಧಾರಣವಾಗಿ ಇವರ ತಾಮ್ರಪಟಗಳು ಒಂದೇ ನಮೂನೆಯಲ್ಲಿರುತ್ತವೆ.

1. ಎಲ್ಲಾ ತಾಮ್ರಪಟಗಳಲ್ಲಿಯೂ ಆದಿಯಲ್ಲಿ ಭಗವಂತನಾದ ಶ್ರೀ ಪದ್ಮನಾಭನನ್ನು ಸ್ಮರಿಸಿದ್ದಾರೆ.
2. ತಮ್ಮನ್ನು ಜಾಹ್ನವೇಯ ಕುಲದವರೆಂದೂ ಮತ್ತು ಕಣ್ವಾಯನ ಗೋತ್ರದವರೆಂದೂ ತಿಳಿಸಿದ್ದಾರೆ. ತಮ್ಮನ್ನು "ಮಹಾರಾಜಾಧಿರಾಜ" ರೆಂದು ಹೇಳಿಕೊಂಡಿದ್ದಾರೆ.
3. ತಾಮ್ರಪಟಗಳಲ್ಲಿ ತಮ್ಮ ವಂಶಾವಳಿಯನ್ನು ಅತಿ ದೀರ್ಘವಾಗಿ ಪ್ರಸ್ತಾಪಿಸಿದ್ದಾರೆ.
4. ಸಂಭಾವನೆ: ಗಂಗರಸರು ಬ್ರಾಹ್ಮಣರಿಗೂ, ವಿದ್ವಜ್ಜನರಿಗೂ, ಜೈನ ಬಸದಿಗಳಿಗೂ ಮುಕ್ತಹಸ್ತದಿಂದ ದಾನ ಮಾಡಿದ್ದಾರೆ. ಗಂಗರು ವೀರರಾಗಿದ್ದರೂ ಸಾಹಿತ್ಯ ಮತ್ತು ಅನೇಕ ವಿದ್ಯೆಗಳಲ್ಲಿ ಪರಿಣಿತರಾಗಿದ್ದರು. ಸಾಧಾರಣವಾಗಿ ಎಲ್ಲಾ ತಾಮ್ರಪಟಗಳಲ್ಲೂ ದೀರ್ಘ ಪ್ರಸ್ತಾವನೆ ಇದ್ದೇ ಇರುತ್ತದೆ.
5. ತಾಮ್ರಪಟಗಳಲ್ಲಿ ಆಳುತ್ತಿರುವ ರಾಜರ ಹೆಸರು, ಮಾಹಿತಿಯ ವಿವರಣೆ, ಇವು ಗದ್ಯ ರೂಪದಲ್ಲಿದೆ.
6. ತಾಮ್ರಪಟಗಳು ಸಾಧಾರಣವಾಗಿ ಬ್ರಾಹ್ಮಣರಿಗೆ, ವಿದ್ವಾಂಸರಿಗೆ ನೀಡಿದ ಭೂದಾನಗಳಾಗಿವೆ. ಕೊಟ್ಟ ದಾನವು ಬ್ರಹ್ಮದೇಯಕ್ರಮ-ಕ್ಕನುಸಾರವಾಗಿಯೂ, ಸರ್ವಪರಿಹಾರ ಸಂಯುಕ್ತವಾಗಿ ಇರುತ್ತದೆ.
7. ಗಂಗರು ಬ್ರಾಹ್ಮಣರಾದರೂ, ಇವರಲ್ಲಿ ಕೆಲವರು ಜೈನ ಬಸದಿಗಳಿಗೆ ನೀಡಿದ ದಾನಗಳೂ ಕೂಡ ತಾಮ್ರಪಟಗಳಲ್ಲಿ ದಾಖಲೆಯಾಗಿವೆ.
8. ತಾಮ್ರಪಟಗಳ ಭಾಷೆ: ನ್ಯಾಯಸ್ಥಾನದಲ್ಲಿ ಮತ್ತು ಆಡಳಿತದಲ್ಲಿ ರಾಜಾಶ್ರಯವನ್ನು ಹೊಂದಿದ್ದ ಭಾಷೆ ಸಂಸ್ಕೃತವಾಗಿದ್ದಿತು. ಆದ್ದರಿಂದ ಎಲ್ಲಾ ತಾಮ್ರಪಟಗಳು ಸಂಸ್ಕೃತದಲ್ಲೇ ಇವೆ.

ಆಡುಭಾಷೆಯಾದ ಕನ್ನಡವೂ ಪ್ರಾಮುಖ್ಯತೆಯನ್ನು ಹೊಂದಿದ್ದ ಕಾರಣ ದಾನದ ವಿಷಯವು ತಾಮ್ರಪಟಗಳಲ್ಲಿ ಸಂಸ್ಕೃತ ಮಿಶ್ರಿತ ಕನ್ನಡಭಾಷೆಯಲ್ಲಿದೆ.

9. ಸಾಧಾರಣವಾಗಿ ದಾನ ಕೊಟ್ಟ ಭೂಮಿಯ ಸೀಮೆ (Boundaries) ಪ್ರಾದೇಶಕ ಆಡುಭಾಷೆಯಾದ ಕನ್ನಡದಲ್ಲಿದೆ.
10. ತಾಮ್ರಪಟಗಳ ಮೂಲವು ಗದ್ಯ-ಚಂಪೂ ರೀತಿಯಲ್ಲಿ ರಚನೆಗೊಂಡಿದೆ. ಅಲ್ಲದೇ, ಅನೇಕ ಛಂದಸ್ಸುಗಳನ್ನು (ಅನುಷ್ಟುಬ್, ಸ್ರಗ್ಧರ, ವಸಂತ ತಿಲಕ, ಶಾರ್ದೂಲ ವಿಕ್ರೀಡಿತ) ಬಳಸಿದ್ದಾರೆ.
11. ರಚನಾಕಾರರು ಸ್ವತಃ ಸಂಸ್ಕೃತ ಪಂಡಿತರಾದ ಕಾರಣ, ದೀರ್ಘ ಸಮಾಸಗಳನ್ನು ಅಲಂಕಾರಗಳನ್ನು ಬಳಸಿದ್ದಾರೆ. ಆದರೆ ರಚನಾಕಾರರು ಅನಾಮಿಕರಾಗಿ ಉಳಿದಿದ್ದಾರೆ. ಅವರ ನಾಮಧೇಯವು ಕಂಡುಬರುವುದಿಲ್ಲ.
12. ಕೊನೆಯಲ್ಲಿ ಈ ತಾಮ್ರಪಟಗಳನ್ನು ಬರೆದವರ (ಕೊರೆದವರ) ಹೆಸರು ಮತ್ತು ಅವರಿಗೆ ದಾನವಾಗಿ ಕೊಟ್ಟ ವಿವರಗಳನ್ನು ಕಾಣಬಹುದು.

**ಗಂಗ ಸಂತತಿಯಲ್ಲಿ ಅತ್ಯುತ್ತಮವಾದ ಅರಸುಗಳು:**

ಗಂಗಮಹಾರಾಜರುಗಳೆಲ್ಲರೂ ಸಂಸ್ಕೃತ ಭಾಷೆಯನ್ನು ಅಭ್ಯಸಿಸಿ, ವಿದ್ವಾಂಸರನ್ನು, ಪಂಡಿತರನ್ನು, ಬ್ರಾಹ್ಮಣರನ್ನು ಗೌರವಿಸಿ, ಅವರಿಗೆ ಅನೇಕ ವಿಧವಾದ ದಾನಗಳನ್ನು ಕೊಟ್ಟು ಸತ್ಕರಿಸಿದರು. ಈ ಅರಸು ಮನೆತನದಲ್ಲಿ ಸ್ವತಃ ಸಂಸ್ಕೃತ ವಿದ್ವಾಂಸರಾಗಿದ್ದವರೆಂದರೆ:-

**ಒಂದನೆಯ ಮಾಧವ:**

ಸಮರ್ಥ ಯೋಧಗ್ರೇಸರ, ನೀತಿಶಾಸ್ತ್ರ ಪಾರಂಗತನು, ವಿದ್ವಾಂಸನಾಗಿ ವಿದ್ವಜ್ಜನಪಕ್ಷಪಾತಿಯಾಗಿದ್ದನು. ಇವನು "ದತ್ತಕಸೂತ್ರ"ಕ್ಕೆ ವೃತ್ತಿಯನ್ನು ಬರೆದುದಾಗಿ ಶಾಸನೋಕ್ತಿಯಿದೆ.

**ದುರ್ವಿನೀತ:**

ಪ್ರಾಕೃತ ಭಾಷೆಯ "ವಡ್ಡರಕತಾ"ವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದನು.
ನೀತಿಶಾಸ್ತ್ರದಲ್ಲಿ ಚಾಣಕ್ಯನಿಗೆ ಸಮಾನನೆಂದೂ, ಹಸ್ತಸಾಮುದ್ರಿಕ, ಆಯುರ್ವೇದಗಳಲ್ಲಿ ಪರಿಣಿತನೆಂದು ಶಾಸನಗಳು ಹೇಳಿವೆ.
"ಶಬ್ದಾವತಾರ" ಎಂಬ ವ್ಯಾಕರಣ ಗ್ರಂಥವನ್ನು ರಚಿಸಿದನು. ಪ್ರಜಾಕೋಟಿಯ ಶ್ರೇಯಸ್ಸಿಗಾಗಿ ತನ್ನ ಸರ್ವಸ್ವವನ್ನು ಮುಡುಪಾಗಿಟ್ಟ "ಲೋಕಾನುರಂಜಕ" ಎಂದು ಅನೇಕ ತಾಮ್ರಪಟಗಳಲ್ಲಿ ವರ್ಣಿಸಲಾಗಿದೆ. ಇವನು ಸಂಸ್ಕೃತ-ಪ್ರಾಕೃತ ವಿದ್ವಾಂಸನಷ್ಟೇ ಅಲ್ಲ, ಪ್ರಖ್ಯಾತ ಕನ್ನಡ "ಗದ್ಯಾಶ್ರಮಗುರು"ಗಳಲ್ಲೊಬ್ಬನಾಗಿದ್ದನೆಂದು "ಕವಿರಾಜಮಾರ್ಗ"ವು ಸಾರಿದೆ.

ಗಂಗರಾಜರುಗಳ ತಾಮ್ರಪಟಗಳ ಅಧ್ಯಯನದಿಂದ ನಮಗೆ ತಿಳಿದುಬರುವ ಮುಖ್ಯಾಂಶಗಳೆಂದರೆ – ರಾಜರುಗಳು ಸ್ವತಃ ವಿದ್ಯಾವಂತರಾಗಿ, ಸಾಹಿತ್ಯ ಮತ್ತು ಕಲೆಗಳಲ್ಲಿ ಅಭಿರುಚಿಯುಳ್ಳವರಾಗಿ, ತಮ್ಮ ಪ್ರಜೆಗಳೆಲ್ಲರೂ ವಿದ್ಯಾವಂತರಾಗಿರಬೇಕೆಂಬ ಕಾರಣದಿಂದ ಬ್ರಾಹ್ಮಣರಿಗೆ ಹೇರಳವಾಗಿ ದಾನಗಳನ್ನು ಮಾಡಿ, ಬ್ರಾಹ್ಮಣರಿಂದ ಎಲ್ಲರಿಗೂ ವಿದ್ಯೆ ದೊರೆಯಲೆಂದು ಶ್ರಮಪಟ್ಟರು. ಇವರು ವೇದ, ಅರ್ಥಶಾಸ್ತ್ರ, ತರ್ಕಶಾಸ್ತ್ರ, ಗಜಶಾಸ್ತ್ರ, ಮನುಸ್ಮೃತಿಗಳನ್ನು ಚೆನ್ನಾಗಿ ಅಧ್ಯಯನ ಮಾಡಿದ ಕಾರಣ ಸಂಸ್ಕೃತ ಭಾಷೆಯನ್ನು, ಅದರ ಹಿರಿಮೆಯನ್ನು ಅರಿತು ಸಂಸ್ಕೃತ ಭಾಷೆಗೆ ಪ್ರಾಧಾನ್ಯವನ್ನು ಕೊಟ್ಟಿದ್ದರು ಎಂದು ತಾಮ್ರಪಟಗಳ ಮೂಲಕ ತಿಳಿದುಬರುತ್ತದೆ.

**ಗಂಗಮಹಾರಾಜರುಗಳ ತಾಮ್ರಪಟಗಳ ವಿವರಣೆಯನ್ನು ಮುಂದಿನ ಪುಟಗಳಲ್ಲಿ ನೀಡಲಾಗಿದೆ.**

## ಆಧಾರ ಗ್ರಂಥಗಳು:


1. **ಎಪಿಗ್ರಾಫಿಯಾ ಇಂಡಿಯಾ (E.I.)**
2. **ಎಪಿಗ್ರಾಫಿಯಾ ಕರ್ನಾಟಕ (E.C.)**
3. **ಇನ್ಸ್‌ಕ್ರಿಪ್ಷನ್ಸ್ ಆಫ್ ವೆಸ್ಟ್ರನ್ ಗಂಗಾಸ್ – ಡಾ॥ ಕೆ.ವಿ. ರಮೇಶ್**
4. **ಕನ್ನಡನಾಡಿನ ಚರಿತ್ರೆ – ಶ್ರೀ ಸಲತ್ತೂರ್**
5. **ಕರ್ನಾಟಕದ ಸಂಕ್ಷಿಪ್ತ ಇತಿಹಾಸ – ಡಾ॥ ಸೂರ್ಯನಾರಾಯಣ ಕಾಮತ್**


## ತಾಮ್ರಪಟಗಳ ವಿವರಣೆ

| ಕ್ರ. ಸಂ. | ಸ್ಥಾನ | ರಾಜರ ಹೆಸರು | ಆಧಾರ |
|---|---|---|---|
| 1. | ನೋಣಮಂಗಲ | ಕೊಂಗಣಿ ವರ್ಮ | ಬಿ.ಎಲ್. ರೈಸ್ ECX ಮಾಲೂರು 72 ಪುಟ 72 |
| 2. | ಕಂಡಸಲ, ಮೈಸೂರು | ಮಾಧವ ವರ್ಮ | ಆರ್. ಶಾಮಶಾಸ್ತ್ರಿ MAR 1914-15, Pg. 95-96 |
| 3. | ನಂದಿಗ್ರಾಮ | ಮಾಧವ ವರ್ಮ.ಐ | ಆರ್. ನರಸಿಂಹಚಾರ್ MAR 1914 PP-27 |
| 4. | ಕೂಡಲೂರು | ಹರಿ ವರ್ಮ | ಆರ್. ನರಸಿಂಹಚಾರ್ MAR 1921 Pg. 7 |

| | | | |
|---|---|---|---|
| 5. | ಬೆಂಡಿಗಾನಹಳ್ಳಿ | ವಿಜಯಕೃಷ್ಣ | ಆರ್. ನರಸಿಂಹಚಾರ್ MAR 1914-15, Pg.40 |
| 6. | ಕುಡಿಯಾಳಮ್ | ಕೃಷ್ಣವರ್ಮ | ಎಂ.ಎಚ್. ಕೃಷ್ಣ MAR. 1932 Pg. 124-30 |
| 7. | ಕಟ್ಟೂರು | ಸಿಂಹ ವರ್ಮ | ಆರ್. ಶಾಮಾಶಾಸ್ತ್ರಿ MAR. 1924, Pg. 80-81 |
| 8. | ಚೆಲುವಿನಹಳ್ಳಿ | | ಎಂ.ಎಸ್. ಗೋಪಾಲರಾವ್ ಕರ್ನಾಟಕ ಸಾಹಿತ್ಯ ಪರಿಷತ್ತು ಪತ್ರಿಕೆ–68 |
| 9. | ಶೃಂಗೇರಿ | ಅವನೀತ | ಆರ್. ನರಸಿಂಹಾಚಾರ್ MAR. 1916, Pg. 34-35 |
| 10. | ಮಾಲೋಹಳ್ಳಿ | ಅವನೀತ | ಬಿ.ಆರ್. ರೈಸ್ I.A. Vol-V |
| 11. | ಮಡಕೇರಿ | ಅವನೀತ | ಬಿ.ಆರ್. ಗೋಪಾಲ್ E.C., Vol. I (Rev. 1972) |
| 12. | ಬೆಂಗಳೂರು ವಸ್ತು ಸಂಗ್ರಹಾಲಯ | ದುರ್ವಿನೀತ | ಬಿ.ಎಲ್. ರೈಸ್ E.C. IX, BN-141 |
| 13. | ಕಡಗತ್ತೂರು | ದುರ್ವಿನೀತ | ಬಿ.ಎಲ್. ರೈಸ್ E.C. XII, PP 200-201 |
| 14. | ಉತ್ತನೂರು ಮುಳಬಾಗಿಲು | ದುರ್ವಿನೀತ | ಆರ್. ನರಸಿಂಹಾಚಾರ್ MAR. 1916 PP 35-37 |
| 15. | ಸಾಲಿಗ್ರಾಮೆ ಹೊಸಕೋಟೆ ತಾಲ್ಲೂಕು | ದುರ್ವಿನೀತ | ಎಂ.ಎಸ್. ಕೃಷ್ಣ MAR. 1941, PP.127-34. |
| 16. | ಗುಮ್ಮರೆಡ್ಡಿಪುರ (ಕೋಲಾರ ತಾಲ್ಲೂಕು) | ದುರ್ವಿನೀತ | ಆರ್. ನರಸಿಂಹಾಚಾರ್ MAR. 1911-12 |
| 17. | ನಲ್ಲಾಲಮ್ ಸಂಭಾವನೆ | ದುರ್ವಿನೀತ | ಆರ್. ಶಾಮಾಶಾಸ್ತ್ರಿ MAR.1924, Pg.69-72 |
| 18. | ತಗರೆ | ಪೋಲವೀರ | ಆರ್. ನರಸಿಂಹಾಚಾರ್ MAR. 1918, PP. 35-36 |
| 19. | ಬಿಡಿರೂರು ಸಿಡ್ಲಘಟ್ಟ | ಭೂಮಿಕ್ರಮ | ಆರ್. ಶಾಮಾಶಾಸ್ತ್ರಿ MAR. 1924, PP. 62-72 |
| 20. | ಬಾರದ್ದೂರು ಸಂಭಾವನೆ | ಶ್ರೀಪುರುಷ | ಎಂ.ಎಸ್. ಕೃಷ್ಣ MAR. 1941, PP. 60-70 |
| 21. | ನಂದಿ | ಶ್ರೀಪುರುಷ | ಆರ್. ನರಸಿಂಹಾಚಾರ್ MAR. 1914, PP. 27-28 |
| 22. | ಅಗಾಲಿ ಸಂಭಾವನೆ | ಶ್ರೀಪುರುಷ | ಜಿ.ಎಸ್. ಗಯ್ MAR, 1947, PP-26 |
| 23. | ಚೌವಳಿ (ಮುದುಗೆರೆ, ಚಿಕ್ಕಮಗಳೂರು) | ಶ್ರೀಪುರುಷ | ಬಿ.ಎಲ್. ರೈಸ್ E.C. Vol. VI, MG-36 |
| 24. | ಹೊಸೂರು (ಗೌರಿಬಿದನೂರು ತಾಲ್ಲೂಕು) | ಶ್ರೀಪುರುಷ | ಬಿ.ಎಲ್. ರೈಸ್ E.C.X., GD-47 |
| 25. | ದೇವರಹಳ್ಳಿ | ಶ್ರೀಪುರುಷ | ಬಿ.ಎಲ್. ರೈಸ್ E.C. IV NG-85 |
| 26. | ಹುಲ್ಲಿನಹಳ್ಳಿ | ಶ್ರೀಪುರುಷ | ಆರ್. ಶಾಮಾಶಾಸ್ತ್ರಿ MAR. 1927, PP. 105-110 |
| 27. | ನರಸಿಂಹರಾಜಪುರ | ಶ್ರೀಪುರುಷ | ಆರ್. ನರಸಿಂಹಚಾರ್ MRP. 1920, PP-23 |
| 28. | ಮಣ್ಣೆ | ಮಾರಸಿಂಹ | ಬಿ.ಎಲ್. ರೈಸ್ E.C. VOL-IX, NL-60 |
| 29. | ಕೊಟ್ಟೆಂಬ | ಮಾರಸಿಂಹ | ಆರ್. ಶಾಮಾಶಾಸ್ತ್ರಿ MRP. 1924, PP. 72-79 |
| 30. | ಕೂಡಲೂರು | ಮಾರಸಿಂಹ | ಆರ್. ನರಸಿಂಹಾಚಾರ್ MAP, 1921, PP. 8-16 |
| 31. | ಪೆರ್ಜರಂಗಿ | ರಾಜಮಲ್ಲ | ಆರ್. ನರಸಿಂಹಾಚಾರ್ MRP, 1942, PP. 208-31 |
| 32. | ಕೆರಿಗೋಡಿ | ರಾಜಮಲ್ಲ | ಆರ್. ನರಸಿಂಹಾಚಾರ್ MRP, 1919, PP. 22-24 |
| 33. | ಗಟ್ಟಿವಾಡಿ | ಎರೆಗಂಗ | ಬಿ.ಎಲ್. ರೈಸ್ EC-Vol. XII, Sup. NJ, 269 |
| 34. | ಕೆರೆಹಳ್ಳಿ (ಚಾಮರಾಜನಗರ ತಾಲ್ಲೂಕು) | ಎರೆಗಂಗ | ಬಿ.ಆರ್. ಗೋಪಾಲ್ Vol. IV, Rev. Edn. 1975 |

**E.I. - Epigraphia India, E.C. - Epigraphia Caruakita, M.A.R. - Mysore Archaeological Report**

**K. S. VASANTHA**
Research Scholar
Karnataka Sanskrit University,
Chamaraja Pete-560018
Bengaluru, Karnataka
Mobile: 9740356612
**Email:** vasanthakolar4@gmail.com

*************

Volume XX : July to December – 2022, ISSN 2250-1711
Journal of Veda Samskrita Academy [Recognised in the UGC-CARE List]

# ಲಿಂಗತ್ವ ಮತ್ತು ವಲಸೆ : ಭಾರತೀಯ ಸಂದರ್ಭ

**ಡಾ. ಯರ್ರಿಸ್ವಾಮಿ ಈ. (ಹಂಪಿ, ಕರ್ನಾಟಕ)**

ಭಾರತದಲ್ಲಿ ಮಹಿಳಾ ವಲಸೆಯ ಕುರಿತ ಅಧ್ಯಯನ, ಸಂಶೋಧನೆ, ಚರ್ಚೆ, ಯೋಜನೆ ರಚಿಸುವವರಿಗೆ ಎಷ್ಟು ಆಸಕ್ತಿಕರ ವಿಷಯವೋ ಅಷ್ಟೇ ಸವಾಲು ಮತ್ತು ಸಂಕೀರ್ಣತೆಯ ವಿಷಯವಾಗಿದೆ. ಏಕೆಂದರೆ ವಲಸೆ ಬಂದ ಮಹಿಳೆಯ ಮೇಲೆ ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆ, ಸಮಾನ ಕೆಲಸಕ್ಕೆ ಅಸಮಾನ ವೇತನ ಇತ್ಯಾದಿ ಅಂಶಗಳನ್ನು ನೇರವಾಗಿ, ಸರಳವಾಗಿ, ಶೀಘ್ರವಾಗಿ ಬಗೆಹರಿಸಲು ಸಾಧ್ಯವಿಲ್ಲ. ಜಗತ್ತಿನಲ್ಲಿ ಮಹಿಳಾ ವಲಸೆಯು ಅಂತಾರಾಷ್ಟ್ರೀಯ ವಲಸೆಗಿಂತ ಆಂತರಿಕ ವಲಸೆಯಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಭಾರತ ದೇಶದಲ್ಲಿ ಆಂತರಿಕ ವಲಸೆಯೇ ಹೆಚ್ಚಾಗಿದೆ ಹಾಗೂ ಅದರ ಮೂಲಭೂತ ಪ್ರಶ್ನೆಗಳು ಬೇರೆಯಾಗಿವೆ. ವಲಸೆ ಎನ್ನುವ ಅಂಶವೇ ಕೃಷಿ ಬಿಕ್ಕಟ್ಟಿನಿಂದ ಉಂಟಾದ ಜೀವನೋಪಾಯದ ಮೇಲಿನ ನಕಾರಾತ್ಮಕ ಪರಿಣಾಮದಿಂದ ಆಗಿದೆ ಎಂಬುದು ನ್ಯಾಷನಲ್ ಸ್ಯಾಂಪಲ್ ಸರ್ವೇ ಮತ್ತು ಜನಗಣತಿಗಳ ಅಭಿಪ್ರಾಯವಾಗಿದೆ.

ಭಾರತದ ಹಿಂದಿನ ಆರ್ಥಿಕತೆಗಿಂತ ಇಂದಿನ ಎಲ್‌ಪಿಜಿ (ಉದಾರೀಕರಣ, ಖಾಸಗೀಕರಣ, ಜಾಗತೀಕರಣ) ಆರ್ಥಿಕತೆಯ ಸಿದ್ಧಾಂತವು ಭಾರತವನ್ನು ಸುಧಾರಣೆ ಮಾಡಿದಂತೆ ಕಾಣಿಸುತ್ತದೆ. ಈ ಸಿದ್ಧಾಂತ ಮಹಿಳೆಯ ಸ್ವಾಯತ್ತತೆ, ಆತ್ಮವಿಶ್ವಾಸದ ಹೆಚ್ಚಳ, ಸ್ವಾವಲಂಬಿತನ, ಆರ್ಥಿಕ ಸಬಲತೆಯನ್ನುಂಟು ಮಾಡಬಹುದು ಎಂದು ನಿರೀಕ್ಷಿಸಲಾಯಿತು. ಆದರೆ ಈ ಆಶಾವಾದವು ೧೯೯೦ ರ ಮಧ್ಯಭಾಗದಲ್ಲಿನ ಕೃಷಿ ಬಿಕ್ಕಟ್ಟಿನಿಂದಾಗಿ ಕುಂಠಿತಗೊಂಡಿತು. ಹಾಗಾಗಿ ವಲಸೆಯಿಂದಾಗುವ ಸಮಸ್ಯೆಗಳ ಮೇಲೆ ಕೇಂದ್ರೀಕರಿಸುವಂತೆ ಅಂತಾರಾಷ್ಟ್ರೀಯ ಮತ್ತು ರಾಷ್ಟ್ರಮಟ್ಟದಲ್ಲಿನ ಸಂಘ ಸಂಸ್ಥೆಗಳು, ಸಂಘಟನೆಗಳು, ಚಳುವಳಿಗಳು ಒತ್ತಾಯಿಸಿದವು. ಇದರಿಂದಾಗಿ ಅಧ್ಯಯನಗಳು ಆಯಾ ಪ್ರದೇಶದ ವಲಸೆ, ಮಹಿಳಾ ವಲಸೆ, ಸಮುದಾಯಗಳ ವಲಸೆ, ವಲಸೆಯಲ್ಲಿನ ಬದುಕು-ಬವಣೆ, ಸವಾಲು, ಸಮಸ್ಯೆಗಳ ಕುರಿತು ಗಮನ ಹರಿಸಿದವು. ಇದೇ ಸಮಯಕ್ಕೆ ವಲಸೆ ಕುರಿತ ಅಧ್ಯಯನದಲ್ಲಿ ಹೆಚ್ಚು ರಚನಾತ್ಮಕ ಪ್ರಶ್ನೆಗಳನ್ನು ಮತ್ತು ಸಮಸ್ಯೆಗಳನ್ನು ಹುಡುಕಲು ಪ್ರಾರಂಭಿಸಿದ ಕಾರಣಕ್ಕಾಗಿ ಜಂಡರ್ ಮತ್ತು ಆಂತರಿಕ ವಲಸೆಯು ತುಂಬ ಪ್ರಾಮುಖ್ಯತೆಯನ್ನು ಪಡೆಯಿತು.

ವಲಸೆ ಕುರಿತ ಅಭಿವೃದ್ಧಿ ಕೇಂದ್ರಿತ ಸಿದ್ಧಾಂತಗಳು ಕೃಷಿಯಿಂದ ಕೈಗಾರಿಕೆಗಳಿಗೆ, ಕೈಗಾರಿಕೆಗಳ ನಂತರದ ಸಾಮಾಜಿಕ ಆರ್ಥಿಕ ಬದಲಾವಣೆಯ ಬಗೆಗೆ ತಿಳಿಸಿದವು. ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ವಲಸೆ ಹೋಗುತ್ತಿರುವ ಅಂಕಿಸಂಖ್ಯೆಗಳು ಇದನ್ನು ಸಮರ್ಥಿಸಿದವು. ೧೯೫೦ ರಿಂದ ೧೯೮೦ ರ ಭಾರತದ ಯೋಜನೆಗಳು ವಸಾಹಾತುಶಾಹಿಯಲ್ಲದ ಅಂಶಗಳ ಬಗೆಗೆ ಕೇಂದ್ರೀಕರಿಸುತ್ತಿದ್ದವು ಆದರೆ ೧೯೯೦ ರ ನಂತರದ ಕೃಷಿ ಬಿಕ್ಕಟ್ಟಿನಿಂದ ಉಂಟಾದ ಸ್ಥಿತ್ಯಂತರವು ವಸಾಹತುವಲ್ಲದ ರಾಜ್ಯಕೇಂದ್ರಿತ ಅಭಿವೃದ್ಧಿಯ ಕಡೆಗೆ ಸರಿದವು. ಜಾಗತೀಕರಣ, ಉದಾರೀಕರಣ, ಮುಕ್ತ ಮಾರುಕಟ್ಟೆ, ಖಾಸಗೀಕರಣ ನೀತಿಯಿಂದಾಗಿ ಅರೆ/ಪ್ರಾಕ್ಸಿಯಾದ ಗ್ರಾಮೀಣ ನಗರ ವಲಸೆಯ ಜನರ ಔದ್ಯೋಗಿಕ, ಕೌಶಲ್ಯಗಳ, ಜೀವನ ರೀತಿಯ ಬದಲಾವಣೆ, ಸಾಮಾಜಿಕ ಚಲನೆ, ಆದಾಯ ಉತ್ಪಾದನೆಯನ್ನು ಸ್ವಲ್ಪಮಟ್ಟಿಗೆ ತಂದವು.

ಈ ಸಂದರ್ಭದಲ್ಲಿ "ಭಾರತದಲ್ಲಿ ನಗರೀಕರಣ ಪ್ರಮಾಣ ಕಡಿಮೆಯಿದ್ದರೂ ನಗರೀಕರಣದಿಂದ ಉಂಟಾದ ಸಮಸ್ಯೆಗಳೇ ಹೆಚ್ಚಾಗಿದ್ದವು. ಉದಾಹರಣೆಗೆ ಕೊಳಚೆ ಪ್ರದೇಶಗಳ ಹೆಚ್ಚಳ, ಜನರ ಜೀವನಮಟ್ಟದ ಕುಸಿತ, ಅಪೌಷ್ಟಿಕತೆ, ಅನಾರೋಗ್ಯ, ಮಾನಸಿಕ ಅಶಾಂತಿ ಇತ್ಯಾದಿ. ಉದ್ಯೋಗದ ವಿಸ್ತರಣೆ ಮತ್ತು ಗ್ರಾಮೀಣ-ನಗರ ಉದ್ಯೋಗದ ಸರಣಿಯು ವೃತ್ತಾಕಾರದಲ್ಲಿ ಸುತ್ತುತ್ತಾ, ಸಂಚಲಿಸುತ್ತಾ ಇತ್ತು. ವಲಸೆಯಿಂದ ದೊರೆಯುವ ಕೆಲಸ ಅನೌಪಚಾರಿಕ ಮತ್ತು ರಚನಾತ್ಮಕವಲ್ಲದ ಕೆಲಸಗಾರರ ಸಂಖ್ಯೆಯನ್ನು ಕಡಿಮೆ ಮಾಡಬೇಕಿತ್ತು. ಆದರೆ ಇದು ಹೆಚ್ಚಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಸಂಘಟಿತ ವಲಯದ ಅಸ್ಥಿರತೆ ಮತ್ತು ಕುಸಿತವು ಸಹ ಇದಕ್ಕೆ ಕಾರಣವಾಗಿತ್ತು" (ಎನ್‌ಸಿಇಯುಎಸ್ ೨೦೧೨, ಪು-೧೩೫). ದುರದೃಷ್ಟವಶಾತ್ ಮ್ಯಾಕ್ರೋ ಸಮೀಕ್ಷೆಗಳು ತಾತ್ಕಾಲಿಕ, ಸರಪಳಿ ವಲಸೆಯ ಕುರಿತು ಮಾಹಿತಿಯನ್ನು ಒದಗಿಸುವುದಿಲ್ಲ. ಶಾಶ್ವತ ಕೆಲಸಗಾರರ ಮಾಹಿತಿಯನ್ನು ಮಾತ್ರ ಒದಗಿಸುವುದು ಕಂಡುಬರುತ್ತದೆ. ೨೦೦೭-೦೮ ರ ನ್ಯಾಷನಲ್ ಸ್ಯಾಂಪಲ್ ಸರ್ವೆಯು ಈ ಗ್ಯಾಪನ್ನು ತುಂಬಲು ಪ್ರಯತ್ನಿಸಿತು. ವಲಸೆಯ ಕುರಿತು ಅರೆಕಾಲಿಕ ವಲಸೆ, ಶಾಶ್ವತ ವಲಸೆ, ಸಾಮಾನ್ಯವಾಗಿ ವಾಸಿಸುವ ವಾಸಸ್ಥಾನದಂತಹ ದತ್ತಾಂಶವನ್ನು ಸಮೀಕ್ಷೆಯಲ್ಲಿ ಒಳಗೊಳ್ಳುವ ಪ್ರಯತ್ನಗಳು ಪ್ರಾರಂಭವಾದವು. ಅಲ್ಲದೆ ಭಾರತದಲ್ಲಿ ವಲಸೆ ಕಾರ್ಮಿಕರ ವಿಧ ಮತ್ತು ಮಾದರಿಯನ್ನು ವಿವರಿಸಲು ಪ್ರಯತ್ನಿಸಿದವು.

ಶ್ರೀವಾತ್ಸವ(೨೦೦೫) ಹೇಳಿರುವಂತೆ "ವಲಸೆ ಕುರಿತ ರಾಷ್ಟ್ರೀಯ ದತ್ತಾಂಶ ಅದು ಜನಗಣತಿಯೇ ಆಗಲಿ, ರಾಷ್ಟ್ರೀಯ ಸ್ಯಾಂಪಲ್ ಸರ್ವೇ ಆಗಲಿ ಅಭಿವೃದ್ಧಿ ದೃಷ್ಟಿಕೋನಕ್ಕೆ ವೈರುಧ್ಯದಂತೆ ಜನಸಂಖ್ಯೆಯ ಚಲನೆಯ ಬಗೆಗೆ ಮಾಹಿತಿಯನ್ನು ಮಾತ್ರ ವಿನ್ಯಾಸಗೊಳಿಸಿದೆ. ಇದು ಆರ್ಥಿಕ ಅಥವಾ ಕಾರ್ಮಿಕರ ವಲಸೆಯ ಮೂಲಾಧಾರವಾಗಿದೆ.

ಜನಗಣತಿ ಅಥವಾ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ವ್ಯಾಖ್ಯಾನಿಸಿದಂತೆ ವಾಸಸ್ಥಾನದ ಬದಲಾವಣೆಯೇ ವಲಸೆ ಎಂದು ಸಮೀಕ್ಷೆಗಳಲ್ಲಿ ದಾಖಲಿಸಿರುವುದರಿಂದ ಮಹಿಳೆಯರನ್ನು ಆರ್ಥಿಕತೆಯ ಸ್ವರೂಪವಲ್ಲದ ವಲಸಿಗರು ಎಂದು ಚಿತ್ರಿಸಲಾಗಿದೆ".

ಇವರನ್ನು ಆರ್ಥಿಕತೆಗೆ ಪೂರಕವಾದ ಅಥವಾ ಸಹಆರ್ಥಿಕ ವಲಸಿಗರು ಅಂದರೆ ಉದಾಹರಣೆಗೆ ಒಬ್ಬ ಪುರುಷ ವಲಸೆ ಹೋಗುತ್ತಾನೆ ಎಂದರೆ ಅವನ ಜೊತೆಗೆ ಹೆಂಡತಿ/ತಾಯಿ/ಅಕ್ಕ/ತಂಗಿ/ಮಗಳು ಹೋದರೆ ಅವರು ರೂಪಾಯಿ ಮೌಲ್ಯದ ದುಡಿಮೆಯನ್ನು ಮಾಡದಿದ್ದರೂ ರೂಪಾಯಿ ಮೌಲ್ಯದ ದುಡಿಮೆಗಾರರಿಗೆ ಎಲ್ಲವನ್ನು ಉಚಿತವಾಗಿ ಕೇವಲ ಸಂಬಂಧದಿಂದ ಮಾತ್ರ ಒದಗಿಸುತ್ತಿರುತ್ತಾರೆ. ಇದನ್ನು ಪರಿಗಣಿಸಿಲ್ಲ ಅಥವಾ ಮಹಿಳೆಯರ ದುಡಿಮೆಯನ್ನು ಅಪಮೌಲ್ಯೀಕರಿಸಿದೆ ಎಂದು ವ್ಯಾಖ್ಯಾನಿಸುವುದು ಸೂಕ್ತ. ಸಮೀಕ್ಷೆಗಳಲ್ಲಿ ವಲಸೆಗೆ ಕಾರಣಗಳನ್ನು ಕೇಳಲಾಗುತ್ತದೆ. ಯಾರು ಉದ್ಯೋಗ/ಕೆಲಸ ಅಥವಾ ಆರ್ಥಿಕ ಅಂಶಗಳ ಕಾರಣಗಳನ್ನು ತಿಳಿಸುತ್ತಾರೋ ಅವರನ್ನು ಕಾರ್ಮಿಕರು ಅಥವಾ ಆರ್ಥಿಕ ವಲಸೆಗಾರರು ಎಂದು ಪರಿಗಣಿಸಲಾಗುತ್ತದೆ. ಈ ಅಂಶವಿದ್ದರೂ ಸಹ ಮಹಿಳೆಯರು ಉದ್ಯೋಗದ ಸಲುವಾಗಿ ವಲಸೆ ಹೋಗುವ ಸಂಖ್ಯೆ ತುಂಬ ಚಿಕ್ಕದು ಅದನ್ನು ವಿಶ್ಲೇಷಣೆಗೆ ತೆಗೆದುಕೊಳ್ಳದಿದ್ದರೂ ಪರವಾಗಿಲ್ಲ ಎಂದು ನಿರೂಪಿಸಲ್ಪಡುವಷ್ಟು ಚಿಕ್ಕದ್ದಾಗಿದೆ. "ಗ್ರಾಮೀಣ ಭಾರತದ ಒಟ್ಟು ವಲಸೆಗಾರರಲ್ಲಿ ಉದ್ಯೋಗದ ಸಲುವಾಗಿ ವಲಸೆ ಹೋಗಿರುವ ಮಹಿಳೆಯರು ೧೯೯೩ ರಲ್ಲಿ ಶೇಕಡ ೩.೩ ರಷ್ಟಿದ್ದರೆ, ೧೯೯೯-೨೦೦೦ ರಲ್ಲಿ ಶೇ.೦.೪ ಮತ್ತು ೨೦೦೭-೦೮ ರಲ್ಲಿ ಶೇ.೦.೩ ರಷ್ಟಿದೆ. ವಿವಾಹದ ಕಾರಣಕ್ಕಾಗಿ ವಲಸೆ ಹೋಗಿರುವವರ ಸಂಖ್ಯೆ ೧೯೯೩ ಕ್ಕಿಂತ ೨೦೦೭-೦೮ ರಲ್ಲಿ ದ್ವಿಗುಣತೆಗೆ ಹತ್ತಿರವಾಗುವಷ್ಟು ಹೆಚ್ಚಾಗಿದೆ, ೧೯೯೩ ರಲ್ಲಿ ಶೇ.೨೪.೭, ೧೯೯೯-೨೦೦೦ ರಲ್ಲಿ ೩೭.೮ ಮತ್ತು ೨೦೦೭-೦೮ ರಲ್ಲಿ ಶೇ.೪೩.೫ ರಷ್ಟು ಹೆಚ್ಚಾಗಿದ್ದು ಗ್ರಾಮೀಣ ಭಾಗದಿಂದ ನಗರ ಪ್ರದೇಶಕ್ಕೆ ಮದುವೆ ಕಾರಣಕ್ಕೋಸ್ಕರ ವಲಸೆ ಹೋಗುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ" (ಎಂ. ಹೈನ್ರಿ, ೨೦೧೨, ಪು-೧೩೯)

ಗ್ರಾಮೀಣ ಭಾಗದಲ್ಲಿ ಸಾರ್ವತ್ರಿಕವಾಗಿ ಮದುವೆಯ ಕಾರ್ಯ ಈಡೇರಬೇಕಾದರೆ ಎಲ್ಲರೂ ಆಚರಿಸುವ ಒಂದು ಆಚರಣೆ ಎಂದರೆ ಅನ್ಯಗೋತ್ರದವರೊಂದಿಗಿನ ವಿವಾಹ. ಸ್ಥಳೀಯ ಅಥವಾ ವಾಸಿಸುವ ಪ್ರದೇಶದಿಂದ ಹೊರಗಿನ ಸಂಬಂಧದೊಂದಿಗೆ ಮದುವೆ ಮಾಡುವುದು ಒಂದು ಸಂಪ್ರದಾಯವಾಗಿದೆ, ಪಿತೃಸ್ಥಾನೀಯ ವಾಸಸ್ಥಾನವಿರುವುದರಿಂದ ಅಂದರೆ ಗಂಡನ ತಂದೆ-ತಾಯಿಗಳ ಜೊತೆಗೆ ಅಥವಾ ಹತ್ತಿರದಲ್ಲಿ ವಾಸಿಸಬೇಕು ಎಂಬ ಆಚರಣೆ ಇರುವುದರಿಂದ ಭಾರತದ ಮಹಿಳೆಯರನ್ನು ಅಗಾಧ ಪ್ರಮಾಣದಲ್ಲಿ ವಲಸಿಗರು ಎಂದು ದಾಖಲಿಸಲು ಕಾರಣವಾಗಿದೆ. ಈ ತೆರನಾದ ಮಾಹಿತಿಯು ವಲಸೆಯಲ್ಲಿ ಜಂಡರ್ ಆಯಾಮವನ್ನು ಅಧ್ಯಯನ ಮಾಡುವವರಿಗೆ ಹಲವು ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಉಂಟುಮಾಡಿದೆ. ಆದ್ದರಿಂದ ಹಲವು ವ್ಯಾಖ್ಯಾನಕಾರರು ವಿಶೇಷವಾಗಿ ಆರ್ಥಿಕ ತಜ್ಞರು ಅತ್ಯಲ್ಪ ಪ್ರಮಾಣದ ಮಹಿಳಾ ವಲಸಿಗರು ಆರ್ಥಿಕತೆಗೆ ಕೊಡುಗೆ ನೀಡುತ್ತಿರುವುದರಿಂದ ಅವರ ಪ್ರಸ್ತುತತೆಯನ್ನು ತಳ್ಳಿ ಹಾಕುತ್ತಾರೆ. ಈ ಪ್ರಕ್ರಿಯೆಯಲ್ಲಿ ಉತ್ಪಾದನೆಯ ವಿಭಿನ್ನ ಆಯಾಮ, ಉತ್ಪಾದನಾ ಆರ್ಥಿಕತೆಯಲ್ಲಿ ಶ್ರಮವಿಭಜನೆ, ಶ್ರೇಣೀಕರಣ ವ್ಯವಸ್ಥೆ, ಸ್ಥಾನಮಾನ, ಕಾರ್ಮಿಕರ ಉಪಯುಕ್ತತೆ, ಬಂಡವಾಳಶಾಹಿಗಳ ಸಾಮಾಜಿಕ ಪರಿಸ್ಥಿತಿ ಈ ಎಲ್ಲ ಅಂಶಗಳು ಸಹಜವಾಗಿ ಹಾದು ಹೋಗುತ್ತವೆ.

ಈ ಎಲ್ಲ ಪ್ರಶ್ನೆಗಳನ್ನು ಹೊರತುಪಡಿಸಿ, ಮ್ಯಾಕ್ರೋ ಪ್ರಮಾಣದ ದತ್ತಾಂಶಗಳು ವಲಸೆಯ ಒಂದು ಕಾರಣವನ್ನು ಮಾತ್ರ ಗುರುತಿಸಿದವು. ಸಾಮಾಜಿಕ, ಆರ್ಥಿಕೇತರ ಕಾರಣಗಳಲ್ಲಿ ಮಹಿಳಾ ವಲಸೆಯ ಕಾರಣವನ್ನು ದಾಖಲಿಸಿ ಇತರ ಸಂಗತಿಗಳನ್ನು ಮರೆಮಾಚಿದವು. ಉದಾಹರಣೆಗೆ ಕೆಲವು ಮಹಿಳಾ ಕಾರ್ಮಿಕರ ವಲಸೆಯು ಮದುವೆ ಕಾರಣವೆಂದು ಗೋಚರಿಸಬಹುದು ಅಥವಾ ಸಹಸಂಚಲನವು ಕಾರಣವಾಗಿರಬಹುದು, ಏಕಕಾಲದಲ್ಲಿ ಇವೆರಡು ಕಾಣಿಸಬಹುದು, ಕಾರಣಗಳು ಹೊಂದಾಣಿಕೆಯಾಗಬಹುದು ಆದರೆ ಸಾಮಾಜಿಕ ಕಾರಣವೇ ಮುಖ್ಯವೆಂದು ಭಾವಿಸಲಾಗಿದೆ. ಮ್ಯಾಕ್ರೋ ಮಾಹಿತಿಯು ಮಹಿಳೆಯರ ಆರ್ಥಿಕ ಚಟುವಟಿಕೆಗಳನ್ನು ವಾಸ್ತವಕ್ಕಿಂತ ಕನಿಷ್ಠಗೊಳಿಸಲಾಗಿದೆ. ವಲಸೆ ಕುರಿತ ಹಲವು ಸಮೀಕ್ಷೆಗಳ ಮಾಹಿತಿ ಮತ್ತು ಅಂಕಿ ಸಂಖ್ಯೆಗಳು ಮಹಿಳೆಯನ್ನು ಸಾಮಾಜಿಕ ಕಾರಣಕ್ಕಾಗಿ ಪುರುಷನನ್ನು ಆರ್ಥಿಕ ಕಾರಣಕ್ಕಾಗಿ ವಲಸೆ ಹೋಗುತ್ತಾರೆ ಎಂದು ತಿಳಿಸಿದವು.

ವಲಸೆ ಕುರಿತ ಅಭಿವೃದ್ಧಿ ಸಿದ್ಧಾಂತದ ಮೂಲವಾದ ಆರ್ಥಿಕ ವಲಸೆಯು ಪುರುಷರ ವಲಸೆಯನ್ನು ಸಮರ್ಥಿಸುತ್ತದೆ. ಈ ದತ್ತಾಂಶವು ಸಮಕಾಲೀನ ಭಾರತದ ಜಂಡರ್ ವಲಸೆ ಮತ್ತು ಅಭಿವೃದ್ಧಿಯನ್ನು ಅರ್ಥ ಮಾಡಿಕೊಳ್ಳಲು, ಹಲವು ಪ್ರಶ್ನೆಗಳನ್ನು ಹಾಕಿಕೊಳ್ಳಲು ಸಾಧ್ಯವಾಗಿಸಿದೆ. ೧೯೯೩ ಮತ್ತು ೨೦೦೭-೦೮ ರ ಅವಧಿಯಲ್ಲಿ ಭಾರತದ ನಗರ ಮತ್ತು ಗ್ರಾಮೀಣ ಪ್ರದೇಶದ ಮಹಿಳಾ ವಲಸಿಗರ ಸಂಖ್ಯೆಯಲ್ಲಿ ಏರಿಕೆ ಕಂಡುಬಂದರೆ ನಗರ ಪ್ರದೇಶದ ಪುರುಷರ ವಲಸೆಯಲ್ಲಿ ಪ್ರಾರಂಭದಲ್ಲಿ ಏರಿಕೆ ಕಂಡುಬಂದಿದ್ದು ನಂತರ ನಿಶ್ಚಲವಾಗಿದೆ ಮತ್ತು ಗ್ರಾಮೀಣ ಭಾಗದ ಪುರುಷರ ವಲಸೆಯಲ್ಲಿ ಇಳಿಕೆ ಕಂಡು ಬಂದಿದೆ.

ವಲಸೆಗಿರುವ ಕಾರಣಗಳಲ್ಲಿ ಮದುವೆಯು ಸಹ ಒಂದು ಪ್ರಮುಖ ಕಾರಣವಾಗಿದೆ. ಸಹವಲಸಿಗರು ಅಂದರೆ ತಂದೆ-ತಾಯಿ, ಪೋಷಕರು, ಕೆಲಸ ಮಾಡುವವರ ಚಲನೆಯಿಂದಾಗಿ ವಲಸೆ ಬಂದವರು ಮತ್ತು ಉದ್ಯೋಗದ ಕಾರಣಕ್ಕಾಗಿ ವಲಸೆ ಬಂದವರು. ಈ ಎಲ್ಲ ವಿಧಗಳಲ್ಲೂ ಮಹಿಳಾ ವಲಸಿಗರ ಸಂಖ್ಯೆಯೇ ಅಧಿಕವಾಗಿದೆ. "೨೦೦೭-೦೮ ರ ಸಮೀಕ್ಷೆಯಲ್ಲಿ ಒಟ್ಟು ವಲಸಿಗರಲ್ಲಿ ಮಹಿಳಾ ವಲಸಿಗರು ಶೇಕಡ ೮೦ ಕ್ಕೂ ಅಧಿಕವಾಗಿದ್ದಾರೆ.

೧೯೯೩ ರಲ್ಲಿ ಒಟ್ಟು ವಲಸೆಗಾರರಲ್ಲಿ ಮಹಿಳಾ ವಲಸಿಗರು ಶೇಕಡ ೭೨ ರಷ್ಟಿದ್ದರು. ಮಹಿಳಾ ವಲಸಿಗರ ದರವು ಮದುವೆ ಕಾರಣಕ್ಕಾಗಿ ತೀವ್ರಗತಿಯಲ್ಲಿ ಏರಿಕೆಯಾಗಿರುವುದು ಕಂಡು ಬಂದಿದೆ. ಗ್ರಾಮೀಣ ಭಾರತದ ಮಹಿಳಾ ವಲಸಿಗರು ೧೯೯೩ ರಲ್ಲಿ ಶೇಕಡ ೪೦ ರಷ್ಟಿದ್ದು ೨೦೦೭–೦೮ ರಲ್ಲಿ ಶೇಕಡ ೪೭.೭ ರಷ್ಟಾಗಿದೆ. ಮದುವೆಗೋಸ್ಕರ ವಲಸೆ ಹೋದ ಮಹಿಳೆಯರ ಸಂಖ್ಯೆ ೧೯೯೩ ರಲ್ಲಿ ೨೪.೭ ರಷ್ಟಿದ್ದು, ೨೦೦೭–೦೮ ರಲ್ಲಿ ಶೇಕಡ ೪೩.೫ ರಷ್ಟಕ್ಕೆ ಹೆಚ್ಚಾಗಿದೆ, ಅದೇ ತೆರನಾಗಿ ನಗರ ಪ್ರದೇಶದ ವಲಸೆ ಶೇಕಡ ೭ ರಿಂದ ಶೇಕಡ ೧೬ಕ್ಕೆ ಹೆಚ್ಚಾಗಿದೆ". (ಎಂ. ಹೈನ್ರಿ, ೨೦೧೨, ಪು–೧೪೧) ಗ್ರಾಮೀಣ ಪ್ರದೇಶದ ಮಹಿಳೆಯ ವಿವಾಹದ ವಲಸೆಯ ಹೆಚ್ಚಳವನ್ನು ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಮತ್ತು ಜನಗಣತಿ ಎರಡರಲ್ಲೂ ಗೋಚರಿಸುತ್ತದೆ. ಗ್ರಾಮೀಣ ಪ್ರದೇಶದ ವಿವಾಹದ ವಲಸೆಯು ನಗರ ಪ್ರದೇಶದ ಮಹಿಳೆಯರ ವಿವಾಹದ ವಲಸೆಗಿಂತ ಹೆಚ್ಚಾಗಿದೆ. ಇದಕ್ಕಿರುವ ಕಾರಣಗಳಲ್ಲಿ ೧. ಸುಧಾರಿತ ಸಂಪರ್ಕ, ಸಾರಿಗೆ ಸೌಲಭ್ಯದಿಂದಾಗಿ ಮಹಿಳೆಯರು ದೂರದ ಸಂಬಂಧದೊಂದಿಗೆ ವಿವಾಹವಾಗಿರಬಹುದು ಅಥವಾ ಪ್ರಯಾಣಕ್ಕೆ ಸಿದ್ಧರಿರಬಹುದು ೨. ಮಹಿಳೆ ಅಥವಾ ಜನರ ದೃಷ್ಟಿಕೋನ ಗ್ರಾಮೀಣ ಅಥವಾ ಸ್ಥಳೀಯ ಪ್ರದೇಶದಲ್ಲಿ ವಾಸಿಸಿ ಜೀವನೋಪಾಯ ಕಂಡು ಕೊಳ್ಳುವುದಕ್ಕಿಂತ ನಗರ ಪ್ರದೇಶಗಳಲ್ಲಿ ವಾಸಿಸುವುದು ಉತ್ತಮ ಎಂದುಕೊಂಡಿರಬಹುದು ೩. ಹೆಣ್ಣುಮಕ್ಕಳು ಹತ್ತಿರವಿದ್ದಷ್ಟು ಕಿರಿಕಿರಿ, ತೊಂದರೆ, ಕೌಟುಂಬಿಕ ಹಿಂಸೆಯಾದಾಗ ಸಹಿಸಿಕೊಳ್ಳುವ ಸಾಮರ್ಥ್ಯ ಕಡಿಮೆಗೊಳ್ಳುತ್ತದೆ ಎಂಬ ಭಾವನೆಯೂ ಇರಬಹುದು ಇತ್ಯಾದಿ ಕಾರಣಗಳನ್ನು ಮರುಶೋಧಿಸಬೇಕಾದ ಅಗತ್ಯವಿದೆ.

ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಪ್ರಕಾರ ಉದ್ಯೋಗಾಧಾರಿತ ಮಹಿಳಾ ವಲಸೆಯ ಪ್ರಮಾಣದಲ್ಲಿ ಕುಸಿತ ಕಂಡುಬಂದಿದೆ. ಇದು ಗ್ರಾಮೀಣ ಪ್ರದೇಶದಲ್ಲಿ ಶೇಕಡಾ ೩.೩ ರಿಂದ ಶೇಕಡ ೦.೩ ಕ್ಕೆ ಕುಸಿದಿದೆ. ಇದೇ ತೆರನಾಗಿ ಉದ್ಯೋಗಾಧಾರಿತ ಪುರುಷ ವಲಸಿಗರಲ್ಲಿಯೂ ಸಹ ಅರ್ಧದಷ್ಟು ಕುಸಿತ ಕಂಡುಬಂದಿದೆ. ಆದರೆ ಮಹಿಳೆಯ ಕುಸಿತದ ಪ್ರಮಾಣ ಹೆಚ್ಚು ಕನಿಷ್ಠವಾಗಿದೆ. ಆದರೆ ನಗರ ಪ್ರದೇಶದ ಮಹಿಳೆಯರ ಕೆಲಸದ ಭಾಗವಹಿಸುವಿಕೆ ದರವೇ ಕಡಿಮೆಯಾಗಿದೆ. ನಗರ ಪ್ರದೇಶದ ಮಹಿಳಾ ವಲಸಿಗರು ಉದ್ಯೋಗಕ್ಕಾಗಿ ೧೯೯೩ ರಲ್ಲಿ ಶೇಕಡ ೧.೯ ರಷ್ಟು ವಲಸೆ ಹೋಗಿದ್ದರೆ ೨೦೦೭–೦೮ ರಲ್ಲಿ ೧.೨ ಕ್ಕೆ ಕುಸಿತ ಕಂಡುಬಂದಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ನಗರ ಪ್ರದೇಶದ ಪುರುಷರ ಉದ್ಯೋಗ ಸಂಬಂಧಿ ವಲಸೆ ೧೯೯೩ ರಲ್ಲಿ ಶೇಕಡ ೯.೯ ದಿಂದ ಶೇಕಡ ೧೪.೪ ಕ್ಕೆ ೨೦೦೭–೦೮ ರಲ್ಲಿ ಮೇಲ್ಮುಖವಾಗಿ ಸಾಗಿದೆ. ಇದರಿಂದ ಉದಾರೀಕರಣ, ಖಾಸಗೀಕರಣ, ಮುಕ್ತ ಮಾರುಕಟ್ಟೆ, ಜಾಗತೀಕರಣವು ಮಹಿಳಾ ದುಡಿಮೆಯನ್ನು ಹೆಚ್ಚು ಮಾಡದೇ ಕಡಿಮೆ ಮಾಡಿದೆ ಎನ್ನಬಹುದು. ಕಾರ್ಮಿಕರ ಸ್ತ್ರೀಕರಣ (Feminization of Labour) ಆಗಿಲ್ಲ ಎಂದು ಈ ಅಂಕಿಅಂಶಗಳು ಸಾಬೀತುಪಡಿಸುತ್ತವೆ.

## ವಿವಾಹ ವಲಸೆಯ ಹೆಚ್ಚಳ, ಮಹಿಳಾ ದುಡಿಮೆ ಮತ್ತು ವಧುದಕ್ಷಿಣೆಯ ಅಪಮೌಲ್ಯೀಕರಣದ ಅಂತರ–ಸಂಬಂಧಿತ ಒಳಸಿಕ್ಕುಗಳು

೧೯೯೦ ರ ಕೃಷಿ ಬಿಕ್ಕಟ್ಟಿನಿಂದಾಗಿ ಗ್ರಾಮೀಣ ಭಾಗದ ಪುರುಷರು ವಲಸೆ ಹೋಗಿರುವುದರಿಂದ ಮಹಿಳೆಯರು ಸಹ ವಿವಾಹದ ವಲಸೆಯಲ್ಲಿ ಹೆಚ್ಚು ಎಂಬುದು ಕಷ್ಟ. ಏಕೆಂದರೆ ಪುರುಷರ ವಲಸೆಗಿಂತ ಮಹಿಳೆಯರ ವಲಸೆ ದ್ವಿಗುಣಕ್ಕೆ ಹತ್ತಿರವಿದೆ. ಆದಕಾರಣ ಇದಕ್ಕೆ ಸಂಬಂಧಿಸಿದ ಇನ್ನು ಮೂರು ಸಹಸಂಬಂಧಿ ಕಾರಣಗಳನ್ನು ಹೆಸರಿಸಬಹುದು. ಮೊದಲನೆಯದು ಹಿಂದಿನದಕ್ಕಿಂತ ಹೆಚ್ಚು ಅನ್ಯಗೋತ್ರದ ವಿವಾಹಗಳು ಗ್ರಾಮಗಳಲ್ಲಿ ಜರುಗುತ್ತಿವೆ. ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ ೨೦೦೯–೧೧ ರಲ್ಲಿ ೨೦ ರಾಜ್ಯಗಳಲ್ಲಿ ಜಂಡರ್ ಮತ್ತು ವಲಸೆ ಕುರಿತ ಪ್ರಾಥಮಿಕ ಮಾಹಿತಿಯಲ್ಲಿ ೫೦ ಕ್ಕಿಂತ ಅಧಿಕ ವಯಸ್ಸಿನ ಮಹಿಳೆಯರಲ್ಲಿ ಗ್ರಾಮದ ಸಂಬಂಧಗಳಲ್ಲಿನ ವಿವಾಹ ಶೇಕಡ ೨೨ ಕ್ಕೂ ಅಧಿಕವಾಗಿದ್ದರೆ; ೨೦ ವಯಸ್ಸಿನ ಮತ್ತು ಅದಕ್ಕಿಂತ ಕಡಿಮೆ ವಯಸ್ಸಿನ ಕಿರಿಯ ಮಹಿಳೆಯರಲ್ಲಿ ಈ ಪ್ರಮಾಣ ಶೇಕಡ ೧೯ಕ್ಕೆ ಇಳಿಕೆಯಾಗಿದೆ. ಗ್ರಾಮದಲ್ಲಿರುವ ಜನರು ನಗರ ಪ್ರದೇಶಗಳಲ್ಲಿಯ ಜನರೊಂದಿಗೆ ವಿವಾಹ ಸಂಬಂಧದ ಮೂಲಕ ಮುಖ್ಯವಾಹಿನಿಯ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಅನುಭವಗಳನ್ನು ಪಡೆಯಬಹುದಾಗಿದೆ ಎಂಬ ಗ್ರಹಿಕೆಯು ಇರಬಹುದು. ಹಿಂದಿನದಕ್ಕಿಂತ ಇಂದು ಹತ್ತಿರದ ಸಂಬಂಧಗಳಲ್ಲಿ ಮದುವೆಗಳು ನಡೆಯುತ್ತಿರುವುದು ಕಡಿಮೆಯಾಗಿದೆ. ಇನ್ನೊಂದು ಕಾರಣವೆಂದರೆ ಸ್ಥಳೀಯವಾಗಿ ಜೀವನೋಪಾಯಕ್ಕೆ ಹತ್ತು ಹಲವು ಸಂಕಷ್ಟಗಳು ಇರಬಹುದು. ಮದುವೆಯ ಸಂಬಂಧಗಳು ಸ್ಥಳೀಯ ಪ್ರದೇಶದವರಿಗಿಂತ ಅನ್ಯ ಪ್ರದೇಶದವರೊಂದಿಗೆ ಸರಿಯಾಗಬಹುದು ಎಂಬುದು ಇರಬಹುದು. ಆದರೆ ಮಹಿಳೆಗೆ ಸ್ಥಳೀಯವಾಗಿ ದೊರಕುವ ಸಂಪನ್ಮೂಲ, ಕೌಶಲ್ಯಗಳನ್ನು ಆಕೆ ಕಳೆದುಕೊಂಡಂತಾಗುತ್ತದೆ. ಇದು ಸ್ಥಳೀಯ ಮಹಿಳೆಯ ಜ್ಞಾನ ಮತ್ತು ಅವರ ಕೌಶಲ್ಯದ ಮೇಲೆ ನಕರಾತ್ಮಕ ಪರಿಣಾಮ ಬೀರುತ್ತದೆ ಅಲ್ಲದೆ ವರದಕ್ಷಿಣೆಯನ್ನು ವಿಸ್ತರಿಸಿದೆ ಎನ್ನಬಹುದು.

ಐತಿಹಾಸಿಕ ಅಧ್ಯಯನಗಳು ಕೃಷಿ ಸಮುದಾಯಗಳಲ್ಲಿ ವಧುದಕ್ಷಿಣೆ ಪದ್ಧತಿ ಆಚರಣೆಯಲ್ಲಿತ್ತು ಎಂದು ತಿಳಿಸುತ್ತವೆ. ನಂತರ ಅವು ವರದಕ್ಷಿಣೆಗೆ ಬದಲಾದವು. ಮಹಿಳೆ ಉತ್ಪಾದನಾ ಕೆಲಸದ ಮೌಲ್ಯವನ್ನು ಕಳೆದುಕೊಂಡಂತೆ ವಧುದಕ್ಷಿಣೆಯಿಂದ ವರದಕ್ಷಿಣೆಗೆ ಬದಲಾಯಿತು. ವಸಾಹಾತುಶಾಹಿಯ ವಾಣಿಜ್ಯೀಕರಣವು ರೈತ ಸಮುದಾಯದ ಹೆಣ್ಣುಮಕ್ಕಳ, ಕೃಷಿ ಕಾರ್ಮಿಕರ ದುಡಿಮೆಯ ಮೌಲ್ಯವನ್ನು ಕಡಿಮೆಗೊಳಿಸಿತು. ಅದೇ ವೇಳೆಗೆ ಲಿಂಗತಾರತಮ್ಯವನ್ನು ಅಧಿಕಗೊಳಿಸಿತು. ಯಾವ ಸಮುದಾಯಗಳು ಮೊದಲು ವಧುದಕ್ಷಿಣೆಯನ್ನು ನೀಡುತ್ತಿದ್ದವೋ ನಂತರ ಅವುಗಳೇ ವರದಕ್ಷಿಣೆಯನ್ನು ಪಡೆಯುವ, ನೀಡುವ ಕೆಲಸ ಪ್ರಾರಂಭವಾಯಿತು. ಕಳೆದ ದಶಕದಿಂದಲೂ ಗ್ರಾಮೀಣ ಪ್ರದೇಶದ ಮಹಿಳೆಯ ಕೆಲಸದ ಭಾಗವಹಿಸುವಿಕೆ ದರದಲ್ಲಿಯೂ ಕಡಿತ ಕಂಡು ಬಂದಿರುವುದು ಸಮ–

ಕಾಲೀನ ಮಹಿಳಾ ಕೆಲಸದ ಮೌಲ್ಯದಲ್ಲಿಯೂ ಕಡಿಮೆಯಾಗಿದೆ. ಸಮಕಾಲೀನ ಬಿಕ್ಕಟ್ಟುಗಳು ಬಗೆಹರಿಯದಾದಾಗ ಜಾಗತಿಕ ವಾಣಿಜ್ಯ ಮತ್ತು ಮಾರುಕಟ್ಟೆಯ ಶಕ್ತಿಗಳು, ಬೆಲೆ ಏರಿಳಿತಗಳು, ವರದಕ್ಷಿಣೆಯನ್ನು ಹೆಚ್ಚಿಸಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ!

ಇನ್ನೊಂದು ಕುತೂಹಲಕಾರಿ ಅಂಶವೆಂದರೆ ವರದಕ್ಷಿಣೆ ಹೆಚ್ಚಾದಷ್ಟು ಮದುಮಗನ ಮದುವೆಯ ಖರ್ಚುಗಳು ಹೆಚ್ಚಾಗುತ್ತವೆ ಎಂಬುದಕ್ಕೆ ಪುರಾವೆಗಳು ಇವೆ. ನೆರೆ ಪ್ರದೇಶದ ವಿವಾಹಗಳ ಕುರಿತ ಒಂದು ಅಧ್ಯಯನದಲ್ಲಿ ಕೇರಳ ಮತ್ತು ಮೈಸೂರು ಪ್ರದೇಶದ ಮುಸ್ಲಿಂ ಸಮುದಾಯದ ವಿವಾಹಗಳನ್ನು ಅವಲೋಕಿಸಿದಾಗ ಮೈಸೂರಿನ ಹುಡುಗ ಕಡಿಮೆ ವರದಕ್ಷಿಣೆ ಪಡೆದುಕೊಂಡು ಅನ್ಯ ಪ್ರದೇಶದ ಕೇರಳ ಹುಡುಗಿಯನ್ನು ಮದುವೆಯಾಗಲು ಇಷ್ಟಪಡುತ್ತಾನೆ ಮತ್ತು ಮದುವೆಯೂ ಆಗುತ್ತಾನೆ. ಏಕೆಂದರೆ ಸ್ಥಳೀಯವಾಗಿ ಹೆಚ್ಚು ವರದಕ್ಷಿಣೆಯನ್ನು ನೀಡುವ ಹುಡುಗಿ ಮನೆಯವರ ನಿರೀಕ್ಷೆಗಳು ಹೆಚ್ಚಾಗಿರುತ್ತವೆ ಅಲ್ಲದೆ ಸ್ಥಳೀಯವಾಗಿ ಇಷ್ಟು ವರದಕ್ಷಿಣೆಯನ್ನು ಪಡೆದು ಎಂತಹ ಮದುವೆ ಮಾಡಿದ್ದಾರೆ ಎಂಬ ಸಾಮಾಜಿಕ ದೃಷ್ಟಿಕೋನವು ಸಹ ಹುಡುಗನನ್ನು ಮತ್ತು ಹುಡುಗನ ಮನೆಯವರನ್ನು ಮುಜುಗರಕ್ಕೆ ಈಡು ಮಾಡುತ್ತದೆ. ಅಲ್ಲದೆ ಮದುವೆ ಖರ್ಚು–ವೆಚ್ಚಗಳನ್ನು ಭರಿಸಿಕೊಳ್ಳಲು ಕಷ್ಟವೂ ಆಗುತ್ತದೆ. ಆದಕಾರಣ ಕಡಿಮೆ ವರದಕ್ಷಿಣೆ ಪಡೆದು, ಕಡಿಮೆ ಖರ್ಚಿನಲ್ಲಿ ವಿವಾಹವಾಗುವುದು ಉತ್ತಮ ಎಂಬ ಅಭಿಪ್ರಾಯ ಹೊಂದಿದ್ದಾರೆ. ದಕ್ಷಿಣದ ರಾಜ್ಯಗಳಲ್ಲಿ ಕೇರಳದಂತಹ ಪ್ರದೇಶದ ವಿವಾಹದ ನಿಯಮವು ಕಠಿಣವು, ಸಾರ್ವತ್ರಿಕವು ಅಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಅಂಶ. ಈ ತೆರನಾದ ವಿವಾಹಗಳು ವಲಸೆಯನ್ನು ವಿಸ್ತರಿಸಿವೆ.

ವೈಯಕ್ತಿಕ ದೃಷ್ಟಿಕೋನ, ಪ್ರೇರಣೆ, ಗ್ರಹಿಕೆ, ಸಂಸ್ಕೃತಿ, ವರದಕ್ಷಿಣೆಯ ವಿಸ್ತರಣೆ, ವಿವಾಹದ ಖರ್ಚು–ವೆಚ್ಚ, ವಿವಾಹದ ವಲಸೆ, ಮಹಿಳಾ ಕೆಲಸದ ಅಪಮೌಲ್ಯೀಕರಣ, ಮಹಿಳಾ ಕೆಲಸದ ಪ್ರಸ್ತುತತೆಯ ವಿಶ್ಲೇಷಣೆಗಳು ಸಂಕೀರ್ಣವಾಗಿವೆ ಮತ್ತು ವೈರುಧ್ಯತೆಯಿಂದ ಕೂಡಿವೆ. ವೈಯಕ್ತಿಕ ಪ್ರೇರಣೆ ಮತ್ತು ಗ್ರಹಿಕೆಯು ವಿವಾಹದ ವಲಸೆ, ಅನ್ಯಗೋತ್ರದ ವಿವಾಹ, ವಿವಾಹದ ಸಾಂಪ್ರದಾಯಿಕ ಚೌಕಟ್ಟನ್ನು ಸಡಿಲಗೊಳಿಸುವ ಪ್ರವೃತ್ತಿಯ ಕಡೆಗೆ ಸಾಗುತ್ತಿದೆ. ಸಂಬಳಸಹಿತ ಮತ್ತು ಸಂಬಳರಹಿತ ಮಹಿಳಾ ದುಡಿಮೆಯು ವಿವಾಹ ಮತ್ತು ಸಾಮಾಜಿಕ ಆಚರಣೆಯ ಮೇಲೆ ಒತ್ತಡವನ್ನು ಉಂಟುಮಾಡುತ್ತಿದೆ. ಆದ್ದರಿಂದ ಮದುವೆ ವಲಸೆಯು ಆಯಾ ಪ್ರದೇಶದ ಸಂಸ್ಕೃತಿ, ಸಂಪ್ರದಾಯ, ಗ್ರಹಿಕೆ, ಪ್ರೇರಣೆಗಳನ್ನು ಆಳವಾದ ಅಧ್ಯಯನಕ್ಕೆ ಒಳಪಡಿಸಬೇಕಾಗಿದೆ. ಆಗ ಮಾತ್ರವೇ ಮಹಿಳಾ ವಲಸೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.

## ಆಕರ ಗ್ರಂಥಸೂಚಿ

೧) ಅಗ್ನಿಹೋತ್ರಿ ಇಂದೂ ಆ್ಯಂಡ್ ಇಂದ್ರಾಣಿ ಮಂಜುಮದಾರ್, ೨೦೦೯, ಡಸ್ಟಿ ಟ್ರೆಲ್ಸ್ ಆ್ಯಂಡ್ ಅನ್‌ಸೆಟ್ಟಲ್ಡ್ ಲೈವ್ಸ್: ವುಮನ್ ಲೇಬರ್ ಮೈಗ್ರೆಶನ್ ಇನ್ ರೂರಲ್ ಇಂಡಿಯಾ, ಇಂಡಿಯನ್ ಜರ್ನಲ್ ಆಫ್ ಜಂಡರ್ ಸ್ಟಡೀಸ್, ನಂ. ೧೬ ಸೆಪ್ಟೆಂಬರ್/ಡಿಸೆಂಬರ್

೨) ಅರ್ನೆಸ್ಟ್ ಜಾರ್ಜ್ ರಾವೆನ್‌ಸ್ಟೈನ್, ೧೮೮೯, ದಿ ಲಾಸ್ ಆಫ್ ಮೈಗ್ರೇಶನ್, ಜರ್ನಲ್ ಆಫ್ ದಿ ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿ, ವಾಲ್ಯೂಮ್. ೫೨, ನಂ. ೨ (ಜೂನ್).

೩) ಎಂ. ಹೈನ್ರಿ, ೨೦೧೨, ನ್ಯಾಷನಲ್ ವರ್ಕ್‌ಶಾಪ್ ಆನ್ ಇಂಟರನಲ್ ಮೈಗ್ರೇಶನ್ ಅಂಡ್ ಹುಮನ್ ಡೆವಲಪಮೆಂಟ್ ಇನ್ ಇಂಡಿಯಾ, ವರ್ಕ್‌ಶಾಪ್ ಕಂಪೆಂಡಿಯಮ್, ವಾಲ್ಯೂಮ್. ೨ : ವರ್ಕ್‌ಶಾಪ್ ಪೇಪರ್ಸ್ : ಯುನೈಟೆಡ್ ನ್ಯೂನ್ ಏಜುಕೇಷನಲ್, ಸೈಂಟಿಫಿಕ್ ಅಂಡ್ ಕಲ್ಚರಲ್ ಆರ್ಗನೈಜೇಶನ್, ಯುನಿಎಸ್‌ಸಿಒ, ನ್ಯೂ ಡೆಲ್ಲಿ.

೪) ಚಾಂಟ್, ಎಸ್., ೧೯೯೨, ಜಂಡರ್ ಆ್ಯಂಡ್ ಮೈಗ್ರೇಶನ್ ಇನ್ ಡೆವಲಪಿಂಗ್ ಕಂರ್ಟಿಸ್ಸ್: ಬೆಲ್ಹೇವನ್ ಪ್ರೆಸ್, ಲಂಡನ್.

೫) ಜಸ್ಟಿನಾ ಡುಗ್ಬಾಜಾ, ೨೦೧೨, ಜಂಡರ್, ಲೈವಲಿಹುಡ್ ಆ್ಯಂಡ್ ಮೈಗ್ರೇಶನ್ ಇನ್ ಆಫ್ರಿಕಾ: ಕ್ಲಿಬ್ರಿಸ್, ಕಾರ್ಪ್.

೬) ನ್ಯಾಷನಲ್ ಸ್ಯಾಂಪಲ್ ಸರ್ವೆ(ವೆರಿಯಸ್ಸ್ ರೌಂಡ್ಸ್), ಮೈಗ್ರೇಷನ್ ಇನ್ ಇಂಡಿಯಾ, ೧೯೯೩, ೧೯೯೯–೨೦೦೦, ೨೦೦೭–೦೮,

೭) ವಂದನಾ ಶಿವ (ಮೂಲ) ಮಾಧವ ಐತಾಳ (ಕನ್ನಡಕ್ಕೆ), ೨೦೦೫, ಬತ್ತದ ಚಿಲುಮೆ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

**ಡಾ. ಯರ್ರಿಸ್ವಾಮಿ ಈ.**
ಸಹಾಯಕ ಪ್ರಾಧ್ಯಾಪಕ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬, ಹೊಸಪೇಟೆ ತಾಲೂಕು
ವಿಜಯನಗರ ಜಿಲ್ಲೆ, ಕರ್ನಾಟಕ
ಸಂಪರ್ಕದ ಸಂಖ್ಯೆ: 9481715062
ಈ–ಮೇಲ್ ಐಡಿ: yerriswamy91@gmail.com

*********

Volume XX : July to December – 2022, ISSN 2250-1711
Journal of Veda Samskrita Academy [Recognised in the UGC-CARE List]

# ದಾಸ ಸಾಹಿತ್ಯ : ಸಂಸ್ಕೃತಿ, ಸಂಘರ್ಷ ಮತ್ತು ಸಮನ್ವಯತೆ

ಡಾ. ವೆಂಕಟಗಿರಿ ದಳವಾಯಿ, ಹಂಪಿ, ಕರ್ನಾಟಕ

ಹರಿದಾಸ ಸಾಹಿತ್ಯದಲ್ಲಿ ಎರಡು ಪ್ರಭೇದಗಳಿವೆ. ಒಂದು ವ್ಯಾಸಕೂಟ ಮತ್ತೊಂದು ದಾಸಕೂಟ. ಇವೆರಡರಲ್ಲಿರುವ ಸಮಾನ ಅಂಶಗಳು, ವೈರುಧ್ಯಗಳು ಹರಿದಾಸ ಸಾಹಿತ್ಯವೆಂದೇ ಕರೆಸಿಕೊಂಡಿದೆ. ಹಾಗಾದರೆ ಹರಿದಾಸ ಸಾಹಿತ್ಯ ಪ್ರತಿನಿಧಿಸಿದಂತಹ ಸಂಸ್ಕೃತಿ ಯಾವುದು? ಸಂಘರ್ಷ ಎಂತಹದ್ದು? ಯಾರೊಂದಿಗೆ ಸಮನ್ವಯವನ್ನು ಸಾಧಿಸಿದೆ ಎನ್ನುವುದು ಮುಖ್ಯವಾಗುತ್ತದೆ. ಮಧ್ವ ಮತವನ್ನು ಸಾರುವ ಈ ಪಂಥ ಭಕ್ತಿ ಚಳುವಳಿಗೆ ಕೊಟ್ಟ ಕಾಣಿಕೆ ಎಂತಹದ್ದು? ವ್ಯಾಸಕೂಟಕ್ಕಿಂತ ದಾಸಕೂಟ ಹೇಗೆ ತನ್ನನ್ನು ತಾನು ಈ ಸಮಾಜಕ್ಕೆ ಅರ್ಪಿಸಿಕೊಂಡಿತು ಎನ್ನುವ ಅಂಶಗಳು ಮುನ್ನೆಲೆಗೆ ಬರಬೇಕಾಗಿದೆ.

ವ್ಯಾಸಕೂಟವು ತತ್ವವೇತ್ತರವೆಂದು, ದಾಸಕೂಟ ಭಕ್ತಿಭಾವ ಪರ ಎಂದು ಸ್ಥೂಲವಾಗಿ ವಿವರಿಸಲಾಗಿದೆ. ಅಂದರೆ "ವ್ಯಾಸಕೂಟಕ್ಕೆ ಭಕ್ತಿಭಾವ ಒಪ್ಪಿಗೆ ಇರಲಿಲ್ಲವೆಂದು, ದಾಸಕೂಟದವರಿಗೆ ತತ್ವನಿಷ್ಠೆ ಇರಲಿಲ್ಲವೆಂದು ಇದರ ಅರ್ಥವಲ್ಲ. ವ್ಯಾಸಕೂಟವೆಂಬುದು ಒಂದು ಸಂಸ್ಥೆಯಲ್ಲ, ಈ ವ್ಯಾಸಕೂಟವು ಪುರಂದರದಾಸರ ಗುರುಗಳಾದ ಶ್ರೀವ್ಯಾಸರಾಯರನ್ನು ಕೇಂದ್ರವನ್ನಾಗಿ ಮಾಡಿಕೊಂಡ ಸಂಘಟನೆಯಲ್ಲ. ವ್ಯಾಸ ಎಂದರೆ ವೇದವ್ಯಾಸರಿಗೆ ಸಂಬಂಧಿಸಿದುದು ಎಂದು ಹೇಳಬಹುದು. ವೇದವ್ಯಾಸರಿಂದ ಪ್ರಣೀತವಾದ ಕೃತಿಗಳನ್ನು ವ್ಯಾಖ್ಯಾನಿಸಿದ ಶ್ರೀ ಆನಂದತೀರ್ಥರ ಸರ್ವ ಮೂಲಗಳಲ್ಲಿ ಮಾತ್ರ ನಿಷ್ಠೆಯನ್ನು ತೋರಿಸುವ ಸಂಸ್ಕೃತ ಪಂಡಿತರ ಗುಂಪನ್ನು ನಿರ್ದೇಶಿಸಲು ವ್ಯಾಸಕೂಟ ಎಂಬ ಹೆಸರು ಬಹಳ ತಡವಾಗಿ ಬಂದಿತು. ವ್ಯಾಸ ಕೂಟದವರಿಗೆ, ಬಹಳಷ್ಟು ಪಂಡಿತರಿಗೆ ದಾಸರ ವಿಷಯದಲ್ಲಿ ಅವರ ಬುದ್ದಿ ಇರಲಿಲ್ಲ ಎಂಬ ವಿಷಯದಲ್ಲಿ ಸಂದೇಹವೇ ಇಲ್ಲ. ಒಂದೇ ಒಂದು ಉದಾಹರಣೆಗೆ ವ್ಯಾಸಯೋಗಿ ಚರಿತವನ್ನು ನೋಡಬಹುದು. ಅದನ್ನು ಬರೆದ ಸೋಮನಾಥ ಕವಿ ಪುರಂದರದಾಸರ ನಾಮ ನಿರ್ದೇಶನವನ್ನೂ ಮಾಡದೇ ಹೋಗಿದ್ದಾನೆ. ದಾಸಸಾಹಿತ್ಯದಲ್ಲಿ ದಾಸಕೂಟಕ್ಕೆ ಮಾನ್ಯತೆಯನ್ನು ತಂದುಕೊಡಲು ಪ್ರಯತ್ನಗಳಾಗಿವೆ. ಎರಡು ಪಂಗಡಗಳೂ ಒಂದೇ ಮತದ ಎರಡು ಟಿಸಿಲುಗಳೆಂದು ಹೇಳಿದರೂ ಕೂಡಾ ಎರಡರಲ್ಲಿಯೂ ತತ್ವಶಃ ವಿರೋಧ ಇರದಿದ್ದರೂ ಪರಸ್ಪರ ಅವಹೇಳನ ಇತ್ತು ಎಂದು ಕಂಡುಬರುತ್ತದೆ. ದಾಸರು ಪ್ರಾಕೃತವನ್ನು ಆಶ್ರಯಿಸಿದರು. ಪ್ರಾಕೃತವನ್ನು ಮತಪ್ರಸಾರದ ಪ್ರಧಾನ ಭಾಷೆಯೆಂದು ಸ್ವೀಕರಿಸಿದರು. ಆದರೆ ವ್ಯಾಸಕೂಟದ ಪಂಡಿತರೂ ಸಂಸ್ಕೃತದಿಂದ ಮಾತ್ರ ಮೋಕ್ಷ, ಸಂಸ್ಕೃತದಿಂದ ಜ್ಞಾನ ಎಂಬ ನಿಲುವನ್ನು ಹೊಂದಿದ್ದರು. ಹೀಗಿದ್ದರೂ ಶ್ರೀಪಾದರಾಜರು, ಶ್ರೀವ್ಯಾಸರಾಜರು, ಶ್ರೀವಾದಿರಾಜರು ಮೊದಲಾದ ಯತಿವರೇಣ್ಯರು ಧೈರ್ಯದಿಂದ ಮುಂದೆ ಬಂದು ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದರು. ಆದರೆ ಅವರ ಈ ಮಹತ್ಸಾಧನೆ ಪಂಡಿತ ವರ್ಗದಲ್ಲಿ ಹರಿದಾಸರ ಬಗೆ ಇರುವ ಅವಹೇಳನವನ್ನು ಕಡಿಮೆ ಮಾಡಲು ಸಮರ್ಥ ವಾಗಲಿಲ್ಲ. ಈ ಅವಹೇಳನವೇ ದಾಸಕೂಟದ ಹರಿದಾಸ ಸಾಹಿತ್ಯದ ಪ್ರಮುಖ ವಸ್ತುವಾಯಿತು. ಮಧ್ವತತ್ವಗಳಲ್ಲಿ ನಿಷ್ಠೆಯುಳ್ಳ ಹರಿದಾಸರು ಅದಕ್ಕೆ ಧಕ್ಕೆ ತಂದಂತಹ ಯಾರನ್ನೂ ಜರಿಯದೇ ಬಿಡಲಿಲ್ಲ, ಸ್ವಮತ ಮತ್ತು ಪರಮತ ಎರಡಕ್ಕೂ ಮಾನದಂಡವಾದದ್ದು ಮಧ್ವ ಸಿದ್ದಾಂತವೇ. ಈ ದೃಷ್ಟಿಯಿಂದ ನೋಡಿದಾಗ ಹರಿದಾಸ ಸಾಹಿತ್ಯ ಜನರಿಗೆ ಭಕ್ತಿಯನ್ನು ಮೂಡಿಸುವಲ್ಲಿ ಮಾಡಿದ ಪ್ರಯತ್ನ ಗಮನಾರ್ಹವಾಗಿದೆ. ಯಜ್ಞ ಯಾಗಾದಿಗಳನ್ನು, ವೇದ ಪುರಾಣಗಳನ್ನು, ಅರ್ಚನೆ, ತೀರ್ಥಯಾತ್ರೆಗಳನ್ನು, ವ್ರತಗಳನ್ನು ಯಾವುದೇ ಮುಲಾಜಿಲ್ಲದೆ ಖಂಡಿಸಿದರು. ಭಕ್ತಿಗೆ ಅಡ್ಡಿಪಡಿಸುವ ಆಚರಣೆಗಳನ್ನು ಕಂಡಾಗ ಅವರು ಸುಮ್ಮನೆ ಮಧುಕರ ವೃತ್ತಿಯನ್ನು ಮಾಡದೇ ಜ್ಞಾನದ, ಭಕ್ತಿಯ, ನಾದದ ಅಡುಗೆಯನ್ನು ಬಡಿಸಲು ಹೇಳಿದರು ಮತ್ತು ಅಂತಹ ಅಂಶಗಳನ್ನು ಮಾತ್ರ ಸಂಸ್ಕೃತಿ, ಮೌಲ್ಯ ಸಿದ್ದಾಂತವೆಂದು ಒಪ್ಪಿಕೊಂಡರು. ಅದು ಸಾಧ್ಯವಿಲ್ಲದಿದ್ದಾಗ ಸಂಘರ್ಷಕ್ಕೂ ಇಳಿಯಲು ಹಿಂಜರಿದವರಲ್ಲ. ಇವುಗಳ ಮಧ್ಯೆ ಶ್ರೀಹರಿಗೂ, ಜನರಿಗೂ, ಪಂಡಿತರಿಗೂ, ಪಾಮರರಿಗೂ ಸಮನ್ವಯತೆಯನ್ನು ಸಾಧಿಸಲು ನೋಡಿದ್ದಾರೆ. ಹೀಗಾಗಿ ಹರಿದಾಸ ಸಾಹಿತ್ಯದ ಪ್ರಧಾನ ಪ್ರಕಾರವಾದ ಕೀರ್ತನೆ ಸಾಹಿತ್ಯವನ್ನು ಅನುಲಕ್ಷಿಸಿ ಹರಿದಾಸ ಸಾಹಿತ್ಯದ ಸಂಸ್ಕೃತಿ, ಸಂಘರ್ಷ ಮತ್ತು ಸಮನ್ವಯತೆಯನ್ನು ಇಲ್ಲಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಹರಿದಾಸರು ಇಬ್ಬರೊಂದಿಗೆ ಸಂಘರ್ಷವನ್ನು ನಡೆಸಬೇಕಾಗಿತ್ತು. ಒಂದು ಸ್ವಮತದ ಪಂಡಿತರೊಂದಿಗೆ, ಮತ್ತೊಂದು ಪರಮತದ ಡಾಂಭಿಕರೊಂದಿಗೆ. ಆದರೆ ಬಹುತೇಕ ಕೀರ್ತನೆಗಳು ಅದರಲ್ಲೂ ಕನಕ, ಪುರಂದರರು ಸ್ವಮತವನ್ನು ಗಂಭೀರವಾಗಿ ತೆಗೆದುಕೊಂಡು ಅದರೊಂದಿಗೆ ಅನುಸಂಧಾನವನ್ನು ಮಾಡಿಕೊಳ್ಳದೆ, ಸಂಘರ್ಷವನ್ನೇ ಮಾಡಿದಂತಹವರು. ಮುಖ್ಯವಾಗಿ ಪುರಂದರರ ಕೀರ್ತನೆಗಳಲ್ಲಿ ಇದು ಎದ್ದು ಕಾಣುವ ಅಂಶವಾಗಿದೆ. ಕನಕದಾಸರು ಇದನ್ನು ನೋವಿನ, ಸಂಕಟದ ಆತ್ಮ ನಿವೇದನೆಯ ಪರಿಭಾಷೆಯಲ್ಲಿ ಅಭಿವ್ಯಕ್ತಗೊಳಿಸಿದರೆ, ಪುರಂದರದಾಸರು ಆಕ್ರೋಶದ ಭಾಷೆಯಲ್ಲಿ ವ್ಯಕ್ತಪಡಿಸಿದ್ದಾರೆ.

ಹರಿದಾಸ ಸಾಹಿತ್ಯದ ಉನ್ನತ ಕಾಲವೆಂದರೆ ಕನಕ ಪುರಂದರರ ಕಾಲ. ಕನಕನಂತೂ ಕವಿಯೆಂದು ಕರೆಸಿಕೊಂಡು, ಒಂದು ಸಾಂಸ್ಕೃತಿಕ ವಾಗ್ವಾದಕ್ಕೆ ಕಾರಣನಾದ. ರಾಮಧಾನ್ಯ ಚರಿತ್ರೆಯಂತಹ ಕೃತಿಯನ್ನು ರಚಿಸಿ ಶರಣರ ಆಶಯಗಳನ್ನು ಮುಂದುವರೆಸಿದಂತವರು. ದೇವರು ಬಡವರ ಪರ ಎನ್ನುವುದನ್ನು ರಾಗಿಯ ಮೂಲಕ ಧ್ವನಿಸಿದಂತವರು. ಇದರಿಂದಾಗಿ ಹರಿದಾಸ ಸಾಹಿತ್ಯ ಪರಂಪರೆಯಲ್ಲಿ ಕನಕದಾಸರು ವಿಶಿಷ್ಟ ಮತಪ್ರಚಾರಕರಾಗಿದ್ದಾರೆ.

ಈ ಲೇಖನದಲ್ಲಿ ಅವರ ಕೃತಿಗಳನ್ನು ಹೊರತುಪಡಿಸಿ, ಕೀರ್ತನೆಗಳನ್ನಷ್ಟೆ ಅನುಲಕ್ಷಿಸಲಾಗಿದೆ. ಇದು ಈ ಲೇಖನದ ಮಿತಿಯಾಗಿದೆ.

ದಾಸರು ತಮ್ಮದಾದ ಯಾವ ತತ್ವವನ್ನೂ ಹೇಳಲಿಲ್ಲ, ಮಧ್ವಾಚಾರ್ಯರ ತತ್ವಜ್ಞಾನವನ್ನು ತಿಳಿದು ಆಚರಿಸಿದರು. ಅದನ್ನು ಸುಲಭ ಕನ್ನಡದಲ್ಲಿ ವಿವರಿಸಿದರು. ದಾಸರು ಚಾತುರ್ವರ್ಣವನ್ನು ಮುರಿದು ಹಾಕುವಂತಹ ಕ್ರಾಂತಿಕಾರಿಗಳೇನೂ ಅಲ್ಲ. ಆದರೆ ಅವರು ಮತವಾದಿಗಳು ಎಂಬ ವಿಷಯದಲ್ಲಿ ಸಂದೇಹಕ್ಕೆಡೆಯಿಲ್ಲ. ಅದರಿಂದಾಗಿಯೇ–

ವೈದಿಕ ಮತದಲ್ಲಿ ನಡೆದೆವೆಂದು ತಾವು ವೈಷ್ಣವ ಬಿಟ್ಟು ಕೊಟ್ಟರು ಕೆಲವರು
ವೈಷ್ಣವ ಮತದಲ್ಲಿ ನೆಡೆದೆವೆಂದು ತಾವು ವೈದಿಕವಂ ಬಿಟ್ಟುಕೊಟ್ಟರು ಕೆಲವರು (ಪುರಂದರದಾಸರ ಕೀರ್ತನೆ)

ಎಂದು ಹೇಳಿದರು. ಕೆಲವರು ಉಂಟುಮಾಡಿದ ತತ್ವ ಅಸಂಗತೆಯನ್ನು ಹರಿದಾಸರು ಖಂಡಿಸಿ ಸರಿಯಾದ ಮತವನ್ನು ಪ್ರತಿಷ್ಠಾಪಿಸಲು ಶ್ರೀಹರಿಯ ಮಂತ್ರವನ್ನೇ ತಾರಕ ಮಂತ್ರವನ್ನಾಗಿಸಿಕೊಂಡರು. ಆ ದೀಕ್ಷಾ ಮಂತ್ರವು ಹೀಗಿತ್ತು.

ಹರಿ ಪರ ದೇವತೆ ಎಂಬ ಜ್ಞಾನವೇ ಜ್ಞಾನ, ಹರಿಯಡಿಗಳನ್ಯೆದುವ ಮುಕುತಿಯೇ
ಹರಿ ವಿರಹಿತ ಜ್ಞಾನ ಮಿಥ್ಯಾಜ್ಞಾನ, ಹರಿ ವಿರಹಿತ ಮುಕುತಿ ಮಾತಿನ ಮುಕುತಿ
ಹರಿ ಪರ ಸಿರಿ ಮಧ್ವಾಚಾರ್ಯರೇ ಗುರುಗಳು (ಪುರಂದರದಾಸರ ಕೀರ್ತನೆ)

ಮಧ್ವರನ್ನು, ಶ್ರೀಹರಿಯನ್ನು ಹರಿದಾಸರು ಪರಿಭಾವಿಸಿದ್ದು ವಿಶಿಷ್ಟವಾಗಿ ಭಾಗವತ ಮತಕ್ಕೆ ಧಕ್ಕೆ ತಂದಂತಹ ಮತಗಳನ್ನು ಮತ್ತು ಮತವಾದಿಗಳನ್ನು ನಿಷ್ಠುರವಾಗಿಯೇ ಪ್ರಶ್ನಿಸಿದ, ಖಂಡಿಸಿದ ಸಾಹಿತ್ಯವಾಗಿ ನಮಗೆ ಹರಿದಾಸ ಸಾಹಿತ್ಯ ಕಂಡುಬರುತ್ತದೆ. "ದಾಸಸಾಹಿತ್ಯ ಎನ್ನುವುದು ಏಕಮುಖವಾದುದಲ್ಲ. ಅದರಲ್ಲಿ ಚಾರಿತ್ರಿಕವಾಗಿ, ತಾತ್ವಿಕವಾಗಿ ಬೇರೆ ಬೇರೆ ಗುಂಪಿಗೆ ಸೇರಿದ ಹಲವುತನಗಳಿವೆ. ಆ ಅಂಶವನ್ನು ಗಣಿಸದೇ ಒಂದು ಎಂದು ಓದುವುದು ವೈವಿಧ್ಯತೆಯಲ್ಲಿ ಏಕತೆ ಎಂಬ ದೃಷ್ಟಿಯನ್ನು ಕಂಡಂತೆ, ಏಕತೆಯಲ್ಲಿ ವೈವಿಧ್ಯ ಇರುವ ಕಡೆಗೆ ಗಮನ ಹರಿಸುವುದು ಈಗಿನ ಅಗತ್ಯ ಎನಿಸುತ್ತದೆ. ದಾಸ ಸಾಹಿತ್ಯವು ಮುಖಾಮುಖಿಯಾದ ಸಾಂಸ್ಕೃತಿಕ ಸಂದರ್ಭ ಮತ್ತು ಅದನ್ನು ಎದುರಿಸಲು ಅನುಭವಿಸಿದ ಸಂಕಷ್ಟಗಳು ಸಂಕಥನಕ್ಕೆ ಎಡೆಮಾಡಿ ಕೊಡುವಂತೆಯೆ ಇದೆ." ಇಂತಹ ಸಂಕಥನದ ಭಾಗವಾಗಿಯೇ ಕೀರ್ತನೆಗಳಲ್ಲಿ ಸಂಸ್ಕೃತಿ, ಸಂಘರ್ಷ ಮತ್ತು ಸಮನ್ವಯತೆ ಇದೆ.

ಹರಿದಾಸರಾಗುವವರು 'ಸಾಲದೆನ್ನಬೇಡ, ಸಾಲ ಮಾಡಬೇಡ, ನಾಳಿಗಿಡಬೇಡ, ಎಂಬ ತ್ರಿವಿಧದ ಸೂತ್ರವನ್ನು ಅನುಸರಿಸುತ್ತಿದ್ದರು. ಅತ್ಯಂತ ಲೌಕಿಕ ವ್ಯವಸ್ಥೆಯಲ್ಲಿ ಬದುಕಿದಂತಹ ಹರಿದಾಸರು ಧರ್ಮಕ್ಕೆ, ಸಮಾಜಕ್ಕೆ, ಮಾನವೀಯತೆಗೆ ಕಳಂಕ ಬಂದಾಗಲೆಲ್ಲಾ ಶ್ರೀ ಹರಿಯ ನಾಮಸ್ಮರಣೆಯನ್ನು ಪರಿಹಾರವೆಂದೇ ಸೂಚಿಸಿದ್ದಾರೆ. 'ಬೇಡದಂತೆ ಪರರನ್ನು ಮಾಡೆನ್ನ ದೊರೆಯೇ' ಎಂದಂತಹ ಹರಿದಾಸರು ತಮ್ಮ ಇಷ್ಟ ದೈವಕ್ಕೆ ದಾಸ್ಯವನ್ನು ಕೊಡು ಎಂದು ಬೇಡಿದ್ದಿದೆ. ಶ್ರೀಪಾದರಾಯರ ಒಂದು ಕೀರ್ತನೆ ಹರಿದಾಸರ ಮನೋಧರ್ಮವನ್ನು ಸಂಕೇತಿಸುತ್ತದೆ.

ಗ್ರಾಸವಾಸಗಳಿಗೆ ಇಲ್ಲವೆಂದು ನಿನ್ನ ಬೇಸರಿಸಿ ಬೇಡ ಬಂದುದಿಲ್ಲ
ಸತಿಸುತರುಗಳ ಸಹಿತವಾಗಿ ಹಿತದಿಂದ ಇರಬೇಕೆಂಬುದಿಲ್ಲ,
ಸಾಲವಾಯಿತೆಂದು ಸಂಬಳ ಎನಗೆ ಸಾಲದೆಂದು ಬೇಡಿಬಂದುದಿಲ್ಲ!
ಒಡವೆಗಳಿಲ್ಲ ಒಡ್ಯಾನಗಳಿಲ್ಲೆಂದು ಬಡವನೆಂದು ಬೇಡಿಬಂದುದಿಲ್ಲ
ಆಗಬೇಕು ರಾಜ್ಯಭೋಗಗಳೆನಗೆಂದು ಈಗ ನಾ ಬೇಡಿಬಂದುದಿಲ್ಲ!

ಹರಿದಾಸರ ಧೋರಣೆ 'ನಾಲಿಗೆಯ ತುಂಬಾ ನಾಮಾಮೃತ ತುಂಬಿಕೊಳ್ಳುವುದು' ಮಾನವ ಜನ್ಮ ದೊಡ್ಡದಾದುದರಿಂದ ಹಿರಿದಾದ ಸಂಸ್ಕೃತಿಯನ್ನು ನಾವು ಬಿತ್ತಬೇಕಾಗಿದೆ. ಅದಕ್ಕೆ ಬೇಕಾದ ಮನಸ್ಥಿತಿಯನ್ನು ಕೀರ್ತನೆಗಳಲ್ಲಿ ಹರಿದಾಸರು ಬಿಚ್ಚಿಟ್ಟಿದ್ದಾರೆ. ಇದನ್ನು ವಿಜಯದಾಸರು ಹೀಗೆ ವಿವರಿಸುತ್ತಾರೆ.

ದುರಿತ ರಾಶಿಯ ಬಿಡಿಸು। ದುಸ್ಸಂಗವನ್ನು ಕೆಡಿಸು/ನಿರುತ
ನಿನ್ನವರೊಳಗೆ ಸುಖ ಪಡಿಸೋ/ ಪರಮವಚನ ನುಡಿಸು/ ಸನ್ಮಾರ್ಗದಲಿ
ನಡಿಸು/ ಪರಮರಹಸ್ಯದುಪದೇಶ ಕೊಡಿಸೋ/ ಕಂಡ ಕಂಡದ್ದೆಲ್ಲ ಕಮಲನಾಭನ ಮೂರ್ತಿ
ಉಂಡು ಉಟ್ಟದ್ದೆಲ್ಲ ವಿಷ್ಣುಪೂಜೆ ತಂಡತಂಡದ ವಾರ್ತೆ ವಾರಿಜಾಕ್ಷನ ಕೀರ್ತಿ
ಹಿಡಿದ ಹಟ ಪೂರೈಸಲದು ಹರಿ ಸಂಕಲ್ಪ ನಡೆದಾಡುವುದೆಲ್ಲ ತೀರ್ಥಯಾತ್ರೆ
ಸಡಗರದಲ್ಲಿಪ್ಪುದೇ ಶ್ರೀಶನಾಜ್ಞೆ ॥

ತನ್ನೊಳಗೆ ಒಂದು ಜ್ಞಾನದ ಸಂಸ್ಕೃತಿಯನ್ನು ಸೃಷ್ಟಿಸಿಕೊಂಡು ಅದನ್ನು ಉಣ ಬಡಿಸುವ ನಿತ್ಯ ಸಂಸ್ಕೃತಿಯನ್ನು ಹರಿದಾಸರಲ್ಲಿ ನಾವು ಕಾಣುತ್ತೇವೆ. ಇದೆಲ್ಲವೂ ಆಧ್ಯಾತ್ಮಿಕ ಮಾಧ್ವ ತತ್ವಗಳಿಗೆ ಒಳಗಾದ ನಿಯಮವಿಲ್ಲ. ಅದರಾಚೆಗೂ ಜನಸಂಸ್ಕೃತಿಯನ್ನು ಪಾಮರರಿಗೆ ತಿಳಿಸುತ್ತಾ ಹೋಗಿದ್ದಾರೆ. ಡಾಂಭಿಕ ಆಚರಣೆ, ವ್ರತ ಶಾಸ್ತ್ರಗಳ ನಿಷ್ಪ್ರಯೋಜಕತೆಯನ್ನು ತೋರಿಸಿಕೊಟ್ಟ ಹರಿದಾಸರು ಶೃತಿ, ಸ್ಮೃತಿ ಉಪನಿಷತ್ತುಗಳ ಸಾರ ಸಂಸ್ಕೃತಿಯನ್ನು ಮನಮುಟ್ಟುವಂತೆ ತಿಳಿಸಿದರು. ಅದರಂತೆ ಅವುಗಳನ್ನು ತಿರುಚುವವರ ಕುರಿತು ಎಚ್ಚರದಿಂದ ಇರಬೇಕೆಂದು ಹೇಳಿದರು.

ಗೂಟು ನಾಮವ ಹೊಡೆದು ಗುಮಡು ತಂಬಿಗೆ ಹಿಡಿದು
ಗೋಟಂಚು ದೋತರ ಮಡಿಯನ್ನುಟ್ಟು
ದಾಟುಕಾಲಿಡುತ ನಾ ಧರೆಯೊಳಗೆ ಬರಲೆನ್ನ
ಬೂಟಕತನ ನೋಡಿ ಭ್ರಮಿಸದಿರಿ ಜನರೇ! (ಪುರಂದರದಾಸರು)

ಆತ್ಮವಿಮರ್ಶೆಯೊಂದಿಗೆ ಎಚ್ಚರಿಸುವ ಈ ಪ್ರಕ್ರಿಯೆ ಭಕ್ತಿ ಸಾಹಿತ್ಯದ ಮುಖ್ಯ ಆಯಾಮವಾಗಿದೆ. ಇದು ಹರಿದಾಸ ಸಾಹಿತ್ಯದ ವೈಶಿಷ್ಟ್ಯವೇ ಆಗಿದೆ. ಸಮಾಜಕ್ಕೆ ಬೇಕಾದ ಮೌಲ್ಯಗಳನ್ನು 'ಸಂಸ್ಕೃತಿ' ಎಂಬ ಅರ್ಥದೊಳಗೆ ಕಟ್ಟಿಕೊಟ್ಟಿದ್ದಾರೆ. ಕನಕದಾಸರು ಹೇಳುವಂತೆ,

ಹಸಿದು ಬಂದವರಿಗೆ ಅಶನವೀಯಲು ಬೇಕು
ಶಿಶುವಿಂಗೆ ಪಾಲೆಣ್ಣಿಯನುಣಿಸಬೇಕು
ಹಸನಾದ ಭೂಮಿಯನು ಧಾರೆಯೆರೆಯಲು ಬೇಕು
ಭಾಷೆ ಕೊಟ್ಟ ಬಳಿಕ ನಿಜವಿರಲು ಬೇಕು
ಒಳ್ಳೆಯವ ನಾನೆಂದು ಬಲು ಹೆಮ್ಮೆ ಪಡಬೇಡಿ
ಬಾಳ್ವೆ ಸ್ಥಿರವೆಂದು ನೀನು ನಂಬಿ ಕೆಡಬೇಡ
ದೊರೆತನ ಬಂದಾಗ ಕೆಟ್ಟುದ ನುಡಿಯಲುಬೇಡ
ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ।

ಬುದ್ಧ ಹೇಳಿದ ಅಷ್ಟಾಂಗ ಮಾರ್ಗಗಳಂತೆ ಇದು ತೋರುತ್ತದೆ. ಸರಿಯಾದ ನಂಬಿಕೆ, ಸರಿಯಾದ ನಿರ್ಧಾರ, ಸರಿಯಾದ ಮಾತು, ಸರಿಯಾದ ಪ್ರಯತ್ನ, ಸರಿಯಾದ ಕರ್ಮ, ಸರಿಯಾದ ಮಾತು, ಸರಿಯಾದ ವಿಚಾರ, ಸರಿಯಾದ ಜೀವನ, ಸರಿಯಾದ ಸ್ವಚಿತ್ತ ಏಕಾಗ್ರತೆ. ಈ ಮಾರ್ಗಗಳು ಸಮಸಮಾಜ ಮತ್ತು ಮನುಷ್ಯ ಸಮಾಜವನ್ನು ನಿರ್ಮಿಸುತ್ತವೆ. ಯಾವುದೇ ಧರ್ಮದ ಅನುಷ್ಠಾನ, ತಿಳಿದುಕೊಳ್ಳದೆ ಅನುಸರಿಸುವುದರಲ್ಲಿಲ್ಲ, ಅದೇ ಅರಿತು ಆಚರಿಸುವುದರಲ್ಲಿದೆ. ಇದನ್ನು ನಮ್ಮ ಸಂತ ಪರಂಪರೆ ತನ್ನ ಮುಖ್ಯ ಆಶಯವನ್ನಾಗಿ ಮಾಡಿಕೊಂಡಿದೆ. ಇಂತಹ ಕೀರ್ತನೆಗಳನ್ನು ಗಮನಿಸಿದಾಗ ಮಧ್ವಸಿದ್ಧಾಂತ (ತತ್ವ)ದ ಮೂಲಕವೇ ನೋಡಬೇಕಾಗಿಲ್ಲ. ಅದರಾಚೆಯ ಜೀವಮೂಲ ಸಿದ್ಧಾಂತವನ್ನು ಅನುಸರಿಸಿದಂತೆ ಕಾಣುತ್ತದೆ. ಕನಕನದು ಬುದ್ಧಮಾರ್ಗ ಎನಿಸುತ್ತದೆ. ಆತನ ಸಂಯಮ, ತಾಯ್ತನ, ಜ್ಞಾನಮಾರ್ಗ ಬುದ್ಧನನ್ನೇ ನೆನಪಿಸುತ್ತದೆ. ಅದಕ್ಕೆ ಒಂದು ಕೀರ್ತನೆಯನ್ನು ಉದಾಹರಣೆಯಾಗಿ ಕೊಡಬಹುದು.

ಹಿಂದೆ ಎನ್ನ ಬೈದವರೆಲ್ಲ ಚೆಂದಾಗಿರಲಿ
ಮುಂದೆ ಎನ್ನ ಬೈದವರೆಲ್ಲ ಆನಂದದಿಂದಿರಲಿ
ಕುಂದು ಇಟ್ಟವರೆಲ್ಲ ಕುದುರಿ ಕಟ್ಟೀ ಆಳಲೀ
ಸ್ವಾಮಿ ಬಂದು ಒದ್ದವರನ್ನೆ ಭತ್ತದ ಗದ್ದೆ ಬೆಳೆಯಲಿ
ಎನ್ನ ನೋಡಿ ಚಿಟುಕೆ ಹೊಡೆದು ನಕ್ಕವರಿಗೆ
ಕನ್ಯಾ ದಾನದ ಫಲ ಬಂದು ತೊಟ್ಟಿಲವರಿಗೆ
ಎನ್ನ ನೋಡಿ ತಾಳ ಹೊಡೆದು ನಕ್ಕವರಿಗೆ
ಸಾಲು ದೀಪ ಹಚ್ಚಿದ ಫಲ ಒದಗಲವರಿಗೆ ।2।
ಜನರ ಒಳಗೆ ಮಾನಭಂಗ ಮಾಡಿದವರಿಗೆ ಎನ್ನ
ಜೇನು ತುಪ್ಪ ಸಕ್ಕರೆ ಊಟ ಆಗಲವರಿಗೆ
ಹಾನಿ ಬಾರದಂತೆ ಮಾಡೋ ಲೋಕದ ಜನರಿಗೆ
ಸ್ವಾಮಿ ಜ್ಞಾನ ಭಕ್ತಿ ಮುಕ್ತಿ ಕೊಡೋ ಕನಕ ಅವರಿಗೆ ।3।

ಜಾತಿನಿಂದನೆ ಅಪಮಾನಗಳ ಮಧ್ಯೆಯೂ ಕನಕದಾಸರ ಈ ಆಶಯದ ಹಿನ್ನೆಲೆ ಯಾವುದು? ಹಾಲುಮತ ಸಂಸ್ಕೃತಿಯ ಸಾರವನ್ನು ಕನಕದಾಸರು ದಾಸ ಸಾಹಿತ್ಯದ ಸಂಸ್ಕೃತಿಯನ್ನಾಗಿಸಿದ್ದು ಮಹತ್ವದ ಪಲ್ಲಟವಾಗಿದೆ. 'ಹೆತ್ತ ತಾಯಿ ತಂದೆಗಳ ಚಿತ್ತವ ನೋಯಿಸಿ ನಿತ್ಯ ಧಾನವ ಮಾಡಿ ಫಲವೇನು? ಎನ್ನುವ ಪುರಂದರ ಪ್ರತಿರೋಧಕ್ಕೂ ಕನಕದಾಸರ ಈ ಆರ್ದ್ರ ಭಾವಕ್ಕೂ ತುಂಬಾ ಅಂತರವಿದೆ. ಹೀಗಾಗಿ ದಾಸ ಸಾಹಿತ್ಯದಲ್ಲಿ ಏಕಾಕೃತಿಯ ಸಂಸ್ಕೃತಿ ಕಂಡುಬರುವುದಿಲ್ಲ. ಕನಕ ಸಂಸ್ಕೃತಿಯ ಹಿನ್ನೆಲೆ ಬೇರೆ ಇದೆ. ಪುರಂದರ ಉದಾರವಾದಿ ಸಂಸ್ಕೃತಿಯ ನೆಲೆ ಬೇರೆಯದೇ ಇದೆ. ಆದರೆ ಈ ಎರಡೂ ಸಂಸ್ಕೃತಿಗಳು ಸಂಘರ್ಷಿಸಬೇಕಾದದ್ದು ಪಂಡಿತ ಶುಷ್ಕ ಶಾಸ್ತ್ರಗಳ ಪಾಂಡಿತ್ಯವನ್ನು, ಸಮುದಾಯಗಳಿಗೆ ಕೀಳರಿಮೆಯನ್ನುಂಟು ಮಾಡುವ ಸಂಸ್ಕೃತಿಯ ಸ್ವರೂಪವನ್ನು. ಕನಕ ಪುರಂದರರಂತಹ ದಾಸರು ಮತೀಯ ವ್ಯವಸ್ಥೆಯ ಆಚೆ ನಿಲ್ಲುವುದು ಇದೇ ಕಾರಣಕ್ಕಾಗಿ! ಇಲ್ಲದಿದ್ದರೆ "ದುರುಳ ಜನಂಗಳು ಚಿರಕಾಲ ಇರುವಂತೆ ಕರವ ಮುಗಿದು ವರವ ಬೇಡುವೆನು" ಎಂದು ಕನಕ ಪ್ರಾರ್ಥಿಸುತ್ತಿರಲಿಲ್ಲ.

ಈ ಹಿನ್ನೆಲೆಯಲ್ಲಿಯೇ ಕನಕ ಹೇಳಿದ್ದು "ವೇದವ ಓದಬೇಕು, ಅದರೊಳಗಿರುವ ಭೇದವ ಕಳೆಯಲು ಹುಟ್ಟಿದ ಸಂಸ್ಕೃತಿಯ ಸಂಕೇತಗಳಾಗಿ ಧ್ವನಿಗಳಾಗಿ ಕನಕ, ಪುರಂದರರು ಇರುವುದನ್ನು ಮರೆಯುವಂತಿಲ್ಲ. ವೈಭವದ ಕಾಲದಲ್ಲಿ ವೈರಾಗ್ಯವನ್ನು ಬೋಧಿಸಿದ್ದ ಜ್ಞಾನವನ್ನು ಕೊಡು ಎಂದದ್ದು, ಹಾನಿ ಬಾರದಂತೆ ಮಾಡು ಲೋಕದ ಜನರಿಗೆ" ಎಂದು ಬೇಡಿಕೊಂಡದ್ದು ಹರಿದಾಸ ಸಾಹಿತ್ಯ ಸಂಸ್ಕೃತಿಯ ವಿಭಿನ್ನ ನೆಲೆಗಳೆಂದು ವಿಶ್ಲೇಷಿಸಬೇಕಾಗಿದೆ.

## ಆಕರ ಗ್ರಂಥಸೂಚಿ :


1. ಎಚ್ ಎನ್ ಮುರಳೀಧರ, 2005, ತಂಬೂರಿ ಮೀಟಿದವ, ಅಂಕಿತ ಪ್ರಕಾಶನ, ಬೆಂಗಳೂರು
2. ದಿವಾಣಜಿ ನ ಅ, 1972, ಪ್ರಸಾದ ಯೋಗ, ಉಷಾ ಸಾಹಿತ್ಯ ಮಾಲೆ, ಮೈಸೂರು
3. ಶ್ರೀಧರ ಪಿಸ್ಸೆ, 2012, ಮತಶ್ರದ್ಧೆ ಮತ್ತು ಜೀವನ ಶ್ರದ್ಧೆ, ಶ್ರೀ ಮಾಲತೇಶ ಪ್ರಕಾಶನ, ಬೆಂಗಳೂರು
4. ಎನ್ ಸುರೇಶ್ ನಾಗಲಮಡಿಕೆ, 2011, ಮುತ್ತು ಬಂದಿದೆ ಕೇರಿಗೆ, ಸಿರಿವರ ಪ್ರಕಾಶನ, ಬೆಂಗಳೂರು
5. ಟಿ ಎನ್ ನಾಗರತ್ನ, ಮಂದಾಕಿನಿ (ಸಂ), 1996, ಹರಿದಾಸರ ಜನಪ್ರಿಯ ಹಾಡುಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
6. (ಸಂ) ಅರಳು ಮಲ್ಲಿಗೆ ಪಾರ್ಥಸಾರಥಿ, 2010, ಹರಿದಾಸರ 4500 ಹಾಡುಗಳು, ಶ್ರೀ ಹರಿದಾಸ ಸಂಘ, ಕೃಷ್ಣರಾಜಪುರ, ಬೆಂಗಳೂರು



**ಡಾ. ವೆಂಕಟಗಿರಿ ದಳವಾಯಿ**

ಸಹ ಪ್ರಾಧ್ಯಾಪಕ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583276, ಹೊಸಪೇಟೆ ತಾಲೂಕು

ವಿಜಯನಗರ ಜಿಲ್ಲೆ, ಕರ್ನಾಟಕ

ಸಂಪರ್ಕದ ಸಂಖ್ಯೆ: 9448234280

ಈ–ಮೇಲ್ ಐಡಿ: drvenkatagiridalavai001@gmail.com


*********

**Volume XX : July to December – 2022, ISSN 2250-1711**
**Journal of Veda Samskrita Academy [Recognised in the UGC-CARE List]**

# ಕಲ್ಯಾಣ ಕರ್ನಾಟಕದಲ್ಲಿ ಮುದ್ರಣ ಮಾಧ್ಯಮ ಬೆಳೆದು ಬಂದ ಬಗೆ ಒಂದು ಚಾರಿತ್ರಿಕ ಅಧ್ಯಯನ

**ಮಾನಪ್ಪ, ಸಂಶೋಧಕ**
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ
**ಸಂಶೋಧನಾ ಮಾರ್ಗದರ್ಶಕರು**
**ಪ್ರೊ. ನಿರಂಜನ ವಾನಳ್ಳಿ,** ಕುಲಪತಿಗಳು, ಪ್ರಾಧ್ಯಾಪಕರು

ಭಾರತದಲ್ಲಿ ಮುದಣ್ರವನ್ನು ಆರಂಭಿಸಿದ ಕೀರ್ತಿಯು ಜೆಸುಯಿಟ್ ಪಾದ್ರಿಗಳಿಗೆ ಸಲ್ಲುತ್ತದೆ. ಕ್ಯಾಥೋಲಿಕ್ ಪಂಥದ ಮಿಷನರಿಯಾದ ಸಂತ ಕ್ಸೇವಿಯರ್‌ನು ರಚಿಸಿದ ಡೌಟ್ರಿನಾ ಕ್ರಿಸ್ತ ಭಾರತದಲ್ಲಿ ಮುದ್ರಣಗೊಂಡ (1557) ಮೊದಲ ಕೃತಿ. ನಂತರ ಯುರೋಪಿನಲ್ಲಿ ಮುದ್ರಣದ ಕಲೆಯ ಶೋಧ ನಡೆದು (1456) ನೂರು ವರ್ಷದ ನಂತರ 1557 ರಲ್ಲಿ ಮುದ್ರಣ ಯಂತ್ರ ಭಾರತಕ್ಕೂ ಬಂತು.

ಭಾರತದಲ್ಲಿ ಮೊದಲು ಮುಂಬೈ ಪ್ರಾಂತ್ಯದಲ್ಲಿ ಕನ್ನಡ ಮುದ್ರಣ ಯಂತ್ರ ಪ್ರಾರಂಭವಾಯಿತು. ನಂತರ ಬಳ್ಳಾರಿ, ಮಂಗಳೂರುಗಳಲ್ಲಿ ಮುದ್ರಣಾಲಯಗಳು ಸ್ಥಾಪನೆ ಗೊಂಡವು. ಪಶ್ಚಿಮ ಬಂಗಾಳದ ಕಲ್ಕತ್ತಾ ನಗರದ ಶ್ರೀರಾಮಪುರದಲ್ಲಿನ ಮುದ್ರಣದಿಂದ ವಿಲಿಯಂ ಕೇರಿಯ ಮುದ್ರಕನ ಮೂಲಕ ಮೊಟ್ಟಮೊದಲು 'A Grammar of the Kurnata Language' ನಂತರ ಮದ್ರಾಸಿನಲ್ಲಿದ್ದ ಫೋರ್ಟ್ ಸೇಂಟ್ ಜಾರ್ಜ್ ಎಂಬ ಸರಕಾರಿ ಸಂಸ್ಥೆಯ ಮುದ್ರಣಾಲಯದಲ್ಲಿ ಮುದ್ರಣಗೊಂಡಿದ್ದ 'A Grammer of the Carnataka Language' ಈ ಎರಡು ಪುಸ್ತಕಗಳು ಪ್ರಥಮವಾಗಿ ಮುದ್ರಣಗೊಂಡು ಹೊರ ಬಂದರೂ, ಅವುಗಳು ಸಹ ಕರ್ನಾಟಕದಿಂದ ಹೊರಗಡೆಯೇ ಮುದ್ರಣಗೊಂಡಿವೆ, ಎಂಬುವುದನ್ನು ಸ್ಮರಿಸಬಹುದಾಗಿದೆ.

ಬಳ್ಳಾರಿಯಲ್ಲಿ ಲಂಡನ್ ಮಿಷನರಿ ಜಾನ್‌ಹ್ಯಾಂಡ್ಸ್‌ನು 1810 ರಲ್ಲಿ ಮತಪ್ರಚಾರಕ್ಕೆ ಅನುಕೂಲವಾಗುವ ಧರ್ಮ ಪ್ರಚಾರದ ಪತ್ರಗಳನ್ನು ಮುದ್ರಿಸುವ ಉದ್ದೇಶದಿಂದ ಮದ್ರಣ ಕಾರ್ಯಾರಂಭ ಮಾಡಿದ್ದನು. ನಂತರ ನವೆಂಬರ್ ತಿಂಗಳು 1840 ರಲ್ಲಿ ಮತಪ್ರಚಾರ, ಶೈಕ್ಷಣಿಕ ಕಾರ್ಯಗಳಿಗೆ ಮುದ್ರಣಾಲಯವನ್ನು ಸ್ಥಾಪಿಸಿದರು. "ಮೊದಲಿಗೆ ಮುದ್ರಿಸಿದ ಪುಸ್ತಕದ 'ಪ್ರಶ್ನೋತ್ತರ ಪುಸ್ತಕ ಮಾಲಾ' ಎಂಬುದು ಆಗಿತ್ತು". ನಂತರ ವಿಲಿಯಮ್ ಅರ್ಕ್‌ಹಾರ್ಟ್ ಎಂಬುವನಿಗೆ ಸೇರಿದ ಕಮರ್ಶಿಯಲ್ ಪ್ರೆಸ್ಸಿನಲ್ಲಿ ಅದಾಗಲೇ ತೆಲುಗು ಬೈಬಲ್ ಮುದ್ರಿಸಲಾಗಿದ್ದಿತ್ತು. ಬೆಂಗಳೂರಿನಲ್ಲಿ ವೆಸ್ಲಿಯನ್ ಮಿಷನ್‌ವತಿಯಿಂದಲೂ 1840 ಕ್ಕೆ ಮುಂಚೆ ಬೆಂಗಳೂರಲ್ಲಿ ಯಾವ ಕನ್ನಡ ಮುದ್ರಣಾಲಯವು ಇರಲಿಲ್ಲ. "ಬಳ್ಳಾರಿ ಲಂಡನ್ ಮಿಷನಿನಲ್ಲಿ ಕ್ರಿ.ಶ. 1812 ರಷ್ಟು ಹಿಂದೆಯೇ ಮುದ್ರಣವು ಮೊದಲಾಯಿತೆಂದು ಕೆಲವೆಡೆ ಉಲ್ಲೇಖವಿದ್ದು, ಆದರೆ ಅದು ಅಸ್ಪಷ್ಟವಾಗಿದೆ. ಆ ಅವಧಿಯಲ್ಲಿ 1818 ರ ಸುಮಾರಿಗೆ ಆರಂಭವಾದ ಹೊಸ ಒಡಂಬಡಿಕೆ ಮುದ್ರಣಕ್ಕಾಗಿ ಜಾನ್‌ಹ್ಯಾಂಡ್ಸ್ ಮದ್ರಾಸಿಗೆ ಎಡತಾಕುವ ಪ್ರಸಂಗವೇ ಬರುತ್ತಿರಲಿಲ್ಲ". ಎಂದು ಬಳ್ಳಾರಿಯಲ್ಲಿ ನಿಖರವಾದಂತಹ ಯಾವ ಪುಸ್ತಕಗಳು ಮುದ್ರಣವಾಗಿವೆಯೆಂಬ ಎಂಬ ಮಾಹಿತಿ ಲಭ್ಯವಿಲ್ಲದೇ ಇರುವುದರಿಂದ ಇವರ ಮಾಹಿತಿಯು ಸಹ 1820 ರವರೆಗೆ ಬಳ್ಳಾರಿಯಲ್ಲಿ ಮುದ್ರಣದ ವ್ಯವಸ್ಥೆಯಿರಲಿಲ್ಲವೆಂದು ತಿಳಿದುಬರುತ್ತದೆ ಎಂಬುವುದು ಮತ್ತಷ್ಟು ಪುಷ್ಟಿ ಕೊಡುತ್ತದೆ. 1820 ರ ನಂತರವೇ ಬಳ್ಳಾರಿಯಲ್ಲಿ ಮುದ್ರಣಾಲಯ ಆರಂಭವಾಗಿರಬಹುದಾಗಿದೆ. ಆದಾಗ್ಯೂ ಇಡೀ ಕರ್ನಾಟಕದಲ್ಲಿಯೇ ಪ್ರಪ್ರಥಮ ಬಾರಿಗೆ (1821–54) ಮುದ್ರಣಾಲಯವನ್ನು ಸ್ಥಾಪಿಸಿದ ಕೀರ್ತಿ ಬಳ್ಳಾರಿಯ ಲಂಡನ್ ಮಿಷನ್‌ಗೆ ಸಲ್ಲುತ್ತದೆ. ಜಾನ್ ಹ್ಯಾಂಡ್ಸ್‌ರು ಹಗಲಿರುಳೆನ್ನದೆ ಯೌವನದ ಉತ್ಸಾಹದಲ್ಲಿ ಶ್ರಮವಹಿಸಿ ಕನ್ನಡ–ಇಂಗ್ಲೀಷ್ ಭಾಷೆಯ ಶಬ್ದ ಸಂಗ್ರಹವನ್ನು ಅವ್ಯವಸ್ಥಿತ ರೀತಿಯಲ್ಲಿಯ ವ್ಯಾಕರಣವನ್ನು ಶುದ್ಧವಾದ ರೀತಿಯಲ್ಲಿ ಸರಿಪಡಿಸಿಕೊಂಡು ಮುದ್ರಣ ಮಾಡಿದ್ದಾರೆ.

## ಕಲ್ಯಾಣ ಕರ್ನಾಟಕದಲ್ಲಿ ಕಾಗದ ಮತ್ತು ಮುದ್ರಣ ಮಾಧ್ಯಮದ ಬೆಳವಣಿಗೆ

**ಕಾಗದ :** ಕಲ್ಯಾಣ ಕರ್ನಾಟಕದಲ್ಲಿ ಚಂಪು ಸಾಹಿತ್ಯದ ನಂತರ ವಚನ ಸಾಹಿತ್ಯ, ದಾಸ ಸಾಹಿತ್ಯವೂ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಅವುಗಳನ್ನು ತಾಡವೋಲೆಗಳು, ಭೂರ್ಜಪತ್ರಗಳಲ್ಲಿ ಬರೆಯಲಾಗಿದೆ ಎಂಬುದನ್ನು ಚರಿತ್ರೆಯಿಂದ ತಿಳಿಯಬಹುದಾಗಿದೆ. ಮುಸಲ್ಮಾನರ ಮೂಲಕ ಚಿಂದಿ ಬಟ್ಟೆ, ನಾರುಗಳಿಂದ ತಯಾರಿಸಲಾಗುವ ಕಾಗದವು ಭಾರತವನ್ನು ಪ್ರವೇಶಿಸಿತೆಂದು 12 ನೇ ಶತಮಾನದಲ್ಲಿಯೇ ಗುಜರಾತಿನಲ್ಲಿ ಕಾಗದ ಬಳಕೆಯಿಲ್ಲಿತ್ತೆಂದು ಸ್ಪಷ್ಟವಾಗಿ ತಿಳಿದರೂ ಕರ್ನಾಟಕದಲ್ಲಿ ಎಂದಿನಿಂದ ಕಾಗದ ಬಳಕೆಯಲ್ಲಿತ್ತು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಕ್ರಿ.ಶ. "1310 ನೇ ಇಸವಿಯಲ್ಲಿ ಮೈಸೂರು ಶಾಸನವೊಂದರಲ್ಲಿ 'ಕಾಗಜ' ಶಬ್ದದ ಉಲ್ಲೇಖವಿದೆ. ನಂತರ ಕ್ರಿ.ಶ. 1368 ರಲ್ಲಿ ಮಂಗರಾಜನ 'ಅಭಿನವಾಭಿದಾನಂ' ಕೋಶದಲ್ಲಿಯೂ ಕಾಣಿಸಿಕೊಂಡಿದೆ". ಹದಿನಾಲ್ಕನೆಯ ಶತಮಾನದಿಂದ ಕಾಗದವು ಒಂದು ಗೃಹ ಕೈಗಾರಿಕೆಯಾಗಿ ತಯಾರಾಗುತ್ತಿತ್ತು. ಅದನ್ನು ಉತ್ತರ ಕರ್ನಾಟಕದ ಕೆಲವು ಮುಸ್ಲಿಂ ಮನೆತನಗಳ ಅಡ್ಡ ಹೆಸರು 'ಕಾಗಜ' ಎಂದು ಈಗಲೂ ಇರುವುದನ್ನು ಸ್ಮರಿಸಬಹುದಾಗಿದೆ. ಹೈದರಾಬಾದ್ ಕರ್ನಾಟಕದ ವಿಜಯನಗರದ ಅರವೀಡು ರಾಜಮನೆತನ, ಮತ್ತು ಬಹುಮನಿ ರಾಜ್ಯಗಳು, ದಕ್ಷಿಣದಲ್ಲಿ ಮೈಸೂರು ಸಂಸ್ಥಾನಗಳ ಇವರುಗಳ ರಾಜ್ಯಾ

-ಡಳಿತ ಅವಧಿಯಲ್ಲಿ ತಪ್ಪದೇ ಬಹುತೇಕರು ಕಾಗದವನ್ನು ಬಳಸುತ್ತಿದ್ದರೆಂದು ತಿಳಿಯುತ್ತದೆ. ಪ್ರಖ್ಯಾತ 'ರಾಮರಾಯನ ಬಖೈರ'ನ್ನು ಕಾಗದದ ಮೇಲೆಯೇ ಬರೆದಿರಬಹುದೆಂದು ಕಲ್ಪಿಸಬಹುದು.

ಭಾರತದಲ್ಲಿ 18 ನೇ ಶತಮಾನದ ಹೊತ್ತಿಗೆ ಕಾಗದದ ಬಗೆಗೆ ಇದ್ದ ಮೈಲಿಗೆಯ ಭಾವನೆಯು ಕಡಿಮೆಯಾಗಿ ಅದನ್ನು ಎಲ್ಲಾ ಕೋಮಿನವರು ಬಳಸಲು ಪ್ರಾರಂಭಿಸಿದರು. ಈ ರೀತಿಯಲ್ಲಿ ಬೆಳೆದ ಬಂದ ಕಾಗದಗಳನ್ನು ಮಿಷನರಿಗಳು ಹಾಗೂ ಸರ್ಕಾರಿ ಮುದ್ರಣಾಲಯಗಳು ವಿದೇಶಿಗಳಿಂದ ಆಮದು ಮಾಡಿದ ಕಾಗದವನ್ನು ಉಪಯೋಗಿಸುತ್ತಿದುದ್ದರಿಂದ ಬಹುಕಾಲ ಬಾಳಿಕೆ ಬರುವಂ-ತಿದ್ದು, ಉತ್ತಮ ರೀತಿಯಲ್ಲಿದ್ದವು. ದೇಶೀಯ ಮುದ್ರಣದ ಅಚ್ಚಿನವರು ಕೆಲವು ಸಂದರ್ಭಗಳಲ್ಲಿ ಬಳಕೆ ಮಾಡುತ್ತಿದ್ದರೂ ತೀರಾ ಕಡಿಮೆ. ತೆಳ್ಳನೆಯ ಉರುಟಾಗಿದ್ದ ಹಳದಿ ಬಣ್ಣದ ಕಾಗದ, ಇದನ್ನು ಕೋರಿ ಚಿಂದಿಗಳಿಂದ ನಾಡಿನಲ್ಲಿಯೇ ತಯಾರಿಸುತ್ತಿದ್ದರು. ಎಂದು ಉತ್ತರ ಕರ್ನಾಟಕದ ಭಾಗದಲ್ಲಿ ಇದನ್ನು 'ಕೋರಿ' ಕಾಗದವೆಂದೇ ಕರೆಯುತ್ತಾರೆ.

## ಮುದ್ರಣ ಯಂತ್ರದ ಹಿನ್ನಲೆ

ಬಳ್ಳಾರಿ ಮತ್ತು ಮದ್ರಾಸ್ ನಡುವೆ ಓಡಾಟಗಳಿಂದ ತೊಂದರೆಯನ್ನು ತಪ್ಪಿಸಲು ಜಾನ್ ಹ್ಯಾಂಡ್ಸ್‌ನು ಸಮಯ, ಶ್ರಮ, ಹಣದ ಉಳಿತಾಯದ ಸಲುವಾಗಿ ಹಾಗೂ ತನ್ನ ವ್ಯಾಪ್ತಿಯಲ್ಲಿ ಉತ್ತಮ ರೀತಿ ಕಾರ್ಯ ಸಾಧಿಸುವ ಸಲುವಾಗಿ ಬಳ್ಳಾರಿಯಲ್ಲಿಯೇ ಮುದ್ರಿಸಲು ಮುದ್ರಣ ಯಂತ್ರದ ಅಗತ್ಯನ್ನು ಅರಿತು, ಇವನ್ನು ಲಂಡನ್ನಿನ ತನ್ನ ಕೇಂದ್ರ ಕಛೇರಿಗೆ "ದಿನಾಂಕ : 14.07.1823 ರಂದು ಅವನು ಲಂಡನ್‌ನಲ್ಲಿರುವ ತನ್ನ ಕೇಂದ್ರ ಕಛೇರಿಗೆ ಬರೆದ ಪತ್ರದಲ್ಲಿ ಒಂದು ಪ್ರೆಸ್ ಹಾಗೂ ಮುದ್ರಕನನ್ನು ಕಳುಹಿಸಬೇಕೆಂದು ಕೇಳಿಕೊಂಡನು". ಕೊನೆಗೊಮ್ಮೆ ಅವರ ಕೋರಿಕೆಯಂತೆ 1826 ರಲ್ಲಿ ಮುದ್ರಣದೊಂದಿಗೆ 'ಪೇನ್' ಎಂಬ ಮುದ್ರಕನನ್ನು ಕಳುಹಿಸಿದರು. ಬಳ್ಳಾರಿ ಮಿಷನ್ ಪ್ರೆಸ್‌ನಲ್ಲಿ ಮೊದಲು ಇಂಗ್ಲೀಷ್ ಭಾಷೆ, ನಂತರ ಕನ್ನಡ, ತೆಲುಗು ಭಾಷೆಗಳಲ್ಲಿ ಸಾಕಷ್ಟು ಪುಸ್ತಕಗಳನ್ನು ಮುದ್ರಿಸಿ ಕ್ರೈಸ್ತ ಮತ ಪ್ರಚಾರ ಕಾರ್ಯದಲ್ಲಿ ತೊಡಗಿಕೊಂಡನು. ನಂತರ ಕನ್ನಡ ಸಮಾಚಾರ ಎಂಬ ಪತ್ರಿಕೆಯು ಮೊಟ್ಟ ಮೊದಲು ಬಳ್ಳಾರಿಯಿಂದಲೇ ಅಚ್ಚಾಗಿತ್ತು. ನಂತರ ಅದು ಮಂಗಳೂರಿಗೆ ವರ್ಗಾವಣೆಯಾಗಿ 'ಮಂಗಳೂರು ಸಮಾಚಾರ' ಎಂಬ ಶೀರ್ಷಿಕೆ ಯಡಿಯಲ್ಲಿ ಪುನಃ ಪ್ರಾರಂಭವಾಯಿತೆಂದು ತಿಳಿದುಬರುತ್ತದೆ. ಪಾಶ್ಚಿಮಾತ್ಯರ ಸಂಪರ್ಕ ಮತ್ತು ಮುದ್ರಣದ ಅನುಕೂಲತೆಗಳಿಂದಾಗಿ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಮತ್ತು ಹೈದರಾಬಾದ್ ಕರ್ನಾಟಕ ಕನ್ನಡ ಸಂಸ್ಕೃತಿಯ ಕೊಡುಗೆಗೆ ಕಾರಣವಾಗಿದೆ. ಹಾಗೂ ಗದ್ಯ ಸಾಹಿತ್ಯವೂ ಈ ಭಾಗದಲ್ಲಿ ಹೆಚ್ಚು ಅಭಿವೃದ್ದಿಗೆ ಪೂರಕವಾಯಿತು. 19 ನೇ ಶತಮಾನದ ಅವಧಿಗೆ ಯುರೋಪ್ ಮತ್ತು ಅಮೇರಿಕಾದ 400 ಕ್ಕೂ ಹೆಚ್ಚು ಮಿಷನರಿಗಳು ಆಕರ್ಷಿತರಾಗಿ ಭಾರತದ ಇತರಡೆಗಳಲ್ಲಿ ಕ್ರೈಸ್ತ ಮತ ಪ್ರಚಾರದ ಕಾರ್ಯಗಳಲ್ಲಿ ತೊಡಗಿ ಕೊಂಡಿದ್ದರು. ಇವರುಗಳಿಗೆ ಬರುತ್ತಿದ್ದ ವಾರ್ಷಿಕ ಧನ ಸಹಾಯದಲ್ಲಿ ಅರ್ಧದಷ್ಟು ದೇಶದ್ಯಾಂತ ಶಿಕ್ಷಣ ನೀಡುವ ಕೇಂದ್ರಗಳಿಗೆ ಮತ್ತು ಮುದ್ರಣ ಕಾರ್ಯಗಳಿಗೆ ಖರ್ಚಾಗುತ್ತಿತ್ತು. ಮಿಷನರಿಗಳ ಗ್ರಂಥಗಳ ರಚನೆ ಹಾಗೂ ಪ್ರಕಟಣೆಯ ಈ ಕಾರ್ಯಕ್ಕೆ 'ಸಹಾಯಕ ಬೈಬಲ್ ಸಂಘ' ಹಾಗೂ ಬುಕ್ ಅಂಡ್ ಟ್ರ್ಯಾಕ್ಟ್ ಬುಕ್ ಸೊಸೈಟಿಗಳ ಮುಖಾಂತರವೇ ನಡೆಯಬೇಕಾಗಿದ್ದಿತು. ಬೇರೆ ರೀತಿಯ ಅವಕಾಶಗಳಿರಲಿಲ್ಲ. ಈ ರೀತಿಯ ಕಾರ್ಯಗಳು ನಿರ್ವಹಿಸುವ ಸಂಸ್ಥೆಗಳಿಗಾಗಿ ಲಂಡನ್ನಿನಲ್ಲಿದ್ದ 'ಬ್ರಿಟಿಷ್ ಅಂಡ್ ಫಾರೆನ್ ಬೈಬಲ್ ಸೊಸೈಟಿ' ಹಾಗೂ 'ರಿಲಿಜನ್ ಟ್ರ್ಯಾಕ್ಟ್ ಸೊಸೈಟಿಗಳು' ವಿಶೇಷ ಧನ ಸಹಾಯವನ್ನು ಒದಗಿಸಿ ಸಹಾಯ ಹಸ್ತ ನೀಡುತ್ತಿದ್ದವು. ವಿದೇಶದಿಂದ ಸಹಕಾರ ನೀಡುತ್ತಿದ್ದವು ಇದರ ಪ್ರಯುಕ್ತವಾಗಿ ಇತರೆ ಅನೇಕ ಸಂಸ್ಥೆಗಳು ಹುಟ್ಟಿಕೊಂಡವು.

ಪ್ರಾಚೀನ ಮಿಷನರಿಗಳಿಗೆ ಇರುವ ಆಸಕ್ತಿದಾಯಕವಾದ ಭಾರತೀಯರ ಸಾಹಿತ್ಯವನ್ನು ಹುಡುಕಿ ಇಲ್ಲಿನವರಿಗೆ ತಿಳಿಸಲು ಶ್ರಮಿಸಿದ್ದರ ಪ್ರಕ್ರಿಯೆಗೆ ಈ ಸಾಹಿತ್ಯ ಪ್ರಸಾರ, ಪ್ರಕಟಣೆ, ಸಂಪಾದನೆಯ ಕ್ಷೇತದ್ರಲ್ಲಿ ದುಡಿದ ಪ್ರಮುಖ ಮಿಷನರಿಗಳ ಹಾಗೂ ಮುದ್ರಣ ಯುಗ ಎಂಬ ನೆಲೆಯಲ್ಲಿ ಗುರುತಿಸಬಹುದಾಗಿದೆ. ಇವುಗಳಲ್ಲಿ ಭಾರತದ ಇತರಡೆಗಳಲ್ಲಿ ನೆಲೆ ನಿಂತ ಈ ಮಿಷನರಿಗಳು ಡೇನಿಶ್ ಹಾಗೂ ಅಮೇರಿಕನ್ ಬ್ಯಾಪ್ಟಿಸ್ಟ್, ಮಿಷನರಿಗಳು ಕರ್ನಾಟಕಕ್ಕೆ ಬರಲಿಲ್ಲ. ಕ್ಯಾಥೋಲಿಕ್ ಪಂಗಡಕ್ಕೆ ಸೇರಿದ ಜೆಸುಯಿಟ್ ಸೊಸೈಟಿಯು ಕರ್ನಾಟಕದ ದಕ್ಷಿಣ ಭಾಗದಲ್ಲಿ, ಜರ್ಮನ್ ಇವ್ಯಾಂಜೆಲಿಕಲ್ (ಬಾಸೆಲ್) ಮಿಷನರಿಗಳು ನೆಲೆ ನಿಲ್ಲುತ್ತವೆ. ಪ್ರೊಟೆಸ್ಟಂಟ್ ಪಂಗಡದ ಲಂಡನ್ ಮಿಷನ್, ವೆಸ್ಲಿಯನ್ ಮೆಥೋಡಿಸ್ಟ್ ಮಿಷನರಿಯು ಹೈದರಾಬಾದ್ ಕರ್ನಾಟಕದ ವಿಭಾಗದಲ್ಲಿ ಮತ ಪ್ರಚಾರ ಮತ್ತು ಶಿಕ್ಷಣಕ್ಕೆ ಒತ್ತು ನೀಡಿದವು. ನವೋದಯ ಸಾಹಿತ್ಯದಲ್ಲಿ ಮುದ್ರಣ ಮತ್ತು ಹೊಸ ಶಿಕ್ಷಣದ ಕ್ರಮಗಳು, ಕ್ರೈಸ್ತ ಮತ ಪ್ರಚಾರಗಳು, ಲೇಖಕನು ತಾನು ತಿಳಿದಿದ್ದ ಹೊಸ ವಿಚಾರಗಳನ್ನು ಕಂಡ ಅನುಭವಗಳನ್ನು ಅಭಿವ್ಯಕ್ತಗೊಳಿಸಲು ಮುಕ್ತವಾಗಿದ್ದನು. ಹೊಸ ಶಿಕ್ಷಣದ ವ್ಯವಸ್ಥೆ ಸಾಮಾನ್ಯ ವಿದ್ಯಾವಂತನಲ್ಲಿ ಮಿಷನರಿಗಳ ಮುದ್ರಣ ಯಂತ್ರದಿಂದ ದೊರೆತ ಪ್ರಕಟಣೆಯಿಂದ ವ್ಯಾಪಕವಾಗಿ ದೊರೆಯುತ್ತಿದ್ದ ಪುಸ್ತಕಗಳು, ಕರಪತ್ರಗಳು, ಇತ್ಯಾದಿ ಮುದ್ರಿತ ಪರಿಕರಗಳಲ್ಲಿ ಓದುಗರನ್ನು ಆಕರ್ಷಿಸಿ ಬರವಣಿಗೆಯ ಕಾರ್ಯಕ್ಕೆ ಉತ್ಸಾಹದೊಂದಿಗೆ ಅವರುಗಳು ಆಸಕ್ತರಾಗುತ್ತಿದ್ದರು.

ಕ್ರಿ.ಶ. 1821 ರಲ್ಲಿ ಬಳ್ಳಾರಿ ಮಿಷನ್ ತೋಟದಲ್ಲಿ ಚಿಕ್ಕದಾದ ಮುದ್ರಣಾಲಯ ಕಛೇರಿಯನ್ನು ಇಂದಿನ ವಾಡ್ಲಾ ಪದವಿ ಪೂರ್ವ ಕಾಲೇಜಿನ ಒಳಾಂಗಣದಲ್ಲಿ ಅರ್ಧಚಂದ್ರಾಕಾರದ ರೀತಿಯಲ್ಲಿ ರಚಿಸಿರುವ ದುಂಡು ಮಾಳಿಗೆಯ ಕೊಠಡಿಯೊಂದರಲ್ಲಿ ಪ್ರಾರಂಭಿ-ಸಲಾಯಿತು. ಬಳ್ಳಾರಿಯಲ್ಲಿ ಕನ್ನಡ, ತೆಲುಗು, ಆಂಗ್ಲ ಭಾಷೆಯಲ್ಲಿಯೂ ಸಹ ಮುದ್ರಣ ಮಾಡುವ ವ್ಯವಸ್ಥೆಯನ್ನು ಹೊಂದಿತ್ತು. ಲಂಡನ್ ಮಿಷನ್ನಿನಿಂದ ಮುದ್ರಣಗೊಂಡ ಪುಸ್ತಕಗಳು : "ಬಳ್ಳಾರಿ ಮಿಷನ್ ಕೇಂದ್ರದಲ್ಲಿ 1821 ರಿಂದ 1854 ರವರೆಗೆ ಮಿಷನರಿಗಳಿಂದ ಮುದ್ರಣಗೊಂಡ ಪುಸ್ತಕಗಳು". ಎಂದು ತಿಳಿದು ಬರುತ್ತದೆ.

## ಮುದ್ರಣ ಮತ್ತು ಪ್ರಚಾರ

ಜಾನ್‌ಹ್ಯಾಂಡ್ಸ್ ಮಿಷನರಿಯು ಮುದ್ರಣ ಮತ್ತು ಪ್ರಚಾರದ ವಿಶೇಷ ಕಾಳಜಿಯಿಂದ ಹೊಸ ಒಡಂಬಡಿಕೆಯಿಂದ ನಾಲ್ಕು ಸುವಾರ್ತೆಗಳು, ಮುದ್ರಣ ಮಾಡಿ ಬಳ್ಳಾರಿಯಲ್ಲಿ ಒಂದು ಬೈಬಲ್ ಸಂಘವನ್ನು ಪ್ರಾರಂಭಿಸಿದ್ದನು. ಈ ಸಂಘಟನೆಯ ಮೂಲಕ ಪುಸ್ತಕಗಳ ಪ್ರಕಟಣೆಗೆ ಮತ್ತು ಪ್ರಚಾರ ಕಾರ್ಯಕ್ಕೆ ಸುಗಮವಾಗಿಸಿಕೊಂಡರು. ನಂತರ ಜಾನ್‌ಹ್ಯಾಂಡ್ಸ್‌ನು ತನ್ನ ಸಹೋದ್ಯೋಗಿ ವಿಲಿಯಮ್ ರೀವ್ ಮತ್ತು ಸಂಗಡಿಗರ ಸಹಾಯದಿಂದ ಹಳೆ ಒಡಂಬಡಿಕೆಯನ್ನು ಸಮಗ್ರವಾದ ಬೈಬಲ್‌ನ್ನು ಪ್ರಥಮವಾಗಿ ಕನ್ನಡ ಭಾಷೆಯಲ್ಲಿಯೇ ಮುದ್ರಿಸಿದನು. ಸಾಕಷ್ಟು ಭಾಷಾ ಗ್ರಹಣ ವಿಚಾರಗಳಲ್ಲಿ ಪರಿಣಿತಿಯಿಲ್ಲದಿದ್ದರೂ ಕಾರ್ಯದಕ್ಷತೆ, ಅನೇಕರ ಸಹನಾಗುಣಗಳಿಂದ ಹಿಡಿದ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದನು. ಪ್ರೊಟೆಸ್ಟಂಟ್ ಪಂಗಡಗಳಿಗೆ ಮತ್ತು ಕರ್ನಾಟಕದಲ್ಲಿ ಧರ್ಮ ಪಚ್ರಾರಕ್ಕೆ ಹಾಗೂ ಮುದ್ರಣದ ಕಾರ್ಯಗಳಿಗೆ ಭದ್ರವಾದ ಬುನಾಧಿಯನ್ನು ಹಾಕಿ ಕೊಟ್ಟು ವ್ಯಾಪಕವಾಗಿ ಶಿಕ್ಷಣ ಸಂಸ್ಥೆಗಳು, ಶಿಕ್ಷಣ ಕೇಂದ್ರಗಳು, ದಾವಖಾನೆಗಳು, ವಸತಿ ನಿಲಯಗಳು, ಅನಾಥಾಶ್ರಮಗಳು, ವೃತ್ತಿ ತರಬೇತಿ ಕೇಂದ್ರಗಳು ಬೆಳವಣಿಗೆಗೆ ಮಿಷನರಿಗಳು ಕಾರಣವಾಗಿದ್ದಾರೆ. "ವಿಲಿಯಮ್ ರೀವ್‌ನು ಧಾರ್ಮಿಕ ಪುಸಕ್ತಗಳು ಮತ್ತು ಬೈಬಲ್‌ಗಳನ್ನು ಅನುವಾದ ಮಾಡಲು ಅಗತ್ಯವಾದ ಇಂಗ್ಲೀಷ್ ಕನ್ನಡ ಶಬ್ದಕೋಶವೊಂದು ಮನಗಂಡು ಮುದ್ರಿಸಿದ್ದನ್ನು ಕ್ರಿ.ಶ.1817 ರಲ್ಲಿ ಅವರು ತಮ್ಮ ಪ್ರಥಮ ಶಬ್ದ ಕೋಶದ ಪೀಠಿಕೆಯಿಂದ ತಿಳಿಯುತ್ತದೆ". ಈ ರೀತಿಯಲ್ಲಿ ಹೊರಬಂದ ಪ್ರಥಮ ಕೃತಿಯೇ ವಿಲಿಯಮ್ ಕೇರಿಯ ವ್ಯಾಕರಣ ಗ್ರಂಥವಾಗಿದೆ. ಅದರಲ್ಲಿ ಕನ್ನಡ ಶಬ್ದಗಳನ್ನು ಇಡಿಯಾಗಿ ಕಟ್ಟಿಗೆಯಲ್ಲಿ ಕೊರೆದು ಇಂಗ್ಲೀಷ್ ಶಬ್ದಗಳಿಗೆ ಜೋಡಿಸಿ ಮುದ್ರಿಸುತ್ತಿದ್ದರು. ಇದು ಮುದ್ರಣ ಕಲೆಯಲ್ಲಿ ಒಂದು ವಿಚಿತ್ರವೆನಿಸಿದ ಸಾಧನೆಯಾಗಿದೆ. ಇದರಿಂದ ಅವು ಬೃಹತ್ ಗಾತ್ರವನ್ನು ಹೊಂದಿದ್ದವು.

## ಪ್ರಾಚೀನ ಪತ್ರಿಕೆಗಳು

ಕನ್ನಡ ಪತ್ರಿಕೋದ್ಯಮಕ್ಕೆ ಸುಮಾರು ಎರಡು ಶತಮಾನಗಳಷ್ಟು ಇತಿಹಾಸವಿದೆ. ಅನ್ಯ ದೇಶಿಯರಿಂದ ಪ್ರಾರಂಭವಾದ ಪತ್ರಿಕೋದ್ಯಮದ ಮೂಲ ಆಶಯವನ್ನು ಭಾರತಕ್ಕೆ ಬಂದ ಕ್ರೈಸ್ತ ಮಿಷನರಿಗಳು ತಮ್ಮ ಮತಪ್ರಚಾರದ ಸಾಧನವಾಗಿಸಿಕೊಂಡಿದ್ದರು. ದೇಶಿಯ ಭಾಷಿಯಲ್ಲಿ ಪತ್ರಿಕೋದ್ಯಮವು ಪ್ರಾರಂಭವಾಗುವುದಕಿ ್ಕಂತ ಮುಂಚೆ ವಿಶ್ವದ ನಾನಾ ದೇಶಗಳಲ್ಲಿ ಅನೇಕ ಶತಮಾನಗಳ ಹಿಂದೆಯೇ ವಿವಿಧ ಹಂತದಲ್ಲಿ ಪತ್ರಿಕೋದ್ಯಮವು ಬೆಳೆದು ಬಂದಿದೆ. ಪ್ರಾಚೀನ ರೋಮ್ ನಗರದಲ್ಲಿ ಪತ್ರಿಕಾ ಬರಹಗಾರರು ಸುದ್ದಿ ಪತ್ರಗಳ ಮೂಲಕ ಜನರಿಗೆ ಸುದ್ದಿ ತಿಳಿಸುತ್ತಿದ್ದರು. ನಂತರ ಡಂಗುರ ಸಾರುವುದು, ಅಂಚೆ, ಸುದ್ದಿ ಪತ್ರಗಳು ಆಗ ಚಲಾವಣೆಯಲ್ಲಿದ್ದವು. ಹದಿನಾರನೇ ಶತಮಾನದಲ್ಲಿ ಯುರೋಪಿನ ಅನೇಕ ದೇಶಗಳಲ್ಲಿ ಸುದ್ದಿ ಕರಪತ್ರಗಳು ಸಂತೆ ಹಾಗೂ ಅಂಗಡಿಗಳಲ್ಲಿ ಕೈ ಬರಹದ ಪತ್ರಿಕೆಗಳೇ ಮಾರಾಟ ಮಾಡಲಾಗುತ್ತಿತ್ತು. ಲೇಖಕರು, ಸುದ್ದಿಗಾರರು, ಗೆಜೆಟಿಯರ್‌ಗಳು ಮತ್ತು ಪತ್ರಕರ್ತರೆಂದು ಪರಿಚಯಗೊಂಡಿದ್ದ ಹಲವು ಪೀಳಿಗೆಗಳ ಧೀಮಂತ ವ್ಯಕ್ತಿಗಳು ವ್ಯವಸ್ಥೆಯ ಬಗ್ಗೆ ಸುದ್ದಿಯ ಅಭಿಪ್ರಾಯಗಳನ್ನು ವಿವಿಧ ರೀತಿಯಲ್ಲಿ ತಿಳಿಸುವ ಪ್ರಯೋಗಗಳನ್ನು ನಡೆಸಿದರು. ಪತ್ರಿಕೋದ್ಯಮ ಮೊದಲು ರೋಮನ್ನರಲ್ಲಿ ಕಾಣಿಸಿತು ಎಂಬುವುದನ್ನು ಹಲವು ಮೂಲಗಳು ದೃಢಪಡಿಸುತ್ತವೆ. ಸಾರ್ವಜನಿಕ ಪ್ರಕಟಣೆಗಳನ್ನು ಅಂದಿನ ಕಾಲದಲ್ಲಿ ಹಾಳೆಗಳ ಮೇಲೆ ಮೂಡಿಸಿ ಗೋಡೆಯ ಮೇಲೆ ಅಂಟಿಸಲಾಗುತ್ತಿತ್ತು. ಸುಮಾರು ಎಂಟನೆಯ ಶತಮಾನದಲ್ಲಿ ಚೀನಾದ ಆಡಳಿತಗಾರರು ಹೊರಡಿಸುತ್ತಿದ್ದ ಅಧಿಕೃತ ಪ್ರಕಟಣೆಗಳು 'ಅರಮನೆಯ ಸುದ್ದಿ' ಎಂಬ ಹೆಸರಿನಿಂದ ಹೊರ ಬೀಳುತ್ತಿತ್ತು. "ಒಂದೇ ಹಾಳೆಯಲ್ಲಿ ಸೂಕ್ತ ಶೀರ್ಷಿಕೆಗಳೊಡನೆ ಮುದ್ರಿಸಿ, ವಾರಕ್ಕೊಮ್ಮೆ ತಪ್ಪದೇ ಪ್ರಕಟಿಸುವುದನ್ನು 1622 ರಲ್ಲಿ ಪ್ರಾರಂಭಿಸಿದರು. ಕ್ರಿ.ಶ. 1703 ರಲ್ಲಿ 'ನಥನಿಯೆಲ್ ಬಟರ್' ಎಂಬುವವರು 'ಡೈಲಿ ಕುರಾಂಟ್' ಎಂಬ ಪತ್ರಿಕೆಯನ್ನು ಇಂಗ್ಲೆಂಡಿನಿಂದ ಮೊಟ್ಟಮೊದಲ ದಿನ ಪತ್ರಿಕೆಯನ್ನು ಹೊರಡಿಸಿದರು". ಬೆಂಜಮಿನ್ ಹ್ಯಾರಿಸ್‌ನ ಲಂಡನ್ನಿನ ಪುಸ್ತಕ ವ್ಯಾಪಾರಿ ಮತ್ತು ಪ್ರಕಾಶಕರ ಮೂಲಕ ಬೋಸ್ಟನ್‌ನಿಂದ ಪ್ರಕಟವಾದ ಅಮೇರಿಕಾ ಮೊದಲ ಪತ್ರಿಕೆ 'ಪಬ್ಲಿಕ್ ಅಕರೆನ್ಸಸ್ ಬೋತ್ ಫಾರಿನ್ ಅಂಡ್ ಡೊಮೆಸ್ಟಿಕ್'ನ ಸಂಪಾದಕರ ನೇತೃತ್ವದಲ್ಲಿ ತಿಂಗಳಿಗೊಮ್ಮೆ ಸುದ್ದಿ ನೀಡುವ ಪತ್ರಿಕೆಯ ಯೋಜನೆಯನ್ನು ಹೊಂದಿತ್ತು. ಪ್ರಾರಂಭವಾದ ನಾಲ್ಕು ದಿನಗಳಲ್ಲಿಯೇ ಗವರ್ನರ್ ಅದನ್ನು ನಿಲ್ಲಿಸಿದನು ಎಂಬುವುದು ಚಾರಿತ್ರಿಕ ಮೂಲಗಳಿಂದ ತಿಳಿಯುತ್ತದೆ "ಕ್ರಿ.ಶ. 1670 ರಲ್ಲಿ ಬ್ರಿಟೀಷ್ ಪತ್ರಿಕೋದ್ಯಮ 'ಬೆಂಜಮಿನ್ ಹ್ಯಾರಿಸ್' ಮೊದಲ ವಾರ ಪತ್ರಿಕೆಯನ್ನು ಹೊರಡಿಸಿದ ನಂತರ ಕ್ರಿ.ಶ.1704ರಲ್ಲಿ ಎರಡನೇಯ ಪತ್ರಿಕೆ 'ಬಾಸ್ಟನ್ ನ್ಯೂಸ್‌ಲೇಟರ್' ಪ್ರಾರಂಭವಾಯಿತು". ಭಾರತ ದೇಶದಲ್ಲಿ ಪತ್ರಿಕೋದ್ಯಮವು ಅಶೋಕ ಸಾಮ್ರಾಟನ ರಾಜ ನೀತಿ ಬೋಧನೆಯನ್ನು ಚಿತ್ರ ಕಲೆಯ ಮೂಲಕ ತಿಳಿಸಲಾಗುತ್ತಿತ್ತು. ತನ್ನ ವಿಶಾಲ ಸಾಮ್ರಾಜ್ಯ ನಿರ್ವಹಣೆಗಾಗಿ ಕಲ್ಲು ಬಂಡೆಗಳ ಮೇಲೆ 148 ಸುದ್ದಿಗಳನ್ನು ಕೆತ್ತಿಸಿ ಆ ಚಿತ್ರಗಳಲ್ಲಿ ಕಂಡುಬರುತ್ತಿದ್ದ ಹಾವ–ಭಾವಗಳು ಅಶೋಕನು ಹೇಳಬೇಕಾದ ಅರ್ಥವನ್ನು ಜನರಿಗೆ ಅವು ತಿಳಿಸುತ್ತಿದ್ದವು. ಭಾರತದಲ್ಲಿ ಮೊಘಲರ ಆಳ್ವಿಕೆಯ ಕಾಲದಲ್ಲಿ ಅನೇಕ ರೀತಿಯ ಕೈಬರಹದ ಪತ್ರಿಕೆಗಳು ಪ್ರಚಾರದಲ್ಲಿದ್ದವು. ವರ್ತಕರು, ಜಮಿನ್ದಾರರು, ಖಾಸಗಿ ಲಿಪಿಗಾರರನ್ನು ಹೊಂದಿದ್ದರು. ಆಡಳಿತಗಾರರು ಲಿಪಿಗಾರರನ್ನು ನೇಮಕ ಮಾಡಿದ್ದರಿಂದ 'ವಾಕ್‌ಟಾನೀಸ್' ಎಂಬ ಸುದ್ದಿ ಪತ್ರಗಳು ಚಲಾವಣೆಯಲ್ಲಿದ್ದವು. ಮತ್ತು ಔರಂಗಜೇಬನ ಆಡಳಿತ ಕಾಲದಲ್ಲಿ ಅಧಿಕಾರಿಗಳಿಗೆ ಸೈನ್ಯ ದಳಗಳಿಗೆ ಸುದ್ದಿಯನ್ನು ರವಾನಿಸಲು ವ್ಯವಸ್ಥೆ ಮಾಡಲಾಗಿತ್ತು. ಆದರೆ ಅಧಿಕೃತವಾಗಿ ಭಾರತೀಯರ ಪತ್ರಿಕೋದ್ಯಮ ಪ್ರಾರಂಭವಾದುದ್ದು ಬ್ರಿಟಿಷ್‌ರ ಆಳ್ವಿಕೆಯ ಕಾಲದಲ್ಲಿ ಅದು ಸ್ವಾತಂತ್ರ್ಯದ ಪೂರ್ವದಲ್ಲಿ ವ್ಯಕ್ತಿಯ ಅಥವಾ ಜನಸಮುದಾಯದ ಅಭಿಪ್ರಾಯಕ್ಕೆ ಮನ್ನಣೆಯಿರಲಿಲ್ಲ.

ಭಾರತದಲ್ಲಿ ಅಧಿಕೃತವಾಗಿ ಮೊಟ್ಟ ಮೊದಲು ಪತ್ರಿಕೆ ಪ್ರಾರಂಭಿಸಿದ ಕೀರ್ತಿ ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿ ಸೇವೆಸಲ್ಲಿಸಿದ್ದ ಜೇಮ್ಸ್ ಅಗಸ್ಟ್‌ಸ್ ಹಿಕ್ಕಿಗೆ ಸಲ್ಲುತ್ತದೆ. "ಅಗಸ್ಟ್ ಹಿಕ್ಕಿ ಎಂಬ ಬ್ರಿಟಿಷ್ ವರ್ತಕರೊಬ್ಬರು ಕಲ್ಕತ್ತದಲ್ಲಿ 1780 ರಲ್ಲಿ ಎದೆಗುಂದದೆ ವಾರಪತ್ರಿಕೆಯೊಂದನ್ನು ಪ್ರಾರಂಭಿಸಿದರು. 'ಹಿಕ್ಕೀಸ್ ಗೆಜೆಟ್' ಅಥವಾ 'ಬೆಂಗಾಲ್ ಗೆಜೆಟ್' ಎಂಬ ಶಿರೋನಾಮೆಯಿಂದ ಹೊರ ಬಂತು". ಇದೇ ಭಾರತದ ಮೊಟ್ಟ ಮೊದಲ ದಿನ ಪತ್ರಿಕೆ ಹೊರ ತಂದಿದ್ದನು. ಇದಕ್ಕೂ ಮೊದಲು ವಿಲಿಯಂ ಬೋಲ್ಟ್ಸ್ ಎಂಬಾತ ಭಾರತದಲ್ಲಿ ಪತ್ರಿಕೆಯನ್ನು ತೆಗೆಯಲು ಪ್ರಯತ್ನಿಸಿದನಾದರೂ ಯಶಸ್ಸುಗಳಿಸಲಿಲ್ಲ. ನಂತರ ದಿನಗಳಲ್ಲಿ ಹಿಕ್ಕಿಯ ಬೆಂಗಾಲ್ ಗೆಜೆಟ್ ಪತ್ರಿಕೆಗೆ ಪ್ರತಿ ಸ್ಪರ್ಧಿಯಾಗಿ 'ಇಂಡಿಯಾ ಗೆಜೆಟ್' ಎಂಬ ಪತ್ರಿಕೆ ಹುಟ್ಟಿಕೊಂಡಿತು. ಕಾಲಕ್ರಮೇಣ ಇತರೆ ಪತ್ರಿಕೆಗಳು ಪ್ರಾರಂಭವಾಗಿದ್ದವು. ಈ ಎಲ್ಲಾ ಸಮಸ್ಯೆಗಳ ನಡುವೆ ಇದಾದ ನಂತರ "1816 ರಲ್ಲಿ ಭಾರತೀಯ ಸ್ವಾಮಿತ್ವದಲ್ಲಿ ಮೊದಲ ಇಂಗ್ಲೀಷ್ ದಿನ ಪತ್ರಿಕೆ 'ಬಂಗಾಳ ಗೆಜೆಟ್'ನ್ನು ಗಂಗಾಧರ ಭಟ್ಟಾಚಾರಿ ಹೊರತಂದರು". ಕರ್ನಾಟಕದಲ್ಲಿ ಪತ್ರಿಕೋದ್ಯಮವು ಹೈದರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಬಳ್ಳಾರಿ ನಗರದಲ್ಲಿ ಜಾನ್ ಹ್ಯಾಂಡ್ಸ್ ಮತ್ತು ವಿಲಿಯಂ ರೀವ್‌ರವರ ಮಿಷನರಿಗಳ ಕಾಲಾವಧಿಯಲ್ಲಿ 'ಕಂನಡ ಸಮಾಚಾರ' ಎಂಬ ಪತ್ರಿಕೆಯು ಪ್ರಪಥಮವಾಗಿ ಮುದ್ರಿಸಿ ಅಖಂಡ ಕರ್ನಾಟಕಕ್ಕೆ ಧರ್ಮ ಪ್ರಚಾರ ಮಾಡುತ್ತಿದ್ದರು. ಬಳ್ಳಾರಿ ನಗರದ ವಾಡ್ಲಾ ಕಾಲೇಜು ಎದುರುಗಡೆ ಇರುವ ಕಟ್ಟಡದಲ್ಲಿ ಕಲ್ಲಚ್ಚಿನ ಬದಲಾಗಿ ಅಕ್ಷರ ಛಾಪಖಾನೆಯಲ್ಲಿ ಇಂಗ್ಲೆಂಡ್‌ನಿಂದ ಮೊಳೆಯ ಅಚ್ಚುಪಡೆಗಳನ್ನು ತರಿಸಿ ಬಳ್ಳಾರಿಯಿಂದಲೇ ಮೊಟ್ಟ ಮೊದಲ 'ಕಂನಡ ಸಮಾಚಾರ' ಪತ್ರಿಕೆಯನ್ನು ಮುದ್ರಿಸಿ ಕನ್ನಡ ಸಮಾಚಾರ ಎಂಬ ಕನ್ನಡ ಪತ್ರಿಕೆಯನ್ನು 1812 ನೇ ಇಸವಿಯಲ್ಲಿ ಧರ್ಮಪ್ರಚಾರಕ್ಕೋಸ್ಕರ ಪ್ರಕಟಿಸುತ್ತಿದ್ದರು ಎಂದು ಉಲ್ಲೇಖಿಸಲಾಗಿದೆ. ಬಳ್ಳಾರಿಯಲ್ಲಿ ಅಕ್ಷರ ಛಾಪಖಾನೆಯಲ್ಲಿ ಅಚ್ಚಾದ ಕಂನಡ ಸಮಾಚಾರವೇ ಕನ್ನಡ ನಾಡಿನ ಪತ್ರಿಕೆಯೆಂದು ಘಂಟಾಘೋಷವಾಗಿ ಹೇಳಬಹುದು. "ಬಳ್ಳಾರಿಯಿಂದ ಕೆಲವು ಜರ್ಮನ್ ಪಾದ್ರಿಗಳು ಮಂಗಳೂರಿಗೆ ಹೋಗಿ ನೆಲಸಿದಾಗ, ಆ ಪತ್ರಿಕೆಯನ್ನು ತೆಗೆದುಕೊಂಡು ಹೋದರು. 1842 ರಲ್ಲಿ ಬಾಸೆಲ್ ಮಿಷನ್ ಪ್ರೆಸ್‌ನಲ್ಲಿ ಈ ಪತ್ರಿಕೆಯನ್ನು ಅಚ್ಚು ಮಾಡಿದಾಗ ಅದರ ಹೆಸರನ್ನು ಕಂನಡ ಸಮಾಚಾರವೆಂದೇ ಮುಂದುವರೆಸಿದರು. ಕೆಲವು ವರ್ಷಗಳ ನಂತರ ಅದರ ಹೆಸರನ್ನು ಮಂಗಳೂರು ಸಮಾಚಾರ, ಕನ್ನಡ ಸುವಾರ್ತಿಕ, ಕರ್ನಾಟಕ ಪತ್ರಿಕೆ, ಬಾಲ ಪತ್ರಿಕೆ, ಸತ್ಯ ದೀಪಿಕೆ, ಮತ್ತು ಕ್ರೈಸ್ತ ಸಭಾ ಪತ್ರವಾಗಿ ಬದಲಾಯಿತು". ನಂತರದಲ್ಲಿ ಸುಮಾರು 1844 ರಲ್ಲಿ ಬಳ್ಳಾರಿಯಿಂದ ಮಂಗಳೂರಿಗೆ ಪತ್ರಿಕೆಯ ಮುದ್ರಣ ಮತ್ತು ಪ್ರಚಾರದ ಕಾರ್ಯಕ್ಕಾಗಿ ಸ್ಥಳಾಂತರಿಸಿದ್ದರಿಂದ 'ಮಂಗಳೂರು ಸಮಾಚಾರ' ಪತ್ರಿಕೆಯೆಂದು ಪುನರ್‌ನಾಮಕರಣದೊಂದಿಗೆ ಹರ್ಮನ್ ಮೋಗ್ಲಿಂಗ್‌ನ ನೇತೃತ್ವದಲ್ಲಿ ಪ್ರಾರಂಭವಾಗಿತೆಂದು ತಿಳಿಯುತ್ತದೆ. ಈ ರೀತಿಯಲ್ಲಿ ಬಲವಾಗಿ ಬಿತ್ತಿದ್ದ ಹೇಳಿಕೆಗಳಿಗೆ ಶ್ರೀನಿವಾಸ ಹಾವನೂರರವರು "ಬಳ್ಳಾರಿಯಲ್ಲಿ ಜರ್ಮನ್ ಮಿಷನರಿಗಳು ನೆಲಸಲೇ ಇಲ್ಲ. ಮಂಗಳೂರು ಇವರ ಮೊದಲ ನೆಲೆಯಾಗಿತ್ತು. ಬಳ್ಳಾರಿಯಲ್ಲಿ ನೆಲೆ ನಿಂತವರು ಲಂಡನ್ ಮಿಷನ್ನಿನವರು. ಇದುವರೆಗೆ ಲಭ್ಯವಿದ್ದ ಮಂಗಳೂರು ಸಮಾಚಾರ ಪತ್ರಿಕೆಯ ಪ್ರಥಮ ಸಂಪುಟವನ್ನು ವಿದೇಶದಿಂದ ತರಿಸಲಾಗಿದ್ದು, ಅದರ ಮೊದಲ ಸಂಚಿಕೆಯಿಂದ ಆ ಪತ್ರಿಕೆಯು 1843 ರಲ್ಲಿ ಆರಂಭವಾದ ವಿಷಯ ಮತ್ತು ಅದರ ಕೊನೆಯ ಸಂಚಿಕೆಯಿಂದ, ಅದು 'ಕಂನಡ ಸಮಾಚಾರ' ಎಂಬ ಹೆಸರನ್ನು ತಳೆದು 1844 ರಿಂದ ಬಳ್ಳಾರಿಯಿಂದ ಹೊರಡ ತೊಡಗಿತು". ಎಂದು ಹೊಸಗನ್ನಡದ ಅರುಣೋದಯ ಎಂಬ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ.

## ಮಂಗಳೂರು ಸಮಾಚಾರ

ಜರ್ಮನ್ ದೇಶದ ಬಾಸೆಲ್ ಮಿಷನ್ನಿನ ಮೂಲಕ ಮೋಗ್ಲಿಂಗ್ ಕ್ರೈಸ್ತ ಧರ್ಮ ಪ್ರಚಾರಕರಾಗಿ ಕ್ರಿ.ಶ. 1836 ರಲ್ಲಿ ಕನ್ನಡ ನಾಡಾಗಿದ್ದ ಮಂಗಳೂರಿಗೆ ಬಂದರು. ಕನ್ನಡದಲ್ಲಿ ಪ್ರಾರಂಭವಾದ ಪ್ರಥಮ ಪತ್ರಿಕೆ 'ಮಂಗಳೂರ ಸಮಾಚಾರ'ವೇ ಹೊರತು 'ಕನ್ನಡ ಸಮಾಚಾರ'ವಲ್ಲ. ಕನ್ನಡ ಸಮಾಚಾರ ಕನ್ನಡದ ಎರಡನೇ ಪತ್ರಿಕೆ, ಮಂಗಳೂರು ಸಮಾಚಾರದ ಬದಲಾದ ಇನ್ನೊಂದು ರೂಪವೆಂಬ ಶೋಧನೆಯನ್ನು ಡಾ. ಶ್ರೀನಿವಾಸ ಹಾವನೂರ ಅವರು 1965 ರಲ್ಲಿ ಕೃತಿ ಬಿಡುಗಡೆ ಮಾಡಿದರು. ಇದನ್ನು ಕಸ್ತೂರಿ (1965) ನಿಯತಕಾಲಿಕೆಯಲ್ಲಿ ಪ್ರಕಟಿಸಿದ ಮೇಲೂ ಡಾ. ನಡಿಗರು ಬಿತ್ತಿಹೋಗಿದ್ದ ಅನುಮಾನ ತಿಳಿಯಾಗಲಿಲ್ಲ. 1974 ರಲ್ಲಿ ಪ್ರಕಟವಾದ 'ಹೊಸಗನ್ನಡದ ಅರುಣೋದಯ' ಎಂಬ ತಮ್ಮ ಮಹಾ ಪ್ರಬಂಧದಲ್ಲಿ ಶ್ರೀನಿವಾಸ ಹಾವನೂರರು ಕನ್ನಡದ ಪ್ರಥಮ ಪತ್ರಿಕೆ 'ಮಂಗಳೂರ ಸಮಾಚಾರ' ಎಂಬ ಅಭಿಪ್ರಾಯವನ್ನು ಮತ್ತೊಮ್ಮೆ ಆಧಾರಗಳ ಸಮೇತ ಬಲಪಡಿಸಿದರು. ಸಂಪಾದಕರ ನಿರೀಕ್ಷೆಗೂ ಮೀರಿ ಜನಮನ್ನಣೆಯನ್ನು ಮಂಗಳೂರು ಸಮಾಚಾರ ಪತ್ರಿಕೆ ಗಳಿಸಿಕೊಂಡಿತ್ತು. ಇದರಿಂದ ಉತ್ತೇಜಿತರಾದ ಮೋಗ್ಲಿಂಗ್‌ರವರು ಪತ್ರಿಕೆಯನ್ನು ಮತ್ತಷ್ಟು ಆಕರ್ಷಕವಾಗಿ ಹೊರ ತರುವ ಉದ್ದೇಶದಿಂದ ಅದರ ಮುದ್ರಣವನ್ನು ಬಳ್ಳಾರಿಗೆ ವರ್ಗಾಯಿಸಲು ನಿರ್ಧರಿಸಿದರು. ಈ ಕುರಿತು ಸಂಚಿಕೆಯೊಂದರಲ್ಲಿ ಈ ರೀತಿ ಹೇಳಿಕೊಂಡಿದ್ದಾರೆ. "ಈ ದೇಶಸ್ಥರಲ್ಲಿ ಅನೇಕರಿಗೆ ಕನ್ನಡ ಭಾಷೆಯಲ್ಲಿ ಬರೆದ ಒಂದು ಸಮಾಚಾರ ಕಾಗದವನ್ನು ಓದುವುದನ್ನು ನೋಡಿ ಸಂತೋಷದಿಂದ ಅದನ್ನು ವೃದ್ಧಿ ಮಾಡುವ ಪ್ರಯತ್ನದಿಂದ ಇನ್ನೂ ಮುಂದೆ ಅದನ್ನು ಕಲ್ಲಿನಲ್ಲಿ ಛಾಪಿಸದೇ ಬಳ್ಳಾರಿಯಲ್ಲಿರುವ ಅಕ್ಷರ ಛಾಪಖಾನೆಯಲ್ಲಿ ಅಚ್ಚುಪಡಿ ಮಾಡಲಿಕ್ಕೆ ನಿಶ್ಚಯಿಸಿದ್ದೇವೆ. ಆ ಮೇಲೆ ಕನ್ನಡ ಶೀಮೆಯ ನಾಲ್ಕು ದಿಕ್ಕುಗಳಲ್ಲಿ ಇರುವವರು ಶುದ್ಧವಾದ ಮೊಳೆ ಅಚ್ಚುಗಳಿಂದ ಆಗುವ ಬರಹವನ್ನು ಸುಲಭವಾಗಿ ಓದಬಹುದು, ಇದಲ್ಲದೇ ಹೆಚ್ಚು ವರ್ತಮಾನವನ್ನು ಚರಿತ್ರೆಗಳನ್ನೂ ವಿದ್ಯಾಪಾಠಗಳನ್ನು ಬುದ್ಧಿ ಮಾತುಗಳನ್ನು ಬರಿಯುವುದಕ್ಕೆ ಸ್ಥಳ ಸಿಕ್ಕುವುದು". ಈ ರೀತಿಯಲ್ಲಿ ಆಲೋಚಿಸಿ, ಬಳ್ಳಾರಿಯ ಭೌಗೋಳಿಕ ಪ್ರದೇಶದ ವ್ಯಾಪ್ತಿಯಲ್ಲಿ ಕರ್ನಾಟಕದ ಮಧ್ಯದಲ್ಲಿ ಇರುವುದರಿಂದ

ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ಪತ್ರಿಕೆಯ ಸರಬರಾಜ ಮಾಡಲು ಸುಲಭವಾಗುವುದೆಂದು ಮತ್ತು ಪತ್ರಿಕೆಯ ಗುಣಮಟ್ಟಕ್ಕಾಗಿಯೂ ಅದರ ಮಹತ್ವವನ್ನು ಹೆಚ್ಚಿಸುವುದರ ಸಲುವಾಗಿ ಬಳ್ಳಾರಿಯಿಂದಲೇ ಮುದ್ರಿಸಲು ಆರಂಭಿಸುತ್ತಾರೆ.

"ಬೀದರ್ ಜಿಲ್ಲೆಯಾದ್ಯಾಂತ ಪತ್ರಿಕೋದ್ಯಮ ಕನ್ನಡ ಬೆಳವಣಿಗೆಯಲ್ಲಿ ಸ್ಥಳೀಯ ಪತ್ರಿಕೆಗಳ ಶ್ರಮವಿದೆ. ಖಡ್ಗ ಪತ್ರಿಕೆ, ಜನಪದ, ಜನಧನಿ, ಪಬ್ಲಿಕ್, ಕಲ್ಯಾಣ ಕ್ರಾಂತಿ, ವಚನ ಕ್ರಾಂತಿ, ಉತ್ತರ ಕರ್ನಾಟಕ, ಕಾರಂಜಾ ಎಕ್ಸಪ್ರೆಸ್, ಖ್ಯಾತಿ, ಶಾಂತಿ ಕಿರಣ, ಬೀದರ್ ಟೈಮ್ಸ್, ಈ ಪತ್ರಿಕೆಗಳು ಬೀದರ್ ಜಿಲ್ಲೆಯ ಜನರಲ್ಲಿ ಕನ್ನಡ ಭಾಷಾ ಪತ್ರಿಕೆಗಳ ವಾಚನಾಭಿರುಚಿಯನ್ನು ಹೆಚ್ಚಿಸಿದ್ದವು". ಉತ್ತರ ಕರ್ನಾಟಕ ಪತ್ರಿಕೆಯು ರಾಜ್ಯ ಮಟ್ಟದ ಪತ್ರಿಕೆಯಾಯಿತು.

## ಆಧುನಿಕ ಪತ್ರಿಕೆಗಳು

### ಬಾಳ ಸ್ಫೂರ್ತಿ:

ಬಿಷಪ್ ಜೋಸೆಫ್ 'ಡಿ' ಸಿಲ್ವರವರು ದಿನಾಂಕ: 27.10.1992 ರಂದು ಬಳ್ಳಾರಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರಾಗಿ ನೇಮಕಗೊಂಡು, ದಿನಾಂಕ: 09.03.1993 ರಂದು ಅಧಿಕೃತವಾಗಿ ಅಧಿಕಾರ ಸ್ವೀಕರಿಸಿದ ನಂತರ ಅನೇಕ ಶಿಕ್ಷಣ ಕೇಂದ್ರಗಳು ಹಾಗೂ ಧರ್ಮಕ್ಷೇತ್ರಗಳು ಪತ್ರಿಕೆಯನ್ನು ಆರಂಭಿಸಿದರು. "ಬಿಷಪ್ ಸ್ಥಳೀಯ ಯುವಕರಿಗೆ ಧರ್ಮ ಕೇಂದ್ರದಲ್ಲಿ ಯಾಜಕರಾಗಿ ಸೇವೆ ನೀಡಲು ಅವಕಾಶ ಕಲ್ಪಿಸುವ ಯೋಜನೆಯಡಿಯಲ್ಲಿ ದೀಕ್ಷಾ ಭವನ ಸ್ಥಾಪನೆ, ಧರ್ಮಕೇಂದ್ರಗಳ ಕಾರ್ಯಕ್ರಮಗಳ ವಿವರವು ಎಲ್ಲಾರಿಗೂ ಸಿಗುವಂತೆ 'ಬಾಳ ಸ್ಫೂರ್ತಿ' ಎನ್ನುವ ಹೆಸರಿನಲ್ಲಿ ಮಾಸಿಕ ಪತ್ರಿಕೆಯನ್ನು ಆರಂಭ ಮಾಡಿದರು".

### ಹರುಷದ ಜೀವಜಲ:

"ಫಾ. ರಿಚಾರ್ಡ್ ಮೆನೆಜಿಸ್ (ಸಂ) ವ್ಯಾಲಿಂ–6 ರ. 2019 ರ ಅಕ್ಟೋಬರ್ ಸಂಚಿಕೆ. ಹರುಷದ ಜೀವಜಲ ಎನ್ನುವ ಈ ಪತ್ರಿಕೆಯು ಬೆಂಗಳೂರಿನಿಂದ ಮುದ್ರಣಗೊಳ್ಳುತ್ತಿದ್ದು, ರಾಜ್ಯವ್ಯಾಪಿ ಪ್ರಚಾರವಾಗುತ್ತಿದೆ". ಮತ್ತು ಎಲ್ಲಾ ಧರ್ಮಕ್ಷೇತ್ರದಿಂದಲೂ ಪಾದ್ರಿಗಳು ಲೇಖನಗಳನ್ನು ಈ ಪತ್ರಿಕೆಗೆ ಬರೆಯುತ್ತಿರುವುದು ಕಂಡುಬರುತ್ತದೆ. ಪಾದ್ರಿಗಳ ಲೇಖನಗಳನ್ನು ವಿಶ್ಲೇಷಿಸಿ ಉಲ್ಲೇಖಿಸಲಾಗಿದೆ. ಧರ್ಮಗುರುಗಳಾದ ಬರಹಗಾರರು ಧಾರ್ಮಿಕ ವಿಷಯಗಳ ಕುರಿತು, ಸಾಕಷ್ಟು ಮಾಹಿತಿ ರಚನೆಗೊಳ್ಳುತ್ತಿದೆ. ಇದು ಹೈದರಾಬಾದ್ ಕರ್ನಾಟಕದ ವ್ಯಾಪ್ತಿಯಲ್ಲಿ ಹೆಚ್ಚು ಪ್ರಚಲಿತವಾಗಿದೆ.

### ದನಿ :

ಆಗು ಹೋಗುಗಳ ನಡುವಿನ ಜೀವದನಿ, (ಕನ್ನಡ ಇ–ಮಾಸಿಕ ಪತ್ರಿಕೆ). ಈ ಸಂಚಿಕೆಯ ಪ್ರಮುಖ ಲೇಖಕರಾದ ಫಾ.ಪಿ.ವಿಜಯ ಕುಮಾರ ಬಳ್ಳಾರಿಯವರಾಗಿದ್ದು, ಇವರು ಜನವರಿ 2020 ರಂದು ಪ್ರಕಟವಾದ ಪತ್ರಿಕೆಯಲ್ಲಿ 'ಮನಸು' ಎಂಬ ಲೇಖನವು ಮಾನವನ ಮನಸು 'ಮದವನೇರಿದ ಮರ್ಕಟನಂತೆ' ಎಂಬ ಉಕ್ತಿಯಂತೆ, ಮಾನವನ ಮನಸ್ಸು ಮಂಗನಂತೆ ಒಂದು ಕ್ಷಣವೂ ಸ್ಥಿರತೆಯನ್ನು ಹೊಂದಿರುವುದಿಲ್ಲ. ಯಾವಾಗಲೂ ಮಂಗನಂತೆ ಇತರೆ ಎಲ್ಲಾ ವಿಷಯಗಳ ಕಡೆ ಮನಸ್ಸು ಹರಿದಾಡಿರುತ್ತದೆ. ಎಂದು ಸ್ಪಷ್ಟತೆಯನ್ನು ನೀಡಿರುತ್ತಾರೆ. ಅಂತಹ ಮಂಗನನ್ನು ಸಹ ಮಾನವ ಪಳಗಿಸಿದಂತೆ ಮನಸ್ಸನ್ನು ಸಹ ಉತ್ತಮವಾಗಿ ಪಳಗಿಸಬಹುದಾಗಿದೆ. ಮನಸ್ಸು ಮಾನವನ ಸರ್ವ ಒಳಿತು ಕೆಡುಕುಗಳ ಉಗಮ ಸ್ಥಾನ. ಮನಸ್ಸು ಸೂಕ್ಷ್ಮವಾದದ್ದು ಹಾಗೂ ಮೃದುವಾದದ್ದು ಉತ್ತಮ ಮಾನವನಾಗಿ ರೂಪಿಸಲು ಮಾನವನು ಸ್ವಹಿತದ ಚಿಂತೆ ಬಿಟ್ಟು ಸಮಾಜ ಮುಖಿಯಾಗಬೇಕು. ಮತ್ತು ಅಭಿವೃದ್ಧಿಗೆ ಪೂರಕವಾಗಿ ಸ್ಪಂದಿಸಬೇಕೆಂದು ವಿಶ್ಲೇಷಿಸಿರುವುದು ಕಂಡುಬರುತ್ತದೆ. ಮತ್ತೊಮ್ಮೆ ಮಾರ್ಚ 2020 ರಂದು ಪ್ರಕಟವಾದ ಪತ್ರಿಕೆಯಲ್ಲಿ 'ಪಶ್ಚಾತ್ತಾಪ' ಎಂಬ ಲೇಖನವು ಪ್ರಕಟಗೊಂಡಿದ್ದು, ಮಾನವನು ಎಸಗುವ ಪಾಪ ವೈಯಕ್ತಿಕ ಸಂಬಂಧವನ್ನು ಮಾತ್ರ ಹೊಂದಿರದೇ ತನ್ನ ಸಾಮಾಜಿಕ ಹಿನ್ನೆಲೆಯ ಸಂಬಂಧವನ್ನು ಛಿದ್ರಗೊಳಿಸಿ ಅತಂತ್ರರನ್ನಾಗಿಸುತ್ತದೆ. ಕಾರಣ ಮಾನವನಲ್ಲಿ ತಪ್ಪಿನ ಅರಿವು ಉಂಟಾಗಿ ಹೊಸ ಬದುಕನ್ನು ಕಟ್ಟಿಕೊಳ್ಳಲು ಬಯಸುವವನ ಸಂಬಂಧಗಳನ್ನು ಮರುಸ್ಥಾಪಿಸುತ್ತದೆ. ಆಗ ಮಾನವ ದೈವತ್ವವನ್ನು ಹೊಂದಿ ಭಯ ಭಕ್ತಿಯಿಂದ ಪ್ರಾರ್ಥನೆ, ದೇಹದಂಡನೆ, ಪರರಲ್ಲಿ ಪ್ರೀತಿ, ಗೌರವ, ತ್ಯಾಗ, ಇತ್ಯಾದಿಗಳಿಂದ ಎಲ್ಲಾರೊಂದಿಗೆ ಹೊಂದಿಕೊಂಡು ಜೀವಿಸುವ ಕಲೆಯನ್ನು ಕರಗತ ಮಾಡಿಕೊಳ್ಳುತ್ತಾನೆ. ಇದು ನೈಜ ಮಾನವನಿಗೆ ಅಗತ್ಯವಿರುವುದರ ಬಗ್ಗೆ ತಿಳಿಸಿತ್ತದೆ. ಹೊಂಬೆಳಕು ತ್ರೈಮಾಸಿಕ ಪತ್ರಿಕೆ ಡಿಸೆಂಬರ್ 2014. ಫಾ.ರೋಮನ್ ಪಿಂಟೋ ಹರಪನಹಳ್ಳಿಯಲ್ಲಿ ಸೇವೆಸಲ್ಲಿಸುತ್ತಿರುವ ಇವರು 'ದೇವರ ವಾಕ್ಯದ ಟೇಸ್ಟ್–ಬದುಕ ಮಾಡದು ವೇಸ್ಟ್'. ಮಾತು ಮಾನವನ ಜೀವನದ ಅಂಗ. ಅವನಾಡುವ ಮಾತಿನ ಮೇಲೆ ಜೀವನ ನಿಂತಿದೆ. ಮಾತು ಜೀವನಕ್ಕೆ ದಾರಿ ದೀಪವೆಂದು ಮಾತಿಗೆ ಇರುವ ಮಹತ್ವವನ್ನು ವಿಶ್ಲೇಷಿಸಿದ್ದಾರೆ. ದೇವರು ಆದಿಯಿಂದಲೂ ಮಾನವನ ಜೊತೆ ಮಾತನಾಡಿ ತಮ್ಮ ರಕ್ಷಣಾ ಸಂದೇಶವನ್ನಿತ್ತರೆಂದು ಈ ಮಾತಿನ ಬಂಡಾರವೇ ದೇವರ ವಾಕ್ಯವೆಂದು ಕ್ರೈಸ್ತ ಧರ್ಮ ಗ್ರಂಥದ ಬೈಬಲ್ ವಾಕ್ಯಗಳ ಬೆಳಕನ್ನು ಚೆಲ್ಲಲಾಗಿದೆ. ಈ ವಾಕ್ಯಗಳು ಪ್ರತಿಯೊಬ್ಬರ ಜೀವನದಲ್ಲಿ ಮಹತ್ತರ ಸ್ಥಾನವನ್ನು ಪಡೆದಿರುವುದರ ಕುರಿತು ಚರ್ಚಿಸಲಾಗಿದೆ. ಮಾನವನ ಬಾಳಿಗೆ ತೃಪ್ತಿ ನೀಡುವುದು ತಿನ್ನುವ ಆಹಾರ, ಉಡುಗೆ, ತೊಡುಗೆ, ಉಳಿತಾಯ ಮಾಡಿರುವ ಹಣ, ಕಟ್ಟಿರುವ ಮನೆಯಲ್ಲ, ಇವುಗಳೆಲ್ಲವೂ ಅವಶ್ಯಕಗಳಾಗಿವೆಯೇ ಹೊರತು ಮಾನವನ ಆಧ್ಯಾತ್ಮಕತೆಯನ್ನು ನೀಡುವುದಿಲ್ಲ. ಬೈಬಲ್ ವಾಕ್ಯಗಳ ಮಹತ್ವ ಆ ಮೂಲಕ ಬಾಳನ್ನು ಪರಿಶುದ್ಧಗೊಳಿಸಿಕೊಳ್ಳುವ ಬಗೆಯಲ್ಲಿ 'ಮಾತೇ ಮುತ್ತು ಮಾತೇ ಮೃತ್ಯು' ಎನ್ನುವ ನಾಣ್ಣುಡಿಯಂತೆ ಮಾತಿನ ಮಹತ್ವದ ಕುರಿತು ವಿಶ್ಲೇಷಿಸಲಾಗಿದೆ. ಮಿಷನರಿಗಳು ಸಾಹಿತ್ಯದ ಮೇರು ಕೃತಿಗಳನ್ನು ಸಂಪಾದಿಸುವುದು, ರಚಿಸುವುದು ಹಾಗೂ

ಪ್ರಕಟಿಸುವುದರಲ್ಲಿ ಮಾತ್ರ ತೃಪ್ತರಾಗಿರಲಿಲ್ಲ. ಇವರು ಸುದ್ದಿ ಪತ್ರಿಕೆಗಳನ್ನು ಮತ್ತು ನಿಯತಕಾಲಿಕಪತ್ರಿಕೆಗಳನ್ನು ಹೊರಡಿಸುವುದರಲ್ಲಿಯೂ ಅಗ್ರಗಣ್ಯರಾಗಿರುತ್ತಾರೆ. ಮಿಷನರಿಗಳ ವಾರ ಪತ್ರಿಕೆಗಳನ್ನು, ನಿಯತಕಾಲಿಕೆಗಳನ್ನು ವಿವಿಧೋದ್ದೇಶದಿಂದ ಪ್ರಕಟಿಸಿದರು. 1842 ರಲ್ಲಿ ಚಿಂತಾಮಣಿ ಮತ್ತು ಕ್ರಿಸ್ತ ಸಧರ್ಮ, ದೀಪಿಕಾ ಪತ್ರಿಕೆಯನ್ನು, 1859 ರಲ್ಲಿ ಹೆರಾಲ್ಡ್ ಎಂಬ ಆಂಗ್ಲಪತ್ರಿಕೆ, ವೃತ್ತಾಂತಬೋಧಿನಿ ಎಂಬ ಕನ್ನಡ ಪತ್ರಿಕೆ, 1862 ರಲ್ಲಿ ಅರುಣೋದಯ ಪತ್ರಿಕೆಯನ್ನು ಕನ್ನಡ ಮತ್ತು ಆಂಗ್ಲ ಎರಡು ಭಾಷೆಯಲ್ಲಿ ಪ್ರಕಟಿಸಿದರು. ನಂತರ 1857 ರಲ್ಲಿ ಕನ್ನಡ ವಾರ್ತಿಕ, 1869 ರಲ್ಲಿ ಕ್ರಿಸ್ತಸಭಾ ಪತ್ರ, 1887 ರಲ್ಲಿ ಸುದರ್ಶನ, ಮತ್ತು ವೃತ್ತಾಂತ ಪತ್ರಿಕಾ, ಪ್ರಬುದ್ಧ ಕರ್ನಾಟಕ, 1896 ರಲ್ಲಿ ಸತ್ಯಾದೀಪಿಕಾ, 1910 ರಲ್ಲಿ ವೈದಿಕ ಮಿತ್ರ, 1922 ರಲ್ಲಿ ಸುವಾರ್ತ ಪ್ರಸಾರಕ, 1924 ರಲ್ಲಿ ಕ್ರಿಸ್ತಹಿತವಾದಿ ಎಂಬ ಪತ್ರಿಕೆಗಳನ್ನು ಹೊರಡಿಸಿದ್ದರು.

**ಗ್ರಂಥ ಋಣ**


**News Papers, Periodicals, Journals:**

1. Amarvani: Monthly Kannada Journal
2. Andhra Patrika: Telugu Daily
3. Arya Banu: Hindi daily, Araya Samaj, Hyderabad.
4. Deccan Chronicle: English daily from Secunderabad.
5. Democrat: Hand Written News Paper.

**Government Publications:**

1. Abhishankar.K. (Ed), Karnataka State Gazetteer, Bidar District, Government of Karnataka Publication, Bangalore, 1973.
2. Abhishankar.K. (Ed). Mysore State Gazetteer, Raichur District, Government of Mysore Publication, Bangalore, 1971.
3. Administrative Reports of H.E.H Nizam's of Hyderabad (1903-1913,) Hyderabad Division, State Archives, Hyderabad, Andhra Pradesh.
4. Census of India 2011, Primary Census Abstract Data Highlights Karnataka Series 30, Directorate of Census operations, Karnataka Bangalore, 2013.

**Unpublished Thesis:**

1. Basamma Shivsangappa, Role of Educational and Cultural Institutions in the Movement of Freedom and Unification of North Karnataka, Ph.D. Thesis, Gulbarga University,Gulbarga.
2. Bhajantri K.L: National Education and Rise of Nationalism in Hyderabad Karnataka, M.Phil. Dissertation, Gulbarga University, Gulbarga,1990.
3. Bheemashankar R. The Role of Dalit Freedom Fighters in Hyderabad Karnataka, Ph.D. Thesis, Gulbarga University, Gulbarga, 2011.



**ಸಂಶೋಧಕ**

**ಮಾನಪ್ಪ**

ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

ಮಾನಸಗಂಗೋತ್ರಿ, ಮೈಸೂರು, ಕರ್ನಾಟಕ

Contact No. : 7022172717

E-mail : manubiradar555@gmail.com

**ಸಂಶೋಧನಾ ಮಾರ್ಗದರ್ಶಕರು**

**ಪ್ರೊ. ನಿರಂಜನ ವಾನಳ್ಳಿ**

ಪ್ರಾಧ್ಯಾಪಕರು, ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ

ಕುಲಪತಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೊಲಾರ, ಕರ್ನಾಟಕ


**************

Volume XX : July to December – 2022, ISSN 2250-1711
Journal of Veda Samskrita Academy [Recognised in the UGC-CARE List]

# ಉತ್ತರ ಕರ್ನಾಟಕ ಜನಪದ 'ವಾಸ್ತವಿಕ ಕಥೆ'ಗಳಲ್ಲಿ ಗ್ರಾಮೀಣ ಸಂಬಂಧಗಳು

**ಡಾ. ಹಾಲಮ್ಮ ಎಮ್., ಶಿವಮೊಗ್ಗ, ಕರ್ನಾಟಕ**

'ಮುಂಬೈ ಕರ್ನಾಟಕ' ಮತ್ತು 'ಹೈದ್ರಾಬಾದ್ ಕರ್ನಾಟಕ' ಪ್ರದೇಶಗಳು ವಿಶಿಷ್ಟ ಭಾಷೆ, ಸಂಸ್ಕೃತಿ, ಕಲೆಗಳಿಂದ ಪ್ರಭಾವಕ್ಕೊಳಪಟ್ಟು, ಸಂಕೀರ್ಣವಾಗಿವೆ. ವೈವಿಧ್ಯತೆಗಳು ಒಂದಡೆ ಕಸಿಗೊಂಡಿವೆ. ಕೆಲವು ಮಿತಿಗಳಾಚೆ, ಸಾಂಸ್ಕೃತಿಕ ಬದುಕು ಕುಸುವಿನಿಂದ ಕೂಡಿದೆ. ಕಳೆದ ಎರಡು ದಶಕಗಳಲ್ಲಿ ಹೆಚ್ಚಿದ 'ಕೂಲಿ ವಲಸೆ'ಯು ಇಲ್ಲಿನ ಸಾಂಸ್ಕೃತಿಕ ಲೋಕದಲ್ಲಿ ದೊಡ್ಡ ಪರಿಣಾಮವನ್ನು ಬೀರುತ್ತಿದೆ. ಹೊರರಾಜ್ಯಗಳಿಗೆ, ಬೆಂಗಳೂರಿನಂತಹ ಬೃಹತ್ ನಗರಗಳಿಗೆ ಹಸಿವನ್ನು ನೀಗಿಸಿಕೊಳ್ಳಲು ಗುಳೆ ಹೋಗುತ್ತಿರುವವರ ಹಿಂದೆಯೇ ದೇಸಿ ಬೇರುಗಳು ಸಡಿಲಗೊಳ್ಳುತ್ತಿವೆ. ಹಾಗಾಗಿ ಇದ್ದಲ್ಲಿಯೇ ಇದ್ದು ಹಸಿವಿನಿಂದ ಸಾಯಬೇಕು. ಆ ಮೂಲಕ ಬೇರುಗಳನ್ನು ಕಾಪಾಡಬೇಕೆಂಬುದು ಇಲ್ಲಿನ ಇಂಗಿತವಲ್ಲ. ಆದರೆ ಪ್ರಭುತ್ವ, ಬಂಡವಾಳಶಾಹಿ ವ್ಯವಸ್ಥೆಗಳು ಈ ಭಾಗದ ಜನರು ಕಡಿಮೆ ಹಣಕ್ಕೆ ಸಿಗುವ ಕೂಲಿಗಾರರನ್ನಾಗಿ ಕಾಣುತ್ತವೆ. ಇದು ಜನರ ಮತ್ತು ಸಾಂಸ್ಕೃತಿಕ ಶೋಷಣೆಯ ಭಾಗವಾಗುತ್ತದೆ. 2019 ರ ಫೆಬ್ರವರಿಯ ನಂತರದಲ್ಲಿ ದೇಶದಾದ್ಯಂತ ಆದಂತಹ ಲಾಕ್‌ಡೌನ್ ಸಂದರ್ಭದಲ್ಲಿ ಬೆಂಗಳೂರಿನ ಸ್ಲಂಗಳಲ್ಲಿ, ಅಪಾರ್ಟ್‌ಮೆಂಟ್ ಕಟ್ಟಡ ನಿರ್ಮಾಣಗಳ ಅಕ್ಕಪಕ್ಕದಲ್ಲಿ, ಸಣ್ಣ ಶೆಡ್‌ಗಳಲ್ಲಿ, ರಾಜಕಾಲುವೆಗಳ ಬದಿಯಲ್ಲಿ ಯಾವುದೇ ಮೂಲ ಸೌಕರ್ಯಗಳಿಲ್ಲದೆ ಬದುಕಿದ ವಾಸ್ತವ ಚಿತ್ರಣಗಳನ್ನು ಕಣ್ಣಾರೆ ಕಂಡಿದ್ದೇವೆ. ಬೃಹತ್ ನಗರ ಆಡಳಿತವು ತಾತ್ಕಾಲಿಕ ಶೆಡ್‌ಗಳನ್ನು ತೆರವುಗೊಳಿಸಿ, ತಂತಮ್ಮ ಊರುಗಳಿಗೆ ಹೋಗಲು ಆದೇಶಿಸಿದ್ದನ್ನು ನೋಡಿದ್ದೇವೆ.

ನೀರಾವರಿ ಪ್ರದೇಶಗಳಲ್ಲಿ ಕಬ್ಬು ಕಡಿಯಲು, ಇಟ್ಟಿಗೆ ತಯಾರಿಸಲು ಮೊದಲಾದ ಕೆಲಸಗಳಿಗೆ ಹೋಗುತ್ತಿರುವ ಕುಟುಂಬಗಳು ಜೀತಾದಾಳುಗಳಿಗಿಂತಲೂ ಧಾರುಣವಾಗಿ ದುಡಿಯುತ್ತಿದ್ದಾರೆ. ಕುಟುಂಬಗಳೊಂದಿಗೆ ಹೋಗುತ್ತಿರುವ ಮಕ್ಕಳ ಆರೋಗ್ಯ, ವಿದ್ಯಾಭ್ಯಾಸಗಳು ತೀರ ಹದಗೆಡುತ್ತಿವೆ. ಇಂತಹ ಹಲವಾರು ಸಮಸ್ಯೆಗಳೊಂದಿಗೆ, ಹೆಣ್ಣುಮಕ್ಕಳ ಮೇಲಾಗುತ್ತಿರುವ ಲೈಂಗಿಕ ದೌರ್ಜನ್ಯಗಳು ಜನರನ್ನು ಹೈರಾಣಾಗಿಸಿವೆ. ಗುಳೆ ಹೋದಾಗಲೆಲ್ಲಾ ಊರುಗಳು ವೃದ್ಧಾಶ್ರಮಗಳಾಗುತ್ತವೆ. ಇದು ಯಾವುದೋ ಬರಗಾಲದ ಸಂದರ್ಭದಲ್ಲಿ ನಡೆಯುವಂಥದ್ದಲ್ಲ, ಪ್ರತಿ ವರ್ಷದ ಸಾಮಾನ್ಯ ಸಂಗತಿ! ಹಾಗೆಯೇ ಉತ್ತರ ಕರ್ನಾಟಕದ ಭಾಗದಲ್ಲಿ ಗಡಿ, ಭಾಷೆ, ಮೂರ್ತಿಗಳ ಸ್ಥಾಪನೆ, ನದಿ ವಿಷಯಗಳಲ್ಲಿ ಆಗುವ ಜಗಳಗಳು ಪರೋಕ್ಷವಾಗಿ ಸಾಂಸ್ಕೃತಿಕ ಲೋಕವನ್ನು ಬಾಧಿಸುತ್ತಿವೆ. ಜಾತಿ, ಧರ್ಮಗಳ ಹೆಸರಲ್ಲಾಗುತ್ತಿರುವ ದೌರ್ಜನ್ಯಗಳು ಸಹಬಾಳ್ವೆ ಹಾಗೂ ಪರಂಪರೆಯ ಅಸ್ತಿತ್ವವನ್ನು ನಿಧಾನಕ್ಕೆ ಅಳಿಸಿಹಾಕುತ್ತಿವೆ. ಸರ್ಕಾರಿ ಯೋಜನೆಗಳ ಹಂಚಿಕೆ ಮತ್ತು ಅನುಷ್ಠಾನಗಳಲ್ಲಿ ತೋರುತ್ತಿರುವ ತರತಮ ಹಾಗೂ ವಿಳಂಬ ನೀತಿಯಿಂದ ಇಲ್ಲಿನ ಜನತೆಯ ಬಾಳು ಮೂರಾಬಟ್ಟೆಯಾಗುತ್ತಿದೆ. ಈ ದಾರುಣ ವಾಸ್ತವಕ್ಕೆ ಕಾರಣ ಯಾರು? ಪರಿಹಾರಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರಿಸುವರಾರು? ಆದರೂ ಇದು ಕಲ್ಯಾಣ ಕರ್ನಾಟಕ!

ಸಿಂಪಿ ಲಿಂಗಣ್ಣನವರು ಸಂಪಾದಿಸಿರುವ 'ಉತ್ತರ ಕರ್ನಾಟಕ ಜನಪದ ಕಥೆಗಳು' ಸಂಕಲನದಲ್ಲಿ 78 ಕಥೆಗಳಿವೆ. ಸಿಂಪಿ ಅವರು ಇಪ್ಪತ್ತು ವರ್ಷಗಳ ಅವಧಿಯಲ್ಲಿ ಕೇಳಿದ, ದಾಖಲಿಸಿದ ಕಥೆಗಳಿವು. ಕಥೆಗಳ ವಸ್ತು ಮತ್ತು ಉದ್ದೇಶಗಳ ಹಿನ್ನೆಲೆಯಲ್ಲಿ 'ರಮ್ಯ ಕಥೆಗಳು', 'ಅತಿಮಾನುಷ ಕಥೆಗಳು', 'ವಾಸ್ತವಿಕ ಕಥೆಗಳು', 'ಬುದ್ಧಿವಂತಿಕೆಯ ಕಥೆಗಳು', 'ವಿವರಣಾತ್ಮಕ ಕಥೆಗಳು', 'ನೀತಿ ಕಥೆಗಳು', 'ಪ್ರಾಣಿ ಕಥೆಗಳು', 'ವಿನೋದ ಕಥೆಗಳು' ಎಂದು ಎಂಟು ವಿಧಗಳಲ್ಲಿ ವಿಂಗಡಿಸಿದ್ದಾರೆ. ಇವುಗಳನ್ನು 'ಮುಂಬಯಿ ಕರ್ನಾಟಕ' ಮತ್ತು 'ಹೈದ್ರಾಬಾದ ಕರ್ನಾಟಕ' ಪ್ರದೇಶಗಳಲ್ಲಿ ಜನಪದ ಕಥೆಗಳೆನ್ನುವುದು ವಿಶೇಷ. ಈ ಕಥೆಗಳು ಫೇಸ್‌ಬುಕ್ ಪರಿಚಯಿಸುವ ಮನುಷ್ಯ ಸಂಬಂಧಗಳಿಂದ ಕಥಿಸಿದವಲ್ಲ. ಫೋಟೋ, ಲೈಕು, ಕಾಮೆಂಟು, ಶೇರ್‌ಗಳೆಂಬ ಚಟುವಟಿಕೆಗಳಿಂದ ಅಭಿವ್ಯಕ್ತವಾದವಲ್ಲ. ಸಹಜ ಮನುಷ್ಯ ಸಂಬಂಧಗಳ ಒಡನಾಟಗಳಿಂದ ಮೊಳೆದಂತವು. ಈ ಸಂಬಂಧಗಳಿಗೆ ಮೊಬೈಲ್, ಕಂಪ್ಯೂಟರ್, ಡಾಟಾ, ಆ್ಯಪ್‌ಗಳ ಅವಶ್ಯಕತೆಯಿಲ್ಲ. ತಾಯಿ–ಮಕ್ಕಳು, ಅಣ್ಣ–ತಮ್ಮಂದಿರು, ಅಕ್ಕ–ತಂಗಿ, ಬಂಧುಗಳು, ಸಮುದಾಯ, ಪ್ರಾಣಿ, ಪಕ್ಷಿ, ಮರಗಿಡ, ಕೀಟ, ಪರಿಸರ– ಎಂಬುವುಗಳ ಜೀವಂತಿಕೆಯ ಸಂವಾದದಿಂದ ಕಟ್ಟಲ್ಪಟ್ಟವು. ಈ ಕಟ್ಟುವಿಕೆಯಲ್ಲಿ ಮಾಣಿಕಮ್ಮ, ಅಡಿವೆಪ್ಪ, ಭಂಡೆ, ಭವತಾರಿಣಿ, ರೇವಪ್ಪ, ಕೇಶಟ್ಟಿ ಅಂತಹ ಸಾಮಾನ್ಯ ಮಹಿಳೆಯರ ಪ್ರತಿಭೆ ಅನನ್ಯವಾದುದು. ಇಂದಿನ ಧಾರಾವಾಹಿಗಳು ಮಹಿಳೆಯರ (ಅದರಲ್ಲೂ ಗ್ರಾಮೀಣ ಮಹಿಳೆಯರ) ಕಥನ ನಿರ್ಮಿತಿ ಪ್ರತಿಭೆಯನ್ನು; ಸೃಜನಶೀಲನೈಪುಣ್ಯತೆಗಳನ್ನು ಅಳಿಸಿಹಾಕುತ್ತಿವೆ. ಜನಪದರ ಸಾಹಿತ್ಯಿಕ ಅಭಿವ್ಯಕ್ತಿ ಮತ್ತು ಗ್ರಾಮೀಣ ಸಂವೇದನೆಯ ಮೇಲೆ, ಶಿಷ್ಟ ಸಾಹಿತ್ಯಿಕ ಮತ್ತು ನಗರ ಜೀವನದ ಸಾಂಸಾರಿಕ ವಿಘಟನಾ ಮಾದರಿಯ ಕಥನಗಳು ದಾಳಿಮಾಡುತ್ತಿವೆ. ಆಪ್ತ ಮಹಿಳೆಯರು ಪರಸ್ಪರ ಭೇಟಿಯಾದಾಗ ತಂತಮ್ಮ ಕಷ್ಟಸುಖಗಳಿಗೆ ಕೊಡವ ಮಹತ್ವಗಳಲ್ಲಿ ಧಾರಾವಾಹಿಗಳು ಮತ್ತು ಅವುಗಳಲ್ಲಿನ ಪಾತ್ರಗಳು ಸೇರುತ್ತವೆ. ತಮ್ಮ ಆಲೋಚನೆಯನ್ನು ಧಾರಾವಾಹಿಗಳಿಗೆ ಸೀಮಿತಗೊಳಿಸಿದ್ದಾರೆ. ಮಾಣಿಕಮ್ಮ, ಭವತಾರಿಣಿ ಅಂತಹ ಮಹಿಳೆಯರು ಜನಪದ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಸಾಮಾನ್ಯ–ವಾಗಿ ಟಿವಿ ಚಾನಲ್‌ಗಳಿಗೆ, ಧಾರಾವಾಹಿಗಳಿಗೆ ಮನರಂಜನೆಯನ್ನು ಕೊಡುವುದೇ ಪರಮ ಧ್ಯೇಯವಾಗಿದೆ ಅಂದು ಕೊಳ್ಳಬಹುದು. ಆದರೆ ಮನರಂಜನೆ ಕೊಡಲು ಬಂಡವಾಳವನ್ನು ಹೂಡುವವರ ಉದ್ದೇಶ ಇದಾಗಿರುವುದಿಲ್ಲ. ಮಾರ್ಕೆಟಿಂಗ್ ಥಿಯರಿ ಆಧಾರದ ಮೇಲೆ ಸಾಮೂಹಿಕ ಕಥನ ಸೃಷ್ಟಿಯ ನಿರಂತರೆಯನ್ನು ತಡೆಯುತ್ತಿದ್ದಾರೆ. ಹಾಗಾಗಿಯೇ ಒಂದು ಕಥೆ, ಹಲವು ಕಥೆಗಳು ಮೊಳೆವ ಮೊದಲೇ ನಾಶಪಡಿಸುತ್ತಿದೆ. 'ಮಾರ್ಕೆಟ್ ಥಿಯರಿ'ಯ ಲಾಭದ ಸೃಜನಶೀಲ ಅಭಿವ್ಯಕ್ತಿಯ ಸಂದರ್ಭದಲ್ಲಿ 'ಉತ್ತರ ಕರ್ನಾಟಕ ಜನಪದ ಕಥೆಗಳ' ಕುರಿತು ಚರ್ಚಿಸುವುದು ವಿಶೇಷ ಅನ್ನಿಸದು. ಆದರೆ ಜನಪದ ಕಥೆಗಳಲ್ಲಿರುವ ಜೀವನಾನುಭವದ ಅಭಿವ್ಯಕ್ತಿಯನ್ನು ಗ್ರಹಿಸದಿದ್ದರೆ ಮುಂಬರುವ ಕೇಡುಗಳನ್ನು ಯಾವ ಥಿಯರಿಗಳೂ ಭರಿಸಲಾರವು. ಹಾಗಾಗಿ ಜನಪದ ಕಥೆಗಳಲ್ಲಿ ನಿರೂಪಣೆಯಾಗಿರುವ

ವಿಭಿನ್ನ ನೆಲೆಗಳನ್ನು ಗುರುತಿಸಬೇಕಾಗುತ್ತದೆ. ಈ ಉದ್ದೇಶಕ್ಕಾಗಿ ಸಿಂಪಿ ಲಿಂಗಣ್ಣನವರ ಸಂಕಲನದ 'ವಾಸ್ತವಿಕ ಕಥೆಗಳ' ಭಾಗದ ಕೆಲವನ್ನು ಮಾತ್ರ ಆಯ್ದುಕೊಳ್ಳಲಾಗಿದೆ.

## ಅತ್ತೆ–ಸೊಸೆಯರ ಕಲಹ

ವಾಸ್ತವಿಕ ಕಥಾ ಭಾಗದ ಮೊದಲ ಕಥೆ **'ಲೆಕ್ಕಾಚಾರದ ಅತ್ತೆ'**. ಕಥಾ ಹಂದರದಲ್ಲಿ ತಾಯಿ–ಮಗ–ಸೊಸೆ ಇರುವ ಕುಟುಂಬವಿದೆ. ಲೆಕ್ಕಾಚಾರದ ತಾಯಿ ಅದರ ಯಜಮಾನಿ. ಇವಳಿಗೆ ತನ್ನ ಸೊಸೆಯನ್ನು ಹದ್ದುಬಸ್ತಿನಲ್ಲಿಡುವ ಹಪಾಹಪಿ ಇದೆ. ಜೊತೆಗೆ ದುರಾಸೆ ಮತ್ತು ಸಣ್ಣತನಗಳಿವೆ. ಹಾಗಾಗಿಯೇ ಅತ್ತೆ ಸೊಸೆಯ ಮಾತನ್ನು ಮೀರಿ, ತನ್ನ ಸಾವನ್ನು ತಾನೇ ಆಹ್ವಾನಿಸಿಕೊಳ್ಳುತ್ತಾಳೆ. ಇದು ಕಥೆಯ ಸಂಕ್ಷಿಪ್ತ ವಿವರ. ಕಥೆಗೆ ಇನ್ನೊಂದು ಮಗ್ಗುಲಿದೆ. ಅದು ಕುಟುಂಬದೊಳಗೆ ಅತ್ತೆ–ಸೊಸೆಯ ನಡುವೆ ಇಬ್ಬರಲ್ಲಿ ಒಬ್ಬರು ಬದುಕಿರುವವರೆಗೂ ಮುಗಿಯದಂತ ಶೀತಲಸಮರವನ್ನು ನಿರೂಪಿಸಿದೆ. ಕುಟುಂಬದ ಗಂಡು ಪಾತ್ರವು ಆರಂಭದಲ್ಲಿ ಯುದ್ಧನಿರತ ಬಲಿಷ್ಠ ರಾಷ್ಟ್ರಗಳ ಗುಂಪಿಗೆ ಸೇರದೆ ತಟಸ್ಥನೀತಿಯನ್ನು ಪಾಲಿಸುವವನು. ಮಾಡಬಾರದಂತಹ ಅಪರಾಧವನ್ನು ಮಾಡಿರದ ತನ್ನ ಹೆಂಡತಿಯನ್ನು ತಾಯಿ "ಈಕೆಯನ್ನು ಜೀವಸಹಿತ ಸುಟ್ಟು ಬರೋಣ" ಎಂದಾಗಲೂ ವಿವೇಚಿಸದೆ, ಸಮ್ಮತಿ ಸೂಚಿಸುತ್ತಾನೆ. ಅದರಂತೆ ಕಾರ್ಯಪ್ರವೃತ್ತರೂ ಆಗುತ್ತಾರೆ. ಕಡ್ಡಿಪೆಟ್ಟಿಗೆ ಕಥೆಗೆ ತಿರುವನ್ನು ಕೊಡುತ್ತದೆ. ಆಗ ಹೆಂಡತಿಯ ಸ್ಥಿತಿಗೆ ನೊಂದ ಗಂಡನು ಚಿತೆಯಿಂದ ಬಿಡಿಸಿ, ಮರವೇರಲು ಸೂಚಿಸಿ ಜೀವ ಉಳಿಸುತ್ತಾನೆ.

ಅದೇ ಮರದ ಕೆಳಗೆ ಊರಗಳ್ಳರು ತಾವು ಕದ್ದ ಮಾಲನ್ನು ಹಂಚಿಕೊಳ್ಳುತ್ತಿರುತ್ತಾರೆ. ಅದನ್ನು ಕಂಡ ಅವಳು ಚೀರುತ್ತಾಳೆ. ಪಿಶಾಚಿಯೆಂದು ಭಾವಿಸಿದ ಕಳ್ಳರು ಕಾಲು ಕೀಳುತ್ತಾರೆ. ಇದು ವಡ್ಡಾರಾಧನೆಯ 'ಸುಕುಮಾರಸ್ವಾಮಿಯ ಕಥೆ'ಯಲ್ಲಿನ ಗಂಭೀರೆಯ ಪ್ರಸಂಗವನ್ನು ನೆನಪಿಸುತ್ತದೆ.ಗಂಭೀರೆ ಕಳ್ಳರಿಂದ ಚಿನ್ನವನ್ನು ವಸೂಲಿ ಮಾಡುತ್ತಾಳೆ.ಜನಪದ ಕಥೆಯ ಹೆಣ್ಣು ತನ್ನ ಒಂದು ಚೀರಿನಿಂದಲೇ ಸಂಪತ್ತನ್ನು ತನ್ನದಾಗಿ ಮಾಡಿಕೊಳ್ಳುತ್ತಾಳೆ. ಆ ಸಂಪತ್ತಿನೊಂದಿಗೆ ತಾನು ಮನೆಗೆ ಮರಳಿಬರುತ್ತಾಳೆ. ಸತ್ಯವನ್ನು ಮುಚ್ಚಿಡುತ್ತಾಳೆ. ತಾನು ಸ್ವರ್ಗಕ್ಕೆ ಹೋಗಿ ಅಲ್ಲಿ ಮಾವನನ್ನು ಕಂಡಂತೆ ಕಥೆಯನ್ನು ನಿರೂಪಿಸುತ್ತಾಳೆ. ಆ ನಿರೂಪಣೆ ದುರಾಸೆಯ ಅತ್ತೆಯನ್ನು ನಿಂತಲ್ಲಿಯೇ ಚಿತೆ ಏರುವ ನಿರ್ಧಾರಕ್ಕೆ ಸಿದ್ಧಗೊಳಿಸುವಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿತ್ತು. ಸತ್ತ ತನ್ನ ಗಂಡನನ್ನು ಸೇರುವ ಆತುರಕ್ಕಿಂತಲೂ ಅವನು ಕೊಡುವ ಸಂಪತ್ತನ್ನು ತರುವ ಅಭೀಪ್ಸೆ ಅವಳಲ್ಲಿತ್ತು. ಆದ್ದರಿಂದಲೇ ತನ್ನ ಸೊಸೆಯ ಮಾತನ್ನು ಮೀರಿ ತನ್ನನ್ನೇ ದಹಿಸಿಕೊಳ್ಳಲು ಮುಂದಾಗುತ್ತಾಳೆ. ಇವಳ ಮಗ ತನ್ನ ಹೆಂಡಿತಿಯ ಸ್ಥಿತಿಗೆ ಮರುಗಿದಂತೆ, ತನ್ನ ತಾಯಿಯನ್ನು ಸುಡುವಾಗ ಮರುಗುವುದಿಲ್ಲ. ನಿಜಾಂಶವನ್ನು ತಿಳಿಸುವುದಿಲ್ಲ. ಹೀಗೆ ಮಗ–ಸೊಸೆಯರಿಬ್ಬರು ಆಕೆಯನ್ನು ಸತ್ತು ಹೋಗಿದ್ದ ಅವಳ ಗಂಡನೊಂದಿಗೆ ಒಂದು ಮಾಡಿ; ಇಹಲೋಕದಲ್ಲಿ ಇವರು ಸುಖವಾಗಿ ಬಾಳುತ್ತಾರೆ. ನಗರ ಸೇರಿದ ಈಗಿನ ಗಂಡ–ಹೆಂಡತಿಯರು ತಂದೆ–ತಾಯಿ ಅಥವಾ ಅತ್ತೆ–ಮಾವಂದಿರನ್ನು ಹಳ್ಳಿಗಳಲ್ಲಿ ಬಿಟ್ಟಿರುತ್ತಾರೆ. ಇಲ್ಲವೆಂದರೆ ವೃದ್ಧಾಶ್ರಮಗಳಿಗೆ ಸೇರಿಸುತ್ತಾರೆ. ಕಥೆಯ ಮಗ–ಗಂಡನ ಪಾತ್ರ ಮಾಡಿದಂತೆ, ತಮ್ಮ ಜವಾಬ್ದಾರಿಯನ್ನು ಮರೆತು, ಇಳಿ ವಯಸ್ಸಿನವರು ತಮ್ಮ ಉಸಿರು ಇರುವವರೆಗೂ ದಹಿಸಿಕೊಳ್ಳುತ್ತಲೇ ಇರುವಂತೆ ಮಾಡುತ್ತಾರೆ.

ಮೇಲಿನ ಕಥಾ ಕ್ರಿಯೆಗೆ **'ಮಾಡಿದ್ದೊಂದು ಆಗಿದ್ದೊಂದು'** ಎಂಬ ಮಾತು ಒಪ್ಪುತ್ತದೆ. ಈ ಮಾತು ಇನ್ನೊಂದು ಜನಪದ ಕಥೆಯ ಶೀರ್ಷಿಕೆಯೂ ಆಗಿದೆ. ಇದು ಕೂಡ ಅತ್ತೆ–ಸೊಸೆಯರ ಕದನ, ಕೊಲ್ಲುವ ಮಟ್ಟಿಗೆ ಹೋಗಿದ್ದನ್ನು ನಿರೂಪಿಸುತ್ತದೆ. ಸೊಸೆ ತನ್ನ ಅತ್ತೆಯನ್ನು ಕೊಲ್ಲಬೇಕೆಂದು ನಿರ್ಧರಿಸುತ್ತಾಳೆ. ಅತ್ತೆಯ ಜಾಣತನದಿಂದ ತನ್ನ ಮಗನ ಅತ್ತೆಯ ಸಾವಿನ ಮೂಲಕ ಕಥೆ ಕೊನೆಯಾಗುತ್ತದೆ. ನಮ್ಮ ಸಂಬಂಧಗಳನ್ನು ಜೀವಂತವಾಗಿಟ್ಟುಕೊಳ್ಳದೇ ನಾವೇ ಕೊಲ್ಲುತ್ತಿರುವುದನ್ನೇ ಕಥೆಗಳು ಹೇಳುತ್ತಿವೆ. ಹಾಗಾದರೆ ಸಂಬಂಧಗಳನ್ನು ಉಳಿಸಿಕೊಳ್ಳಬೇಕಾದುದು ಒಬ್ಬರ ಅಗತ್ಯವೆ? ಅಥವಾ ಸಮೂಹದ ಅನಿವಾರ್ಯವೆ? ಎಂಬ ಪ್ರಶ್ನೆಗಳನ್ನು ಎತ್ತಿ ಕೊಳ್ಳಬಹುದು. ಜನಪದ ಕಥೆಗಳು ಗ್ರಾಮ ಜೀವನದ ಸಂಬಂಧಗಳು, ಅದರಲ್ಲಿಯೂ ತಾಯ್ತನದ ಹಿನ್ನೆಲೆಯ ಬಂಧಗಳು ತಮ್ಮ ಮಮತೆಯನ್ನು ಏಕೆ ಮರೆಯುತ್ತವೆ? ಹೀಗಾಗಲೂ ಗಂಡಾಳ್ವಿಕೆಯ ಮೌಲ್ಯಗಳ ಪ್ರವೇಶದ ಸಂದರ್ಭಗಳನ್ನು ಅಲ್ಲಗೆಳೆಯಲು ಆಗದು.

ಹೀಗೆ ಸಣ್ಣ ಕುಟುಂಬದ ಸುಖವನ್ನು ಒಂದು ಸಾವು ತಂದುಕೊಡುತ್ತದೆ.ಕುಟುಂಬದವರೊಂದಿಗೆ ನಮ್ಮ ಬಾಂಧವ್ಯ ಹೇಗಿರುತ್ತದೆ?ನಾವು ಹೇಗೆ ಯೋಚಿಸುತ್ತೇವೆ?ಯಾವುದಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತೇವೆ? ಅನ್ನುವುದರ ಮೇಲೆ ನಮ್ಮ ನಾಳೆಗಳು ನಿರ್ಧಾರಗೊಳ್ಳುತ್ತವೆ. ಇಲ್ಲವಾದಲ್ಲಿ ಮನೋಸಾಮರ್ಥ್ಯವಿಲ್ಲದ ಅತ್ತೆ–ಸೊಸೆಯರ ಪಾತ್ರಗಳಂತೆ ವರ್ತಮಾನವನ್ನು ಕಳೆದುಕೊಳ್ಳುತ್ತೇವೆ ಎಂಬುದು ಕಥೆಗಳ ಧ್ವನಿಯಾಗಿದೆ.

ಅತ್ತೆ–ಸೊಸೆಯರ ಅಧಿಕಾರದ ಸಂಬಂಧವನ್ನು **'ಸೊಸೆಗೇನು ಅಧಿಕಾರ?'** ಎಂಬ ಕಥೆ ನಿರೂಪಿಸಿದೆ. ಕಥೆಯ ತಲೆಬರಹವು ಪ್ರಶ್ನಾರ್ಥಕವಾಗಿದೆ. ಈ ಪ್ರಶ್ನೆಯಲ್ಲಿರುವ ಸೊಸೆ ಮತ್ತು ಅಧಿಕಾರ ಎಂಬೆರಡು ಪದಗಳು ಗಂಡ/ಅತ್ತೆಮನೆಯ ಒಳಗಿನ ಸಂಬಂಧ ಮತ್ತು ಆಳ್ವಿಕೆಯನ್ನು ಸೂಚಿಸುತ್ತವೆ. ಅಂದರೆ ಸಂಬಂಧ ಮತ್ತು ಮನೆಯಾಳ್ವಿಕೆಯನ್ನು ಅತ್ತೆ ಎಂಬುವವಳ ಹಿಡಿತದಲ್ಲಿರುವುದನ್ನು ವ್ಯಕ್ತಪಡಿಸುತ್ತಿದೆ. ಮನೆಯ ಯಜಮಾನಿಕೆಯನ್ನು ಬಿಟ್ಟುಕೊಡದ ಅತ್ತೆಯ ಹಕ್ಕು ಚಲಾವಣೆ 'ಮಜ್ಜಿಗೆ ಇಲ್ಲ' ಎನ್ನುವ ಸೊಸೆಯ 'ಮಾತ'ನ್ನೂ ಪ್ರಶ್ನಿಸುತ್ತದೆ. ತವರು ಮನೆಯು ಮಾತುಕಲಿಸಿದರೆ; ಗಂಡನ ಮನೆ ಅವಳ ಮಾತಿನ ಮೇಲೆ ಹಿಡಿತ ಸಾಧಿಸಲು ಹವಣಿಸುತ್ತದೆ. ಒಂದು ಸಹಜ ಅಭಿವ್ಯಕ್ತಿ; ಇನ್ನೊಂದು ನಿಬಂಧನೆಗೊಳಪಟ್ಟ ಶಬ್ದಗಳ ಪುನರುಚ್ಚಾರ ಎನ್ನಬಹುದು. ಅತ್ತೆಯ ಮಾತುಗಳಿಗೆ ಸೊಸೆ ಕಿವಿಯಾಗಿ ಆಕೆಯ ಶಬ್ದಗಳನ್ನು ಉಚ್ಚಾರಿಸಬೇಕಾಗುತ್ತದೆ. ಹೀಗೆ ಭಾಷೆಕುಟುಂಬದೊಳಗಿನ ಸಂಬಂಧ ಮತ್ತು ಅಧಿಕಾರಗಳನ್ನು ನಿರ್ಧರಿಸುವ ಸಾಧನವಾಗಿದೆ.

## ಸುಖ-ದುಃಖಗಳ ಸಮರಸವೇ ಜೀವನ

ಮೊದಲು ಭೂಮಿಗೆ ಬಂದ ಆ್ಯಡಂ ಮತ್ತು ಈವ್, ಸೃಷ್ಟಿ ಮತ್ತು ಆನಂತರದ ಮಾನವ ಜಗತ್ತಿನ ಬೆಳವಣಿಗೆಯನ್ನು **'ಅಳಬೇಕೆಂದರೆ'** ಕಥೆಯು ಪೀಠಿಕೆಯಲ್ಲಿ ಹೊಂದಿದೆ. ಈ ಜನಪದ ಕಥೆ ಆರಂಭದ ಮಾನವ ಸಂತಾನವು ಸಾವುಗಳನ್ನೇ ಕಾಣಲಿಲ್ಲ. ಎಲ್ಲೆಲ್ಲಿಯೂ ಹುಟ್ಟಿದ ಸುದ್ದಿಯೇ. ಜೊತೆಗೆ ಸುಖ ಸಂತೋಷಗಳಿಂದಲೇ ಜೀವನ ವಾಸಿಸುತ್ತಿತ್ತು ಎನ್ನುತ್ತದೆ. ಅಂದರೆ ಸಾವೇ ಇರದ ಮಾನವ ಜಗತ್ತಿನ ಲೌಕಿಕ ಬದುಕನ್ನು ನಿರೂಪಿಸುತ್ತದೆ. ಅದರಲ್ಲಿಯೂ ಹಲವು ತಲೆಮಾರುಗಳನ್ನೇ ಕಂಡ ಅಜ್ಜಿಯೊಬ್ಬಳ ಒಂದು ದಿನದ ಘಟನೆಯನ್ನು ಕೇಂದ್ರವಾಗಿಟ್ಟುಕೊಂಡಿದೆ. ಆ ಕೇಂದ್ರದಲ್ಲಿ ಚಿಕ್ಕ ಮಕ್ಕಳ ಪಾತ್ರಗಳು ಪೂರಕವಾಗಿ ಬರುತ್ತವೆ. ಸುಖ ಜೀವನ-ವನ್ನೇ ಕಂಡುಂಡ ಅಜ್ಜಿಗೆ ಒಂದು ದಿವಸ ವಿಪರೀತ ಬೇಸಾರವಾಗುತ್ತದೆ. ಎದೆ ಜಡಗೊಂಡು, ಕುಗ್ಗಿ ಹೋಗುತ್ತಾಳೆ. ಆಗ "ಹಿಟ್ಟಿನಿಂದ ಒಂದು ಕೂಸು ಮಾಡಿ, ಅದು ಸತ್ತುಹೋಯಿತೆಂದು ಬಗೆದು, ಕ್ಷಣಹೊತ್ತು ಅತ್ತುಬಿಟ್ಟರೆ ಮನಸ್ಸು ಹಗುರಾಗುವದೆಂದು" ಯೋಚಿಸು-ತ್ತಾಳೆ. ಕಡಲೆ ಹಿಟ್ಟಿನಿಂದ ಗೊಂಬೆ ಮಾಡಿ ಮುಗಿಸುವುದರೊಳಗೆ ಆಟವಾಡಲು ಹೋದ ಬಾಲಕರೆಲ್ಲರೂ ಹಿಂತಿರುಗುತ್ತಾರೆ.ಅಜ್ಜಿ ನನಗೆ ಅದುಬೇಕು, ಇದು ಬೇಕೆಂದು ಅವಳನ್ನು ಎಳೆದುಕೊಂಡು ಅಡುಗೆ ಮನೆಗೆ ಹೋಗುತ್ತವೆ. ಆ ಬಾಲಕರ ಧ್ವನಿ ಮುಗಿಯುವಷ್ಟರಲ್ಲಿ ಹಿಟ್ಟಿನ ಗೊಂಬೆ ಕೂಸಾಗಿ ಉಪ್ಪಿನಕಾಯಿ ಕೇಳುತ್ತದೆ. ಅಜ್ಜಿ ಚಕಿತಗೊಂಡು "ಗೊಂಬೆಯ ಹೆಣವನ್ನು ಮುಂದಿರಿಸಿಕೊಂಡು ಅತ್ತು ಕಣ್ಣೀರು ಸುರಿದು ಮನಸ್ಸು ಹಗುರಮಾಡಿಕೊಳ್ಳಬೇಕೆಂದರೆ ಹಿಟ್ಟಿನ ಗೊಂಬೆಯೂ ಜೀವಂತವಾಗಬೇಕೆ? ಅಳುವುದು ನನ್ನ ದೈವದಲ್ಲಿಲ್ಲ" ಎಂದು ಕೊಳ್ಳುತ್ತಾಳೆ.

ಇಲ್ಲಿ ಅಜ್ಜಿಗೆ ಸುಖ-ಸಂತೋಷಗಳೇ ಬೇಸರ ತರಿಸಿವೆ. ಈ ಬೇಸರವನ್ನು ಕಳೆಯಲು ಆಕೆ ಅಳಬೇಕಿದೆ. ಹಿಟ್ಟಿನ ಗೊಂಬೆಯ ಹೆಣ ಅದಕ್ಕೊಂದು ನೆಪ. ಜನ್ನನ **'ಯಶೋಧರ ಚರಿತೆ'**ಯಲ್ಲಿ ಚಂದ್ರಮತಿ ತನ್ನ ಮಗ ಯಶೋಧರನು ಕೆಟ್ಟ ಕನಸಿನ ಫಲವನ್ನು ಕಳೆದುಕೊಳ್ಳಲು ಹಿಟ್ಟಿನ ಹುಂಜವನ್ನು ಬಲಿಕೊಡುವಂತೆ ಸೂಚಿಸಿದ ಪ್ರಸಂಗವಿಲ್ಲಿ ಉಲ್ಲೇಖಾರ್ಹ. ಯಶೋಧರ ಲೌಕಿಕ ಬದುಕಿಗೆ ರೋಸಿ ಹೋಗಿ ಬಲಿಕೊಡಲು ಒಪ್ಪಿಕೊಳ್ಳುತ್ತಾನೆ. ಈ ಅಜ್ಜಿ ಅಳಲು ಮೃತ ಗೊಂಬೆಯನ್ನು ಸಿದ್ಧಪಡಿಸಿಕೊಳ್ಳುತ್ತಾಳೆ. ತಾವು 'ಅನುಭವಿಸಿದ' ಜೀವನದಿಂದ ಇನ್ನೇನೋ ಕಳೆದುಕೊಂಡಿದ್ದೇವೆ ಎನಿಸಿರುವುದು ಇಬ್ಬರಿಗೂ ಅನ್ವಯವಾಗುತ್ತದೆ. ಉದ್ದೇಶ ಬೇರೆ ಬೇರೆ ಎಂಬುದನ್ನು ಇಲ್ಲಿ ನೆನಪಿಟ್ಟುಕೊಳ್ಳಬೇಕು.

ಜನಪದರು ಹೆಣ್ಣಿಗೆ ವಿಶೇಷ ಮಹತ್ವವನ್ನು ಕೊಡುತ್ತಾರೆ. ಅದರಲ್ಲಿಯೂ ಹಲವು ಮಿತಿಗಳಿವೆ. ಆ ಚರ್ಚೆ ಇಲ್ಲಿ ಅನಗತ್ಯ. ಅಜ್ಜಿಯ ವಿಷಯದಲ್ಲಿ ಮಕ್ಕಳು ಗೋಳು ಹೊಯ್ದುಕೊಂಡರು ಅವಳು ನೊಂದುಕೊಳ್ಳುವುದಿಲ್ಲ. ಕುಟುಂಬದ ಕೆಲಸಗಳನ್ನು ಮಾಡುವುದರಲ್ಲಿ ಎಳ್ಳಷ್ಟೂ ಸಿಡುಕಿಲ್ಲ. ಆದರೆ ಜೀವ ಕೊಡುವಂತಹ ಶಕ್ತಿಯನ್ನು ಹೊಂದಿರುವ ಹೆಣ್ಣುಜೀವ ಕಣ್ಣೀರಹಾಕಬಾರದು. ಅದೂ ಸಾವಿಗಾಗಿ ಹಾಕಲೇ ಬಾರದು. ಅವಳ ಕಣ್ಣೀರು ಮಾನವ ಜಗತ್ತಿಗೆ ಸುನಾಮಿಯಾಗಬಹುದೆಂಬ ಆಶಯವನ್ನು ಗ್ರಹಿಸಬಹುದು. ಹಾಗೆಯೇ ಕಥೆಯಲ್ಲಿ ಅಜ್ಜಿಯ ಭಾವನೆಗಳನ್ನು ಕೇಳುವಂತಹ ಸಮಾನ ಮನಸ್ಕರಿಲ್ಲ. ಕೇಳುವವರಿಲ್ಲ. ಹೇಳಿಕೊಂಡರೂ ಅರ್ಥ ಮಾಡಿಕೊಳ್ಳದ ಬಾಲಕರು! ಬದುಕಿನ ಸಾರವನ್ನು ಅನುಭವಿಸಿದ ಅಜ್ಜಿ; ಬದುಕನ್ನು ಕಲಿಯಲು ಅಡ್ಡ ಬಡ್ಡ ಹೆಜ್ಜೆ ಹಾಕುವ ಬಾಲಕರು-ಹೀಗೆ ಎರಡು ಭಿನ್ನ ತಲೆಮಾರುಗಳ ಅವ್ಯಕ್ತ ಸಂಕಥನವನ್ನು ನಮ್ಮೆದುರಿಗೆ ಇಟ್ಟಿದೆ.

## 'ಅಳಿಯ ಮನೆ ತೊಳಿಯ'

**'ಅಳಿಯನ ಅರ್ಹತೆ'** ಕಥೆಯು ಮನೆ ಅಳಿಯನಾಗುವ ವರಾನ್ವೇಷಣೆಯ ವಸ್ತುವನ್ನು ಹೊಂದಿದೆ. 'ಇದ್ದವನಿಗೆ ಕಾಪಾಡಿಕೊಳ್ಳುವ ಚಿಂತೆ' ಎಂಬಂತೆ ಇಲ್ಲಿನ ಜಿಪುಣ ಶ್ರೀಮಂತನು ತನಗಿದ್ದ ಒಬ್ಬಳೇ ಮಗಳಿಗಾಗಿ ಹಲವಾರು ಗಂಡುಗಳ ಅರ್ಹತೆ ಗಳನ್ನು ಅಳೆದು ತೂಗಿ ನೋಡಿರುತ್ತಾನೆ. ಇವನ ತೂಕಕ್ಕೆ ಯಾರೂ ತೂಗಿರುವುದಿಲ್ಲ. ಬಕ್ಕಣಿಗಿ ಗ್ರಾಮದ ಸಾಮಾನ್ಯ ಕುಟುಂಬದ ಸಹೋದರರಿಬ್ಬರು ವರ ಪರೀಕ್ಷೆಗೆ ಹಾಜರಾಗುತ್ತಾರೆ. ಅಣ್ಣ ನಪಾಸಾಗುತ್ತಾನೆ. ಚಿಕ್ಕವನಲ್ಲಿ ಶ್ರೀಮಂತನು "ಈ ಆಸ್ತಿಯನ್ನೆಲ್ಲ ನೀನೆಂತು ಕಾಪಾಡಿಕೊಂಡು ಹೋಗಬಲ್ಲೆ? ಯಾವ ಯುಕ್ತಿಯನ್ನುಅನುಸರಿಸುವಿ?" ಎಂದು ಪ್ರಶ್ನಿಸುತ್ತಾನೆ. "ಒಂದು ದಾರದೆಳೆಗೆ ಒಂದು ರೊಟ್ಟಿ ಕಟ್ಟಿ ಅದನ್ನು ತೂಗಿಬಿಡುವುದು. ಹತ್ತಿರದಲ್ಲಿ ಒಂದು ತಂಬಿಗೆ ಕುಡಿಯುವ ನೀರನ್ನು ತುಂಬಿಟ್ಟುಕೊಳ್ಳುವುದು. ಮೊದಲು ನೇತಾಡುವ ರೊಟ್ಟಿಯನ್ನು ಕಣ್ತುಂಬ ನೋಡಿ, ಆ ಬಳಿಕ ತಂಬಿಗೆಯೊಳಗಿನ ನೀರಿನ ಕಡೆಗೆ ಕಣ್ಣು ಹೊರಳಿಸಿದರೆ ತೀರಿತು ನನ್ನ ಊಟ. ತರುವಾಯ ಅಡಿಕೆಹೋಳು ಇದ್ದರೂ ಸರಿ, ಇರದಿದ್ದರೂ ಸರಿ. ಸಾಗಿತು ನಮ್ಮ ಗಾಡಿ" ಎಂದು ಉತ್ತರಿಸುತ್ತಾನೆ.

ಜಿಪುಣನಾದವನಿಗೆ ತನಗಿಂತಲೂ ಜಿಪುಣತನ ಮಾಡುವ ವ್ಯಕ್ತಿ ಮೆಚ್ಚುಗೆ ಆಗುತ್ತಾನೆ. ಅಂತಹವನೊಂದಿಗೆ ಸ್ನೇಹ, ಸಂಬಂಧಗಳನ್ನು ಮಾಡುತ್ತಾನೆ. ಇವುಗಳಿಂದ ದುಂದುವೆಚ್ಚವಾಗುವುದಿಲ್ಲ. ಪರಸ್ಪರರಿಬ್ಬರೂ ಅನವಶ್ಯಕವಾಗಿ ವ್ಯಯ ಮಾಡಲಾರರು. ಚಟಗಳಿಂದ ದೂರವಿರುತ್ತಾರೆ. ಅವರದ್ದೇನಿದ್ದರೂ ತಲೆಯಲ್ಲಿದ್ದ ಯುಕ್ತಿಯನ್ನು ಖರ್ಚುಮಾಡಿ ಲಾಭಗಳಿಸುವುದಾಗಿರುತ್ತದೆ. ಈ ಎಲ್ಲಾ ಸಂಗತಿಗಳನ್ನು ಮನಗಂಡಿದ್ದ ಶ್ರೀಮಂತನು ಚಿಕ್ಕವನ ಅರ್ಹತೆಯನ್ನು ಮೆಚ್ಚಿಕೊಳ್ಳುತ್ತಾನೆ. ತನ್ನ ಮಗಳನ್ನು ಕೊಟ್ಟು ಮದುವೆ ಮಾಡುತ್ತಾನೆ. ಕೊನೆಗೆ ಆದದ್ದೇ ಬೇರೆ. ಅಳಿಯ ತನ್ನ 'ಜಿಪುಣನತದ ಅರ್ಹತೆ'ಯಿಂದಾಗಿಯೇ ಮಾವ ಕೂಡಿಟ್ಟ ಸೊತ್ತನ್ನು ಯಾವ ಶ್ರಮವಿಲ್ಲದೆ ಗಳಿಸಿದನು. ಸಮಸ್ತ ಸಂಪತ್ತನ್ನು ಉಪಭೋಗಿಸುತ್ತ ಸುಖದಿಂದ 'ಅಳಿಯ ಮನೆ ತೊಳಿಯ' ಎನ್ನುವಂತೆ ಕಾಲ ಕಳೆಯುತ್ತಾನೆ. ಜೀನಹಂಕನಾದ ಶ್ರೀಮಂತ ತಾನೂ ತಿನ್ನದೆ, ಪರರಿಗಿಕ್ಕದೆ ಬಚ್ಚಿಟ್ಟು ಮನೆ ಅಳಿಯನಪಾಲು ಮಾಡುತ್ತಾನೆ. ಜಿಪುಣ ತನ್ನ ಮಗಳಿಗಿಂತ ಸಂಪತ್ತಿಗೆ ಪ್ರಾಮುಖ್ಯತೆಯನ್ನು ಕೊಡುವುದನ್ನು ಗಮನಿಸಬೇಕು. ಹಾಗೆಯೇ ಸಂಪತ್ತು ಮತ್ತು ಹೆಣ್ಣನ್ನು ಸೂಕ್ತನಾದ 'ಗಂಡಿ'ನ ಕೈಗೆ ಒಪ್ಪಿಸಬೇಕೆಂಬ ಪುರುಷಾಳ್ವಿಕೆಯ ಸಂವಿಧಾನದ ವಿಧಿಗಳಿರುವುದನ್ನು ಗುರುತಿಸಬಹುದು.

## ಅಂತರ್‌ದೃಷ್ಟಿಯ ಅನಾರೋಗ್ಯ

ಹೆಂಡತಿಯ ಅನೈತಿಕ ಸಂಬಂಧದ ಅನುಮಾನವನ್ನು ಕಳೆಯುವಂತಹ ವಸ್ತುವನ್ನು **'ತಂಗಿಗೊಬ್ಬ ಅಕ್ಕ'** ಕಥೆಯು ಒಳಗೊಂಡಿದೆ. ಒಂದೂರಿನ ಅಕ್ಕ-ತಮ್ಮರು ಚಿಕ್ಕಂದಿನಲ್ಲೇ ತಂದೆ-ತಾಯಿಯರನ್ನು ಕಳೆದುಕೊಂಡಿರುತ್ತಾರೆ. ದೊಡ್ಡವಳಾದ ಅಕ್ಕನಿಗೆ ಮದುವೆಯಾಗುತ್ತದೆ. ಮಗಳು ಹುಟ್ಟುತ್ತಾಳೆ. ಮಗಳು ಚಿಕ್ಕವಳಾಗಿದ್ದಾಗಲೆ ಅಕ್ಕ ತೀರಿಹೋಗುತ್ತಾಳೆ. ಅಕ್ಕಳ ಮಗಳನ್ನು ಜೋಪಾನ ಮಾಡುವುದು ತಮ್ಮನಿಗೆ ಅನಿವಾರ್ಯವಾಗುತ್ತದೆ. ಕಾಲಾನಂತರ ಅಕ್ಕಳ ಮಗಳನ್ನೇ ಮದುವೆ ಮಾಡಿಕೊಂಡು, ಇಬ್ಬರು ಸುಖವಾಗಿ ಸಂಸಾರ ಮಾಡುತ್ತಿರುತ್ತಾರೆ. ಹಾಲಿನಂಥ ಜೀವನಕ್ಕೆ ನೆರೆಮನೆಯ ಕಾಮಣ್ಣನೊಬ್ಬ ಹುಳಿ ಹಿಂಡುತ್ತಾನೆ. ಗಂಡನ ಮನಸ್ಸು ಒಡೆಯುತ್ತದೆ. ಹೆಂಡತಿಯ ಮೇಲೆ ಸಂಶಯಗೊಳ್ಳುತ್ತಾನೆ. ಪರಿಹರಿಸುವಂತೆ ಪ್ರಶ್ನಿಸುತ್ತಾನೆ. ಅವಳು ಸಮ್ಮತಿಸುತ್ತಾಳೆ. ಅದಕ್ಕಾಗಿ ಇಬ್ಬರೂ ಪ್ರಯಾಣ ಬೆಳೆಸುತ್ತಾರೆ. ಮಾರ್ಗಮಧ್ಯದಲ್ಲಿ ಹಸಿವು ತೀರಿಸಿಕೊಳ್ಳಲು ನಿಲ್ಲುತ್ತಾರೆ. ಅಲ್ಲಿಯೇ ಇದ್ದ ತೋಟದ ಬಾವಿಗೆ ನೀರು ತರಲು ಗಂಡ ಹೋಗುತ್ತಾನೆ. ಅದುಆಳವಾದ ಬಾವಿ. ಆ ಬಾವಿಯಲ್ಲಿ ಎಂದಿಗೂ ನೀರು ತುಂಬಿರುವುದಿಲ್ಲ. ಇದ್ದ ನೀರಲ್ಲಿಯೇ ಗಂಡ ಕೈಕಾಲ ತೊಳೆದುಕೊಂಡು ಮೇಲೆ ಬರುತ್ತಾನೆ. ಆಮೇಲೆ ಹೆಂಡತಿ ಬಾವಿಯ ನಾಲ್ಕು ಮೆಟ್ಟಿಲುಗಳನ್ನು ಇಳಿಯುತ್ತಿದ್ದಂತೆ ಬಾವಿ ತುಂಬಾ ನೀರು ಏರುತ್ತದೆ. ಈ ವರ್ತಮಾನ ತೋಟದ ಒಡತಿಗೆ ತಲುಪುತ್ತದೆ. ಒಡತಿ ಈಕೆಯನ್ನು ತಂಗಿಯೆಂದೇ ಸಂಬೋಧಿಸುತ್ತಾಳೆ. ಆತ್ಮೀಯವಾಗಿ ಉಪಚರಿಸುತ್ತಾಳೆ. ಇದರಿಂದ ಗಂಡನ ಸಂಶಯವು ದೂರವಾಗುತ್ತದೆ. ಮೊದಲಿಗಿಂತಲೂ ಸುಖವಾಗಿ ಜೀವನ ನಡೆಸುತ್ತಾರೆ.

ಬಹುತೇಕ ಸಂಬಂಧಗಳು ಅನೈತಿಕ ಉದ್ದೇಶಗಳಿಂದಾಗಿಯೇ ಏರ್ಪಟ್ಟಿರುವುದಿಲ್ಲ. ನಮ್ಮಲ್ಲಿರುವ ಅಪನಂಬಿಕೆಗಳು ಸಂಬಂಧಗಳಲ್ಲಿ ಅನೈತಿಕತೆಯನ್ನು ಹುಡುಕುವುದಕ್ಕೆ ಪ್ರೇರೇಪಿಸುತ್ತವೆ. ಇದೊಂದು ರೀತಿ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳುವ ಪ್ರಯತ್ನವಾಗುತ್ತದೆ. ದೌರ್ಬಲ್ಯಗಳನ್ನು ಮರೆಮಾಚುವಂತೆ ಒಡನಾಟವಿರುವ ಪರಿಸರವೇ ಪ್ರಚೋದಿಸುತ್ತಿರುತ್ತದೆ. ಅದೇ ಪರಿಸರ ಕೊಡುವ ಪ್ರಜ್ಞೆಯೆಂಬ ಚಿಕಿತ್ಸಕ ಸ್ವಾನುಭವಗಳು ಮತ್ತು ಲೋಕಾನುಭವಗಳಿಂದ ದೂರ ಉಳಿದಾಗ ಪರಿಸ್ಥಿತಿಗಳು ಕೈಮೀರಿ ಬಿಡುತ್ತವೆ. ಹಾಗಾಗಿಯೇ ಕೌಟುಂಬಿಕ ಕಲಹಗಳು ಹೆಚ್ಚಾಗುತ್ತಿವೆ. ಸಂಬಂಧಗಳು ಕೊಲೆ, ಆತ್ಮಹತ್ಯೆಗಳಿಂದ ಅಂತ್ಯವಾಗುತ್ತಿವೆ. ಮಕ್ಕಳು ಅನಾಥ-ರಾಗುತ್ತಿದ್ದಾರೆ. ಇಂತಹ ಧಾರುಣತೆಗೆ ಕಥೆಯಲ್ಲಿನ ಗಂಡನೆಂಬ ಪಾತ್ರವು ಮೂಲವಾಗಬಾರದೆಂಬ ಜನಪದ ಆಶಯವು, ಬಾವಿಯ ನೀರಾಗಿ ಉಕ್ಕಿ ಅವನ ಸಂಶಯವನ್ನು ತೊಳೆದಿದೆ. ನೀರು ಬಾವಿಯಲ್ಲಿ ಉಕ್ಕಿದ್ದರಿಂದಲೇ 'ತಂಗಿಗೊಬ್ಬ ಅಕ್ಕ' ಎಂಬ ರಕ್ತ ಸಂಬಂಧವನ್ನು ಮೀರಿದ ಬಂಧುತ್ವ ಸಾಧ್ಯವಾಗಿದೆ. ಕೆಲವು ಸಂಬಂಧಗಳು ಜೀವ ಜೀವನಗಳೆರಡನ್ನೂ ಬಲಿ ಪಡೆಯಬಲ್ಲವು. ಇನ್ನೂ ಕೆಲವು ಸಂಬಂಧಗಳಿಗೇ ಚೈತನ್ಯ ತುಂಬಬಲ್ಲವು. ಕಥೆಯ ಬಾವಿ ನೀರು ಈ ಕೆಲಸವನ್ನು ಮಾಡಿದೆ. ಹಾಗಾಗಿ ಅಂತರ್‌ದೃಷ್ಟಿಯು ಅನಾರೋಗ್ಯವಾಗಿದ್ದರೆ ಕಂಡದ್ದೆಲ್ಲಾ ರೋಗಗ್ರಸ್ತವಾಗಿಯೇ ಇರುತ್ತದೆ.

**'ಪಿಸುಣನಿಗೆ ಉಪಕಾರ'**ಕಥೆಗೆ ಈ ತಾತ್ವಿಕತೆಯನ್ನು ಅನ್ವಯಿಸಬಹುದಾಗಿದೆ.ಇಲ್ಲಿಚಾಡಿಕೋರ ಕುರುಡನಾದ ಮುದುಕನಿಗೆಸಹಾಯ ಮಾಡಿದವಿವಾಹ ಸ್ತ್ರೀಯನ್ನು ತನ್ನ ಹೆಂಡತಿಯೆಂದು ವಾದಿಸುತ್ತಾನೆ. ಊರಿನ ಗೌಡರಲ್ಲಿ ದೂರು ದಾಖಲಿಸುತ್ತಾನೆ. ಗೌಡನು ಮುದುಕ, ಮದುವೆಯಾದ ಹೆಣ್ಣನ್ನು ಮತ್ತು ಈಕೆಯ ಗಂಡನನ್ನು ಪ್ರತ್ಯೇಕವಾಗಿ ಬಂಧಿಸಿಡುತ್ತಾನೆ. ನಿಜವಾದ ಗಂಡ-ಹೆಂಡತಿಯರು ಸಹಾಯ ಮಾಡಿದ್ದೇ ತಪ್ಪೆನ್ನುವುದನ್ನು ದುಃಖಿತರಾಗಿ ಹೊರಹಾಕುತ್ತಾರೆ.ಆದರೆ ಕುರುಡ ಮುದುಕನು "ಮನಸ್ಸಿನಂತೆ ಮಹಾದೇವ!"ಎನ್ನುತ್ತಲೇ ಇರುತ್ತಾನೆ. ಆ ಕೋಣೆಯಲ್ಲಿ ಇವರಾಡುವ ಮಾತುಗಳ ಆಧಾರದಲ್ಲಿ ಈ ಹೆಣ್ಣು ಮಗಳು ಕುರುಡನ ಹೆಂಡತಿಯಲ್ಲ ಎಂಬುದನ್ನು ತೀರ್ಮಾನಿಸುತ್ತಾನೆ. "ಮನಸ್ಸಿನಂತೆ ಮಹಾದೇವ" ಈ ಮಾತು ರೋಗಗ್ರಸ್ತವಾದ ಅಂತರ್‌ದೃಷ್ಟಿಯ ಅಭಿವ್ಯಕ್ತಿಯಾಗಬಹುದು.ಆದರೆ ಇಷ್ಟು ಸರಳವಾಗಿ ಹೇಳಲೂ ಬಾರದು. ಕುರುಡ ಯೌವನದಲ್ಲಿದ್ದಾಗ ಆತನ ಹೆಂಡತಿಯೂ ಬೇರೆಯವರೊಂದಿಗೆ ಹೋಗಿರಬಹುದು. ಈ ಇಳಿ ವಯಸ್ಸಿನ ತನ್ನ ಮೇಲೆ ಕರುಣೆ ತೋರಿದ ಹೆಣ್ಣು, ಬಾಳಿನುದ್ದಕ್ಕೂ ಕಲ್ಲು ಮುಳ್ಳುಗಳಿರುವ ದಾರಿಗೆ ಕಣ್ಣಾಗಬಲ್ಲಳು ಎಂಬ ಆಸೆಯೂ ಇರಬಹುದು. ಹಾಗೆಯೆ ಕುರುಡನಾದವನನ್ನು ಕೈಬಿಟ್ಟ ಕೌಟುಂಬಿಕ ವ್ಯವಸ್ಥೆಯ ಬಗ್ಗೆಯೂ ಪ್ರಶ್ನಿಸಬೇಕಾಗುತ್ತದೆ.

## 'ಕುದುರೆ' ಹತ್ತಿದ ಕ್ಷಣಕ್ಕೆ ಬೀಗಬಾರದು

**'ತಂದೆ ಮಗ'** ಕಥೆಯು ಬಟ್ಟೆ ವ್ಯಾಪಾರಿ ಶಿವಲಿಂಗಪ್ಪ ಮತ್ತು ಆತನ ಮಗನ ನಡುವೆ ಎದ್ದ ತಗಾದೆಗೆ ತಾರ್ಕಿಕ ಅಂತ್ಯ ಕಾಣಿಸುತ್ತದೆ. ಮುದುಕನಾದ ಶಿವಲಿಂಗಪ್ಪನಿಗೆ ತನ್ನೆಲ್ಲಾ ವಹಿವಾಟುಗಳನ್ನು ಮಗನಿಗೆ ಪರಿಚಯಿಸಿ, ತಾನು ನಿವೃತ್ತನಾಗುವ ಇರಾದೆ. ಮಗನು ಅದನ್ನೊಪ್ಪುತ್ತಾನೆ. ಜೊತೆಗೂಡಿ ಹೊರಡುತ್ತಾರೆ. ಮಾರ್ಗ ಮಧ್ಯೆ ಪರಸ್ಪರ ಇಬ್ಬರ ನಡುವೆ" ನಿನಗೆ ತಿಳಿಯುವದಿಲ್ಲ. ನಾನು ಹೇಳಿದಂತೆ ಕೇಳು" ಎಂಬ ವಾಗ್ವಾದವಾಗುತ್ತದೆ. ಇದು ಆ ಊರಿನ ಪಂಚಾಯಿತಿ ಕಟ್ಟೆಗೂ ತಲುಪುತ್ತದೆ. ಸಾಕ್ಷಿಯನ್ನು ಪರಿಶೀಲಿಸಿದ ತರುವಾಯ ಜಗಳವು ಬಗೆ ಹರಿಯುತ್ತದೆ. ಕಥೆಯ ಶೀರ್ಷಿಕೆ 'ತಂದೆ ಮಗ' ಎಂಬ ರಕ್ತ ಸಂಬಂಧದ ಸೂಚಕವಾಗಿದೆ. ಕುದುರೆಯ ಹಿಂದೆ ನಡೆವಶಿವಲಿಂಗಪ್ಪನ ವಾದದಂತೆ ಇದು ಖರೆ ಕೂಡ. ಕುದುರೆ ಹತ್ತಿದಮಗನ ಪ್ರತಿವಾದವೆಂದರೆ ತಂದೆ ಎಂದು ಸಾಧಿಸುವ ಮುದುಕನು ತನ್ನಲ್ಲಿ ಕೆಲಸ ಮಾಡುವ ಗುಮಾಸ್ತ. ಹಾಗಾಗಿ ಇದು ತಂದೆ ಮಗನ ಸಂಬಂಧವಲ್ಲ. ಬದಲಾಗಿ ಪ್ರಭು ಮತ್ತು ಭೃತ್ಯನ ಸಂಬಂಧ. ಕುದುರೆ ಇಲ್ಲಿ ಅಧಿಕಾರದ ಸಂಕೇತವಾಗಿದೆ. ಅಂದರೆ 'ಅಧಿಕಾರ'ದ ನೆಲೆಯಲ್ಲಿ ಏರ್ಪಟ್ಟ ಶ್ರೇಣೀಕರಣದ ಸಂಬಂಧ. ಇಂತಹ ಮಗನಿಗೆ ರಕ್ತ ಸಂಬಂಧಗಳು ಮುಖ್ಯವಾಗಬಲ್ಲವೆ? ಇಂತಹ ಅಧಿಕಾರಕ್ಕಾಗಿ ಮಹಾಭಾರತ ಯುದ್ಧವೇ ನಡೆದಿದಿಯಲ್ಲವೆ? ಭರತ ತಮ್ಮನಾದ ಬಾಹುಬಲಿಯ ಮೇಲೆ ಕದನಕ್ಕಿಳಿದಿದ್ದು ಇದಕ್ಕೇ ಅಲ್ಲವೆ? ಎಷ್ಟೋ ಮಕ್ಕಳು ಸಿಂಹಾಸನಕ್ಕಾಗಿ ತಂದೆಯನ್ನೇ ಕೊಂದಿರುವ ಸಂಗತಿಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿಲ್ಲವೆ? ಆಸ್ತಿಗಾಗಿ ಮಕ್ಕಳೆಲ್ಲಾ ತಂದೆಯನ್ನೇ ಕೊಂದ ಸಂಗತಿಗಳು ದಿನ

ನಿತ್ಯ ನಡೆಯುತ್ತಿಲ್ಲವೆ? ರಾಜಕಾರಣಿಗಳು ಪಕ್ಷ ಬದಲಾಯಿಸುವುದು ಅಧಿಕಾರಕ್ಕಾಗಿಯಲ್ಲವೆ? ಇಂತಹ ದೊಡ್ಡ ಪಟ್ಟಿಯನ್ನೇ ಬೆಳೆಸಬಹುದು. ಒಟ್ಟಿನಲ್ಲಿ ಎಲ್ಲರ ಕೈಯಲ್ಲೂ 'ಕುದುರೆಯ ಲಗಾಮು' ಇರಬೇಕು. ಯೋಗ್ಯತೆ ಇದೆಯೋ ಇಲ್ಲವೋ ಆದರೆ ಶಾಸನಗಳನ್ನು ಹೊರಡಿಸಬೇಕೆಂಬ ಅಮಲು. ಶಿವಲಿಂಗಪ್ಪನ ಅನುಭವ, ಆತನು ಕಟ್ಟಿದ ವ್ಯವಹಾರದ ಆಳ–ಅಗಲಗಳನ್ನು ಅರಿಯದ ಮಗನ ಪರಿಸ್ಥಿತಿಯೂ ಇಂತಹದ್ದೆ! 'ಕುದುರೆ' ಹತ್ತಿದ ಕ್ಷಣಕ್ಕೆ ಬೀಗಬಾರದು. ಬೀಗಿದರೆ ನೆಲಕಚ್ಚುವರು. ನಡೆಯುವವರನ್ನು ಅವಮಾನಿಸಬಾರದು. ಅವಮಾನಿಸಿದರೆ ಸಾರ್ವಜನಿಕವಾಗಿ ಮಾನ ಹೋಗುವುದು. ಯುವಕರು ಹಿರಿಯರ ಮಾರ್ಗದರ್ಶನದಲ್ಲಿ ಜಯಿಸುವ ಯೋಜನೆ ಮತ್ತು ಯೋಚನೆಗಳನ್ನು ಹೊಂದಬೇಕೆಂದು ಗೌಡನ ಮೂಲಕ ಕಥೆ ಪ್ರತಿಪಾದಿಸುತ್ತದೆ. ಇಲ್ಲಿ ಜಯಿಸಬೇಕಾದದ್ದು ಏನಾದಾರೂ ಆಗಬಹುದು. ಅದು ಒಳ್ಳೆಯದಾಗಿರಬೇಕೆಂಬ ಜನಪದರ ನಿಲುವು ಅಭಿವ್ಯಕ್ತವಾಗಿದೆ.

ಉತ್ತರ ಕರ್ನಾಟಕದ ಜನಪದ 'ವಾಸ್ತವಿಕ ಕಥೆಗಳು' ಹೆಚ್ಚಾಗಿ ಸ್ತ್ರೀ ಪ್ರಧಾನ ತಲೆಬರೆಹಗಳನ್ನೇ ಹೊಂದಿವೆ. ಮಾನವ ಸಂಬಂಧಗಳು ಮುರಿದು ಬೀಳುತ್ತಿರುವ ಸಂಗತಿಗಳನ್ನು ನಿರೂಪಿಸಿವೆ. ಇವುಗಳು ನಮ್ಮ ಗ್ರಾಮೀಣ ಮತ್ತು ನಗರ ಜೀವನಗಳಿಗೂ ಅನ್ವಯವಾಗುತ್ತವೆ. ಕಥೆಗಳು ಗ್ರಾಮೀಣ ಜಗತ್ತಿನೊಳಗಿನ ತೀರ ಖಾಸಗಿ ಸಂಬಂಧಗಳ ಕಲಹಗಳನ್ನು ದಾಖಲಿಸುತ್ತವೆ. ವಿವಿಧ ಪಾತ್ರಗಳ ಮನಸ್ಸನ್ನು ಅರ್ಥಮಾಡಿಕೊಳ್ಳುವಂತೆ, ಮನಃಶಾಸ್ತ್ರೀಯವಾಗಿ ವಿಶ್ಲೇಷಿಸುವ ಅವಕಾಶವನ್ನು ತೆರೆದಿಟ್ಟಿವೆ. ಹೆಣ್ಣನ್ನು ಸಂಬಂಧಗಳ ಪೋಷಕಿ ಮತ್ತು ನಾಶಕಿಯಂತೆ ಚಿತ್ರಿಸಲಾಗಿದೆ. ಈ ಜನಪದ ಕಥೆಗಳು ಲೌಕಿಕ ಜಗತ್ತಿನ ವ್ಯವಹಾರಗಳಿಗೆ, ಅಗತ್ಯತೆಗಳಿಗೆ ಮಹತ್ವ ಕೊಡುತ್ತವೆ. ಕಥೆಗಳು ಮಾತೃಪ್ರಧಾನ ಕುಟುಂಬಗಳನ್ನು ಚಿತ್ರಿಸುವಂತೆ ಭಾಸವಾಗುತ್ತವೆ. ಇಲ್ಲಿ ಗಂಡಿನ ಪಾತ್ರಗಳ ಸಣ್ಣತನಗಳನ್ನು ಅನಾವರಣಗೊಳಿಸುತ್ತವೆ. ಸಂಪತ್ತಿನ ಮತ್ತು ಹೆಣ್ಣಿನ ಆಳ್ವಿಕೆಯನ್ನು ಗಂಡಿಗೆ ನೀಡುತ್ತವೆ. ಹೀಗೆ ಪುರುಷ ಪ್ರಧಾನ ವ್ಯವಸ್ಥೆಯು ನಿಧಾನಕ್ಕೆ ಬೇರುಬಿಟ್ಟುಕೊಳ್ಳುವ ನೆಲೆಗಳನ್ನು ಸೂಕ್ಷ್ಮವಾಗಿ ಹೊರಹಾಕುತ್ತವೆ. ನೊಂದವರಿಗೆ, ಕಷ್ಟಪಟ್ಟವರಿಗೆ ಒಳ್ಳೆಯದಾಗುತ್ತದೆಂಬ ಆಶಯವನ್ನು ಹೊಂದಿವೆ. ಕೆಲವು ಕಥೆಗಳು ಹೆಣ್ಣು ದುಃಖಿಸಬಾರದು ಅಥವಾ ಕಣ್ಣೀರು ಹಾಕಬಾರದೆಂದು ನಿರೂಪಿಸುತ್ತವೆ. ಆದರೆ ಅವಳ ದುಃಖವನ್ನೇ ಕಥೆಯನ್ನಾಗಿಸಿ, ಕೊನೆಗೆ ಸುಖಾಂತ್ಯಗೊಳಿಸುವ ಕಥೆಗಳು ಹೆಚ್ಚಿವೆ. ಈ ದ್ವಿಮುಖತೆ ಜನಪದ ಕಥಾ ಮಾದರಿಗಿದೆ.

**ಡಾ. ಹಾಲಮ್ಮ ಎಂ.**
ಸಹಾಯಕ ಪ್ರಾಧ್ಯಾಪಕರು,
ಸಹ್ಯಾದ್ರಿ ಕಾಲೇಜು, ಶಿವಮೊಗ್ಗ– 577201
ಕರ್ನಾಟಕ
ಸಂಪರ್ಕ ಸಂಖ್ಯೆ : 9481691617
E-mail : hemamuddakrishna75@gmail.com

**********

**Volume XX : July to December – 2022, ISSN 2250-1711**

**Journal of Veda Samskrita Academy [Recognised in the UGC-CARE List]**

# ಯಜುರ್ವೇದೀಯ ಉಪನಿಷತ್ತುಗಳಲ್ಲಿ ರೂಪಕ ಪದಾರ್ಥಗಳು

**ಡಾ. ಪ್ರಸನ್ನಕುಮಾರ ಐತಾಳ, ಉಜಿರೆ, ಕರ್ನಾಟಕ**

ಯಜುರ್ವೇದ ಎಂಬ ಒಂದು ಅಪೌರುಷೇಯ ಗ್ರಂಥಕ್ಕೆ ಸಂಬಂಧಪಟ್ಟಂತಹ ಉಪನಿಷತ್ತುಗಳ ಸಂಖ್ಯೆ 8. ಕಠೋಪನಿಷತ್ತು ಕೃಷ್ಣ ಯಜುರ್ವೇದದ ಕಠ ಶಾಖೆಗೆ ಸಂಬಂಧಪಟ್ಟಂತಹದ್ದು, ತೈತ್ತಿರೀಯ ಉಪನಿಷತ್ತು ತೈತ್ತಿರೀಯ ಶಾಖೆ ಯಜುರ್ವೇದ, ಮೈತ್ರಾಯಿಣೀ ಉಪನಿಷತ್ತು ಮೈತ್ರಿ ಶಾಖೆ ಯಜುರ್ವೇದ, ಅದೇ ರೀತಿಯಾಗಿ ಕೈವಲ್ಯ ಉಪನಿಷತ್ತು ಕೃಷ್ಣ ಯಜುರ್ವೇದಕ್ಕೆ ಸಂಬಂಧಪಟ್ಟಿದ್ದು. ಹಾಗೆಯೇ ನಾರಾಯಣೋಪನಿಷತ್ತು ತೈತ್ತಿರೀಯ ಶಾಖೆಗೆ ಸಂಬಂಧಪಟ್ಟದ್ದಾಗಿದೆ. ನಂತರ ಈಶಾವಾಸ್ಯ ಉಪನಿಷತ್ತು ಶುಕ್ಲ ಯಜುರ್ವೇದದ 40 ನೇ ಅಧ್ಯಾಯವನ್ನು ಅಲಂಕರಿಸುತ್ತದೆ. ಬೃಹದಾರಣ್ಯಕೋಪನಿಷತ್ತು ಶುಕ್ಲ ಯಜುರ್ವೇದ, ಜಾಬಾಲ ಉಪನಿಷತ್ತು ಕೂಡ ಶುಕ್ಲ ಯಜುರ್ವೇದಕ್ಕೆ ಸಂಬಂಧಪಟ್ಟಿರತಕ್ಕಂತದ್ದು. ಹೀಗೆ 8 ಉಪನಿಷತ್ತುಗಳು ಯಜುರ್ವೇದಕ್ಕೆ ಸಂಬಂಧ ಪಟ್ಟದ್ದಾಗಿದೆ.

## ಕಠೋಪನಿಷತ್ತಿನಲ್ಲಿ ರೂಪಕ ಪದಾರ್ಥಗಳು:

ಕಠೋಪನಿಷತ್ತಿನಲ್ಲಿ 6 ವಲ್ಲಿಗಳಿವೆ. ಅಂದರೆ 119 ಮಂತ್ರಗಳಿಂದ ಕೂಡಿದ 6 ವಲ್ಲಿಗಳು. ಕಥಾ ವಸ್ತು ಬಹಳ ಸರಳವಾಗಿದೆ, ಪ್ರಸಿದ್ಧವಾಗಿದೆ. ನಚಿಕೇತನು ಯಮನಿಗೆ 3 ವರಗಳನ್ನು ಕೇಳುತ್ತಾನೆ. ಒಂದನೆಯ ವರವನ್ನು ತನ್ನ ತಂದೆಯ ಪರವಾಗಿ ಕೇಳಿದರೆ, 2 ನೇ ವರದಲ್ಲಿ ಸ್ವರ್ಗ್ಯಾಪ್ತಿ ವಿದ್ಯೆಯನ್ನು ಹಾಗೂ 3 ನೇ ವರದಲ್ಲಿ ಆಧ್ಯಾತ್ಮ ವಿದ್ಯೆಯನ್ನು ಬೋಧಿಸುವಂತೆ ಆ ಯಮನೆಂಬ ಗುರುವಿನಲ್ಲಿ ಕೇಳಿಕೊಳ್ಳುತ್ತಾನೆ. ಈ 3 ವರಗಳ ಒಂದು ಸಮಷ್ಟಿ ರೂಪವೇ ಕಠೋಪನಿಷತ್ತು. ಇಲ್ಲಿ 3 ವರಗಳಲ್ಲಿ 3 ಹಂತದ ವಿಷಯಗಳು ಪ್ರಸ್ತುತವಾಗಿದೆ. ಒಂದನೇ ವರದಲ್ಲಿ ಸಾಮಾಜಿಕ ಅಂದರೆ ಸಮಾಜಕ್ಕೆ ಸಂಬಂಧಪಟ್ಟಂತಹ ವಿಷಯ. ಆ ನಚಿಕೇತನಿಗೆ ತಂದೆಯಾಗಿರತಕ್ಕಂತಹ ವಾಜಶ್ರವಸ್ಸನು ಕೋಪದಿಂದ ನಾನು ನಿನ್ನನ್ನು ಮೃತ್ಯುವಿಗೆ ದಾನ ಮಾಡಿದ್ದೇನೆ ಎಂದು ಹೇಳಿದಾಗ ನಚಿಕೇತನು ತಂದೆಯಲ್ಲಿ ಬಹಳ ಕೋಪವಿದೆ. ಇಂತಹ ಕೋಪವೆಂಬುದು ಒಬ್ಬ ನೃಪನಿಗೆ ಸಲ್ಲದು. ಯಜ್ಞಾದಿಗಳನ್ನು ಮಾಡುವುದಕ್ಕೆ, ಯಜ್ಞಾದಿಗಳನ್ನು ಮಾಡುವ ಉದ್ದೇಶ ಪರಮಾತ್ಮನ ಒಂದು ವಿಶೇಷ ಅನುಗ್ರಹ. ಆ ಅನುಗ್ರಹ ಸಂಪಾದನೆ ಮಾಡಬೇಕಾದರೆ ಮನಸ್ಸಿನಲ್ಲಿ ಯಾವುದೇ ತರಹದ ಒಂದು ಅಂತಃ ಶತ್ರುಗಳಿರಬಾರದು. ಆದರೆ ಕ್ರೋಧವೆಂಬ ಅಂತಃಶತ್ರು ಆ ತಂದೆಯ ಮನಸ್ಸನ್ನು ಆಕ್ರಮಿಸಿಕೊಂಡಿದೆ. ಆದ್ದರಿಂದ ತನ್ನ ತಂದೆಯ ಉದ್ಧಾರಕ್ಕಾಗಿ, ನನ್ನ ತಂದೆ ಶಾಂತ ಸಂಕಲ್ಪನಾಗಬೇಕು. ಸುಮನ–ಶೋಭನ ಮನಸ್ಸುಳ್ಳವನಾಗಿರಬೇಕು. ಯಾವ ರೀತಿಯಾಗಿ ಅಂತಹ ಒಂದು ಶ್ರೀಮಂತವಾದ ಮನಸ್ಸಿನಿಂದ ಅವನು ಸತ್ಕಾರ್ಯಗಳನ್ನು ಮಾಡಿದರೆ ಯೋಗ್ಯವಾಗಿರತಕ್ಕಂತಹ ಸತ್ಫಲವು ಸಿಗುತ್ತದೆ.

"ಶಾಂತಃ ಸಕಲ್ಪಃ ಸುಮನಃ ಯಥಾ ಸ್ಯಾತ್" ಈ ರೀತಿಯಾಗಿ ಅವನು ತನ್ನ ಮೊದಲನೇ ವರವನ್ನು ಕೇಳುತ್ತಾನೆ. ಇದು ಕೌಟುಂಬಿಕ ವಿಷಯಕ್ಕೆ ಸಂಬಂಧಪಟ್ಟಂತಹ 1 ನೇ ವರ. ಎರಡನೆಯದ್ದು ಸ್ವರ್ಗ್ಯಾಪ್ತಿ ವಿದ್ಯೆ ಅಂದರೆ ಸ್ವರ್ಗ ಸಂಪಾದನೆಗಾಗಿ ಮಾಡುವ ವಿದ್ಯೆ ಅಲ್ಲ. ಇದರ ಮಂತ್ರಗಳನ್ನು ಅಧ್ಯಯನ ಮಾಡುತ್ತಾ ಹೋದಲ್ಲಿ ಇದು ಸ್ವರ್ಗಕ್ಕೆ ಸಾಧನೀಭೂತವಾದಂತಹ ವಿದ್ಯೆ ಎಂಬುದು ತಿಳಿಯುತ್ತದೆ. ಅಲ್ಲಿ ಸ್ವರ್ಗ ಅಂದರೆ "ಸುಷ್ಟು ರಾಮಣಃ". ಅಂದರೆ ನಿಜವಾದ ಆನಂದ ಎಲ್ಲಿ ಯಾವ ಲೋಕದಲ್ಲಿ ಸಿಗುತ್ತದೋ ನಾಶ ರಹಿತವಾದ ಆನಂದ ಎಲ್ಲಿ ಸಿಗುತ್ತದೋ ಅದೇ ಸ್ವರ್ಗ. ಅದೇ ಮೋಕ್ಷ. ಅಂತಹ ಒಂದು ವಿದ್ಯೆಯನ್ನು ಪಡೆಯಲು ಅವನು ಸ್ವರ್ಗ್ಯಾಪ್ತಿ ವಿದ್ಯೆಯನ್ನು ವರವಾಗಿ ಕೇಳುತ್ತಾನೆ. ಅಂದರೆ ಯಜ್ಞದಲ್ಲಿ ಅಂತಃಪ್ರವಿಷ್ಕನಾಗಿರತಕ್ಕಂತಹ ಅಗ್ನಿಯ ಮೂಲಕ ಮೋಕ್ಷಾಖ್ಯವಾಗಿರತಕ್ಕಂತಹ ಫಲವನ್ನು ಪಡೆಯುವುದು.

3 ನೇಯದು ಪಾರಮಾರ್ಥಿಕವಾದ ವರ–ನಾಶ ರಹಿತವಾಗಿರತಕ್ಕಂತಹ ಫಲವನ್ನು ಪಡೆಯುವುದು. ಹೀಗೆ 3 ವರಗಳ ವಸ್ತು ಸಂವಿಧಾನ–ವನ್ನು ರೂಪಕದ ಚೌಕಟ್ಟಿನಲ್ಲಿ ಇರಿಸಿದರೆ ರೂಪಕದ ಲಕ್ಷಣಗಳಿಂದ ಲಕ್ಷಿತವಾಗಿದೆಯೋ ಇಲ್ಲವೋ ಈ ಕಠೋಪನಿಷತ್ತು ಎಂದು ನಾವು ತಿಳಿಯಬಹುದು ಅಥವಾ ಆ ರೂಪಕ ಲಕ್ಷಣಗಳಿಂದ ಲಕ್ಷಿತವಾಗಿದ್ದರೆ ಎಷ್ಟರ ಮಟ್ಟಿಗೆ ಲಕ್ಷಿತವಾಗಿದೆ ಎಂದು ತಿಳಿದು ಬರುತ್ತವೆ.

ಮೊದಲನೆಯದಾಗಿ 'ರೂಪಕ' ಎಂದರೆ ಏನು? ಧನಂಜಯನು ರೂಪಕವನ್ನು 'ರೂಪಕಂ ತತ್ ಸಮಾರೋಪಾತ್' ಎಂದು ಹೇಳಿದ್ದಾನೆ. ಈ ರೂಪಕದಲ್ಲಿ ಎಷ್ಟೇ ಪ್ರಕಾರಗಳಿರಲಿ ಅವಾಂತರ ಭೇದಗಳಿರಲಿ ಅವೆಲ್ಲವೂ ಕೂಡ ರಸಾಶ್ರಯವನ್ನು ಹೊಂದಿರುವಂತದ್ದು ಎಂಬುದು ಪ್ರಮುಖವಾದಂತಹ ಅಂಶ. 'ರೂಪಂ ದೃಶ್ಯತಯಾ ಉಚ್ಯತೇ ರೂಪಕಂ ತತ್ ಸಮಾರೋಪಾತ್ ದಶದೈವ ರಸಾಶ್ರಯಂ' ಇಲ್ಲಿ ಅವಸ್ಥಾ ಎಂದರೆ ಏನು? ಎಂಬುದಕ್ಕೆ ಭಾವದ ವಿವಿಧ ಸ್ಥಿತಿಗಳ ಅನುಕರಣೆ ಎಂಬುದು ಇಲ್ಲಿ ಸ್ಪಷ್ಟವಾಗಿರತಕ್ಕಂತದ್ದು. 'ತತ್ ಸಮಾರೋಪಾತ್ ರೂಪಕಂ' ಭಾವ ಸ್ಥಿತಿಗಳ ರೂಪವನ್ನು ನಟರು ತಮ್ಮಲ್ಲಿ ಸಂಪೂರ್ಣವಾಗಿ ಆರೋಪಿಸಿಕೊಳ್ಳುವುದೇ ರೂಪಕ. ಇದು ಧನಂಜಯನ ದಶರೂಪಕ ವಾಖ್ಯಾನದಲ್ಲಿ ಹೇಳಿರುವಂತದ್ದು. 'ಉದಾಃ ಮುಖಂ ಚಂದ್ರಃ' ಎಂದು ಹೇಳಿದಾಗ ಮುಖದಲ್ಲಿ ಚಂದ್ರನನ್ನು ಆರೋಪಿಸುತ್ತೇವೆ. ಹಾಗೇ ಕಠೋಪನಿಷತ್ತನ್ನು ಒಂದು ರೂಪಕ ಎಂದು ಪರಿಗಣಿಸಿದರೆ ಇದರಲ್ಲಿ ವಾಜಶ್ರವಸ್ ಮತ್ತು ನಚಿಕೇತ ಇವರಿಬ್ಬರ ಸಂವಾದ ಎಂಬುದು ಚತುರ್ವಿಧವಾದಂತಹ ಅಭಿನಯ. ಇಲ್ಲಿ ಆಂಗಿಕ, ವಾಚಿಕ, ಆಹಾರ್ಯ, ಸಾತ್ವಿಕ ಈ ರೀತಿಯಾಗಿ ಕಾಣಬಹುದು. ಈ ವಾಚಿಕ ಅಭಿನಯ ಕಠೋಪನಿಷತ್ತಿನಲ್ಲಿ ಅದ್ಭುತ ಮತ್ತು ಶಾಂತ ರಸಗಳನ್ನು ಆಶ್ರಯಿಸಿದೆ ಎಂಬುದನ್ನು ಪರಿಗಣಿಸುತ್ತೇವೆ. ಆದ್ದರಿಂದ ಕಠೋಪನಿಷತ್ತು ಒಂದು ರೂಪಕ ಎಂದು ಸಾಮಾನ್ಯ ದೃಷ್ಟಿಯಿಂದ ಹೇಳಬಹುದು. ಇನ್ನು ರೂಪಕದಲ್ಲಿ ವಸ್ತು ಭೇದಗಳು 'ವಸ್ತು ನೇತಾ ರಸಃ ಶೇಷಾಂ ಭೇದಃ' ಅಲ್ಲ ವಸ್ತು ಎಂದರೆ 2 ರೂಪದ್ದು 'ತತ್ರ ಆರ್ಹಿಕಾರಿಕ ಮುಖ್ಯಂ ಅಂಗಂ ಪ್ರಾಸಂಗಿಕಂ ವಿದುಃ' ಇಲ್ಲಿ ಆರ್ಹಿಕಾರಿಕ ವಸ್ತು ಎಂದರೆ ಪರಬ್ರಹ್ಮ ಸ್ವರೂಪ ಕಥನ. ಇದೇ ಆರ್ಹಿಕಾರಿಕವಾದಂತಹ ಮುಖ್ಯ ವಿಷಯ. ಇಲ್ಲಿ ಪ್ರಾಸಂಗಿಕವಾದಂತಹ ಅಂಗಭೂತವಾದ್ದು. ಆಶಂಗಿಕ ವಾದದ್ದು ಯಾವುದು ಅಂದರೆ ಆ ಪರಬ್ರಹ್ಮ ಸ್ವರೂಪ ಕಥನಕ್ಕೆ ಅಂಗಭೂತವಾದ ಯಮನಿಂದ ಸ್ವರ್ಗ್ಯಾಪ್ತಿವಿದ್ಯೆಯ ಉಪದೇಶ ಮತ್ತು 1 ನೇ

ವರದ ನಿರೂಪಣೆ. ಇವರೆಡೂ ಇಲ್ಲಿ ಆನುಶಂಗಿಕವಾಗಿ ಬಂದಿರತಕ್ಕಂತದ್ದಾಗಿವೆ. ಆಧಿಕಾರಿಕ ಎಂಬುದು ಅರ್ಥಪೂರ್ಣವಾದ ಶಬ್ದ. ಆಧಿಕಾರಿಕ ಎಂದರೆ ಅಧಿಕಾರ ಎಂಬ ಶಬ್ದದಿಂದ ಬಂದ ಪದ. 'ಫಲಸ್ಯಾಮಿೂ ಅಧಿಕಾರಿ ಚ ತತ್ ಪ್ರಭುಃ ಫಲಸ್ಯಾಮಿೂ' ಇಲ್ಲಿ ನಚಿಕೇತ. ಅಧಿಕಾರ ಫಲವುಳ್ಳದ್ದು. ಅಧಿಕಾರಿ ಎಂದರೆ ಫಲವನ್ನು ಹೊಂದುವನು. ಆಧಿಕಾರಿಕ ಎಂದರೆ ಫಲ ದೊರಕುವವರೆಗೆ ನಿರ್ವಹಿಸಲು ವ್ಯಾಪಿಸಿರುವಂತಹ ವೃತ್ತಾಂತ. ಈ 3 ಕೂಡ ಪ್ರಕೃತವಾದಂತಹ ಉಪನಿಷತ್ತಿನಲ್ಲಿ ಕಾಣಬಹುದು. ಉದಾಹರಣೆಗೆ ಉಪನಿಷತ್ತಿನಲ್ಲಿ ವಸ್ತು ಎಂದರೆ ಪರಬ್ರಹ್ಮ ಸ್ವರೂಪ ಕಥನ. ಅದೇ ಮೋಕ್ಷಾಪ್ಯ ಫಲವುಳ್ಳದ್ದಾಗಿದೆ.

"ಮೃತ್ಯುಪ್ರೋಕ್ತಾಂ ನಚಿಕೇತೋऽಥ ಲಬ್ಧ್ವಾ ವಿದ್ಯಾಮೇತಾಂ ಯೋಗವಿಧಿಂ ಸ ಕೃತ್ಸ್ನಮ್ ।
ಬ್ರಹ್ಮಪ್ರಾಪ್ತೋ ವಿರಜೋಭೂದ್ವಿಮೃತ್ಯುರನ್ಯೋಪ್ಯೇವಂ ಯೋ ವಿದದ್ಯಾತ್ಮಮೇವ ॥"

ಈ ರೀತಿಯಾಗಿ ಉಪನಿಷತ್ತಿನ ವಸ್ತು ಇದು. ಅನಂತರ ಇದಕ್ಕೆ ಅಧಿಕಾರಿಯಾದ ನಚಿಕೇತನೇ ಈ ಫಲವನ್ನು ಹೊಂದಿರುವುದರಿಂದ ಅವನೇ ಅಧಿಕಾರಿ ಎಂಬುದು ಸ್ಪಷ್ಟ. ಎಂತಹ ಐಹಿಕ ಆಮಿಷಗಳನ್ನು ಯಮನು ಒಡ್ಡಿದರೂ ಕೂಡ ಆ ಐಹಿಕ ಆಮಿಷಗಳಿಗೆ ಆಕರ್ಷಿತನಾಗದೇ ನಚಿಕೇತ ಬ್ರಹ್ಮಪ್ರಾಪ್ತಿ ರೂಪವಾದಂತಹ ಫಲವನ್ನು ಪಡೆಯುವವರೆಗೆ ಆ ವಸ್ತು ವ್ಯಾಪ್ತವಾಗಿದೆ. ಆದ್ದರಿಂದ ಅಧಿಕಾರಿಕ ಅಂಶವು ಕೂಡ ಈ ಕಠೋಪನಿಷತ್ತಿನಲ್ಲಿ ಇರುವಂತದ್ದಾಗಿದೆ. ಹೀಗೆ ರೂಪಕದಲ್ಲಿ ಪ್ರಾಸಂಗಿಕ ವಸ್ತುವೂ ಕೂಡ ಆಂಗಿಕವಾಗಿರಬೇಕೆಂಬುದನ್ನು ನಾವು ಮತ್ತೊಂದು ಮಂತ್ರದಲ್ಲಿ ಕಾಣಬಹುದು.

"ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ ನ ತತ್ರ ತ್ವಂ ನ ಜರಯಾ ಬಿಭೇತಿ ।
ಉಭೇ ತೀರ್ತ್ವಾಶಯಾಪಿಪಾಸೇ ಶೋಕಾತಿಗೋ ಮೋದತೇ ಸ್ವರ್ಗಲೋಕೇ ॥"

ಹೀಗೆ ಅನೇಕ ನಾಟಕದ ಅಂಶಗಳನ್ನು ನಾವು ಇದರಲ್ಲಿ ಪ್ರತಿಬಿಂಬಿತವಾದದನ್ನು ಕಾಣಬಹುದು. ಅರ್ಥ ಪ್ರಕೃತಿಗಳಲ್ಲಿ 1 ನೇಯದ್ದು ಕಾರ್ಯ. ಕಾರ್ಯವಾದದ್ದು ಇತಿ ವೃತ್ತದ ಫಲವು ತ್ರಿವರ್ಗರೂಪವಾಗಿರತಕ್ಕದ್ದು ಎಂಬುದು ತ್ರಿವರ್ಗ ಎಂದರೆ ಧರ್ಮ, ಅರ್ಥ, ಕಾಮ ಎಂಬ ಮೂರು ಪುರುಷಾರ್ಥಗಳು. ಈ ಮೂರು ಪುರುಷಾರ್ಥಗಳ ಸಾಧನೆಯ ಮೂಲಕ ಮೋಕ್ಷಾಖ್ಯ ಫಲವು ಸಿದ್ಧವಾಗಿರತಕ್ಕಂತದ್ದಾಗಿದೆ ಇದೇ ಕಾರ್ಯ. ಅನಂತರ ಮುಂದಿನದು ಅರ್ಥ ಪ್ರಕೃತಿಯಲ್ಲಿ ಬರತಕ್ಕಂತದ್ದು ಬೀಜ. ಧರ್ಮ, ಅರ್ಥ, ಕಾಮ, ಮೋಕ್ಷ ಈ ಪುರುಷಾರ್ಥಗಳ ಸಾಧನೆಗೆ ಕಾರಣವಾದದ್ದೇ ಬೀಜ ಶುದ್ಧಾಂತಕರಣವೇ ಬೀಜ. ಬಿಂದು ಎಂಬುದು ಅವಾಂತರಾರ್ಥ ವಿಚ್ಛೇದೇ ಬಿಂದು: ಅಚ್ಛೇದ ಕಾರಣ ಸ್ವರ್ಗ್ಯಾಪ್ಶಿ ವಿದ್ಯೆ ಉಪದೇಶದಿಂದ ಉಪನಿಷತ್ತು ಮುಗಿದು ಹೋಗುವುದೋ ಎಂಬ ಸಂಶಯ ಬರುತ್ತದೆ. ಆದರೆ ಈ ಸ್ವರ್ಗ್ಯಾಪ್ಶಿ ವಿದ್ಯೆಗೆ ಮತ್ತು ಪಾರಮಾರ್ಥಿಕ ವಿಷಯ ಒಂದಕ್ಕೊಂದು ಪೂರಕವಾಗಿದೆ. ಅದೇ ರೀತಿಯಾಗಿ ಪತಾಕಾ ಮತ್ತು ಪ್ರಕರಿ ಈ ಎರಡೂ ಕೂಡ ಅನ್ಯೋಕ್ತಿಯ ಮೂಲಕ ಸೂಚಿತವಾಗಿರತಕ್ಕಂತದ್ದು ಮತ್ತು ಯಾವುದೋ ಒಂದು ಕಡೆಯಲ್ಲಿ ಕಠೋಪನಿಷತ್ತಿನಲ್ಲಿ ಎಲ್ಲೋ ಆರಂಭದಲ್ಲಿ ಅತ್ಯಲ್ಪ ಭಾಗದಲ್ಲಿ ಹೇಳಲ್ಪಟ್ಟಿದೆ. ನಂತರ ಅದಕ್ಕೆ ಸಂಬಂಧಪಟ್ಟಿರತಕ್ಕಂತಹ ಉಳಿದೆಲ್ಲ ವಿಷಯಗಳು ವಿವೃತವಾದಾಗ ಅದು ಪ್ರಕರಿ ಎನಿಸಿಕೊಳ್ಳುತ್ತದೆ. ಆದ್ದರಿಂದ ಇದು ಪ್ರಕರಿ ಎಂಬ ಅರ್ಥ ಪ್ರಕೃತಿ ಉಳ್ಳದ್ದಾಗಿದೆ. ಈ ಕಠೋಪನಿಷತ್ತಿನಲ್ಲಿ ಪಂಚ ಅವಸ್ಥಾನಗಳು ಕೂಡ ಇವೆಯೆಂಬುದು ಸ್ಪಷ್ಟವಾಗಿದೆ. ಕಠೋಪನಿಷತ್ತಿನ ಆರಂಭ ಅತ್ಯಂತಿಕವಾದ ಫಲವನ್ನು ಪಡೆಯುವುದರ ಸಲುವಾಗಿ ಉಂಟಾಗುವಂತಹ ಕೇವಲ ಉತ್ಸುಕತೆ ಇದು ಆ ನಚಿಕೇತನಲ್ಲಿ ಹುದುಗಿದೆ ಎಂದು ಆರಂಭದಲ್ಲಿ ತಿಳಿದುಬರುತ್ತದೆ. ಆನಂತರ ಯತ್ನ ಎಂದರೆ ಯಾವ ಫಲಕ್ಕಾಗಿ ಅಲ್ಲಿ ವಸ್ತು ಕಾರ್ಯ ನಡೀತಾ ಇದೆಯೋ ಆ ವಸ್ತು ಫಲವನ್ನು ದೊರಕಿಸಿಕೊಳ್ಳಬೇಕಾದರೆ ತ್ವರಿತಗತಿಯಲ್ಲಿ ಕಾರ್ಯದಲ್ಲಿ ಪ್ರವೃತ್ತವಾಗುವಂತದ್ದು. ಬ್ರಹ್ಮೋ–ಪದೇಶದಿಂದ ಮೋಕ್ಷವೆಂಬ ಫಲ ಸಿಕ್ಕೇ ಸಿಗುತ್ತದೆ. ಆದರೆ ಬ್ರಹ್ಮೋಪದೇಶ ಎನ್ನುವಂತದ್ದು 3 ನೇ ವರದಿಂದ ಸಾಧ್ಯವಾಗುವಂತದ್ದು. ನಚಿಕೇತನಿಗೆ ತನ್ನ 2 ನೇ ವರವಾದ ಸ್ವರ್ಗ್ಯಾಪ್ಶಿ ವಿದ್ಯೆ ಉಪದೇಶದ ಬಲದಿಂದ ಮೋಕ್ಷ ಸಿದ್ಧಿಸುವುದೋ ಇಲ್ಲವೋ ಎಂಬ ಸಂಶಯದ ಮೇರೆಗೆ ಅವನು 3 ನೇ ವರವನ್ನು ಕೇಳುತ್ತಾನೆ. ಈ ಸ್ವರ್ಗ್ಯಾಪ್ಶಿ ವಿದ್ಯೆಯಿಂದ ಅವನಿಗೆ ನಶ್ವರ ರಹಿತವಾಗಿರತಕ್ಕಂತಹ ಆನಂದ ಯಾವ ಮೋಕ್ಷದಲ್ಲಿ ಅನುಭವಿಸುವನೋ ಅಂತಹ ಒಂದು ಮೋಕ್ಷ ಅವನಿಗೆ ಪರಬ್ರಹ್ಮಜ್ಞಾನದಿಂದ ಮಾತ್ರ ಸಾಧ್ಯ ಎಂದು ತಿಳಿದು ನಚಿಕೇತನು ಯಮನಲ್ಲಿ ಈ ವರವನ್ನು ಕೇಳುತ್ತಾನೆ. ನಚಿಕೇತನ ಇಂಗಿತವನ್ನು ತಿಳಿಯಲು ಯಮನು ನಚಿಕೇತನಲ್ಲಿ ನಿನಗೆ ಬಹಳ ಆಕರ್ಷಕವಾದಂತಹ ಬೇರೆ ವರಗಳನ್ನು ಕೊಡುತ್ತೇನೆ. ನಿನ್ನ ಬ್ರಹ್ಮ ವಿದ್ಯೆಯನ್ನು ಅರಿಯಲು ಕಠಿಣವಾಗುತ್ತದೆ. ಈ ರೀತಿಯಾಗಿ ಅವನು ಅನೇಕ ಆಕರ್ಷಕವಾದ ವಿಷಯಗಳನ್ನು ಅವನ ಮುಂದಿಡುತ್ತಾನೆ. ಈ ಪ್ರಪಂಚದಲ್ಲಿ ಯಾರಿಗೂ ಸಿಗಲಾರದ ಚಿರಂಜೀವಿತ್ವವನ್ನು ನಿನಗೆ ಕೊಡುತ್ತೇನೆ ಎಂದು ಆಮಿಷ ಒಡ್ಡುತ್ತಾನೆ. ಈ ಮೂಲಕ ಯಮನು ಪ್ರಧಾನವಾದ ಫಲವನ್ನು ವಿಷಯವನ್ನು ಬಹುದೂರಕ್ಕೆ ಕೊಂಡೊಯ್ಯುತ್ತಾನೆ. ಆದರೆ ನಚಿಕೇತನು ಅದಕ್ಕೆ ಆಕರ್ಷಿತನಾಗದೆ ಪ್ರಧಾನಕರವಾದ ಫಲವನ್ನೇ ಪಡೆಯುವ ಉದ್ದೇಶದಿಂದ ಈ ರೀತಿಯಾಗಿ ಹೇಳುತ್ತಾನೆ.

"ಉಸ್ಮಿನ್ನಿದಂ ವಿಚಿಕಿತ್ಸಂತಿ ಮೃತ್ಯೋ ಯತ್ಸಾಂಪರಾಯೇ ಮಹತಿ ಬ್ರೂಹಿ ನಸ್ತತ್
ಯೋऽಯಂ ವರೋ ಗೂಢಮನುಪ್ರವಿಷ್ಟೋ ನಾನ್ಯಂ ಸಸ್ಮಾನ್ನಚಿಕೇತಾ ವೃಣೀತೇ ॥"

ಅದೇ ರೀತಿಯಾಗಿ ಪ್ರಯತ್ನದ ಒಂದು ಅವಸ್ಥಾನವೂ ಕೂಡ ಇಲ್ಲಿ ಕಾಣಬಹುದು. ಉಪನಿಷತ್ತನಿ 2 ನೇ ವಲ್ಲಿಯಲ್ಲಿ ಶ್ರೇಯಸ್ಸು ಮತ್ತು ಪ್ರೇಯಸ್ಸು 2 ಆ ತತ್ವಗಳ ವಿಚಾರ ಬಂದಿದೆ. 'ಶ್ರೇಯಃ ಧೀರೋ ವೃಣೀಯತೇ ಪ್ರೇಯಃ ಮಂದಃ ವೃಣೀಯತೇ' ಇದು ಉಪನಿಷತ್ತಿನಲ್ಲಿ ಬಂದಿರತಕ್ಕದ್ದು.

"ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಂ ಮನ್ಯಮಾನಾಃ ।
ದಂದಮ್ಯಮಾಣಾಃ ಪರಿಯಂತಿ ಮೂಢಾ ಅಂಧೆನೈವ ನೀಯಮಾನಾ ಯಥಾಂಧಾಃ ॥"

ಈ ಮಂತ್ರದಿಂದ ಫಲ ಪ್ರಾಪ್ತಿ ಆಗುವುದೋ ಇಲ್ಲವೋ ಎಂಬುದು ನಿರ್ಧಾರವಾಗುವುದಿಲ್ಲ. ಆದ್ದರಿಂದ ಪ್ರಾಪ್ತ್ಯಾಶಾ ಅವಸ್ಥಾದಲ್ಲಿ ಅವರಿಗೆ

ಫಲಪ್ರಾಪ್ತಿ ಆಗೋದಿಲ್ಲ ಎಂಬ ಒಂದು ಶಂಕೆ ಉಂಟಾಗುತ್ತದೆ. ಆವಾಗ ನಿಯತವಾಗಿರತಕ್ಕಂತಹ ಆಸ್ತಿ ಅವಸ್ಥಾದೊಳಗೆ ಈ ನಚಿಕೇತನ ಕಾರ್ಯದಲ್ಲಿ ಅಪಾಯಗಳು ಇಲ್ಲ. ಅಪಾಯವಿಲ್ಲದಿರುವುದರಿಂದ ಫಲ ದೊರಕುತ್ತದೆ ಎಂದು ಪೂರ್ಣ ನಿಶ್ಚಿತವಾಗಿದ್ದರೆ ಮಾತ್ರ ನಿಯತಾಪ್ತಿ ಎಂಬ ವಸ್ತು ಪ್ರಾಪ್ತಿಯು ಆಗುತ್ತದೆ.

"ಉಪಾಯ ಭಾವತ್ಃ ಅಪಾಯ ಅಭಾವತಃ ಪ್ರಾಪ್ತಿಃ ನಿಯತಾಪ್ತಿಃ" ಇದನ್ನು ಯಮನು ಸ್ವತಃ ಅವನೇ ದೃಢವಾಗಿ ಹೇಳುತ್ತಾನೆ.

"ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ ।
ಯಾಂ ತ್ವಮಾಪಃ ಸತ್ಯಧೃತಿ ಬ್ರತಾಸಿ ತ್ವಾದ್ರಂಗನೋ ಭೂಯಾನ್ನಚಿಕೇತಃ ಪ್ರಷ್ಟಾ ॥"

ಅವನು ನಚಿಕೇತನನ್ನು ಕುರಿತು 'ನೀನು ಸತ್ಯ ವೃತನಾಗಿರುವೆ' ಎನ್ನುವನು. ಇದೇ ಧೀರೋದಾತ್ತನ ಲಕ್ಷಣ. ಇದನ್ನು ಯಮನೇ ನಚಿಕೇತನಲ್ಲಿ ಗುರುತಿಸುತ್ತಾನೆ. ಆದ್ದರಿಂದ ಯಾವ ಗುರುವಿನಿಂದ ಶಿಷ್ಯನ ಪ್ರಶಂಸೆ ನಡೆಯುತ್ತಿರಬೇಕಾದರೆ ಅವನಿಗೆ ಮೋಕ್ಷಾಖ್ಯ ಫಲ ಸಿಕ್ಕೇ ತೀರುತ್ತದೆ. ಇದರಲ್ಲಿ ಯಾವುದೇ ತರಹದ ಅಪಾಯ ಆತಂಕಗಳು ಇಲ್ಲ ಎಂಬುದು ನಿಶ್ಚಿತವಾಗುತ್ತದೆ. ಹೀಗೆ ಈ ಮಂತ್ರಗಳಿಂದ ಯಮನು ನಚಿಕೇತನಿಗೆ ಬ್ರಹ್ಮೋಪದೇಶ ಮಾಡುತ್ತಾನೆ. ನಚಿಕೇತನಿಗೆ ಫಲಪ್ರಾಪ್ತಿಯಾಗುತ್ತದೆ ಎಂದು ನಿಶ್ಚಿತವಾಗಿ ತಿಳಿಯುತ್ತದೆ.

ಕೊನೆಯದಾಗಿ 5 ನೇ ಅವಸ್ಥೆಯಾದ ಫಲಾಗಮನ ಇದಕ್ಕೆ ಸಂಬಂಧಿಸಿದಂತೆ ಕಠೋಪನಿಷತ್ತಿನ ಕೊನೆಯ ಮಂತ್ರ ಇದಾಗಿದೆ.

"ಮೃತ್ಯುಪ್ರೋಕ್ತಾಂ ನಚಿಕೇತೋಽಥ ಲಬ್ಧ್ವಾ ವಿದ್ಯಾಮೇತಾಂ ಯೋಗವಿಧಿಂ ಚ ಕೃತ್ಸ್ನಮ್ ।
ಬ್ರಹ್ಮಪ್ರಾಪ್ತೋ ವಿರಜೋಽಭೂದ್ವಿಮೃತ್ಯುರನ್ಯೋಪ್ಯೇವಂ ಯೋ ವಿದಧ್ಯಾತ್ಮಮೇವ ॥"

ನಚಿಕೇತನು ಮರಣವನ್ನು ದಾಟುತ್ತಾನೆ. ಅವನಿಗೆ ಪಾಪ ಲೇಪಗಳು ಯಾವುದೂ ಇರುವುದಿಲ್ಲ. ಎಲ್ಲ ಪಾಪ ಲೇಪಗಳನ್ನು ದಾಟಿಕೊಂಡು ಅವನು ಬ್ರಹ್ಮಪ್ರಾಪ್ತಿ ಅಥವಾ ಮೋಕ್ಷಪ್ರಾಪ್ತಿಯನ್ನು ಪಡೆಯುತ್ತಾನೆ. ಈ ರೀತಿಯಾಗಿ ಫಲಾಗಮವು ಕೂಡ ಈ ಮಂತ್ರದಲ್ಲಿ ಸೂಚಿತವಾಗಿದೆ. ಇಲ್ಲಿ ರೂಪಕದ ಲಕ್ಷಣ, ವಸ್ತು ಬೇಧಗಳು, ಅರ್ಥ ಪ್ರಕೃತಿಗಳು ಐದು ಅವಸ್ಥೆಗಳು ಕಠೋಪನಿಷತ್ತಿನಲ್ಲಿ ಸಂಗತವಾಗಿದೆ ಎಂಬುದನ್ನು ತಿಳಿಯಬಹುದು. ಅದೇ ರೀತಿಯಾಗಿ ಇಲ್ಲಿ ಪಂಚ ಸಂಧಿಗಳು ಇವೆ. ಇಲ್ಲಿ ಶಾಂತ ಮತ್ತು ಅದ್ಭುತ ರಸಗಳ ಪರಿಪೋಷಣೆ ಇದೆ. ಈ ರೀತಿಯಾಗಿ ಕಠೋಪನಿಷತ್ತಿನಲ್ಲಿ ರೂಪಕ ಪದಾರ್ಥಗಳು ಯಥಾದೃಷ್ಟವೇ ಆಗಿದೆ. ಆ ಯಥಾದೃಷ್ಟವಾಗಿರತಕ್ಕಂತಹ ವಿಷಯಗಳನ್ನು ಯಥಾ ದೃಷ್ಟಿಯಿಂದ ಪರಿವೀಕ್ಷಿಸಿದಾಗ ಕಠೋಪನಿಷತ್ತು ಒಂದು ಸಮಗ್ರವಾದಂತಹ ರೂಪಕ ಎಂದು ಅಲ್ಲಿ ಪರಿಸಿದ್ಧವಾಗುತ್ತದೆ. ಅದೇ ರೀತಿಯಾಗಿ ಬ್ರಹೃದಾರಣ್ಯಕೋಪನಿಷತ್ತಿನಲ್ಲಿಯೂ ಅನೇಕ ಸಂವಾದಗಳು ಬರುತ್ತವೆ. ಈ ರೀತಿಯಾಗಿ ಕಠೋಪನಿಷತ್ತನಿಲ್ಲಿ ರೂಪಕ ಪದಾರ್ಥಗಳು ನಿರ್ದಿಷ್ಟವಾಗಿರುವುದನ್ನು ಕಾಣಬಹುದು.

## ಆಕರ ಗ್ರಂಥಗಳು:


1) ವೈದಿಕ ಸಾಹಿತ್ಯ ಚರಿತ್ರೆ: ಡಾ: ಎನ್ ಎಸ್ ಅನಂತರಂಗಾಚಾರ್
2) ವೇದ ಸಂಸ್ಕೃತಿ ಪರಿಚಯ : ಡಾ: ಕೆ. ಎಸ್. ನಾರಾಯಣಾಚಾರ್ಯ
3) ಋಗ್ವೇದ ಸಂಹಿತಾ: ವೈದಿಕ ಸಂಶೋಧನ ಮಂಡಲ, ಪೂನಾ
4) ದಶರೂಪಕ : ಧನಂಜಯ ಅನು: ಕೆ ವಿ ಸುಬ್ಬಣ್ಣ ಅಕ್ಷರ ಪ್ರಕಾಶನ, ಸಾಗರ
5) ಸಂಸ್ಕೃತ ನಾಟಕ : ವಿ.ಆರ್. ಕೃಷ್ಣ ಶಾಸ್ತ್ರೀ ಪ್ರಸಾರಾಂಗ, ಮೈಸೂರು 1988



**Dr. Prasanna Kumar Aithal**

Lecturer in Sanskrit

SDM College, Ujire- 574240

Belthangady, Dakshina Kannada, Karnataka

Mobile: 9964139855

E-mail : pkaithal09@gmail.com


*********

**Volume XX : July to December – 2022, ISSN 2250-1711**

**Journal of Veda Samskrita Academy [Recognised in the UGC-CARE List]**

# ಯೋಗ ಸಾಧನೆಗಾಗಿ ಗೋರಕ್ಷ ಶತಕದ ಮಹತ್ವ ಒಂದು ವಿಶ್ಲೇಷಣೆ

**ಡಾ. ಜಯರೇವಣ್ಣ ಎಂ. ವಿ**

ಮುಖ್ಯಸ್ಥರು(ಪ್ರ), ಯೋಗ ಚಿಕಿತ್ಸೆ & ಸಮಾಲೋಚನೆ ವಿಭಾಗ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು–560018, ಕರ್ನಾಟಕ

ಮೋಬೈಲ್ ನಂ. 9972005782

E-mail : revannanrhm@gmail.com

## ಪೀಠಿಕೆ:

ಮಾನವ ಜೀವನದಲ್ಲಿ ಯೋಗ ಸಾಧನದ ಪರಮಪ್ರಯೋಜನವು ಸಹಜವಾಗಿಯೇ ಸಿದ್ಧವಾಗಿದೆ, ಯೋಗವೆಂಬುದು ಒಂದು ನಿರಪೇಕ್ಷ ಸಾಧನಾ ಮಾರ್ಗವಾಗಿದ್ದು ಅದರಲ್ಲಿ ಸರ್ವಸಾಮಾನ್ಯನಿಗೂ ಜೀವನದ ವ್ಯಾವಹಾರಿಕತೆ ಹಾಗೂ ತನ್ನ ಸಚ್ಚಿದಾನಂದ ಸ್ವರೂಪದಲ್ಲಿ ಜ್ಞಾನವು ಸುಲಭವಾಗಿ ದೊರೆಯುವುದಾಗಿದೆ. ಮಹಾಯೋಗಿ ಗೋರಖನಾಥನು ಕೈವಲ್ಯಪದ ಹಾಗೂ ನಿರಂಜನದ ಸ್ವರೂಪದ ಪ್ರಾಪ್ತಿ ಅಥವಾ ಅನುಭೂತಿಗೆ ವಿಶೇಷ ಒತ್ತನ್ನು ನೀಡಿ ಪತಂಜಲಿಯಿಂದ ಆರಂಭಿಸಿದ ಹಾಗೂ ಅನುಶಾಸಿತ "ಅಷ್ಟಾಂಗಯೋಗದ" ಸೈದ್ಧಾಂತಿಕ ಹಿನ್ನೆಲೆಯಲ್ಲಿ ಮಾಡಿದ ಸಾಧನೆಗೆ ತನ್ನ ಷಡಂಗಯೋಗದ ಮಹಾಜ್ಞಾನಾ–ಮೃತದಿಂದ ಸಿಂಚನಗೊಳಿಸಿ ಪ್ರಕ್ರಿಯಾತ್ಮಕ ರೂಪವನ್ನು ನೀಡಿ ಆತ್ಮಸಾಕ್ಷಾತ್ಕಾರ ಅಥವಾ ಸ್ವರೂಪ ಸಿದ್ಧಿಯ ಕಡೆಗೆ ಪರಿವರ್ತಿ–ಸಿದ್ದಾನೆ. ಈ ಶಿವಗೋರಕ್ಷನಾಥ–ಗೋರಖನಾಥನು ಪ್ರತಿಪಾದಿಸಿದ ಮಹಾಯೋಗಜ್ಞಾನವು ಈ ಗೋರಕ್ಷ ಶತಕದಲ್ಲಿ ಲಭಿಸುವುದು ಶ್ರೇಷ್ಠವಾಗಿದೆ. ಭಗವಾನ್ ಗೋರಖನಾಥನು ತನ್ನ ಅನುಭೂತಿಯನ್ನು ಈ ರೀತಿಯಾಗಿ ವ್ಯಕ್ತಪಡಿಸುತ್ತಾನೆ.

**ಯತ್ರ ಸಹಜ ಸಮಾಧಿ ಕ್ರಮೇಣ ಮನಸಾ ಮನ: ಸಮಾಲೋಕ್ಯತೇ ಸ ಏವ ಮೋಕ್ಷ: । (ಅಮರೌಘ ಶಾಸನಮ್)**

ಗೋರಕ್ಷನಾಥ ಯೋಗಿ ಸ್ಪಷ್ಟವಾಗಿ ಹೇಳಿರುವುದೇನೆಂದರೆ ಸತ್ಯಸ್ವರೂಪದ ಅಭಿಜ್ಞಾನಕ್ಕಾಗಿ, ವಿಜ್ಞಾನಕ್ಕಾಗಿ ಯೋಗ ಮಾರ್ಗಕ್ಕಿಂತ ಹಿರಿದಾದ ಅನ್ಯಮಾರ್ಗ ಯಾವುದಿಲ್ಲ. ಇದು ಶಿವನಿಂದ ಸಾರಲ್ಪಟ್ಟ ಸಿದ್ಧಾಂತವಾಗಿದೆ. ಈ ಶಿವಕಥಿತ ಸಿದ್ಧಾಂತದ ಸಪ್ತಶೃಂಗದ ಮೇಲೆ ಯೋಗೇಶ್ವರನಾದ ಮತ್ಸ್ಯೇಂದ್ರನಾಥನು ಶ್ರವಣದ ಮೂಲಕ ಮನನ ಮಾಡಿಕೊಂಡು ಗೋರಖನಾಥನಿಗೆ ಉಪದೇಶಿಸಿದ್ದಾನೆ ಹಾಗೂ ಸಿದ್ಧಸಿದ್ಧಾಂತ ಪದ್ಧತಿಯಲ್ಲಿ ಅಭಿವ್ಯಕ್ತವಾಗಿದೆ ಮತ್ತು ಸಾಧನಪರ ವಿದ್ಯೆಯು ಸಂಗೋಪ್ಯವಾಗಿದೆ.

## ಗೋರಕ್ಷ ಶತಕದ ಒಂದು ಮಹಾಮಹಿಮೆ:

**ಶ್ರೀಗುರುಂ ಪರಮಾನಂದಂ ವಂದೇ ಸ್ವಾನಂದವಿಗ್ರಹಮ್ । ಯಸ್ಯ ಸಾನ್ನಿಧ್ಯಮಾತ್ರೇಣ ಚಿದಾನಂದಾಯತೇ ತನು: ॥**

ನನ್ನ ಗುರುದೇವನಾದ ಸಾಕ್ಷಾತ್ ಪರಮಾನಂದನು, ಸಚ್ಚಿದಾನಂದ ಸ್ವರೂಪನು, ಆನಂದಮೂರ್ತಿಯ ಸಾನ್ನಿಧ್ಯ ಮಾತ್ರದಿಂದ ಈ ನನ್ನ ಶರೀರವು ಚಿದಾನಂದ ಚಿನ್ಮಯರವರಿಂದ ಪರಮಾನಂದಗೊಳ್ಳುವದೋ ಅಂತಹ ಮತ್ಸೇಂದ್ರನಾಥರಿಗೆ ನಾನು ನಮಸ್ಕಾರ ಮಾಡುತ್ತೇನೆ.

**ಅಂತರ್ನಿಶ್ಚಲಿತಶ್ಚ ದೀಪಕಾಲಿಕಾ ಸ್ವಾಧಾರಬಂಧಾದಿಭಿರ್ಯೋ**
**ಯೋಗೀ ಯುಗಕಲ್ಪಕಾಕಲನಾತತ್ತ್ವಂ ಚ ಜೇಗೀಯತೇ ।**
**ಜ್ಞಾನಾಮೋದಮಹೋದಧಿ: ಸಮಭವದ್ ಯತ್ರಾದಿನಾಥ: ಸದ್ವಯಂ**
**ವ್ಯಕ್ತಾವ್ಯಕ್ತಗುಣಾಧಿಕಂ ತಮನಿಶಂ ಶ್ರೀಮೀನನಾಥಂ ಭಜೇ ॥**

ಶ್ರೀ ಆದಿನಾಥ ಸ್ವರೂಪನು ಮೂಲಾಧಾರಬಂಧ, ಉಡ್ಡೀಯಾನಬಂಧ, ಜಾಲಂಧರಬಂಧ ಮೊದಲಾದ ಯೋಗಾಭ್ಯಾಸದ ಮೂಲಕ ಹೃದಯ ಕಮಲದಲ್ಲಿ ನಿಶ್ಚಲ ದೀಪಸ್ವರೂಪನಾದ ಪರಮಾತ್ಮನ ಕಲೆಯನ್ನು ಸಾಕ್ಷಾತ್ಕಾರಗೊಳಿಸಿ ಯುಗಕಲ್ಪಾದಿಯ ರೂಪದಲ್ಲಿ ಚಲಿಸುತ್ತಿರುವ ಕಾಲದ ರಹಸ್ಯಗಳನ್ನು ಹಾಗೂ ಸಮಸ್ತ ತತ್ವಗಳನ್ನು ಯೋಗಾಭ್ಯಾಸದಿಂದ ಜಯಪ್ರಾಪ್ತಿ ಮಾಡಿಕೊಂಡ ಹಾಗೂ ಸ್ವತ: ಜ್ಞಾನ ಹಾಗೂ ಆನಂದದ ಮಹಾಸಮುದ್ರನಾದ ಹಾಗೂ ಆದಿನಾಥನ ಸ್ವರೂಪನಾದ ಶ್ರೀ ಮೀನನಾಥನ ಗುರು ಮತ್ಸ್ಯೇಂದ್ರನಾಥನಿಗೆ ಭಕ್ತಿಪೂರ್ವಕವಾಗಿ ನಮಿಸುತ್ತೇನೆ.

**ಯೋಗಮಾರ್ಗಾತ್ಪರೋ ಮಾರ್ಗೋ ನಾಸ್ತಿ ನಾಸ್ತಿ ಶ್ರುತೌ ಸ್ಮೃತೌ । ಶಾಸ್ತ್ರೇಷ್ವನ್ಯೇಷು ಸರ್ವೇ ಶಿವೇನ ಕಥಿತ: ಪುರಾ ॥**

**(ಸಿದ್ಧ ಸಿದ್ಧಾಂತ ಪದ್ಧತಿ 5.21–22)**

**"ಗೋರಖನಾಥ್ ಆ್ಯಂಡ್ ದಿ ಕಾನಫಟಾ ಯೋಗಿಜ್"** ಎಂಬ ಕೃತಿಯ ಲೇಖಕನಾದ ಜಾರ್ಜ ವೆಸ್ಟಾನ್ ಬ್ರಿಗ್ಸ್ ಎಂಬ ಮಹಾಶಯನು ಗೋರಕ್ಷ ಶತಕದವನ್ನು ಮಹಾಯೋಗಿ ಗೋರಖಕನಾಥನ ಮೌಲಿಕ ಕೃತಿಯನ್ನಾಗಿ ದಾಖಲಿಸುತ್ತ ಅದರ ಪ್ರಮಾಣತ್ವವನ್ನು ಸಂದೇಹಾತೀತವಾದ್ದೆಂದೂ ಹಾಗೂ ದೋಷರಹಿತವಾದದ್ದೆಂದು ದಾಖಲಿಸಿದ್ದಾನೆ, ಅವನು ಈ ಕೃತಿಯಲ್ಲಿ ರೋಮನ್ ಲಿಪಿಯಲ್ಲಿ ಗೋರಕ್ಷಶತಕದ ಸಂಪೂರ್ಣ ಸಂಸ್ಕೃತ ಪಠ್ಯ ಹಾಗೂ ಅದರ ಇಂಗ್ಲೀಷ್ಅನುವಾದವನ್ನು ಒದಗಿಸಿದ್ದಾನೆ. ಈ ಮೂಲಕ ಸದರಿ ಕೃತಿಯ ಮಾಹಾತ್ಮ್ಯವನ್ನು ಪ್ರಕಟಪಡಿಸಿದ್ದಾನೆ, ಅಲ್ಲದೇ ಗೋರಕ್ಷಶತಕದ ರಚನೆಯ ತಾತ್ಪರ್ಯವನ್ನು

ಕುರಿತು ಯಥಾಶಕ್ತಿಯಾಗಿ ವಿವರಿಸಿದ್ದಾನೆ ಹಾಗೂ ಪರಾಮರ್ಶಿಶಿದ್ದಾನೆ. ಗೋರಕ್ಷಶತಕದ ನಾಮಾಂತರವಾದ ಜ್ಞಾನಶತಕ ಮತ್ತು ಜ್ಞಾನಪ್ರಕಾಶಶತಕ ಕೃತಿಗಳು ಇರುತ್ತವೆ. ಈ ವಿಚಾರವಾಗಿ ಮೇಲೆ ನಮೂದಿಸಿದ ಬಿಗ್ಸನ್ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಗೋರಕ್ಷಶತಕದ ಮೇಲೆ ಎರಡು ಟೀಕೆಗಳು ಉಪಲಬ್ಧವಿರುತ್ತವೆ. ಒಂದು ಶಂಕರನಾದರೆ ಇನ್ನೊಂದು ಮಥುರಾನಾಥ ಶುಕ್ಲರದು ಆಗಿರುತ್ತದೆ. ಈ ಎರಡು ಟೀಕೆಯ ಹೆಸರು ಉಲ್ಲೇಖಿತವಾಗಿದೆ. ಇದು ಗೋರಕ್ಷಶಾಸ್ತ್ರವೆಂದೂ ಹೇಳಲ್ಪಟ್ಟಿದೆ. ಗೋರಕ್ಷಶತಕದ ಲಕ್ಷ್ಮೀನಾರಾಯಣ ಕೃತ ಟೀಕೆಯು ಬಾಲಪ್ರಬೋಧಿನಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ನಿರ್ವಿವಾದವಾದ ವಿಷಯವೇನೆಂದರೆ ಗೋರಕ್ಷಶತಕವು ಯೋಗಸಾಧನೆಯ ದೃಷ್ಟಿಯಿಂದ ಹಠಯೋಗಾಧಾರಿತ ನಾಥಸಂಪ್ರದಾಯದ ಅಮೂಲ್ಯಪ್ರಮಾಣ ಗ್ರಂಥವಾಗಿದೆ.

ಗೋರಕ್ಷಶತಕದ ಆರಂಭದಲ್ಲಿಯೇ ಮಂಗಳಾಚರಣದ ರೂಪದಲ್ಲಿ ಯೋಗ ಮಹಾಜ್ಞಾನಾಮೃತದ ಶಿವಪರಂಪರಾಗತ ಅಭಿನ್ನ, ಅವಿಚ್ಛಿನ್ನ ಸ್ರೋತವಾದ ಪರಮಗುರುವಾದ ಯೋಗೀಂದ್ರ ಮತ್ಸ್ಯೇಂದ್ರನಾಥನು ದೇಹಸಿದ್ಧಿಯ ಗುರುವುಳ್ಳವನಾಗಿ ಪಿಂಡದಲ್ಲಿ ಬ್ರಹ್ಮಾಂಡದ ಸಾಮರಸ್ಯ ಮಾಧ್ಯಮದಿಂದ ಅಲಕ್–ನಿರಂಜನ ತತ್ವದ ಸಚ್ಚಿದಾನಂದದ ಸ್ವಾರಸ್ಯವನ್ನು ಪ್ರಕಟ ಪಡಿಸಿದ್ದಾನೆ, ಇದರಿಂದ ನಾನು ನನ್ನ ಗುರುದೇವನಾದ ಸಾಕ್ಷಾತ್ ಪರಮಾನಂದನಾದ ಮತ್ತು ಸಚ್ಚಿದಾನಂದ ಸ್ವರೂಪನಾಗಿರುವ ಅವನ ಸಾನ್ನಿಧ್ಯ ಮಾತ್ರದಿಂದ ಈ ದೇಹವು ಸಚ್ಚಿದಾನಂದ, ಚಿನ್ಮಯ ಹಾಗೂ ಪರಮಾನಂದಕರವಾಗಿರುತ್ತದೆಯೋ ಅಂಥ ಮತ್ಸ್ಯೇಂದ್ರನಾಥನಿಗೆ ನಮಸ್ಕಾರ ಮಾಡುವೆನು ಎಂದು ದಾಖಲಿಸಿದ್ದಾನೆ.

ಆ ಮತ್ಸ್ಯೇಂದ್ರನಾಥನು ಮೂಲಾಧಾರ ಬಂಧ, ಉಡ್ಡೀಯಾನಬಂಧ, ಜಾಲಂಧರಬಂಧ ಮೊದಲಾದ ಯೋಗಾಭ್ಯಾಸದ ಮೂಲಕ ಹೃದಯ ಕಮಲದಲ್ಲಿ ನಿಶ್ಚಲವಾದ ದೀಪದ ಜ್ಯೋತಿಯಂಥ ಪರಮಾತ್ಮನ ಕಲೆಯ ಸಾಕ್ಷಾತ್ಕಾರ ಮಾಡಿಕೊಂಡು ಯುಗಕಲ್ಪಾದಿಯ ರೂಪದಲ್ಲಿ ತಿರುಗುತ್ತಿರುವ ಕಾಲದ ರಹಸ್ಯಗಳನ್ನು ತನ್ನ ವಶಗೊಳಿಸಿಕೊಂಡರು ಮತ್ತು ಸ್ವತ: ಜ್ಞಾನ ಹಾಗೂ ಆನಂದದ ಮಹಾಸಮುದ್ರನಾದ ಶ್ರೀ ಆದಿನಾಥನ ಸ್ವರೂಪನಾದನು. ಈ ತರಹ ತನ್ನ ಗುರುವಿನ ಚರಣಕಮಲಗಳಲ್ಲಿ ನಮಸ್ಕರಿಸುವ ಮೂಲಕ ಮಹಾಯೋಗಿ ಗೋರಖನಾಥನು ಯೋಗಿಗಳ ಅಭೀಷ್ಟೆಯಾದ ಉತ್ತಮ ಯೋಗಜ್ಞಾನವನ್ನು ಗೋರಕ್ಷಶತಕದಲ್ಲಿ ಬಣ್ಣಿಸಿದ್ದಾನೆ. ಇದು ಗುರುವಿನಿಂದ ಪ್ರದತ್ತವಾದ ಉತ್ತಮಜ್ಞಾನವಾಗಿದ್ದು ಸಾಕ್ಷಾತ್ ಗುರುಸ್ವರೂಪ ಯೋಗಜ್ಞಾನವಾಗಿದೆ ಮತ್ತು ಇದರ ಮೂಲಕ ಯೋಗಸಾಧಕನು ಸಚ್ಚಿದಾನಂದ ಮೂರ್ತಿಯಾಗುತ್ತಾನೆ.

**ಶ್ರೀಗುರುಂ ಪರಮಾನಂದಂ ವಂದೇ ಸ್ವಾನಂದವಿಗ್ರಹಮ್ ....... ಚಿದಾನಂದಾಯತೇ ತನು: ॥ (ಯೋರಕ್ಷಶತಕ–1)**

ಯೋಗಿಗಳ ಹಿತವನ್ನು ಅನುಲಕ್ಷಿಸಿ ಗೋರಕ್ಷನಾಥನು ಗೋರಕ್ಷಶತಕವನ್ನು ರಚಿಸಿದ್ದಾನೆ. ಇದರ ಬೋಧನೆಯನ್ನು ಆಚರಿಸುವದರಿಂದ ನಿಶ್ಚಿತವಾಗಿ ಪರಮ ಪದವು ಜೀವನ್ಮುಕ್ತಿಯು ದೊರೆಯುತ್ತದೆ. ಆದುದರಿಂದ ಇದರಿಂದ ಕೈವಲ್ಯಪ್ರಾಪ್ತಿಗೆ ಸಹಾಯವಾಗುವುದು. ಇಲ್ಲಿ ನಾಥಯೋಗವು ಆಚರಿಸುತ್ತಿರುವ ಹಠಯೋಗದ ಸಾಧನೆಯಿದ್ದು ಅದರ ತೇಜದಿಂದಲೇ ಮಹಾಯೋಗ ಜ್ಞಾನದ ಚಿಂತನೆ ಮಾಡಲಾಗುತ್ತದೆ. ಹೀಗಾಗಿ ಇದೊಂದು ಮುಕ್ತಿಯ ಸೋಪಾನವಾಗಿದೆ.

ಯೋಗ ಸಾಧನೆಯಿಂದ ಯೋಗಿಯು ತನ್ನ ಸ್ವ–ಇಚ್ಛೆಯಿಂದ ದೇಹತ್ಯಾಗ ಮಾಡುವ ಸಾಮರ್ಥ್ಯವನ್ನು ಹೊಂದುತ್ತಾನೆ. ಪರಮಾತ್ಮನ ಸ್ಮರಣೆ, ಧ್ಯಾನ ಹಾಗೂ ಚಿಂತನದಿಂದಾಗಿ ಅವನಂತಾಗಲು ಸಾಧ್ಯವಿದೆ. ಗೋರಖನಾಥನು ಅಂತರ್ಧ್ಯಾನವನ್ನು ತನ್ನ ಯೋಗಜ್ಞಾನವನ್ನಾಗಿಸಿಕೊಂಡು ಶ್ರುತಿ ಮಾರ್ಗವನ್ನು ಸೂಚಿಸಿದ್ದಾನೆ. ಶ್ರುತಿ ಮತ್ತು ವೈದಿಕ ವಿಚಾರ–ವನ್ನು ಉಪೇಕ್ಷಿಸದೇ ವೇದವು ಕಲ್ಪತರುವಾಗಿದೆ ಅಲ್ಲದೇ ಶಾಖೆಗಳಿಗೆ ಹಾಗೂ ಪಕ್ಷಿಗಳಿಗೆ ದ್ವಿಜರಿಗೆ, ಪಂಡಿತರಿಗೆ, ಜ್ಞಾನಿಗಳಿಗೆ ಹಾಗೂ ಯೋಗಿಗಳಿಗೆ ಆಶ್ರಯಸ್ಥಾನವಾಗಿರುವುದು. ಅದೇ ತರಹ ಯೋಗಿಗಳ ಮೂಲಕ ವೇದದ ಶಾಖೆಗಳನ್ನು ಹಾಗೂ ಪ್ರತಿಶಾಖೆಗಳನ್ನು ಪರಿಶೀಲಿಸಲು ಅನುಕೂಲಕರವಾಗಿದೆ. ವೇದರೂಪ ಕಲ್ಪತರುವಿನ ಫಲವು ಯೋಗವಾಗಿದೆ. ಈ ಯೋಗವು ಸಂಸಾರದ ಆಧಿದೈಹಿಕ, ಆಧಿಭೌತಿಕ ಹಾಗೂ ಆಧಿದೈವಿಕ ತಾಪವನ್ನು ಶಮನಗೊಳಿಸುವುದಾಗಿದೆ.

**ದ್ವಿಜಸೇವಿತ ಶಾಖಸ್ಯ ಶ್ರುತಿಕಲ್ಪತರೋ: ಫಲಮ್ । ಶಮನಂ ಭವತಾಪಸ್ಯ ಯೋಗಂ ಭಜತ ಸತ್ತಮಾ: ॥ (ಗೋರಕ್ಷಶತಕ–6)**

ನಾಥಮತ ಗೋರಕ್ಷಶತಕದಲ್ಲಿ ಸಿದ್ಧಾಮೃತದ ಅನುಸಾರವಾಗಿ ಗೋರಕ್ಷನಾಥನು ಯಮ, ನಿಯಮವನ್ನು ಹೊರತು ಪಡಿಸಿ ಷಡಂಗಯೋಗವಾದ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿಯ ಪ್ರತಿಪಾದನೆಯನ್ನು ಮಾಡಿದ್ದಾನೆ, ಅವನ ವಿಚಾರದ ಪ್ರಕಾರ ಯೋಗಾಸನಗಳು ಷಡಂಗಯೋಗದ ಪ್ರಥಮಾಂಗವಾಗುತ್ತವೆ.

ಎರಡನೇಯದು ಪ್ರಾಣಾಯಾಮವಾಗಿದೆ. ಮೂರನೆಯದು ಪ್ರತ್ಯಾಹಾರದಿಂದ ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಿಂದ ಹಿಂತೆಗೆಯುತ್ತವೆ. ನಾಲ್ಕನೆಯದಾದ ಧಾರಣಾದಿಂದ ಮನಸ್ಸನ್ನು ತನ್ನ ಗುರಿಯಲ್ಲಿ ನೆಲೆಗೊಳ್ಳುವಂತೆ ಮಾಡುತ್ತವೆ. ಐದನೆಯದಾದ ಧ್ಯಾನದ ಮೂಲಕ ಆತ್ಮಸ್ವರೂಪ ಇಲ್ಲಿವೆ ಅಲಕ್ ನಿರಂಜನನಾದ ಪರಮೇಶ್ವರನ ಚಿಂತನೆ ಮಾಡುವುದಾಗಿದೆ. ಆರನೆಯದಾದ ಸಮಾಧಿಯಿಂದ ಧ್ಯೇಯ ವಸ್ತುವಿನ ಮೇಲೆ ಆತ್ಮದ ಅಭಿನ್ನತೆ ಅಥವಾ ಏಕಾಕಾರವಾಗುವಿಕೆ ಸಿದ್ಧಗೊಳ್ಳುತ್ತದೆ. ಈ ಷಡಂಗಯೋಗವನ್ನು ಸೈದ್ಧಾಂತಿಕವಾಗಿ ಹಾಗೂ ಪ್ರಕ್ರಿಯಾತ್ಮಕವಾಗಿ ವಿವೇಚನೆ ಮಾಡಲಾಗಿದೆ

## ಉಪದೇಶದ ಮಹತ್ವ ಅಂಶಗಳು

**ಆಸನಂ ಪ್ರಾಣಸಂರೋಧ: ಪ್ರತ್ಯಾಹಾರಶ್ಚ ಧಾರಣಾ । ಧ್ಯಾನಂ ಸಮಾಧಿರೇತಾನಿ ಯೋಗಾಂಗಾನಿ ವದಂತಿ ಷಟ್ ॥ (ಗೋ.ಶ–7)**

ಜೀವರಾಶಿಗಳು 84 ಯೋನಿಗಳಿಂದ ದಾಟಿಬಂದವೆಂದು ಹೇಳಲಾಗಿದ್ದು, ಶಿವನೇ ಯೋಗದ ಆದಿಗುರುವಾದ ಮಹೇಶ್ವರನಾಗಿ ಆಸನಗಳ ಸಂಖ್ಯೆ ಹಾಗೂ ಜೀವಿಗಳ ಯೋನಿಗಳ ಅನುಪಾತಕ್ರಮವಾಗಿ 84 ಲಕ್ಷಗಳೆಂದು ಸಾರಿದ್ದಾನೆ. ಈ 84 ಲಕ್ಷ ಆಸನಗಳ

ಪ್ರಕಾರಗಳನ್ನು ಶಿವನು ಮಾತ್ರ ಬಲ್ಲವನಾಗಿದ್ದು, ಆಸನಗಳ ಅಭ್ಯಾಸ ಮತ್ತು ಸಾಧನೆಯ ವರ್ಣನೆ ಮಾಡಿದ್ದಾನೆ. ಮತ್ತು ಕೇವಲ 84 ಆಸನಗಳು ಪ್ರಮುಖವೆಂದು ಸ್ವೀಕರಿಸಿದ್ದಾನೆ. ಅವುಗಳಲ್ಲಿ ಪದ್ಮಾಸನ, ಸಿದ್ಧಾಸನಗಳು ಪ್ರಮುಖವೆಂದು ಸ್ವೀಕರಿಸುತ್ತಾನೆ. ಗುದ ಮತ್ತು ಮೇಢ್ರದ ಮಧ್ಯದಲ್ಲಿ ಕುಂಡಲಿಯ ಸ್ಥಾನವಿದೆ. ಯೋಗಿಯು ಈ ಸ್ಥಾನವನ್ನು ಎಡಗಾಲಿನ ಹಿಮ್ಮಡಿಯಿಂದ ಒತ್ತಿಹಿಡಿದು, ಬಲಗಾಲಿನ ಹಿಮ್ಮಡಿಯಿಂದ ಮೇಢ್ರದ ಮೇಲಿಟ್ಟು, ಶರೀರವನ್ನು ನೇರವಾಗಿ ಸ್ಥಿರವಾಗಿರಿಸಿ, ಸಕಲ ಇಂದ್ರಿಯಗಳನ್ನು ಸಂಯಮಗೊಳಿಸಿ ಭ್ರೂಮಧ್ಯದಲ್ಲಿ ದೃಷ್ಟಿಯನ್ನು ಕೇಂದ್ರೀಕರಿಸಿ ಅಲುಗಾಡದೇ ಸ್ಥಿರವಾಗಿ ಕುಳಿತುಕೊಳ್ಳಬೇಕು. ಇದೇ ರೀತಿಯಾಗಿ ಮಾಡುವುದರಿಂದ ಮೋಕ್ಷದ ಬಾಗಿಲನ್ನು ತೆರೆಯುವ ಹಾಗೂ ಮೋಕ್ಷವನ್ನು ಪ್ರಧಾನ ಮಾಡುವ ಆಸನಗಳಲ್ಲಿ ಇವು ಪ್ರಮುಖವಾಗಿದೆ ಎಂಬ ವಿಚಾರವನ್ನು ತಿಳಿಯುತ್ತೇವೆ.

ಮಹಾಯೋಗಿ ಗೋರಖನಾಥನು ನಾಡಿಗಳಲ್ಲಿ ಹಾಗೂ ಅವುಗಳಲ್ಲಿ ಪ್ರಧಾನವಾದ ಇಡಾ ಪಿಂಗಳಾ ಹಾಗೂ ಸುಷುಮ್ನಾ ನಾಡಿಗಳ ವರ್ಣನೆಯನ್ನು ವಿಸ್ತೃತವಾಗಿ ವಿವರಿಸಿದ್ದಾನೆ ಹಾಗೂ ಶರೀರವನ್ನು ನಿಯಂತ್ರಿಸುವ ಅಥವಾ ನಿಯಾಮಕಗೊಳಿಸುವ ದಶವಾಯುಗಳ ನಿರೂಪಣೆಯನ್ನು ಸಾರ್ಥಕವಾಗಿ ಮಾಡಿರುವನು. ಇದರಲ್ಲಿ 72000 ನಾಡಿಗಳ ಉದ್ಗಮ ಸ್ಥಾನವನ್ನು ಹಾಗೂ ಅವುಗಳಲ್ಲಿ ಹತ್ತು ಪ್ರಾಣವಾಹಿನಿ ನಾಡಿಗಳು ಪ್ರಮುಖವೆಂದು ತಿಳಿಸಿದ್ದಾರೆ; ಅವುಗಳೆಂದರೆ– **ಇಡಾ, ಪಿಂಗಳಾ, ಸುಷುಮ್ನಾ, ಗಾಂಧಾರೀ, ಹಸ್ತಿಜಿಹ್ವಾ, ಪೂಷಾ, ಯಶಸ್ವಿನೀ, ಅಲಂಬುಷಾ, ಕೂಹೂ ಮತ್ತು ಶಂಖಿನೀ** ನಾಡಿಗಳಾಗಿವೆ.

ಈ ನಾಡಿಗಳ ಜೊತೆಗೆ ಸಂಬಂಧಿಸಿದ ಚಕ್ರಗಳನ್ನು ಅರಿಯುವವರು ಯೋಗಿಗೆ ಪರಮಾವಶ್ಯಕವಾಗಿದೆ; ನಾಸಿಕದ ಮೂಗಿನ ಎಡಭಾಗದಲ್ಲಿ ಇಡಾ, ಬಲಗಡೆಗೆ ಪಿಂಗಳಾ ಹಾಗೂ ಇವುಗಳ ಮಧ್ಯದಲ್ಲಿರುವುದೇ ಸುಷುಮ್ನಾ ನಾಡಿಯಾಗಿದೆ, ಗಾಂಧಾರೀ ನಾಡಿಯು ಎಡಕಣ್ಣಿನಲ್ಲಿ, ಹಸ್ತಿಜಿಹ್ವಾ ನಾಡಿಯು ಬಲಗಣ್ಣಿನಲ್ಲಿರುತ್ತದೆ, ಪೂಷಾ ನಾಡಿಯು ಬಲಕಿವಿಯಲ್ಲಿ ಹಾಗೂ ಯಶಸ್ವಿನಿ ಎಡಕಿವಿಯಲ್ಲಿರುತ್ತದೆ, ಅಲಂಬುಷಾವೆಂಬ ನಾಡಿಯೂ ಬಾಯಿಯಲ್ಲಿರುತ್ತದೆ ಹಾಗೂ ಕೂಹೂ ನಾಡಿಯು ಲಿಂಗವುಳ್ಳ ಸ್ಥಾನದಲ್ಲಿರುವುದು, ಶಂಖಿನೀ ನಾಡಿ ಮೂಲಾಧಾರದಲ್ಲಿರುತ್ತದೆ, ಇಡಾ, ಪಿಂಗಳಾ ಹಾಗೂ ಸುಷುಮ್ನಾಗಳು ಪ್ರಾಣಾಮಾರ್ಗದಲ್ಲಿರುತ್ತದೆ. ಇವುಗಳು ಸದಾ ಶರೀರದಲ್ಲಿ ಪ್ರಾಣವನ್ನು ಸಂಚಾರಗೊಳಿಸುತ್ತಿರುತ್ತವೆ ಹಾಗೂ ಸ್ಥಿತವಾಗಿರುತ್ತವೆ, ಇವುಗಳಿಗೆ ಅನುಕ್ರಮವಾಗಿ ದೇವತೆಗಳಾದ ಚಂದ್ರ, ಸೂರ್ಯ ಹಾಗೂ ಅಗ್ನಿಗಳು ದೇವತೆಗಳಾಗಿರುತ್ತವೆ.

ಮಾನವನ ಶರೀರದಲ್ಲಿ ಹತ್ತು ವಾಯುಗಳಾದ ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ, ನಾಗ, ಕೂರ್ಮ, ಕೃಕರ, ದೇವದತ್ತ ಹಾಗೂ ಧನಂಜಯಗಳಾಗಿರುತ್ತವೆ

**ಪ್ರಾಣವು ಹೃದಯದಲ್ಲಿ** ನಿತ್ಯ ವಾಸವಾಗಿರುವದು, **ಅಪಾನವು ಗುದಮಂಡಲದಲ್ಲಿ** ನಿತ್ಯ ವಾಸವಾಗಿರುವುದು, **ಸಮಾನವು ನಾಭಿ ಪ್ರದೇಶದಲ್ಲಿ** ನಿತ್ಯ ವಾಸವಾಗಿರುವುದು, **ಉದಾನವು ಕಂಠದ ಮಧ್ಯಭಾಗದಲ್ಲಿ** ನಿತ್ಯ ವಾಸವಾಗಿರುವುದು, **ವ್ಯಾನವು ಸಂಪೂರ್ಣ ಶರೀರದಲ್ಲಿ** ನಿತ್ಯ ವಾಸವಾಗಿರುವುದು **ಈ ಐದು ವಾಯುಗಳು ಪ್ರಧಾನವಾದ ವಾಯುಗಳಾಗಿವೆ ಹಾಗೂ ಪಂಚಪ್ರಾಣಗಳಾಗಿವೆ.**

**ನಾಗವಾಯುವು** (ಉದ್ಗಾರ)ಡರಿಕೆಯನ್ನುಂಟು ಮಾಡುತ್ತದೆ, **ಕೂರ್ಮವಾಯುವು ಕಣ್ಣುಗಳ** ಪಿಳಿಕಿಸುವಿಕೆಯನ್ನುಂಟು ಮಾಡುವುದಾಗಿದೆ, **ಕೃಕರ ವಾಯುವು ಶೀನುವಿಕೆಯನ್ನುಂಟು** ಮಾಡುವುದು, **ದೇವದತ್ತ ವಾಯುವು ಆಕಳಿಕೆಯನ್ನುಂಟು** ಮಾಡುತ್ತದೆ, **ಧನಂಜಯ ವಾಯುವು ಸಂಪೂರ್ಣ ಶರೀರವನ್ನು** ವ್ಯಾಪಿಸಿಕೊಂಡಿರುವಿಕೆಯಾಗಿದೆ.

ಮೃತವಾದ ಶರೀರವನ್ನು ನಾಲ್ಕು ಗಂಟೆಗಳವರೆಗೂ ಈ ವಾಯುವು ಪರಿತ್ಯಾಗ ಮಾಡುವುದಿಲ್ಲ ಶರೀರದೊಂದಿಗೆ ನಾಲ್ಕು ಗಂಟೆಗಳವರೆಗೆ ವ್ಯಾಪಿಸಿಕೊಂಡಿರುವುದು ಈ ದಶವಾಯುಗಳು ಶರೀರದ ಎಲ್ಲ ನಾಡಿಗಳಲ್ಲಿ ಭ್ರಮಣ ಮಾಡಿ ಸಂಚಾರಿಸುತ್ತವೆ.

ಹಠಯೋಗದ ಪ್ರಕ್ರಿಯೆಯಂತೆ **"ಹಂಸ"** ಮಂತ್ರದ ಜಪ ಮಾಡುತ್ತ (21600) ಇಪ್ಪತ್ತೊಂದು ಸಾವಿರದ ಆರುನೂರು ಹಂಸ ಮಂತ್ರವನ್ನು ಹಗಲಿರುಳು ಜೀವಾತ್ಮವು ಮಾಡುತ್ತಿರುತ್ತದೆ ಇದಕ್ಕೆ ಅಜಪಾ ಗಾಯತ್ರಿಯೆಂದು ಕರೆಯಲಾಗುತ್ತದೆ ಇದು ಯೋಗಿಗಳಿಗೆ ಮೋಕ್ಷದಾಯಕ ಮಾರ್ಗವಾಗಿದೆಯೆಂಬುದನ್ನು ತಿಳಿಯಲು ಸಹಕಾರಿಯಾಗಿದೆ.

ಯೋಗ ಸಾಧಕನು ಕ್ರಮೇಣ ಶಕ್ತಿಚಾಲನಿಯೇ ಮೊದಲಾದ ಮುದ್ರೆಗಳಿಂದ ಕುಂಡಲಿನಿಯ ಜಾಗೃತಿಗಾಗಿ ಹಾಗೂ ಹಠಯೋಗದ ಸಿದ್ಧಿಗಾಗಿ ಯತ್ನಿಸಿ ಅದರ ಮೂಲಕ ರಾಜಯೋಗದೆಡೆಗೆ ಅಂದರೆ ಉನ್ನತ ಮಾರ್ಗದತ್ತ ಮುಂದುವರಿಯಬೇಕು, ಈ ಪ್ರಕ್ರಿಯೆಯಲ್ಲಿದ್ದಾಗ ಶರೀರ ಶ್ರಮದಿಂದುಂಟಾದ ಬೆವರನ್ನು ಶರೀರಕ್ಕೆ ಮರಳಿ ತಿಕ್ಕಬೇಕು, ಆದರಿಂದ ಶರೀರವು ಸದೃಢವಾಗುವುದು ಹಾಗೂ ಹಗುರವಾಗುವುದು, ಹೀಗೆ ಎಲ್ಲ ರೀತಿಯಿಂದಲೂ ಯೋಗಾಸಕ್ತನಾಗಿ ಕುಂಡಲಿನಿಯನ್ನು ಜಾಗೃತಗೊಳಿಸಿಕೊಳ್ಳಬೇಕು; ಇದಕ್ಕೆ ಖೇಚರಿ ಮುದ್ರೆಯು ಮಹತ್ವದ್ದಾಗಿದ್ದು ಅದನ್ನು ಯತ್ನಪೂರ್ವಕ ಸಿದ್ಧಿಸಬೇಕೆಂಬುದಾಗಿ ಹೇಳಲಾಗಿದೆ.

**ಚಿತ್ತಂ ಚರತಿ ಖೇ ಯಸ್ಯಾಜ್ಜಿಹ್ವಾ ಚರತಿ ಖೇ ಗತಾ । ತೇನೈವ ಖೇಚರೀ ಮುದ್ರಾ ಸರ್ವಸಿದ್ಧೈರ್ನಮಸ್ಕೃತಾ ॥ (ಗೋ. ಶ–67)**

ವೀರ್ಯವನ್ನು ಸುರಕ್ಷಿತವಾಗಿಟ್ಟುಕೊಂಡು ಊರ್ಧ್ವಗಾಮಿಯನ್ನಾಗಿ ಮಾಡುವ ಪ್ರಕ್ರಿಯೆಯನ್ನು ಹಾಗೂ ಶುಕ್ರವು ಚಂದ್ರನಿಂದ ಸಂಯುಕ್ತವಾಗಿದ್ದರೆ ರಜವು ಸೂರ್ಯನಿಂದ ಸಂಯುಕ್ತಗೊಳ್ಳುತ್ತದೆ. ಇವೆರಡರ ಸಾಮರಸ್ಯವೇ ಐಕ್ಯದ ರಹಸ್ಯವಾಗಿದೆ ಎಂಬು–ದನ್ನು ತಿಳಿಸುತ್ತಾ ಮಹಾಯೋಗಿ ಗೋರಖನಾಥನು ಬಂಧತ್ರಯಗಳ ಮಹತ್ವ ಪ್ರಾಣಾವಾಯುವಿನ ಸ್ಥಿರತೆ, ಓಂಕಾರ ಸ್ವರೂಪ,

ಪರಮಜ್ಯೋತಿಯ ಸಾಕ್ಷಾತ್ಕಾರಗಳು ಮಾನವಜೀವನದ ಯೋಗಸಾಧನೆಗೆ ಪರಮಸಫಲತೆಯಾಗಿದೆ ಎಂದು ಹೇಳಿದ್ದಾನೆ. ಉಡ್ಡೀಯಾನ ಬಂಧವು ನಾಡಿಗಳ ಜಾಲವನ್ನು ಬಂಧಿಸುವುದು, ಶಿರದಿಂದ ಕೆಳಗಿಳಿಯುವ ಜಲವು ಸಹಸ್ರಾರದಿಂದ ದ್ರವಿಸುವ ಅಮೃತವನ್ನು ಕೆಳಗೆ ಜಾರದಂತೆ ತಡೆದು ನಿಲ್ಲಿಸುತ್ತದೆ. ಹೀಗಾಗಿ ವಿಕಾರಾದಿ ದೋಷಗಳು ನಿರ್ಮೂಲನವಾಗುತ್ತವೆ, ಘೇರಂಡ ಸಂಹಿತೆಯನ್ನು ಉಲ್ಲೇಖಿಸುತ್ತ ಊಡ್ಡೀಯಾನ ಬಂಧವು ಅತಿ ಪಾರಮ್ಯವನ್ನು ದೃಢವಾಗಿ ಮಂಡಿಸಲಾಗಿದೆ.

ಊಡ್ಡೀಯಾನದ ಅಭ್ಯಾಸದಿಂದ ಯೌವನ ಸ್ಥಿರವಾಗಿರುವುದು, ಘೇರಂಡ ಮುನಿಯ ಪ್ರಕಾರ ಈ ಉಡ್ಡೀಯಾನ ಬಂಧದ ನಿರಂತರ ಅಭ್ಯಾಸದಿಂದ ಮುಕ್ತಿಯು ಸಹಜವಾಗಿ ಸಿದ್ಧಿಸುವುದು.

ಮಹಾಯೋಗಿ ಗೋರಕ್ಷನಾಥನು ಓಂಕಾರಜ್ಯೋತಿ ಸ್ವರೂಪನಾದ ಪರಬ್ರಹ್ಮನ ಉಪಾಸನೆಯನ್ನು ಕುರುತು ಯೌಗಿಕ ವಿಧಿಯನ್ನು ಹೇಳಿದ್ದಾನೆ ಅಲ್ಲದೇ ಸಾಧಕನು ಶರೀರಾದಿಗಳಿಂದ ನಿರ್ಮೂಲನಾಗಿರಬಹುದು, ಅಥವಾ ಆಗಿರಲಿಕ್ಕಿಲ್ಲ, ಪಾಪ ಪುಣ್ಯಗಳಿಂದ ಮುಕ್ತನಾಗಿರಬಹುದು ಅಥವಾ ಆಗಿರಲಿಕ್ಕಿಲ್ಲ ಆದರೂ ಈ ಪ್ರಣವದ ಜಪ ಮಾಡುವುದರಿಂದ ನೀರಿನಲ್ಲಿದ್ದ ಕಮಲದಪತ್ರದಂತೆ ಲಿಪ್ತನಾಗುವುದಿಲ್ಲ. ಆದುದರಿಂದ ಓಕಾರ ಜಪವು ಅವನಿಗೆ ಅತ್ಯಗತ್ಯವಾಗಿದೆ. ಮಹಾಯೋಗಿಯ ಪ್ರಕಾರ ಶರೀರದಲ್ಲಿ ಪ್ರಾಣಸಂಚಾರ ಸ್ಥಗಿತವಾಗುವವರೆಗೆ ವೀರ್ಯವು ಸ್ಥಿರವಾಗುವುದಿಲ್ಲ. ಪ್ರಾಣಾದ ನಿಶ್ಚಲತೆಯೇ ವೀರ್ಯದ ನಿಶ್ಚಲತೆಗೆ ಕಾರಣವಾಗುವುದು

## ಉಪಸಂಹಾರ:

ಗೋರಕ್ಷನಾಥ ಯೋಗಿಯು ಸ್ಪಷ್ಟವಾಗಿ ತಿಳಿಸುವುದೇನೆಂದರೆ ಸತ್ಯಸ್ವರೂಪದ ಅಭಿಜ್ಞಾನಕ್ಕಾಗಿ, ವಿಜ್ಞಾನಕ್ಕಾಗಿ ಯೋಗಮಾರ್ಗಕ್ಕಿಂತ ಶ್ರೇಷ್ಠವಾಗ ಬೇರೆ ಮಾರ್ಗಗಳಿರುವುದಿಲ್ಲ. ಇದು ಶಿವನಿಂದ ಸಾರಲ್ಪಟ್ಟ ಸಿದ್ಧಾಂತವಾಗಿದೆ. ಈ ಶಿವಕಥಿತ ಸಿದ್ಧಾಂತದ ಸಪ್ತಶೃಂಗದ ಮೇಲೆ ಯೋಗೇಶ್ವರನಾದ ಮತ್ಸ್ಯೇಂದ್ರನಾಥನು ಶ್ರವಣದ ಮೂಲಕ ಮನನ ಮಾಡಿಕೊಂಡು ಗೋರಖನಾಥನಿಗೆ ಉಪದೇಶಿಸಿದ್ದಾನೆ.

ಭಗವಾನ್ ಗೋರಖನಾಥನು ತಾನು ಪಡೆದ ಅನುಭೂತಿಯನ್ನು ಗೋರಕ್ಷಶತಕದಲ್ಲಿ ಅಮೂಲ್ಯ ನಿಧಿಯಾಗಿರುವ ವಿಚಾರವನ್ನು ನೂರೊಂದು ಶ್ಲೋಕಗಳ ಮೂಲಕ (101) ಯಮ, ನಿಯಮವನ್ನು ಹೊರತುಪಡಿಸಿ ಷಡಂಗಯೋಗವಾದ ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿಯ ಪ್ರತಿಪಾದನೆಯನ್ನು ಮಾಡಿದ್ದಾನೆ,

ಆಸನಗಳು. ಪಾಣಾಯಾಮ, ಬಂಧಗಳು ಹಾಗೂ 72000 ನಾಡಿಗಳಲ್ಲಿ ಹತ್ತು ನಾಡಿಗಳು ಪ್ರಮುಖವಾಗಿರುವ ಬಗ್ಗೆ ಹಾಗೂ ಮಾನವನ ಶರೀರದಲ್ಲಿ ಹತ್ತು ವಾಯುಗಳಾದ ಪ್ರಾಣಾ, ಅಪಾನ, ಸಮಾನ, ಉದಾನ, ವ್ಯಾನ, ನಾಗ, ಕೂರ್ಮ, ಕೃಕರ, ದೇವದತ್ತ ಹಾಗೂ ಧನಂಜಯಗಳಾಗಿರುತ್ತವೆ.

ಮುದ್ರೆಗಳಿಂದ ಕುಂಡಲಿನಿಯ ಜಾಗೃತಿಗಾಗಿ ಹಾಗೂ ಹಠಯೋಗದ ಸಿದ್ಧಿಗಾಗಿ ಯತ್ನಿಸಿ ಅದರ ಮೂಲಕ ರಾಜಯೋಗದೆಡೆಗೆ ಅಂದರೆ ಉನ್ನತ ಮಾರ್ಗದತ್ತ ಮುಂದುವರಿಯಬೇಕೆಂಬುದನ್ನು ತಿಳಿಸುತ್ತಾರೆ.

**ಚಲೇ ವಾತೇ ಚಲೇ ಬಿಂದುರ್ನಿಶ್ಚಲೇ ನಿಶ್ಚಲೋ ಭವೇತ್ ।**

**ಯೋಗೀ ಸ್ಥಾಣುತ್ವಮಾಪ್ನೋತಿ ತತೋ ವಾಯುಂ ನಿರೋಧಯೇತ್ ॥**

ಪ್ರಾಣ ಮತ್ತು ಬಿಂದುವಿನ ನಿಶ್ಚಲತೆಯೇ ಯೋಗಿಗೆ ಸಾಧನೆಯಲ್ಲಿ ಸ್ಥಿರತೆಯ ಸಿದ್ಧಿಯನ್ನು ನೀಡುತ್ತದೆ. ಆದುದರಿಂದ ಪ್ರಾಣಾಯಾಮದ ಅಭ್ಯಾಸವು ಅಗತ್ಯವಾಗುತ್ತದೆ. ಪ್ರಾಣವು ಶರೀರವನ್ನು ಬಿಟ್ಟ ಮೇಲೆಯೇ ಆತ್ಮವು ಶರೀರವನ್ನು ಬಿಡುವುದು.

ಮೇಲ್ಕಂಡ ವಿಷಯಗಳಿಂದ ಗೋರಖನಾಥನು ಮಹಾಯೋಗಿಯ ಗೋರಕ್ಷಶತಕವು ನಾಥ ಸಂಪ್ರದಾಯದ ಸಿದ್ಧಾಮೃತ ಮಾರ್ಗವಾಗಿದ್ದು; ಅತ್ಯಂತ ಪ್ರಮಾಣಯುಕ್ತ ಯೋಗಶಾಸ್ತ್ರವಾಗಿದೆ ಎಂಬುದನ್ನು ನಾವೆಲ್ಲರೂ ತಿಳಿಯುವುದಕ್ಕೆ ಪ್ರಯತ್ನ ಮಾಡಿದರೆ ಜೀವನದಲ್ಲಿ ಮೋಕ್ಷವನ್ನು ಸಾಧಿಸಲು ಸಾಧ್ಯವಾಗುತ್ತದೆ ಎಂಬುದನ್ನು ಈ ನನ್ನ ಕಿರು ಸಂಶೋಧನೆ ಮೂಲಕ ತಿಳಿಸುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಇದರಲ್ಲಿ ಏನಾದರು ಒಳ್ಳೆಯ ಗುಣಗಳಿಂದ ಕೂಡಿದ ಅಂಶಗಳಿದ್ದರೆ ಗುರುವಿನಿಂದ ಬಂದಿರುವ ಅಂಶವೆಂದು ಸ್ವೀಕರಿಸಿ, ಏನಾದರೂ ದೋಷಗಳಿದ್ದರೆ ನನ್ನ ಅಜಾಗರೂಕತೆಯಿಂದ ಆಗಿರುತ್ತದೆ ಅದನ್ನು ಮನ್ನಿಸಬೇಕೆಂದು ವಿನಂತಿಸುತ್ತಾ ಈ ನನ್ನ ವಾಕ್ಯವನ್ನು ಮುಕ್ತಾಯ ಮಾಡುತ್ತೇನೆ.

## ಪರಾಮರ್ಶನ ಗ್ರಂಥಗಳು:

1. ಗೋರಕ್ಷಶತಕ
2. ಶಿವಸಂಹಿತೆ,
3. ಹಠಯೋಗ ಪ್ರದೀಪಿಕೆ
4. ಹಠಯೋಗ ದೀಪಿಕೆ
5. ಘೇರಂಡ ಸಂಹಿತಾ

*********

Volume XX : July to December – 2022, ISSN 2250-1711
Journal of Veda Samskrita Academy [Recognised in the UGC-CARE List]

# ಸಂಸ್ಕೃತಸಾಹಿತ್ಯದಲ್ಲಿ ರಾಜಧರ್ಮ

**ಭಾರತಿ ಕುಂಬ್ಳೆ, ಕಟೀಲು, ಕರ್ನಾಟಕ**

ಸಂಸ್ಕೃತ ಭಾಷೆಯು ವಿಶ್ವದ ಪ್ರಾಚೀನ ಭಾಷೆಗಳಲ್ಲಿ ಒಂದು. ಭಾರತೀಯರ ಪ್ರಾಚೀನ ಸಂಸ್ಕೃತಿ ಮತ್ತು ಸಮಾಜವನ್ನು ಅರಿಯಲು ಸಂಸ್ಕೃತವೊಂದೇ ನಮಗೆ ಮಾರ್ಗದರ್ಶಕವಾಗಿದೆ. ಮಹಾಭಾರತದಲ್ಲಿ ಒಂದು ಉಕ್ತಿ ಇದೆ. **"यदिहास्ति तदन्यत्र यन्नेहास्ति न तत् क्वचित्"** ಈ ಮಾತು ಸಂಸ್ಕೃತಕ್ಕೂ ಅನ್ವಯಿಸುತ್ತದೆ . ಸಂಸ್ಕೃತವನ್ನು ಹಿಂದೆ ವೇದಭಾಷೆ, ದೇವಭಾಷೆ, ಅಮರವಾಣಿ, ಸುರಭಾರತೀ ಮುಂತಾದ ಶಬ್ದಗಳಿಂದ ಕರೆಯುತ್ತಿದ್ದರು. ಇಂದಿಗೂ ಸಂಸ್ಕೃತಭಾಷೆಯಲ್ಲಿ ಮಹಾಕಾವ್ಯ, ಖಂಡಕಾವ್ಯ, ಚಂಪೂಕಾವ್ಯ, ನಾಟಕ ಮುಂತಾದ ವಿವಿಧ ಪ್ರಕಾರದ ಕಾವ್ಯಗಳು ರಚನೆಯಾಗುತ್ತಿವೆ, ಪುರಾಣಗಳು, ಮನುಸ್ಮೃತಿ, ಭಗವದ್ಗೀತೆ ಮುಂತಾದ ಗ್ರಂಥಗಳು ವೇದದ ಮಹತ್ವವನ್ನು ಪ್ರತಿಪಾದಿಸಿವೆ. ಸಂಸ್ಕೃತವು ಉತ್ತರ ಭಾರತದ ಬಹುತೇಕ ಭಾಷೆಗಳಿಗೆ ಮಾತೃಸ್ಥಾನದಲ್ಲಿವೆ. ದಕ್ಷಿಣ ಭಾರತದ ದ್ರಾವಿಡ ಭಾಷೆಗಳ ಮೇಲೂ ಸಂಸ್ಕೃತವು ಸಾಂಸ್ಕೃತಿಕವಾಗಿ ಮತ್ತು ಸಾಹಿತ್ಯಕವಾಗಿ ಪ್ರಭಾವ ಬೀರಿವೆ. ಪುರಾಣಗಳು, ಮನುಸ್ಮೃತಿ, ಭಗವದ್ಗೀತೆ ಮುಂತಾದ ಗ್ರಂಥಗಳು ವೇದದ ಮಹತ್ವವನ್ನು ಪ್ರತಿಪಾದಿಸಿದೆ. "ಸಾಹಿತ್ಯ" ಎಂಬ ಪದವು ಶಬ್ದ ಮತ್ತು ಅರ್ಥಗಳ ಮೃದು ಮಧುರ ಮಿಲನವುಳ್ಳದಾಗಿದೆ. ಈ ಪದದ ವ್ಯುತ್ಪತ್ತಿಯನ್ನು ಪಂಡಿತರು ಹೀಗೆ ಹೇಳಿದ್ದಾರೆ– **"सहितयो: भाव: साहित्यम्"**।
ಸಾಹಿತ್ಯ ಹಾಗೂ ಸಂಗೀತ, ಪಾರ್ವತೀ–ಪರಮೇಶ್ವರರಂತೆ ಅಭಿನ್ನ. ಈ ಎರಡರಲ್ಲೂ ಅಭಿರುಚಿ ಇಲ್ಲದ ವ್ಯಕ್ತಿಯನ್ನು ಕೊಂಬು ಬಾಲವಿಲ್ಲದ ಪಶು ಎಂದು ಹೇಳಲಾಗಿದೆ. **"सङ्गीत साहित्य कला विहीन: साक्षात् पशु: पुच्छ विषाणहीन:"**

ಸಂಸ್ಕೃತ ಸಾಹಿತ್ಯದಲ್ಲಿ ಭಾರತೀಯ ಸಂಸ್ಕೃತಿಯು ಮೂರ್ತಿವೆತ್ತಾಗಿ ಮೈದಳೆದು, ನಾನಾ ರೂಪಗಳಲ್ಲಿ ವಿಕಾಸವಾಗಿ, ವಿಶ್ವಸಂಸ್ಕೃತಿಯ ಮೂಲವನ್ನು ತನ್ನಲ್ಲಿ ಹುದುಗಿಸಿಕೊಂಡಿದೆ. ಈ ಭಾರತೀಯ ಸಂಸ್ಕೃತಿಯು ಭಾರತದ ಪ್ರಾಕ್ತನ ಋಷಿ ಪುಂಗವರ ಮಾನಸ ಮಂದಿರಗಳಲ್ಲಿ ವೇದಗಳ ರೂಪದಲ್ಲಿ ಹೊಳೆದು, ವೇದಾಂಗ, ಉಪನಿಷತ್ತು, ಪುರಾಣ, ಇತಿಹಾಸ ಕಾವ್ಯಗಳಲ್ಲಿ ಬೆಳಗಿ, ಕಾವ್ಯ–ಮಹಾಕಾವ್ಯ–ಖಂಡಕಾವ್ಯಗಳ ಮೂಲಕ ಮೂಡಿಬಂದು ವಿಶ್ವಕ್ಕೆ ಮಾದರಿಯಾಗಿ ನಿಂತಿದೆ.

ಕಾವ್ಯವು ಒಂದು ಕಲೆ. ಅದು ಶಾಸ್ತ್ರಕ್ಕಿಂತ ಭಿನ್ನ. ಶಾಸ್ತ್ರದಲ್ಲಿ ಬುದ್ಧಿಗ್ರಾಹ್ಯ ವಿಚಾರ ಪ್ರತಿಪಾದನೆ **"सहितयो: भाव: साहित्यम्"**। ಪ್ರಧಾನವಾಗಿರುತ್ತದೆ. ಕುಂತಕನೆಂಬ ಲಕ್ಷಣಕಾರನು ಹೇಳುವಂತೆ ಶಾಸ್ತ್ರದಲ್ಲಿ ಕಾರ್ಕಶ್ಯಾದಿ ದೋಷಗಳಿಂದ ಜನರಿಗೆ ಸಹಜಪ್ರವೃತ್ತಿಯೇ ದುಷ್ಕರ, ಆದರೆ ಕಾವ್ಯ ರೋಚಕವಾಗಿದ್ದು ಎಂತವರನ್ನಾದರೂ ಆಕರ್ಷಿಸಿಕೊಳ್ಳುತ್ತದೆ. ತತ್ವದರ್ಶನವಿದ್ದವನು ಶಾಸ್ತ್ರಕಾರನಾಗಬಹುದು. ಆದರೆ, ಕವಿಯೆನಿಸಬೇಕಾದರೆ ಅವನಿಗೆ ವರ್ಣನಾಕೌಶಲವೂ ಇರಬೇಕಾಗುತ್ತದೆ. **ಆನಂದವರ್ಧನನು –**

**"अपारे काव्यसंसारे कविरेक: प्रजापति: । यथास्मै रोचते विश्वं तथेदं परिवर्तते"** ॥

ಕಾವ್ಯಶರೀರ ಮತ್ತು ಕಾವ್ಯದ ಆತ್ಮ ಎಂದು ಕಾವ್ಯವನ್ನು ವಿಭಾಗಿಸಿ ಕೊಂಡರೆ ಈ ಎರಡು ಅಂಶಗಳಲ್ಲಿಯೂ ಶಬ್ದಾರ್ಥಗಳು ಗುಣಭರಿತವಾಗಿರಬೇಕು. ಬಾಹ್ಯಶರೀರದ ಸೌಂದರ್ಯವನ್ನು ಹೆಚ್ಚಿಸಲು ಶಬ್ದಾರ್ಥ ಅಲಂಕಾರಗಳೂ ಆತ್ಮರೂಪಿ ರಸ ಸೌಂದರ್ಯದ ಧರ್ಮಗಳಾದ ಕಾವ್ಯಗುಣಗಳೂ ಸ್ಪಷ್ಟವಾಗಿರಬೇಕು.

## ಮಹಾಕಾವ್ಯಗಳು:–

ಮಹಾಕಾವ್ಯವು ಶ್ರವ್ಯಕಾವ್ಯಗಳ ಒಂದು ಪ್ರಭೇದ. ಇದನ್ನು ದಂಡಿಯು ಸರ್ಗಬಂಧವೆಂದು ಕರೆದು ಇದರ ಲಕ್ಷಣವನ್ನು ಹೀಗೆ ಹೇಳಿದ್ದಾನೆ. ಮಹಾಕಾವ್ಯದ ಆರಂಭದಲ್ಲಿ ಅತೀ, ನಮಸ್ಕಾರ ಅಥವಾ ವಸ್ತುನಿರ್ದೇಶ ( ಕಥಾಭಾಗದ ಒಂದಂಶದ ಉಪನಿಬಂಧ) ವಿರಬೇಕು. ವರ್ಣನೀಯ ಕಥೆ, ಇತಿಹಾಸವನ್ನೋ, ಸುಪ್ರಸಿದ್ಧ ವೃತ್ತಾಂತವನ್ನೋ ಆಶ್ರಯಿಸಿರಬೇಕು. ಚತುರ್ಮಾರ್ಗಫಲವು ಉದ್ದೇಶವಾಗಿದ್ದು, ನಾಯಕನು ಚತುರನೂ, ಉದಾತ್ತನೂ ಅಗಿರಬೇಕು. ಅದರಲ್ಲಿ ನಗರ, ಸಮುದ್ರ, ಪರ್ವತ, ಋತು, ಚಂದ್ರೋದಯ, ಸೂರ್ಯೋದಯ, ಉದ್ಯಾನ, ವಿಹಾರ, ಜಲಕ್ರೀಡೆ, ಮಧುಪಾನ, ಸುರತ, ವಿಪ್ರಲಂಭ, ವಿವಾಹ, ಕುಮಾರೋದಯ, ಮಂತ್ರಾಲೋಚನೆ, ದೂತಪ್ರೇರಣೆ, ದಂಡಯಾತ್ರೆ, ಯುದ್ಧ, ಪ್ರಧಾನ ನಾಯಕನ ವಿಜಯ ಈ ಹದಿನೆಂಟು ವರ್ಣನೆಗಳಿರಬೇಕು. ಅದು ಅಲಂಕಾರ ಯುಕ್ತವಾಗಿ ಅತಿ ಸಂಕ್ಷಿಪ್ತವಾಗದೆ ರಸಭಾವ ನಿರಂತರವಾಗಿರಬೇಕು.

## ಪಂಚಮಹಾಕಾವ್ಯಗಳು:

**ಕಾಳಿದಾಸ – ರಘುವಂಶ ಮತ್ತು ಕುಮಾರಸಂಭವ**
**ಭಾರವಿ – ಕಿರಾತಾರ್ಜುನೀಯ**
**ಮಾಘ – ಶಿಶುಪಾಲವಧ**
**ಶ್ರೀಹರ್ಷ – ನೈಷಧೀಯ ಚರಿತ

## ರಘುವಂಶ:

ಇದು ಕಾಳಿದಾಸನ ಶ್ರೇಷ್ಠವಾದ ಮಹಾಕಾವ್ಯ. **"रघूणामन्वयं वक्ष्ये"** ಎಂದಿರುವ ಕಾಳಿದಾಸನು ರಘುವಂಶದ ರಾಜರನ್ನು ತನ್ನ ಕಾವ್ಯದ ನಾಯಕರನ್ನಾಗಿ ಆರಿಸಿ ಕೊಂಡಿದ್ದಾನೆ. ಅನೇಕ ರಾಜರ ಕಥೆ ಇದ್ದರೂ ಯಾವುದೊಂದು ವರ್ಣನೆಯೂ ಸಹ ಪುನರುಕ್ತವಾಗಿಲ್ಲ.

**ರಘುವಂಶ ಮಹಾಕಾವ್ಯದಲ್ಲಿ ರಾಜಧರ್ಮ**

**पुरा कवीनां गणनाप्रसंगे कनिष्ठिकाधिष्ठित कालिदासः । अद्यापि तत्तुल्यकवेरभावात् अनामिका सार्थवती बभूव ॥**

ಎಂಬ ಒಂದು ಪ್ರಸಿದ್ಧವಾದ ಉಕ್ತಿ ಇದೆ. ಅಂದರೆ ಹಿಂದೆ ಪಂಡಿತರೆಲ್ಲ ಸೇರಿ ಉತ್ತಮರಾದ ಕವಿಗಳು ಯಾರಿದ್ದಾರೆ ಎಂದು ಗಣನೆಯನ್ನು ಮಾಡುವ ಸಂದರ್ಭದಲ್ಲಿ ಸಂಪ್ರದಾಯದಂತೇ ಕನಿಷ್ಠಿಕಾ ಬೆರಳಿನಿಂದ ಗಣನೆಯನ್ನು ಆರಂಭಿಸಿದರು. ಮೊತ್ತಮೊದಲನೆ ಯದಾಗಿ ಕಾಳಿದಾಸನಿಂದ ಆರಂಭಿಸಿದ ನಂತರ ಎರಡನೆಯದಾಗಿ ಕಾಳಿದಾಸನಿಗಿಂತ ಶ್ರೇಷ್ಠರು ಯಾರು ಎಂದು ನಿಷ್ಕರ್ಶೆ ಮಾಡಿದಾಗ ಅವನಿಗಂತ ಶ್ರೇಷ್ಠರಾದವರು ಇಂದಿಗೂ ದೊರಕಲೇ ಇಲ್ಲ. ಆದ್ದರಿಂದ ಗಣನೆಯಲ್ಲಿ ಕನಿಷ್ಠಿಕಾ ಬೆರಳಿನ ನಂತರದ ಬೆರಳಾದ ಅನಾಮಿಕಾ ಬೆರಳು ತನ್ನ ಹೆಸರಿನ ಸಾರ್ಥಕತೆಯನ್ನು ಪಡೆಯಿತು. ಅನಾಮಿಕಾ ಎಂದರೆ ಹೆಸರು ಇಲ್ಲ ಎಂದರ್ಥ. ಹೀಗೆ ಕಾವ್ಯ ಪ್ರಪಂಚದಲ್ಲಿ ಕವಿಕುಲಗುರು ಎಂದೆನಿಸಿಕೊಂಡವನು ಕಾಳಿದಾಸ. ಕಾಳಿದಾಸನು ಈ ಮಹಾಕಾವ್ಯದಲ್ಲಿ ರಘುವಂಶದ ರಾಜರುಗಳ ವರ್ಣನೆಯನ್ನು ಮಾಡಿದ್ದಾನೆ. ಇಪ್ಪತ್ತೊಂದು ಸರ್ಗಗಳಿಂಂದ ಕೂಡಿದ, ಈ ಮಹಾಕಾವ್ಯದ ಮೊದಲನೇ ಸರ್ಗವು ರಾಜಾ ದಿಲೀಪನ ವರ್ಣನೆಯಿಂದ ಆರಂಭವಾಗುತ್ತದೆ.ಇಡೀ ಮಹಾಕಾವ್ಯವು ರಾಜರುಗಳ ವರ್ಣನೆಯಿಂದ ಕೂಡಿದ್ದರಿಂದ ಎಲ್ಲಾ ಸರ್ಗಗಳಲ್ಲೂ ರಾಜದರ್ಮವು ಹೇರಳವಾಗಿ ನಿರೂಪಿಸಲ್ಪಟ್ಟಿದೆ.

**वागर्थाविव संपृक्तौ वागर्थप्रतिपत्तये । जगतः पितरौ वंदे पार्वती परमेश्वरौ ॥**

ಶಬ್ದ ಮತ್ತು ಅರ್ಥಗಳು ಒಂದಕ್ಕೊಂದು ಸದಾ ಸೇರಿಕೊಂಡಿರುತ್ತದೆ. ಕೆಲವೊಮ್ಮೆ ಕೆಲವು ಶಬ್ದಗಳು ಸರಿಯಾದ ಸಮಯದಲ್ಲಿ ಉಚ್ಚರಿಸಲ್ಪಡದಿದ್ದರೆ ಆ ಸಂದರ್ಭಕ್ಕೆ ವಿಪರೀತವಾದ ಅರ್ಥ ಉಂಟಾಗುವ ಸಾಧ್ಯತೆಗಳಿರತ್ತವೆ. ಆದ್ದರಿಂದ ಕಾಳಿದಾಸ ನು ಸದಾಕಾಲ ಕೂಡಿಕೊಂಡೇ ಇರುವ ಶಬ್ದ ಮತ್ತು ಅರ್ಥದ ಸಿದ್ಧಿಗಾಗಿ ಜಗತ್ತಿನ ತಾಯಿ –ತಂದೆಗಳಾದ ಸದಾ ಒಂದೇ ಆಗಿರುವ ಪಾರ್ವತೀ – ಪರಮೇಶ್ವರರನ್ನು ನಮಸ್ಕರಿಸುತ್ತೇನೆ, ಎಂಬುದಾಗಿ ಶಿವಪಾರ್ವತಿಯರ ನಮಸ್ಕಾರದೊಂದಿಗೆ ಮಹಾಕಾವ್ಯವನ್ನು ಆರಂಭಿಸಿದ್ದಾನೆ. ಎರಡನೆಯ ಶ್ಲೋಕದಲ್ಲಿ ಸಂಪೂರ್ಣವಾದ ರಘುವಂಶದ ರಾಜರುಗಳ ಪ್ರತಿಷ್ಠೆಯನ್ನು ಎತ್ತಿ ಹಿಡಿದಿದ್ದಾನೆ ಕಾಳಿದಾಸ.

**क्व सूर्यप्रभवो वंशः क्व चाल्पविषया मतिः । तितीर्षुर्दुस्तरं मोहादुडुपेनापि सागरं ॥**

ಸೂರ್ಯನಿಂದ ಹುಟ್ಟಿರುವ ರಘುವಂಶವೆಲ್ಲಿ ? ಸ್ವಲ್ಪವೇ ವಿಷಯವನ್ನು ತಿಳಿದುಕೊಂಡಿರುವ ನನ್ನ ಬುದ್ಧಿಯೆಲ್ಲಿ? ಆದರೂ ಆಸೆಗೆ ಒಳಪಟ್ಟು ಚಿಕ್ಕದೋಣಿಯಲ್ಲಿ ಸಮುದ್ರವನ್ನು ದಾಟಲು ಪ್ರಯತ್ನಿಸುತ್ತಿದ್ದೇನೆ ಎಂದು ಕಾಳಿದಾಸನು ಹೇಳುತ್ತಾನೆ. ರಘುವಂಶವು ಸೂರ್ಯನಿಂದ ಹುಟ್ಟಿರುವ ವಂಶವಾಗಿದೆ.ಅತ್ಯಂತ ಶ್ರೇಷ್ಠರಾದ ರಾಜ–ಮಹಾರಾಜರನ್ನು ಹೊಂದಿರುವ ವಂಶವಾಗಿದೆ. ಸೂರ್ಯ–ವಂಶದಲ್ಲಿ ಆಳ್ವಿಕೆ ನಡೆಸಿದ ಒಬ್ಬೊಬ್ಬ ರಾಜನೂ ಸೂರ್ಯನಿಗೆ ಸಮಾನನಾದ ಕಾಂತಿಯನ್ನು ಹೊಂದಿರುವವನು. ಪ್ರಜಾಪಾಲನೆಯಲ್ಲಿ, ರಾಜಧರ್ಮದ ಪಾಲನೆಯಲ್ಲಿ ಸೂರ್ಯವಂಶಿಯರನ್ನು ಮೀರಿಸುವ ರಾಜರುಗಳೇ ಇಲ್ಲ. ಆದ್ದರಿಂದ ಅವರ ಚರಿತ್ರೆಯನ್ನು ಹೇಳುವುದು ಬಹಳ ಕಷ್ಟಸಾಧ್ಯವೆಂದು ಕಾಳಿದಾಸನು ಅಭಿಪ್ರಾಯ ಪಡುತ್ತಾನೆ. ರಾಜನ ಮುಖ್ಯ ಕಾರ್ಯವೆಂದರೆ ಪ್ರಜಾರಕ್ಷಣೆ. ಪ್ರಜೆಗಳಿಗೆ ಉಂಟಾಗಬಹುದಾದ ಎಲ್ಲಾ ಅಪಾಯಗಳಿಂದ ಸರ್ವದಾ ರಕ್ಷಣೆ ನೀಡುವುದು ರಾಜನ ಆದ್ಯ ಕರ್ತವ್ಯವಾಗಿದೆ. ದೇಶದಲ್ಲಿ ಪ್ರಕೃತಿ ವೈಚಿತ್ರ್ಯಗಳಿಂದ ಹಲವು ದುರ್ಘಟನೆಗಳು ಸಂಭವಿಸಬಹುದು. ಉದಾಹರಣೆಗೆ ಭೂಕಂಪ, ಮಹೋತ್ಪಾತ, ಅತಿವೃಷ್ಟಿ, ಅನಾವೃಷ್ಟಿ, ಬೆಂಕಿ ಅನಾಹುತ ಮೊದಲಾದವುಗಳು. ಈ ಎಲ್ಲಾ ಪ್ರಾಕೃತಿಕ ವಿಕೋಪಗಳಿಂದ ದೇಶಕ್ಷೋಭೆ ಸಂಭವಿಸುತ್ತವೆ. ಆದ್ದರಿಂದ ರಾಜನು ಈ ಎಲ್ಲಾ ಪ್ರಕೃತಿ ವಿಕೋಪಗಳಿಗೆ ಸದಾ ಸಿದ್ಧನಾಗಿರಬೇಕು.

## ಕುಮಾರಸಂಭವ ಮಹಾಕಾವ್ಯದಲ್ಲಿ ರಾಜಧರ್ಮ:–

ಕಾಳಿದಾಸನಿಂದ ರಚಿತವಾದ ಎರಡು ಮಹಾಕಾವ್ಯಗಳಲ್ಲಿ ಪೌಢತೆಯ ದೃಷ್ಟಿಯಲ್ಲಿ ರಘುವಂಶ ಮಹಾಕಾವ್ಯವು ಉತ್ಕೃಷ್ಟವೆನಿಸಿದರೂ ಕಾವ್ಯಸೌಂದರ್ಯದ ದೃಷ್ಟಿಯಲ್ಲಿ ಕುಮಾರಸಂಭವಕ್ಕೆ ಅಗ್ರಸ್ಥಾನ. ಆರಂಭದಶ್ಲೋಕದಲ್ಲೇ–

**अस्त्युत्तरस्यां दिशि देवतात्मा हिमालयो नाम नगाधिराजः। पूर्वापरौ तोयनिधीवगाह्य स्थितः पृथिव्या इव मानदण्डः ॥**

ಉತ್ತರದಿಕ್ಕಿನಲ್ಲಿ ದೇವತೆಗೆ ಸಮಾನನಾದ ಹಿಮಾಲಯ ಎಂಬ ಹೆಸರುಳ್ಳ ಪರ್ವತರಾಜನು, ಪೂರ್ವ ಹಾಗೂ ಪಶ್ಚಿಮ ಸಮುದ್ರದಲ್ಲಿ ಪ್ರವೇಶಿಸಿದ ಭೂಮಿಯ ಮಾನದಂಡವೇನೋ ಎಂಬಂತೆ ನಿಂತಿದ್ದಾನೆ. ಎಂಬುದಾಗಿ ಹಿಮಾಲಯದ ವರ್ಣನೆಯನ್ನು ಆರಂಭಿಸಿದ್ದಾನೆ. ಮಹಾಕಾವ್ಯವು ಶಿವಪಾರ್ವತಿಯರ ವಿವಾಹದ ಕಥಾವಸ್ತುವನ್ನು ಹೊಂದಿದ್ದರಿಂದ ಬರುವ ಪಾತ್ರಗಳೆಲ್ಲವೂ ದೇವತೆಗಳೇ. ಉದಾಹರಣೆಗೆ ದೇವತಾತ್ಮನಾದ ಹಿಮಾಲಯಪರ್ವತ, ತಾರಕಾಸುರ, ಇಂದ್ರಾದಿದೇವತೆಗಳು. ಆದರೂ ಕೂಡ ಆ ಪಾತ್ರಗಳಲ್ಲೂ ಮಾನವೋಚಿತವಾದ ಭಾವವನ್ನು ನೋಡಬಹುದಾಗಿದೆ. ಹೀಗೆ ಮಹಾಕವಿಯಿಂದ ರಚಿತವಾದ ಮಹಾಕಾವ್ಯವು ಹಿಮವಂತನ ಪುತ್ರಿಯಾದ ಪಾರ್ವತಿಯು ತಪಸ್ಸನ್ನಾಚರಿಸಿ ಶಿವನನ್ನೇ ಪತಿಯನ್ನಾಗಿ ಹೊಂದುತ್ತಾಳೆ. ಅವರಿಬ್ಬರಲ್ಲಿ ಜನಿಸುವ ಕುಮಾರನಿಂದ

ತಾರಕಾಸುರನ ನಾಶ ಈ ಕಥೆಯನ್ನು ಹೊಂದಿದೆ. ಇಲ್ಲಿ ಯಾವುದೇ ರಾಜಮಹಾರಾಜರುಗಳ ವರ್ಣನೆ ಕಂಡು ಬರುವುದಿಲ್ಲ. ರಾಜಧರ್ಮವು ಈ ಮಹಾಕಾವ್ಯದಲ್ಲಿ ಎಲ್ಲೂ ಗೋಚರಿಸುವುದಿಲ್ಲ. ಆದರೂ ಕೂಡ ಕೆಲವೊಂದು ಕಡೆ ರಾಜನೀತಿಯ ಕುರುಹುಗಳನ್ನು ಗುರುತಿಸಬಹುದು. ರಾಜನು ಸದಾ ಪ್ರಕೃತಿಪ್ರಿಯನಾಗಿರಬೇಕು. ಉದ್ಯಾನ–ಹೂವು–ಮರ–ಗಿಡ ಮುಂತಾದುವುಗಳನ್ನು ರಾಜ ಪ್ರೇಮಿಸಬೇಕು. ಸಾಮಾನ್ಯವಾಗಿ ರಾಜರುಗಳಿಗೆ ಪುಷ್ಪಗಳು ಸಂತೋಷವನ್ನು ನೀಡುವ ವಸ್ತುಗಳಾಗಿರುತ್ತವೆ.

ಹೀಗೆ ಸಮಗ್ರ ಕುಮಾರಸಂಭವ ಮಹಾಕಾವ್ಯವು ಹಿಮಾಲಯ, ಶಿವ–ಪಾರ್ವತಿ, ಕುಮಾರನ ಜನನ ಇತ್ಯಾದಿ ಅಂಶಗಳಿಂದ ಕೂಡಿದ್ದು ಅತ್ಯಂತ ಸುಮಧುರವಾದ ನಿರೂಪಣೆಯಿಂದ ಕೂಡಿದೆ. ರಾಜಧರ್ಮವು ಈ ಮಹಾಕಾವ್ಯದಲ್ಲಿ ಸಾಕ್ಷಾತ್ ಗೋಚರಿಸದಿದ್ದರೂ ಸೂಕ್ಷ್ಮವಾಗಿ ಕಾಣಸಿಗುತ್ತದೆ. ರಾಜ ಹಾಗೂ ಪ್ರಕೃತಿಯ ಸಂಬಂಧವು ಹೇಗಿರಬೇಕು, ರಾಜನೊಬ್ಬ ದುಷ್ಟನಾದರೆ ಪ್ರಕೃತಿ ಹಾಗೂ ಸಮಾಜದಲ್ಲಿ ಆಗಬಹುದಾದ ದುಷ್ಪರಿಣಾಮಗಳು, ರಾಜನಿಗಿರಬೇಕಾದ ಇಂದ್ರಿಯನಿಗ್ರಹ–ಆತ್ಮಸಂಯಮ ಈ ಎಲ್ಲಾ ಅಂಶಗಳು ಇಲ್ಲಿ ಪ್ರತಿಬಿಂಬಿತವಾಗಿವೆ. ಹೀಗೆ ಮಹಾಕಾವ್ಯವು ಎಲ್ಲಾ ವಿಷಯಗಳನ್ನೊಳಗೊಂಡ ಅದ್ಭುತ ಕೃತಿಯಾಗಿದೆ.

## ಕಿರಾತಾರ್ಜುನೀಯ ಮಹಾಕಾವ್ಯದಲ್ಲಿ ರಾಜಧರ್ಮ:

ಕಿರಾತಾರ್ಜುನೀಯವು ಸಂಸ್ಕೃತದ ಸುಪ್ರಸಿದ್ಧ ಮಹಾಕಾವ್ಯಗಳಲ್ಲಿ ಒಂದಾಗಿದೆ. ಈ ಮಹಾಕಾವ್ಯವು "ಬೃಹತ್ರಯೀ" ಯಲ್ಲಿ ಪ್ರಥಮಸ್ಥಾನವನ್ನು ಪಡೆದಿದೆ. ಕಾಲಿದಾಸನ ರಘುವಂಶ ಮಹಾಕಾವ್ಯಕ್ಕೂ ದೊರೆಯದಿರುವ ಗೌರವ ಈ ಮಹಾಕಾವ್ಯಕ್ಕೆ ದೊರೆತಿದೆ. ಕಾರಣ ಕಾವ್ಯದೃಷ್ಟಿಯಿಂದ ರಘುವಂಶಕ್ಕಿಂತಲೂ ಉತ್ಕೃಷ್ಟವಾದ ಕಾವ್ಯ ಇದಾಗಿದೆ. ವಿದ್ವಾಂಸರ ಅಭಿಪ್ರಾಯದಂತೆ ಇಡೀ ಸಂಸ್ಕೃತ ಸಾಹಿತ್ಯದಲ್ಲಿ ಸರಳತೆ, ಕೋಮಲತೆ, ಜ್ಞೇಯ ಪದಾವಳಿ, ಮುಂತಾದ ಶಾಸ್ತ್ರೀಯ ಕಾವ್ಯಲಕ್ಷಣವನ್ನು ಹೊಂದಿದ ಇನ್ನೊಂದು ಕೃತಿ ಕಿರಾತಾರ್ಜುನೀಯಕ್ಕೆ ಸಮಾನವಾಗಿ ಇಲ್ಲವೆಂದು ಹೇಳುತ್ತಾರೆ. ಚಿಕ್ಕ ಚಿಕ್ಕ ಪದಗಳನ್ನು ಜೋಡಿಸಿ ಸುಲಲಿತವಾಗಿ ಕಿವಿಗೆ ಸಂತೋಷವನ್ನುಂಟು ಮಾಡುತ್ತಾ ಮನೋಹರವಾದ ಅರ್ಥಗೌರವದಿಂದ ಈ ಕಾವ್ಯವು ಶೋಭಿಸುತ್ತದೆ. ಆದ್ದರಿಂದ **"भारवेरर्थगौरवं"** ಎಂಬ ಮಾತು ಪ್ರಸಿದ್ಧವಾಗಿದೆ. ಇಂತಹ ಪರಮೋತ್ಕೃಷ್ಟ ಮಹಾಕಾವ್ಯವನ್ನು ರಚಿಸಿದವನು ಭಾರವಿ. ಭಾರವಿಯು ಕಿರಾತಾರ್ಜುನೀ–ಯವನ್ನು ಮಹಾಭಾರತದ ವನಪರ್ವದಲ್ಲಿ ಇರುವ ಒಂದು ಘಟನೆಯನ್ನಾಧರಿಸಿ ಅದೊಂದು ಮಹಾಕಾವ್ಯವಾಗಲು ಬೇಕಾಗುವ ಎಲ್ಲಾ ಅಂಶಗಳನ್ನು ಸೇರಿಸಿ ರಚಿಸಿದ್ದಾನೆ. ಮಹಾಕಾವ್ಯದ ಸರ್ಗಾರಂಭವು ವನದಲ್ಲಿರುವ ಯುಧಿಷ್ಠಿರನ ಬಳಿ ಒಬ್ಬ ವನೇಚರನು ಬರುವುದರಿಂದ ಆರಂಭವಾಗಿದೆ.

ಈ ಮಹಾಕಾವ್ಯವು ರಾಜನೀತಿ ಪ್ರಧಾನವಾದ ಮಹಾಕಾವ್ಯವಾಗಿದೆ. ಕ್ರೂರನಾದ ಹಾಗೂ ಅಹಂಕಾರಿಯಾದ ಶತ್ರುವಿನ ವಿರುದ್ಧ ಸೇಡು ತೀರಿಸಿಕೊಳ್ಳುವ ಆಲೋಚನೆಯಿಂದಲೇ ಈ ಕಾವ್ಯದ ಆರಂಭವಾಗಿದೆ. ಸಂಪೂರ್ಣವಾಗಿ ವೀರರಸ ಪ್ರಧಾನವಾದ ಈ ಕಾವ್ಯದಲ್ಲಿ ಆರಂಭದಲ್ಲಂತೂ ಸಂಪೂರ್ಣವಾಗಿ ರಾಜನೀತಿ ಹಾಗೂ ರಾಜಧರ್ಮದ ವಿಷಯವನ್ನೇ ನಿರೂಪಿಸಲಾಗಿದೆ. ಮೊದಲನೆಯ ಸರ್ಗದ ಆರಂಭದಲ್ಲಿ ಕುರುರಾಜನಾದ ದುರ್ಯೋಧನನ ರಾಜ್ಯಭಾರ ಹಾಗೂ ಪ್ರಜೆಗಳ ಜೊತೆ ಅವನ ವ್ಯವಹಾರವನ್ನು ತಿಳಿದುಕೊಳ್ಳಲು ಕಳುಹಿಸಿದ ವನೇಚರನು ಯುಧಿಷ್ಠಿರನ ಬಳಿ ಬಂದು ಯುಧಿಷ್ಠಿರನಿಗೆ ನಮಸ್ಕರಿಸಿ ಏಕಾಂತದಲ್ಲಿ ಹಸ್ತಿನಾಪುರದ ಎಲ್ಲಾ ಸಮಾಚಾರವನ್ನು ಹೇಳುತ್ತಾನೆ. ಯುವರಾಜನಾದ ದುರ್ಯೋಧನನು –

**विशंकमाना भवत: पराभवं नृपासनस्थेपि वनाधिवासिन: ।**
**दुरोदरच्छद्मजिता समीहते नयेन जेतुं जगतीसुयोधन:॥**

ದ್ಯೂತಕ್ರೀಡೆಯ ಮೂಲಕ ಮೋಸದಿಂದ ಪಾಂಡವರಿಂದ ರಾಜ್ಯವನ್ನು ಅಪಹರಿಸಿ ತಾನು ಸಿಂಹಾಸನದ ಅಧಿಕಾರವನ್ನು ಹೊಂದಿದ್ದರೂ ವನದಲ್ಲಿರುವ ಪಾಂಡವರ ಕುರಿತಾಗಿ ಭಯವನ್ನು ಹೊಂದಿದ್ದಾನೆ. ಆದ್ದರಿಂದ ನ್ಯಾಯಪೂರ್ಣವಾಗಿ ಶಾಸನವನ್ನು ಮಾಡುತ್ತಾ ಪ್ರಜೆಗಳನ್ನು ತನ್ನತ್ತ ಸೆಳೆಯುವತ್ತ ಪ್ರಯತ್ನ ಮಾಡುತ್ತಿದ್ದಾನೆ. ಈ ಶ್ಲೋಕದಲ್ಲಿ ಧರ್ಮರಾಜನ ರಾಜ್ಯಭಾರವು ಅತ್ಯಂತ ನ್ಯಾಯಯುತವಾಗಿ ಪ್ರಜೆಗಳಿಗೆ ಸಂತೋಷದಾಯಕವಾಗಿತ್ತು.

## ಶಿಶುಪಾಲವಧ ಮಹಾಕಾವ್ಯದಲ್ಲಿ ರಾಜಧರ್ಮ:–

ಮಾಘಕವಿ ವಿರಚಿತವಾದ "ಶಿಶುಪಾಲವಧ" ಕ್ಕೆ "ಮಾಘ" ಎಂಬ ಕವಿಯ ಹೆಸರೇ ರೂಢಿಯಲ್ಲಿರುವುದು ಒಂದು ವಿಶೇಷ.

**"काव्येषु माघ:" "कविषु कालिदास:"**

ಎಂಬ ಉಕ್ತಿ ಇದನ್ನು ಸಮರ್ಥಿಸುತ್ತದೆ. ಕಾವ್ಯದ ವೈಶಿಷ್ಟ್ಯವನ್ನು ಕುರಿತು ಹಿಂದಿನ ಪಂಡಿತರು ಹೀಗೆ ಹೇಳುತ್ತಿದ್ದ ಉಕ್ತಿಯಿದು.–

**उपमा कालिदसस्य भारवेर्थ गौरवम् । दण्डिन: पदलालित्यं माघे सन्ति त्रयो गुणा: ॥**

"ಉಪಮೆಗೆ ಕಾಲಿದಾಸ, ಅರ್ಥಗಾಂಭೀರ್ಯಕ್ಕೆ ಭಾರವಿ, ಲಲಿತಪದ ವಿನ್ಯಾಸಕ್ಕೆ ದಂಡಿ ಕವಿಗಳು ಪ್ರಸಿದ್ಧರು. ಈ ಮೂರೂ ಗುಣಗಳು ಮಾಘಕಾವ್ಯದಲ್ಲಿವೆ. **श्रिय: पति: श्रीमति शासितुं जगज्जगन्निवासो वसुदेव सद्मनि ।**

**वसं ददर्शावतरंतमंबराद्धिरण्यगर्भांगभुवं मुनिं हरि: ॥**

ಎಂಬ ಶ್ಲೋಕದಿಂದ ಕವಿಯು ತನ್ನ ಕಾವ್ಯಾರಂಭವನ್ನು ಮಾಡಿದ್ದಾನೆ. ಲಕ್ಷ್ಮೀಪತಿಯಾದ, ಸಮಸ್ತ ಜಗತ್ತಿಗೆ ಆಧಾರನಾದ ನಾರಾಯಣನು ಜಗತ್ತಿನ ನಿಯಂತ್ರಣಕ್ಕಾಗಿ ವಸುದೇವನ ಮನೆಯಲ್ಲಿ ವಾಸಿಸುತ್ತಿರುವ ಸಮಯದಲ್ಲಿ ಒಂದು ದಿನ ಹಿರಣ್ಯಗರ್ಭನ

ಮಗನಾದ ನಾರದ ಮಹರ್ಷಿಗಳು ಆಕಾಶದಿಂದ ಕೆಳಗೆ ಇಳಿಯುತ್ತಿರುವುದನ್ನು ನೋಡುತ್ತಾನೆ. ಆಗಮಿಸಿದ ನಾರದರನ್ನು ಅರ್ಘ್ಯ, ಪಾದ್ಯಾದಿಗಳಿಂದ ಅರ್ಚಿಸಿ, ತನ್ನ ಮಾತುಗಳಿಂದ ಸಂತುಷ್ಟಿಗೊಳಿಸಿ ಬಂದ ಕಾರಣವನ್ನು ಕೇಳುತ್ತಾನೆ. ಆಗ ನಾರದರು ಕೃಷ್ಣನಿಗೆ ಅವನ ಅವತಾರಗಳನ್ನು, ಆಯಾಯ ಅವತಾರಗಳಲ್ಲಿ ನಾಶಹೊಂದಿದ ರಾಕ್ಷಸರುಗಳನ್ನು ನೆನಪಿಸಿ ಈ ಅವತಾರದಲ್ಲಿ ರಾವಣನ ಅವತಾರವಾಗಿರುವ ಶಿಶುಪಾಲನನ್ನು ಸಂಹರಿಸಬೇಕೆಂಬ ಇಂದ್ರನ ಸಂದೇಶವನ್ನು ತಿಳಿಸುತ್ತಾರೆ. ಬಲರಾಮನು ಕೃಷ್ಣನ ಸಂಶಯವನ್ನು ಪರಿಹಾರ ಮಾಡಲು ಪ್ರಯತ್ನಿಸುತ್ತಾನೆ. ಮಾತನ್ನಾರಂಭಿಸಿದ ಬಲರಾಮನು ರಾಜನ ಕೆಲವು ಧರ್ಮಗಳನ್ನು ಹೆಳುತ್ತಾನೆ.

**षड्गुणाः शक्तयस्तिस्रः सिद्धयश्चोदयास्त्रयः । ग्रंथानधीत्य व्याकर्तुमिति दुर्मेधसोप्यलं ॥**

ಬುದ್ಧಿವಂತರಲ್ಲದವರೂ ಕೂಡ ನೀತಿಶಾಸ್ತ್ರಾದಿಗಳನ್ನು ಅಧ್ಯಯನ ಮಾಡಿ ವ್ಯಾಖ್ಯಾನ ಮಾಡಬಹುದಾದ ರಾಜನ ಕೆಲವು ಗುಣಗಳು , ಶಕ್ತಿಗಳು, ಸಿದ್ಧಿಗಳು, ಉದಯಗಳಿವೆ. ಸಂಧಿ, ವಿಗ್ರಹ, ಯಾನ, ಆಸನ, ಸಂಶ್ರಯ, ಮತ್ತು ದ್ವೈಧೀಭಾವ ಇವು ಆರು ರಾಜನ ಗುಣಗಳು. ಹಣ ಇತ್ಯಾದಿಗಳನ್ನು ನೀಡಿ ಇತರರನ್ನು ತಮ್ಮತ್ತ ಸೆಳೆದುಕೊಳ್ಳುವುದು ಸಂಧಿ. ಇಬ್ಬರಲ್ಲಿ ದ್ವೇಷವನ್ನು ಉಂಟುಮಾಡುವುದು ವಿಗ್ರಹ. ಪ್ರಯಾಣ ಇತ್ಯಾದಿಗಳು ಯಾನವಾಗಿರುತ್ತವೆ. ರಾಜನಾದವನಿಗೆ ತನ್ನ ಉನ್ನತಿ ಅಂದರೆ ತಾನು ಎಲ್ಲರಿಗಂತಲು ಶ್ರೇಷ್ಠನಾಗಿ-ರುವುದು ಹಾಗೂ ತನ್ನ ವಿರುದ್ಧ ಇರುವ ಶತ್ರುಗಳ ಸಮೂಲ ನಾಶ ಈ ಎರಡು ಸದಾ ಲಕ್ಶ್ಯದಲ್ಲಿರಬೇಕು. ರಾಜನಿಗೆ ಸಂಬಂಧಿಸಿದ ನೀತಿಶಾಸ್ತ್ರಗಳೂ ಇವೆರಡಕ್ಕೆ ಅತಿರಿಕ್ತವಾದುದು ಇಲ್ಲ. ಆದ್ದರಿಂದ ಚತುರನಾದ ರಾಜನು ತನ್ನ ವಾಕ್ಚಾತುರ್ಯವನ್ನು ಮೆರೆಯಬೇಕು.

**तृप्तियोगः परेणापि महिम्ना न महात्मनां । पूर्णचंद्रोदयाकांक्षी दृष्टांतोत्र महार्णवः ॥**

**"ಅಸಂತುಷ್ಟೋ ದ್ವಿಜೋ ನಷ್ಟಃ ಸಂತುಷ್ಟಶ್ಚ ಮಹೀಭುಜಃ"** ಎಂಬ ನ್ಯಾಯವನ್ನು ಪುನಃ ಮಾಘನು ಬಲರಾಮನ ಮಾತಿನಲ್ಲಿ ಉದ್ಧರಿಸಿದ್ದಾನೆ. ದೊರಕಿರುವ ದಾನ-ದಕ್ಷಿಣಾದಿಗಳಿಂದ ಬ್ರಾಹ್ಮಣನು ಸಂತುಷ್ಟನಾಗದಿದ್ದರೆ ಅದು ಆತನಿಗೆ ನರಕವನ್ನು ತಂದೊಡ್ದುತ್ತದೆ. ಹಾಗೆ ರಾಜನಾದವನು ತನಗೆ ದೊರಕಿರುವ ರಾಜ್ಯ-ಧನ-ಕನಕಾದಿಗಳಿಂದ ಸಂತುಷ್ಟಿಯನ್ನು ಹೊಂದಬಾರದು. ಆದ್ದರಿಂದ ಅತ್ಯಂತ ಬುದ್ಧಿವಂತನಾದ ರಾಜನು ರಾಜ್ಯ ವಿಸ್ತರಣೆಯಲ್ಲಿ, ತನ್ನ ಕೋಶವೃದ್ಧಿಯಲ್ಲಿ ಉದಾಸೀನತೆಯನ್ನು ತೋರಿಸದೇ ಸದಾ ಉತ್ಸಾಹಶಾಲಿಯಾಗಿ ತನ್ನ ಪರಾಕ್ರಮದಿಂದ ಸದಾ ದಿಗ್ವಿಜಯದಲ್ಲಿ ತೊಡಗಿರಬೇಕು. ಉದಾಹರಣೆಗೆ ಎಲ್ಲಾ ವಿಧದಿಂದಲೂ ಪರಿಪೂರ್ಣವಾದ ಸಮುದ್ರವೂ ಕೂಡ ಚಂದ್ರೋದಯದ ನಿರೀಕ್ಷೆಯನ್ನು ಮಾಡುತ್ತದೆ. ಏಕೆಂದರೆ ಚಂದ್ರೋದಯದಿಂದ ಮಾತ್ರ ಸಮುದ್ರದಲ್ಲಿ ಸಮೃದ್ಧಿಯುಂಟಾಗುತ್ತದೆ.

**संपदा सुस्थिरं मन्यो भवति स्वल्पयापि यः । कृतकृत्यो विधिर्मन्ये न वर्धयति तस्य तां ॥**

**ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ ಎಂಬ** ಸುಭಾಷಿತದಂತೆ ಪರಿಶ್ರಮ ಪಡುತ್ತಿರುವ ಪುರುಷನನ್ನು ಮಾತ್ರ ಲಕ್ಷ್ಮಿಯು ಸೇರುತ್ತಾಳೆ. ರಾಜನಾದವನು ಸ್ವಾಭಿಮಾನಿಯಾಗಿರಬೇಕು. ಸದಾಕಾಲ ಶತ್ರುಗಳ ಭಯದಲ್ಲಿರುವವನಿಗೆ ಸುಖವೂ ಇರುವುದಿಲ್ಲ. ಅವನಿಂದ ಸರಿಯಾದ ರೀತಿಯಲ್ಲಿ ರಾಜ್ಯಭಾರವೂ ನಡೆಯುವುದಿಲ್ಲ. ಆದ್ದರಿಂದ ಸ್ವಾಭಿಮಾನಿಯಾದ ರಾಜನು ತನ್ನ ಶತ್ರುಗಳ ನಾಶವನ್ನು ಮಾಡಬೇಕು. ಹೇಗೆ ಸೂರ್ಯನು ಉದಯಿಸುವಾಗ ಗಾಢವಾಗಿರುವ ಕತ್ತಲನ್ನು ಸಂಪೂರ್ಣ ನಾಶಮಾಡುತ್ತಾನೋ ಹಾಗೇ ರಾಜನು ಎಲ್ಲಾ ಶತ್ರುಗಳನ್ನು ಸದೆ ಬಡಿದು ಉನ್ನತಿಗೆ ಏರಬೇಕು.

**अधिगम्य च रंध्रमंतरा जनयन्मंडलभेदमन्यतः । खनति क्षतसंहति क्षणादपि मूलानि महांति कस्यचित् ॥**

ಈ ಶ್ಲೋಕದಲ್ಲಿ ಒಬ್ಬ ಸಮರ್ಥ ರಾಜನ ರಾಜನೀತಿಯು ಹೇಗಿರಬೇಕೆಂದು ನಿರೂಪಿಸಲ್ಪಟ್ಟಿದೆ. ರಾಜನು ತನ್ನ ಶತ್ರುವನ್ನು ನಾಶಮಾಡಬೇಕಾದರೆ ಆ ಶತ್ರುವಿನಲ್ಲಿರುವ ದೋಷವನ್ನು ಮೊದಲು ಹುಡುಕಬೇಕಾಗುತ್ತದೆ. ಶತ್ರುರಾಷ್ಟ್ರದ ಮುಖ್ಯ-ಮುಖ್ಯ ಅಧಿಕಾರಿಗಳನ್ನು ದೂರ-ದೂರ ಮಾಡಬೇಕು. ಆಗ ಶತ್ರು ರಾಜನ ರಾಜ್ಯದಲ್ಲಿ ಅಂತಃಕಲಹಾದಿಗಳು ಉದ್ಭವಿಸಿ ರಾಜನು ಅನಿವಾರ್ಯವಾಗಿ ಶಿಥಿಲನಾಗುತ್ತಾನೆ. ಮಹಾಕಾವ್ಯದಲ್ಲಿ ಹದಿನೇಳನೇ ಸರ್ಗದಲ್ಲಿ ಯುಧಿಷ್ಠಿರನಿಂದ ರಾಜಸೂಯ-ಯಾಗಕ್ಕಾಗಿ ರಚಿಸಲ್ಪಟ್ಟ ಸಭೆಯಲ್ಲಿ ಕೋಲಾಹಲವುಂಟಾಗುತ್ತದೆ. ಕೋಪಗೊಂಡ ಕೃಷ್ಣನು ಸೇನೆಗೆ ಸಿದ್ಧವಾಗಲು ಆದೇಶ ನೀಡುತ್ತಾನೆ. ಸೇನೆಯು ಯುದ್ಧಭೂಮಿಯತ್ತ ತೆರಳುತ್ತದೆ. ನಡೆದ ಘೋರಯುದ್ಧದಲ್ಲಿ ಶ್ರೀಕೃಷ್ಣನು ಶಿಶುಪಾಲನನ್ನು ತನ್ನ ಸುದರ್ಶನದಿಂದ ಕೊಲ್ಲುತ್ತಾನೆ.

ಹೀಗೆ ಸಂಪೂರ್ಣ ಶಿಶುಪಾಲವಧವು ರಾಜಕೇಂದ್ರಿತ ಮಹಾಕಾವ್ಯವಾದುದರಿಂದ ಆರಂಭದಿಂದ ಅಂತ್ಯದವರೆಗೂ ರಾಜಧರ್ಮದ ಉಲ್ಲೇಖವನ್ನು ಕಾಣಬಹುದು.

## ನೈಷಧೀಯಚರಿತದಲ್ಲಿ ರಾಜಧರ್ಮ-

ನಳ-ದಮಯಂತಿಯರ ಕಥೆ ಭಾರತೀಯರ ಪ್ರಸಿದ್ಧವಾದ ಕಥೆಯಾಗಿದೆ.ಮಹಾಭಾರತದ ವನಪರ್ವದಲ್ಲಿ ನಲೋಪಾಖ್ಯಾನವು ಇದೆ.ನಳೋಪಾಖ್ಯಾನದ ಉದ್ದೇಶವೇನೆಂದರೆ ಧೈರ್ಯವನ್ನು ತೆಗೆದುಕೊಳ್ಳಲು ಪ್ರೇರಣೆ ನೀಡುವುದಾಗಿದೆ.ಯಾರು ಅತ್ಯಂತ ಕಷ್ಟದ ಸಮಯದಲ್ಲೂ ಧೈರ್ಯದಿಂದಿದ್ದು ಬಂದಿರುವ ಕಷ್ಟವನ್ನು ಪರಿಹರಿಸಿಕೊಳ್ಳಲು ಕಾರ್ಯವೆಸಗುತ್ತಾರೋ ಅವರು ಮಹಾತ್ಮರೆನಿಸಿಕೊಳ್ಳುತ್ತಾರೆ. ನಳಮಹಾರಾಜನೂ ಕೂಡಾ ಅನೇಕ ವಿಪತ್ತುಗಳನ್ನು ದಾಟಿ ಅಂತ್ಯದಲ್ಲಿ ಪುನಃ ರಾಜ್ಯವನ್ನು ಪಡೆಯುತ್ತಾನೆ. ಬೃಹದಶ್ವರು ದುಃಖದಲ್ಲಿರುವ ಧರ್ಮರಾಜನನ್ನು ನೋಡಿ ಅವನಲ್ಲಿ ಧೈರ್ಯವನ್ನೂ, ಪ್ರೋತ್ಸಾಹವನ್ನು ತುಂಬಲು ನಲೋಪಾಖ್ಯಾನವನ್ನು

ಹೇಳುತ್ತಾರೆ. ಕವಿಗಳಲ್ಲಿ ಶ್ರೇಷ್ಠನೆನಿಸಿಕೊಂಡ ಶ್ರೀಹರ್ಷನು ಮಹಾಭಾರತದಲ್ಲಿ ಹೇಳಿರುವ ನಲೋಪಾಖ್ಯಾನದ ಕೇವಲ ಆರು ಅಧ್ಯಾಯಗಳನ್ನಾಧರಿಸಿ ನೈಷಧ ಚರಿತವೆಂಬ ಮಹಾಕಾವ್ಯವನ್ನೇ ರಚಿಸಿದ್ದಾನೆ. ನೈಷಧೀಯ ಚರಿತದ ಆರಂಭದ ಶ್ಲೋಕದಲ್ಲೇ ಶ್ರೀಹರ್ಷನು ಕಥಾನಾಯಕನಾದ ನಳನನ್ನು ಹೊಗಳುತ್ತಾನೆ.

**निपीय यस्य क्षितिरक्षिण: कथां तथाद्रियंते न बुधास्सुधामपि ।**
**नलस्सितच्छत्रित कीर्तिमंडलस्य राशिरासीन्महसां महोज्वल: ॥**

ಮಹಾರಾಜನಾದ ಪೃಥಿವೀಪಾಲಕನಾದ ನಳನ ಕಥೆಯನ್ನು ಕೇಳಿ ದೇವತೆಗಳು ಅಮೃತವನ್ನೂ ಇಷ್ಟಪಡುವುದಿಲ್ಲ. ಅಂತಹ ಭವ್ಯವಾದ ಕೀರ್ತಿಯಿಂದ ನಳನು ಬೆಳಗುತ್ತಿದ್ದನು. ತನ್ನ ರಾಜಧರ್ಮದಿಂದ ದೇವತೆಗಳಿಗೂ ಇಷ್ಟದವನಾಗಿದ್ದನು. ರಾಜನಿಗಿರಬೇಕಾದ ಎಲ್ಲಾ ಗುಣಗಳನ್ನು ಹೊಂದಿದ್ದ ನಳನು ಒಬ್ಬ ಅದ್ಭುತ ಹಾಗೂ ಅನುಪಮ ರಾಜನಾಗಿದ್ದನು. ಒಬ್ಬ ರಾಜನಾದವನು ರಾಜ್ಯಭಾರವನ್ನು ವಹಿಸಿಕೊಳ್ಳುವುದಕ್ಕಿಂತಲೂ ಪೂರ್ವದಲ್ಲಿ ಸಕಲವಿಧವಾದ ವಿದ್ಯೆಗಳಲ್ಲಿ ಪಾರಂಗತನಾಗಿರಬೇಕು.

## ಉಪಸಂಹಾರ :

ಹೀಗೆ ಸಂಸ್ಕೃತ ಮಹಾಕಾವ್ಯಸಾಹಿತ್ಯಗಳು ಭಾರತೀಯ ಸಮಾಜದ ಭವ್ಯ ವಿಚಾರಗಳ ಕನ್ನಡಿಯಾಗಿವೆ. ಸಮಾಜವು ಯಾವ ಪ್ರಕಾರದಲ್ಲಿ ಇರುತ್ತದೆಯೋ ಅದೇ ಪ್ರಕಾರವು ಕಾವ್ಯಗಳಲ್ಲಿ ಪ್ರತಿಬಿಂಬಿತವಾಗುತ್ತವೆ. ರಾಮಾಯಣದಿಂದ ಆರಂಭವಾದ ಈ ಕಾವ್ಯಪರಂಪರೆಯು ಹೇಗೆ ಭಾರತೀಯ ಸಂಸ್ಕೃತಿಯನ್ನು ಅನುಪಮಗೊಳಿಸಿತೋ ಹಾಗೆಯೇ ಮುಂದೆ ಬಂದ ಕವಿಗಳೆಲ್ಲರೂ ಅದನ್ನು ಮುಂದುವರಿಸಿಕೊಂಡು ಹೋದರು. ಒಟ್ಟಿನಲ್ಲಿ ಪಂಚಮಹಾಕಾವ್ಯದಲ್ಲಿ ವರ್ಣಿತವಾದ ರಾಜಧರ್ಮಗಳು ಇಂದಿಗೂ ಪ್ರಸ್ತುತವಾಗಿವೆ. ಶ್ರೀರಾಮ–ಹಿಮವಂತ–ಯುಧಿಷ್ಠಿರ –ಶ್ರೀಕೃಷ್ಣ–ನಳ ಮಹಾರಾಜರೇ ಮೊದಲಾದ ರಾಜರುಗಳ ಜೀವನ ಚರಿತ್ರೆ ಎಲ್ಲೆಡೆ ಪ್ರಸಾರವಾಗ–ಬೇಕು. ಇಂದು ಜಗತ್ತಿನಲ್ಲೆಡೆ ದೇಶ – ದೇಶಗಳ ನಡುವೆ ವೈಮನಸ್ಯ, ಯುದ್ಧ ಇವೆಲ್ಲವು ಮನುಕುಲವನ್ನು ನಾಶಪಡಿಸುವಷ್ಟು ಬೆಳೆದಿವೆ. ಆದ್ದರಿಂದ ಮಹಾಕಾವ್ಯಗಳಲ್ಲಿ ಚಿತ್ರಿತರಾದ ರಾಜರುಗಳ ಜೀವನಮೌಲ್ಯಗಳನ್ನು ಅವಲಂಬಿಸಿದರೆ ಸಮಸ್ತ ವಿಶ್ವವು ಯಾವುದೇ ಭಯವಿಲ್ಲದೇ, ರೋಗ–ರುಜಿನವಿಲ್ಲದೇ, ಪರಸ್ಪರ ದ್ವೇಷವಿಲ್ಲದೇ ಇರಬಲ್ಲದು. ಆದ್ದರಿಂದ ಪ್ರತಿಯೊಬ್ಬರೂ ಈ ಮಹಾಕಾವ್ಯವನ್ನು ಓದಿ ಉತ್ತಮ ಸಮಾಜನಿರ್ಮಾಣ ಮಾಡಬೇಕೆಂಬುದೇ ನನ್ನ ಆಶಯವಾಗಿದೆ.

**Bharathi Kumble**
Research Scholar in Sanskrit, Kateel
(University of Manngalore)
Dakshinakannada, Karnataka- 574148
Contact No. : 9449757623
E-mail : bharathikumble1975@gmail.com

*******

Volume XX : July to December – 2022, ISSN 2250-1711
Journal of Veda Samskrita Academy [Recognised in the UGC-CARE List]

# ದುರ್ಗಸಿಂಹನ "ಕರ್ಣಾಟಕ ಪಂಚತಂತ್ರಂ" ಕಥೆಗಳಲ್ಲಿ ಪೌರಾಣಿಕ ಪ್ರಸಂಗಗಳ ವಿಶ್ಲೇಷಣೆ

– ಡಾ. ಗಿರೀಶ್ ಮೂಗ್ತಿಹಳ್ಳಿ

ಸುಮಾರು ಕ್ರಿ.ಶ. 1020 ರಲ್ಲಿ ಇದ್ದ ದುರ್ಗಸಿಂಹನು ರಚಿಸಿದ ಗದ್ಯಪ್ರಧಾನ ಚಂಪೂಕೃತಿ 'ಕರ್ನಾಟಕ ಪಂಚತಂತ್ರಂ' ಅನ್ನು ವರ್ತಮಾನದಲ್ಲಿ ವಿವೇಚಿಸುವುದು ಆನಂದದಾಯಕ ಕೆಲಸ. ಇದನ್ನು ಬಗೆದಷ್ಟು ಮತ್ತಿನ್ನೇನನ್ನೊ ಕೊಡುವ ಮಹತ್‌ಕೃತಿಗಳ ಸಾಲಿನಲ್ಲಿ ಈ ಕೃತಿ ನಿಲ್ಲುತ್ತದೆ. ಯಾವುದಾದರೊಂದು ಕೃತಿ ಆಯಾ ಕಾಲಕ್ಕೆ ಹೊಂದಿಕೆಯಾಗುವಂತಹ ವಸ್ತುವಿಷಯಗಳನ್ನು ನೀಡುವುದಾದರೆ ಅದರಂತಹ ಪ್ರತಿಭಾನ ಕೃತಿ ಮತ್ತೊಂದು ಇರಲಾರದು. ಕೃತಿಯೊಂದು ಸಹೃದಯ, ವಿಮರ್ಶಕ ಅಥವಾ ಸಂಶೋಧಕರನ್ನು ಜೀವಂತಗೊಳಿಸುವುದಾದರೆ, ಅವರ ಪ್ರಜ್ಞೆಯನ್ನು ವಿಸ್ತರಿಸುವುದಾದರೆ ಅಂತಹ ಕೃತಿಗಳನ್ನು ಶ್ರೇಷ್ಠತೆಯ ಸಾಲಿಗೆ ಮುಲಾಜಿಲ್ಲದೆ ಸೇರಿಸಬೇಕು. 'ಪಂಚತಂತ್ರಂ' ಸೇರಿಯೂ ಆಗಿದೆ. ಆದ್ದರಿಂದಲೇ ಈ ಕೃತಿಯು ಕಥೆಗಳಲ್ಲಿ 'ಪೌರಾಣಿಕ ಪ್ರಸಂಗಗಳ ವಿಶ್ಲೇಷಣೆ' ಎಂಬ ಹೊಸ ಆಲೋಚನೆ ಸಹಜವಾಗಿ, ಮಂದಗಾಮಿಯಾಗಿ ಸ್ಫುರಿಸಿದೆ.

'ಪಂಚತಂತ್ರಂ' ಓದಿದಂತೆಲ್ಲಾ ಪ್ರಜ್ಞೆಯು ತಾನಾಗಿಯೇ ಪರಿಪಕ್ವತೆಯ ಕಡೆಗೆ ಹೋಗುತ್ತದೆ. ಮರುನವೀಕರಣಗೊಳ್ಳಲು ಸಾಧ್ಯವಾಗುತ್ತದೆ. ಪ್ರತಿಪ್ರಸಂಗದ ಮೂಲಕ ಹೊಸತೊಂದರ ಅನುಭವದ ಸಾಂಗತ್ಯ ಸಾಧ್ಯವಾಗುತ್ತದೆ. ಮನುಷ್ಯ ಮತ್ತು ಮನುಷ್ಯತ್ವದ ಅಸ್ತಿತ್ವವನ್ನು ಪ್ರಾಧಾನ್ಯೀಕರಿಸುತ್ತದೆ. ನೀತಿಯೊಂದನ್ನು ಮತ್ತೊಂದಿಷ್ಟು ಪ್ರಬಲಗೊಳಿಸಿ, ಲೋಕೋತ್ತರವಾದ ಸತ್ಯ ಮತ್ತು ಸತ್ವವನ್ನು ಸಾಕ್ಷಾತ್ಕರಿಸುತ್ತದೆ. ಇಲ್ಲಿ ಮನುಷ್ಯನು ತನ್ನ ಬದುಕನ್ನು ಹೆಚ್ಚು ವಿಸ್ತಾರಗೊಳಿಸಿಕೊಳ್ಳಲು ವಿಫುಲ ಅವಕಾಶಗಳಿವೆ. ಮಂದಬುದ್ಧಿಯವರನ್ನ ಮುತ್ಸದ್ಧಿಗಳನ್ನಾಗಿ ಮಾಡುವ ಬೌದ್ಧಿಕ ಕೌಶಲ್ಯ ಈ ಕೃತಿಯಲ್ಲಿ ಶ್ರೀಮಂತಗೊಂಡಿದೆ.

'ಪಂಚತಂತ್ರಂ' ಪುಟ್ಟ ಪುಟ್ಟ ಕಥೆಗಳ ಗುಚ್ಛವಾದರೂ ಒಂದಕ್ಕೊಂದು ಪೂರಕವಾಗಿವೆ. ಪ್ರತಿತಂತ್ರಗಳ ಪ್ರತಿಕಥೆಗಳು 'ಖೋ' ಕೊಡುವಂತೆ ಒಂದನ್ನೊಂದು ಅವಲಂಬಿಸಿವೆ. ಹೂಗಳು ಸೇರಿ ಹಾರವಾದಂತೆ ಪ್ರತಿಕಥೆಗೆ ತಂತ್ರಗಳಿವೆ. ಪ್ರತಿತಂತ್ರ ಸೇರಿ 'ಪಂಚ ತಂತ್ರಂ' ಆಗಿದೆ. ನೀತಿಯೇ ಪ್ರಧಾನವಾಗಿರುವ ಇಲ್ಲಿಯ ಕಥೆಗಳು ಮನುಷ್ಯನೊಬ್ಬನ ಬದುಕನ್ನು ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯಲು ಪ್ರಯತ್ನಿಸುತ್ತ ಸಿದ್ಧವಾಗಿ ನಿಂತಿವೆ. ಇಲ್ಲಿ ಸ್ನೇಹ, ಪ್ರೀತಿ, ವಿಶ್ವಾಸ, ನಂಬಿಕೆ, ತ್ಯಾಗ, ಸಹಕಾರ, ಸಹಬಾಳ್ವೆ ಮುಂತಾದ ಜೀವನದ ಮೌಲ್ಯಗಳನ್ನು ಎತ್ತಿಹಿಡಿಯುವ ಸಂದರ್ಭಗಳು ಯಥೇಚ್ಛವಾಗಿವೆ. ಅಲ್ಲದೆ ಇಲ್ಲಿಯ ಪಾತ್ರಗಳು ಬಹುಪಾಲು ಪ್ರಾಣಿ–ಪಕ್ಷಿಗಳಾದರೂ ಮಾತು, ಮನಸ್ಸು, ಬದುಕು ಮನುಷ್ಯನದ್ದಾಗಿದೆ. ಆದ್ದರಿಂದ ಒಳ್ಳೆತನದ ಬದುಕಿನ ಮಾರ್ಗವನ್ನು ಮತ್ತಷ್ಟು ಸರಳಗೊಳಿಸಲು, ಅರ್ಥೈಸಲು ಪೌರಾಣಿಕ ಪ್ರಸಂಗಗಳು ಇಲ್ಲಿ ಉಲ್ಲೇಖಗೊಂಡಿವೆ. ಈ ಪ್ರಸಂಗಗಳನ್ನು ಬಲವಂತವಾಗಿ ಸೇರಿಸಿಲ್ಲ. ಬದುಕಿನಲ್ಲಿ ಉಂಟಾಗುವ ಜಟಿಲವಾದ ಸನ್ನಿವೇಶ, ಸಂದರ್ಭಗಳನ್ನು ಬಿಡಿಸಲು ಪೌರಾಣಿಕ ಪ್ರಸಂಗಗಳು ಸಹಜವಾಗಿ ಸೇರಿಕೊಂಡಿವೆ. ರಾಮಾಯಣ, ಮಹಾಭಾರತದ ಪ್ರಸಂಗಗಳನ್ನು ನೆನೆಯಲು, ಅವುಗಳ ಒಳ್ಳೆಯ ಫಲಿತಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು 'ಪಂಚತಂತ್ರಂ' ಸಣ್ಣ ಸೇತುವೆಯಾಗಿ ಸಹಕರಿಸುತ್ತದೆ.

ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರಂ' ಕಥೆಗಳಲ್ಲಿ ಪೌರಾಣಿಕ ಪ್ರಸಂಗಗಳನ್ನು ವಿವೇಚಿಸಲು ಸಾಧ್ಯವಾಗಿದ್ದು ಕೃತಿಗಳನ್ನು ಓದಿ ಓದಿ ಹತ್ತಿರಮಾಡಿಕೊಂಡಾಗ. ಕಲಾಕೃತಿಯೊಂದನ್ನು ನೋಡಿದ ತಕ್ಷಣ ಅದರ ಸ್ವರೂಪವನ್ನು ಹೇಳಿಬಿಡಬಹುದು. ಅದೇ ಕಲಾಕೃತಿಯನ್ನು ಸೂಕ್ಷ್ಮವಾಗಿ ನಿರಂತರವಾಗಿ ನೋಡುತ್ತಲೆ ಹೋದಾಗ ಅದರ ಭಿನ್ನಸ್ವರೂಪಗಳು ಗೋಚರಿಸುತ್ತವೆ. ಉದಾಹರಣೆಗೆ ಮೈಸೂರಿನ ಚಾಮುಂಡಿಬೆಟ್ಟದಲ್ಲಿರುವ ಮಹಿಷಾಸುರನ ವಿಗ್ರಹದ ಮುಂದೆ ನಿಂತು ಫೋಟೋ ತೆಗೆಸಿಕೊಳ್ಳುವಾಗ ಎದುರಿಗಿರುವ ಮುಖಭಾವವಷ್ಟೆ ನಮಗೆ ಗೋಚರವಾಗುತ್ತದೆ. ಆ ಸುಂದರ ಮೂರ್ತಿಯನ್ನು ಮತ್ತಷ್ಟು ಹತ್ತಿರವಾಗಿಸಲು, ಭಿನ್ನಸ್ವರೂಪವನ್ನು ಕಂಡುಕೊಳ್ಳಲು ಅಭಿಮುಖವಾದ ನೇರನೋಟವೊಂದೇ ಸಾಲದು. ಹಿಂದೆ, ಎಡ, ಬಲ, ಮೇಲೆ, ಕೆಳಗೆ ಹೀಗೆ ದೃಷ್ಟಿಕೋನವನ್ನು ಬದಲಾಯಿಸಿದಾಗ ಮಹಿಷಾಸುರನ ವಿಗ್ರಹದ ಉಗ್ರಸ್ವರೂಪವೆ ಬದಲಾಗುತ್ತದೆ. ಇಂತಹ ತಂತ್ರಗಳನ್ನೇ 'ಪಂಚತಂತ್ರ'ಕ್ಕೆ ಅಳವಡಿಸಿದಾಗ ಗೋಚರವಾದ ಭಿನ್ನಸ್ವರೂಪವೇ 'ಪೌರಾಣಿಕ ಪ್ರಸಂಗಗಳ ವಿಶ್ಲೇಷಣೆ'. ಇದು 'ಪಂಚತಂತ್ರ'ದ ಮತ್ತೊಂದು ಸ್ವರೂಪವನ್ನು ನಿರೂಪಿಸುವ ವಿಧಾನ ಕೂಡ ಆಗಿದೆ.

ಜೀವನ ಸೌಂದರ್ಯಕ್ಕೆ ಇರುವ ಮೌಲ್ಯಗಳಿಗೆ ಬಲವಾದ ಆಯುಷ್ಯವಿದೆ. ಜೀವನದ ಶೈಲಿ ಬದಲಾಗಬಹುದು, ಆದರೆ ಮೌಲ್ಯಗಳು ಎಂದಿಗೂ ಬದಲಾಗುವುದಿಲ್ಲ. ಮೌಲ್ಯಗಳು ಸರಿಯಾದ ಸಂದೇಶವನ್ನು ಹೊತ್ತುಕೊಂಡೇ ಕಾಲದೊಂದಿಗೆ ಚಲಿಸುತ್ತಿರುತ್ತವೆ. ತ್ರಿಕಾಲಗಳಿಗೂ ಪ್ರಸ್ತುತವೆನಿಸುತ್ತವೆ. ಈ ಕಾರಣದಿಂದಲೇ ರಾಮಾಯಣ ಮತ್ತು ಮಹಾಭಾರತದ ಮೌಲ್ಯಗಳು ಪ್ರಸಂಗಗಳ ಮೂಲಕ ಪಂಚತಂತ್ರಕ್ಕೆ ಸಂದರ್ಭೋಚಿತವಾಗಿ ಸೇರಿಕೊಂಡಿವೆ. ಇಂತಹ ವಿಶೇಷ ಸಂಗತಿಗಳು ಪಂಚತಂತ್ರದ ಮಹತ್ವವನ್ನು ಮತ್ತಷ್ಟೂ ಸ್ಪಷ್ಟಪಡಿಸುವ ಪ್ರಕ್ರಿಯೆ ಇಲ್ಲಿರುವುದರಿಂದ ಅವುಗಳ ವಿವೇಚನೆಯೂ ಅಗತ್ಯ.

ಪಂಚತಂತ್ರಂ ಕಥೆಗಳಲ್ಲಿ ಬರುವ ಪೌರಾಣಿಕ ಪ್ರಸಂಗಗಳನ್ನು ಎಂಟು ಅಂಶಗಳ ಮೇಲೆ ಕೇಂದ್ರೀಕರಿಸಿ ವಿಶ್ಲೇಷಿಸುವ ಪ್ರಯತ್ನ ಇಲ್ಲಿದೆ. ಪ್ರಸಂಗಗಳನ್ನು ವಿಶ್ಲೇಷಿಸುವ ಅನುಕೂಲಕ್ಕಾಗಿ ಆ ಎಲ್ಲ ಅಂಶಗಳನ್ನು ಹೀಗೆ ವಿಂಗಡಿಸಲಾಗಿದೆ:

1. ಧರ್ಮ, 2. ಸ್ನೇಹ, 3. ತಾಳ್ಮೆ, 4. ಪರೀಕ್ಷೆ, 5. ಸಮುತ್ಸುಕ, 6. ವಾಗ್ದೋಷ, 7. ಬುದ್ಧಿಹೀನತೆ ಮತ್ತು 8. ಇತರೆ ಸಂದರ್ಭಗಳು. ಈ ಎಲ್ಲಾ ಅಂಶಗಳು ಪ್ರಾಣಿ–ಪಕ್ಷಿಗಳ ಮೂಲಕ ಮನುಷ್ಯನ ಮತ್ತು ಮನುಷ್ಯತ್ವದ ಮಹತ್ವವನ್ನು ಎತ್ತಿಹಿಡಿಯುತ್ತವೆ.

## (1) ಧರ್ಮ

### (ಭೇದ ಪ್ರಕರಣಂ–ನರಿಯೂ ಭೇರಿಯೂ–ಮುನಿವೇದವ್ಯಾಸಮತಮಿದತಿಶಯ ಧರ್ಮಂ– ಪದ್ಯ ಸಂಖ್ಯೆ–114)

ಸಂಜೀವಕ ಮತ್ತು ಪಂಗಳಕನಿಗೆ ಮಹಾಸ್ನೇಹ ಉಂಟಾದಾಗ ಪಿಂಗಳಕನು ಒಂದು ದಿನ ಮೃಗಗಣರಿಗೆ ಅನೇಕ ಕರಣೀಕಳಭವ್ರಾತವನ್ನು ಕೊಂದು ಕಾಕಾನೀಕ ಜಂಬುಕನಿಕರಕ್ಕೆ ಔತಣ ಮಾಡಿಸಿತು. ಇದನ್ನು ಕಂಡ ಸಂಜೀವಕನು ಕರುಣಸಾರ್ದ್ರಹೃದಯನಾಗಿ, ಆನೆಗಳ ಸಮೂಹಕ್ಕೆ ಅಕಾಲಿಕವಾಗಿ ಪ್ರಾಣಹಾನಿಯು ಉಂಟಾದುದನ್ನು ಕಂಡು ಪಿಂಗಳಕನಿಗೆ ಅದೃಷ್ಟ

ಹಾನಿಯು ಆಗದಂತೆ ಮಾಡಬೇಕೆಂಬ ಮನಸ್ಸು ಬಂದು,

**ಆರೈದು ನೋಡೆ ಧರ್ಮಮೆ ಸಾರಂ ಸಂಸಾರಿಗದನುತ್ತಮ ಧರ್ಮ (ಪ.ಸಂ.112)** –ಎಂದು ಪಿಂಗಳಕನ ಮನಸ್ಸನ್ನು ಪರಿವರ್ತಿಸಲು ಪ್ರಯತ್ನಪಟ್ಟಿತು. ಆಗ 'ಸಮಸ್ತ ಪ್ರಾಣಿಗಳುಂ ತಂತಮ್ಮ ಜಾತಿಗೆ ತಕ್ಕಂದದೊಳೆ ಜೀವನೋಪಾಯಮಂ ಚಿಂತಿಸಿಕೊಂಡು ಬಾಳ್ವುದೆ: ಧರ್ಮಮಂ' **(ಪುಟ ಸಂಖ್ಯೆ 84)** ಹಾಗೆಯೇ, 'ಕೊಲ್ಲುವುದು ತಿನ್ನುವುದು ನನ್ನ ಧರ್ಮ'– ಹೀಗೆ ಸಮರ್ಥಿಸಿಕೊಳ್ಳಲು ಸಂಜೀವಕನು, 'ಪ್ರಾಣಿ ರಕ್ಷಣಮೆ ಪರಮಧರ್ಮಂ, ಪ್ರಾಣಿವಧೆಯೆ ಪರಮ ಪಾತಕಂ**(ಪು.ಸಂ.84)** ಎಂದು ಹೇಳಿತು. ಆಗ ಪಿಂಗಳಕನು,

**"ಯಾವಜ್ಜೀವಂ ಸುಖಂ ಜೀವೇತ್ ನಾಸ್ತಿ ಮೃತ್ಯೋರಗೋಚರಃ ।**

**ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂ ಕುತಃ" ॥ (ಶ್ಲೋಕ–30, ಬೃಹಸ್ಪತಿವಾಣಿ)**

ಇದು ಪ್ರತ್ಯೇಕವಾಗಿ ಅನುಭವಸಿದ್ಧವಾದುದರಿಂದ ಇದೇ ಪ್ರಮಾಣ. "ಬೆಂದ ಬೀಜಂ ಪುಟ್ಟದಂತೆ ಭಸ್ಮಾಂತರಿತ ದೇಹಂ ನಿಶ್ಚಯಂ ಪುಟ್ಟುವುದಿಲ್ಲ'– ಎಂದು ಹೇಳುವಾಗ ಸಂಜೀವಕನು ತನ್ನ ಪ್ರಯತ್ನವನ್ನು ಮುಂದುವರೆಸಿ, ವರರುಚಿ ಭಟ್ಟನ ಸಂಗತಿಯನ್ನು ಹೇಳಿ, ವರರುಚಿಯು ಧರ್ಮವನ್ನು ಹೇಳುವಾಗ, 'ಪ್ರಾಣಿರಕ್ಷಣೆಯೇ ಮುಖ್ಯಧರ್ಮ' ಎಂದು ಹೇಳಿರುವುದನ್ನು ತಿಳಿಸಿ, ಜೊತೆಗೆ ಪೌರಾಣಿಕ ಪ್ರಸಂಗವನ್ನು ಹೇಳುವ ಮೂಲಕ ವಾಲ್ಮೀಕಿ ಮತ್ತು ವ್ಯಾಸರನ್ನು ಮುಖಾಮುಖಿಯಾಗಿಸಿತು. ವಾಲ್ಮೀಕಿಯು ರಾಮಾಯಣವನ್ನು ರಚಿಸುವಾಗ 'ಇನ್ನು ನಮ್ಮಂತಹ ಕವಿಗಳು ಆಗದಿರಲಿ' ಎಂಬ ಆಜ್ಞೆ ಮಾಡಿದ್ದ ಸಂಗತಿಯೊಂದಿತ್ತು. ಆದರೆ ವ್ಯಾಸಮುನಿ ತನ್ನ ಬದುಕಿನಲಿ ಮಹಾಭಾರತ ಕಥಾಪ್ರಪಂಚವನ್ನು ಕಂಡು ಗ್ರಂಥ ರಚಿಸಬೇಕೆಂದು ಬಗೆದನು. ವಾಲ್ಮೀಕಿಮುನಿ ಆಜ್ಞೆ ಮಾಡಿದ್ದರ ಪರಿಣಾಮ ಅನುಮತಿ ಬೇಕಿತ್ತು. ವಿನಯ ವಿನಮಿತ್ತೋತ್ತಮಾಂಗನಾಗಿ ಅನುಮತಿಯನ್ನು ಕೇಳಲು, ಅದಕ್ಕೆ ವಾಲ್ಮೀಕಿಮುನಿ 'ಕೇವಲಂ ಧರ್ಮಮಾವುದಂ' ಹೇಳಿರಿ ಎನ್ನಲು, "ಎಲ್ಲಾ ಧರ್ಮದ ತಿರುಳಂ ಕೇಳ್ವುದು, ಕೇಳ್ದ ತೆರನಂ ಲೇಸಾಗವಧರಿಪುದು, ತನಗೆ ಪ್ರತಿಕೂಲಮಪ್ಪುದಂ ಪರರ್ಗೆ ಮಾಡಲಾಗದು" **(ಪು.ಸ.88)** –ಹೀಗೆ ಸಕಲ ಧರ್ಮದ ಸಾರವನ್ನು ಹೇಳಿದಾಗ ವ್ಯಾಸಮುನಿಯು,

**"ತನಗೆಂದು ಕೇಡಿಲ್ಲದುದನೆ ಬಯಸುವ ಮನುಜನಾವ ಜೀವಮುಮಂ ತ–**

**ನ್ನನೆ ಬಗೆವ ತೆರದೆ ಬಗೆವುದು ಮುನಿ ವೇದವ್ಯಾಸಮತಮಿದತಿಶಯ ಧರ್ಮಂ"** (ಪ.ಸಂ.114) ಎಂದು ಹೇಳಿದನು.

ಹೀಗೆ ಅತಿಶಯವಾದ ಧರ್ಮ ಯಾವುದು ಎಂಬುದನ್ನು ತಿಳಿಸಿದಾಗ, ಪ್ರಾಣಿವಧೆಯೇ ನೀಚವಾದದ್ದು, ಸಕಲ ಪ್ರಾಣಿಹಿತವೇ ಧರ್ಮವೆಂದು ಅನೇಕ ಶ್ರುತದೃಷ್ಟಾನುಮಾನಗಳಿಂದ ಸಂಜೀವಕನು ತಿಳಿಹೇಳುವುದರಿಂದ ಸ್ನೇಹದ ಮೂಲಕ ಧರ್ಮವನ್ನು ಸಾರಿದನು.

ಈ ಸಂಗತಿಯನ್ನು ಇಂದಿನಕಾಲದಲ್ಲಿ ಸ್ವೀಕಾರಮಾಡುವ ರೀತಿಯಲ್ಲಿ ಆಯ್ಕೆಯಾಗಬೇಕು, ಪ್ರಾಣಿವಧೆಗೆ ಆಧುನಿಕ ಪ್ರಪಂಚದಲ್ಲಿ ಕಾನೂನು ರೀತ್ಯ ವಿಧಿಗಳಿದ್ದರೂ ನಡೆಯುತ್ತಲೇ ಇರುತ್ತವೆ. ಪ್ರಾಣ ಇರುವುದೆಲ್ಲ ಪ್ರಾಣಿ ಎಂದಾದ ಮೇಲೆ, ಆ ಸಾಲಿನಲ್ಲಿ ಮನುಷ್ಯ ಪ್ರಥಮನಾಗುತ್ತಾನೆ. ಆದ್ದರಿಂದ "ಮನುಜನಾವ ಜೀವಮುಮಂ ತನ್ನನೆ ಬಗೆವ ತೆರದೆ ಬಗೆವುದು" ಎಂಬ ಸಾಲನ್ನು ಮನುಷ್ಯ ಮನುಷ್ಯನ ಸೌಹಾರ್ದ, ಸಮಾನತೆ, ಐಕ್ಯತೆಯ ಬದುಕಿಗೆ ಅಳವಡಿಸಿಕೊಳ್ಳಬೇಕು. ಆಗ 'ಪಂಚತಂತ್ರಂ' ಮತ್ತೆ ಸಾರ್ಥಕ ಗೊಳ್ಳುತ್ತದೆ.ಮನುಷ್ಯ ಮುಕ್ತಸಿದ್ಧಿ ಆಗುತಾನೆ.

## (2) ಸ್ನೇಹ

**(ಭೇದ ಪ್ರಕರಣಂ– ಮೊಲಂ ಸಿಂಹಮಂ ಕೊಂದಕಥೆ– ೬೪॥**

**ದುಷ್ಟನಾದೊಡಂ ಶರಣ್ಬೊಕ್ಕನಲ್ಲಿ ಮಹಾಪುರುಷರ್ಗೆ ಪಿರಿದು ಸ್ನೇಹಮುಂಟಾಗಿಹುದು– ಪು.ಸಂ.124)**

ಪಿಂಗಳಕನಿಗೆ ಸಂಜೀವಕನಲ್ಲಿ ಮಹಾಸ್ನೇಹ ಉಂಟಾಗಿದ್ದನ್ನು ಸಹಿಸದ ದವನಕನು, ಅವರಿಬ್ಬರ ಸ್ನೇಹವನ್ನು ಮುರಿದು ಹಾಕಲು ಹಲವು ಪ್ರಯತ್ನಗಳನ್ನು ಮಾಡಿ ಪಿಂಗಳಕನ್ನು ಪರಿವರ್ತಿಸಲು ನೋಡಿತು."ಅರಸಿಂಗೆ ಎಲ್ಲಾ ಹೊತ್ತು ಹಿತವಂ ನುಡಿವ ಮನುಷ್ಯರ್ ಹಲವರುಂಟು. ಅಪ್ರಿಯವಾಗಿಯುಂ ಹಿತವಂ ನುಡಿವವನುಂ ಕೇಳಬಲ್ಲವನುಂ ದುರ್ಲಭಂ– ಎಂಬೀ ರಾಜನೀತಿಯ ಕ್ರಮಂಗಳನತಿಕ್ರಮಿಸಿ ನಡೆವುದು ಉಚಿತಮಲ್ಲೆಂದು" **(ಪು.ಸಂ.123)** ನುಡಿದ ದವನಕನ ಮಾತನ್ನು ಕೇಳಿ ಪಿಂಗಳಕನು ಹೀಗೆಂದನು;

**ಶರಣಾಗತನೆಂದತ್ಯಾದರದಿಂ ಕೈಕೊಂಡು ಮಗುಳ್ದು ಸಂಜೀವಕನಂ**

**ಪರಮ ಸ್ನೇಹಿತನಂ ಪರಿಹರಿಸುವನಲ್ಲೆಂ ಸಮಸ್ತಗುಣ ಸಂಯುತನಂ (ಪ.ಸಂ.166)**

(ಶರಣಾಗತನೆಂದು ಅತ್ಯಾದರದಿಂದ ಸಂಜೀವಕನನ್ನು ಸ್ವೀಕರಿಸಿ ಆಗ ಅಂತ ಪರಮ ಸ್ನೇಹಿತನನ್ನು ನಾನು ಬಿಡಲಾರೆ) ಅಲ್ಲದೆ, ಆತನ ಬಗೆಗೆ ನಾನು ಇಷ್ಟರವರೆಗೆ ಯಾವುದರಲ್ಲೂ ದುಷ್ಟನಾಗಿ ವರ್ತಿಸಲಿಲ್ಲ. ಏನಾದರೂ ಸದ್ಧರ್ಮ ಮಾರ್ಗಾನುವರ್ತಿ–ಯಾಗುವುದಾದಲ್ಲಿ ತನ್ನ ಸಹಧರ್ಮಿಯಾಗುವಂತೆ ಧರ್ಮೋಪದೇಶ ಮಾಡಿದುದರಿಂದ ಗುರುಸ್ಥಾನನೂ ಶರಣಾಗತನಾದುದರಿಂದ ಪುತ್ರಸ್ಥಾನನೂ ಆಗಿರುವನು ಅಂಥವನಿಗೆ ಏನಾದರೂ ನಾನು ತಪ್ಪಕ್ಕಿಲ್ಲ – ಹೀಗೆ ಸ್ನೇಹವನ್ನು ಬಲವಾಗಿ ಸಮರ್ಥಿಸಿಕೊಳ್ಳಲು ದವಕನಿಗೆ ಕೆಲವು ಪೌರಾಣಿಕ ಪ್ರಸಂಗಗಳನ್ನು ಪರಿಚಯಿಸಿತು.

1. ದೇವೇಂದ್ರನು ಗೃಧ್ರವೇಷ (ಗಿಡುಗ) ದಿಂದ ಬಂದಾಗ ಮರೆಹೊಕ್ಕ ಪಾರಿವಾಳವನ್ನು ರಕ್ಷಿಸಲು ಶಿಬಿ ಚಕ್ರವರ್ತಿಯು ತನ್ನ ಮಾಂಸ ವನ್ನು ದೇವೇಂದ್ರನಿಗೆ ಕೊಟ್ಟು ಮೂರು ಲೋಕವೂ ಅವನ ದಾನಗುಣವನ್ನು ಬಣ್ಣಿಸುವಂತಾಯಿತು.

2. ಶ್ರೀರಾಮನು, ತನ್ನ ಸತಿ ಸೀತೆಯನ್ನು ರಾವಣ ಕದ್ದೊಯ್ದರೂ ಅವನ ತಮ್ಮ ವಿಭೀಷಣನು ಶ್ರೀರಾಮನಲ್ಲಿ ಮರೆಹೋಗಲು ಅವನನ್ನು ರಕ್ಷಿಸಿ ರಘುವಂಶಮಂಡನನೆಸಿದನು.

3. ದೇವೇಂದ್ರನ ವಜ್ರಾಯುಧದ ಹತಿ(ಹೊಡೆತ)ಯನ್ನು ತಪ್ಪಿಸಿಕೊಳ್ಳಲು ತನ್ನ ಆಶ್ರಮಕ್ಕೆ ಬಂದ ಕುಲಪರ್ವತಗಳನ್ನು ರಕ್ಷಿಸಿ, ಜಲನಿಧಿಯು ತನ್ನ ಅಸಮಗಂಭೀರತೆಯನ್ನು ಮೆರೆಯಿತು. ಹೀಗೆ ದುಷ್ಟನಾದರೂ ಶರಣು ಬಂದವನಲ್ಲಿ ಮಹಾಪುರುಷರಿಗೆ ಹಿರಿಯ ಸ್ನೇಹ ಉಂಟಾಗುವುದು ಎಂದು ಹೇಳುವ ಮೂಲಕ ತಮ್ಮ ಸ್ನೇಹ ಎಂತಹ ಸನ್ನಿವೇಶಕ್ಕಾದರೂ ಸಹ ವರ್ತಿಸುತ್ತದೆ.

ಇದಕ್ಕೆ ನಂಬಿಕೆ, ವಿಶ್ವಾಸ, ಪ್ರೀತಿ ಮುಖ್ಯವಾಗುತ್ತದೆ.

## (3) ತಾಳ್ಮೆ

**(ವಿಶ್ವಾಸಪ್ರಕರಣಂ– ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟಕಥೆ–**
**ಟೀ॥ ಅತ್ಯಾತುರದಿಂ ಕೋಪಾತುರಮಾಗಿ ನುಡಿವುದು ನೀತಿಯಲ್ಲದು– ಪು.ಸಂ.227)**

ಕಾಗೆಗಳ ಸಂತತಿಯನ್ನು ನಾಶಮಾಡಿದ ಗೂಗೆಗಳನ್ನು ಹೇಗೆ ನಾಶಮಾಡಬೇಕೆಂಬ ಚಿಂತನೆಯಲ್ಲಿ ತೊಡಗಿದ್ದ ಮೇಘವರ್ಣ, ಉದ್ದೀಪಿ, ಆದೀಪ, ಪ್ರದೀಪಿ, ಸಂದೀಪಿ, ಚಿರಂಜೀವಿ ಇವುಗಳ ಭಿನ್ನಾಭಿಪ್ರಾಯಗಳಿಂದ ಒಂದೊಂದು ನೀತಿಯೂ ಪ್ರಾಪ್ತವಾಗುತ್ತಿತ್ತು. ಅಂತೆಯೇ ಪ್ರದೀಪಿಯು, ನಾವು ಯಾವುದಾದರೊಂದು ಉಪಾಯದಿಂದ ಅರಿಮರ್ದನನೊಡನೆ ಸಂಧಿಮಾಡಿಕೊಂಡು ಕಾಲವನ್ನು ಕಾರ್ಯವನ್ನು ಸಾಧಿಸಿ ಉದ್ಯೋಗಿಸೋಣ ಎನ್ನಲು, ಮೇಘವರ್ಣನು ಕೋಪಗೊಂಡು, ಮನಸ್ಸಿನಲ್ಲಿ ಕನಲಿ, "ನೀನಪ್ಪೊಡೆ ಮಹಾಮಾತ್ಯನಾಗಿರ್ದಜ್ಞನಂತೆ ಕಾದಿದೊಡೆ ಸಾವಾದಪುದೆಂದೆನಗೆ ಭಯಂದೋರೆ ನುಡಿವುದು ನಯಮುಂ ನೀತಿಯುಮಲ್ಲದು"– ಎಂದು ವಿರೋಧಿಸುತ್ತಾ, 'ಧರ್ಮವನ್ನು ಮೊತ್ತಮೊದಲು ವಿಚಾರಿಸತಕ್ಕದ್ದು. ತನ್ನ ಬುದ್ಧಿಯಿಂದ ಮಂತ್ರಿಗಳ ಬುದ್ಧಿಯ ಪ್ರಮಾಣವನ್ನು ತಿಳಿಯಬೇಕು. ಯಾವನೇ ಆಗಲಿ ಪ್ರಾಣ ಐಶ್ವರ್ಯಗಳ ಲೋಭದಿಂದ ನೀತಿಯನ್ನು ಕೆಡಿಸಿಕೊಂಡಿರುವನೋ ಆ ಪಾಪಿಷ್ಠನು ಕೀಲಿಗಾಗಿ ದೇವಾಲಯವನ್ನು ಸುಡುವವನಂತೆ ಮೂರ್ಖನೆನಿಸುವನು. ರಣಮರಣ ಭೀತಿಯಿಂದ ಅಪಖ್ಯಾತಿ ಬರುವುದು. ಅಲ್ಲದೆ, ನನ್ನ ಸಮಸ್ತಬಲವೂ ಸತ್ತು, ಕೆಟ್ಟು ಅಸ್ತವ್ಯಸ್ತವಾದ ಕಾರಣ ನನಗೆ ತೇಜೋಹಾನಿಯೂ ಮನೋಗ್ಲಾನಿಯೂ ಆಗಿದೆ. ಅದರಿಂದ ಗೂಗೆಗಳನ್ನು ಇಂದೇ ಕೊಂದು ಕಾಗೆಗಳನ್ನು ಅವುಗಳ ಹೊಟ್ಟೆಯಿಂದ ತೆಗೆಯದಿದ್ದಲ್ಲಿ ನನ್ನ ಮನಸ್ಸಿನ ದುಃಖ ಹೋಗದು" ಎಂದು ನುಡಿದ ಬಲಿಭುಕ್ ಪತಿಯನ್ನು ವಾಯಸಬಲ ಸಂಜೀವಿನಿಯಾದ ಚಿರಂಜೀವಿ ತಡೆದು, ದೇವಾ, ನೀವು ಹೀಗೆ ಅತ್ಯಾತುರರೂ ಕೋಪಾತುರರೂ ಆಗಿ ನಡೆಯುವುದು ನೀತಿಯಲ್ಲ. ಹೇಗೆಂದರೇ "ರಾಮನಿಂ ಧೀರರು ಮಾರುಮಿಲ್ಲ; ಸ್ತ್ರೀ ಹರಣದಿಂ ಪರಾಭವಮಾವುದುಮಿಲ್ಲ ಅಹಂಗಾದೊಡಂ ಶ್ರೀರಾಮಂ ಸಮುದ್ರಮಂ ಶೋಷಿಸಿದನಿಲ್ಲ. ಸ್ಥೈರಣೆಯೊ ಮಾಡಿ ಸೇತುವಂ ಕಟ್ಟಿ ಲಂಕೆಯಂ ಕೊಂಡನಲ್ಲದೆ ತ್ವರಿತವ ಮಾಡಿದುದಿಲ್ಲ ಎಂಬ ನೀತಿವಾಕ್ಯಮುಂಟು" **(ಟೀ॥ ಪು.ಸಂ.228)** ಆದ್ದರಿಂದ ನೀವು ತಾಳ್ಮೆಯಿಂದ ಹಗೆಯನ್ನು ಮನಸ್ಸಿನಲ್ಲೇ ಕಾದಾಡಿ ಗೆಲ್ಲತಕ್ಕದ್ದು ಎಂದು ಭಿನ್ನವಿಸಿತು.

## (4) ಪರೀಕ್ಷೆ–1

**(ಪರೀಕ್ಷಾ ವ್ಯಾವರ್ಣನಂ_ ಅಜಿತನ ಕಥೆ – ಟೀ॥ಪ್ರತ್ಯಕ್ಷವಾಗಿ ಕಂಡುದನು ಯಥಾಯುಕ್ತವಾಘಿ ವಿಚಾಋಇಸಿ ಮಾಡುವುದು– ಪು.ಸಂ.215)**

ಅಜೀತನು, 'ವಂಶಾನುಗತವಾಗಿ ಬಂದ ಐಶ್ವರ್ಯವನ್ನು ಭೋಗಿಸಲು ಯೋಗ್ಯವಲ್ಲ, ಅದು ಗುರುಪತ್ನಿಗೆ ಸಮನಾದದ್ದು' ಎಂದು ಬರೆದಿದ್ದ ತಂದೆ ವಿಮಳಮತಿಯ ಪತ್ರವನ್ನು ನೋಡಿ, ಪಿತೃವಿತ್ತಕ್ಕೆ ಆಸೆಪಡದೇ ಮಹಾರಾಜ ವಿಕ್ರಮಾದಿತ್ಯನ ಸೇವೆ ಮಾಡಲು ಮುಂದಾದನು. ಸೇವೆಗೆ ಪ್ರತಿಯಾಗಿ ನಾಗವೇದಿಕೆಯಲ್ಲಿ ಸಾಲೊಂದನ್ನು ಬರೆದು, ಭಿನ್ನ ಅನುಭವಕ್ಕೆ ಸಾಕ್ಷಿಯಾದನು. ಒಂದು ರಾತ್ರಿ ವಿಕ್ರಮಾದಿತ್ಯನ ಮಹಾರಾಣಿಯೂ ರೂಪದೇವಿ ಎಂಬ ಅರಸಿಯೂ ವಿನೋದಕ್ಕಾಗಿ ಸೀತಾರಾಮರಾಗಿ ಕೃತಕ ನಾಟಕವನ್ನಾಡಿ ಬಳಲಿ, ಕೃತಕ ಪುರುಷ ರೂಪ ಚಿಹ್ನೆಗಳನ್ನು ತೆಗೆಯಲು ಮರೆತು ಅರಸನ ಸಿರಿಮಂಚದಲ್ಲಿ ಗಾಢಾಲಿಂಗನದಲ್ಲಿ ಮೈಮರೆತು ಮಲಗಿರಲು, ಆಯಾಸದಿಂದ ಬಂದ ವಿಕ್ರಮಾದಿತ್ಯನು ಮಜ್ಜನ ಭೋಜನಾದಿ ಕಾರ್ಯಗಳನ್ನು ಮಾಡದೆ, ಶಯ್ಯಗೃಹವನ್ನು ಹೊಕ್ಕು ಸಿರಿಮಂಚದ ಮೇಲೆ ಮಹಾರಾಣಿ ಜತೆ ಮಲಗಿದ್ದ ಪುರುಷ ವೇಷಧಾರಿಯನ್ನು ಕಂಡು ಸೇವಕನ ಕೈಯಲ್ಲಿದ್ದ ಕತ್ತಿಯನ್ನು ತೆಗೆದುಕೊಂಡು ರಭಸದಿಂದ ಹೊಡೆಯಲು ಮುಂದಾದಾಗ, ಕತ್ತಿಯು ನಾಗವೇದಿಕೆಗೆ ತಾಗಿ ನಾಟಿಕೊಳ್ಳಲು, ನಾಗವೇದಿಕೆಯಲ್ಲಿ, "ಹೇಳಿ ಕೇಳಿದ ಮಾತನ್ನೇ ವಿಶ್ವಾಸಿಸಬಾರದು. ಅಜ್ಞಾನವಾದ ದೃಷ್ಟಿಯಿಂದ ಕಂಡಕಾರ್ಯವನ್ನು ಬೇಗನೆ ಮಾಡಬಾರದು, ಪ್ರತ್ಯಕ್ಷವಾಗಿ ಕಂಡುದನ್ನು ಯಥಾಯುಕ್ತವಾಗಿ ವಿಚಾರಮಾಡಬೇಕು" ಎಂದಿರುವುದನ್ನು ಅರ್ಥೈಸಿಕೊಂಡು ಆಗಬೇಕಾಗಿದ್ದ ಅನಾಹುತವನ್ನು ತಡೆದನು.

## (4) ಪರೀಕ್ಷೆ–2

**(ಪರೀಕ್ಷಾ ವ್ಯಾವರ್ಣನಂ_ ಬ್ರಾಹ್ಮಣಂ ಮುಂಗುರಿಯಂ ಕೊಂದ ಕಥೆ–**
**ಪರೀಕ್ಷಿಸುವುದು ಮನುಜಂ ಸಮಸ್ತ ಕಾರ್ಯಸ್ಥಿತಿಯಂ– ಪದ್ಯಸಂಖ್ಯೆ–266)**

ಬ್ರಾಹ್ಮಣ ದೇವಶರ್ಮನ ಹೆಂಡತಿ ಯಜ್ಞದತ್ತೆ ಮಗುವಿನ ಬಟ್ಟೆ ತೊಳೆಯಲು ಹೋಗಿದ್ದಳು. ದೇವಶರ್ಮನು ಮಗುವನ್ನು ನೋಡಿಕೊಳ್ಳಲು ಮುಂಗುಸಿಯೊಂದನ್ನು ತೊಟ್ಟಿಲ ಸಮೀಪದಲ್ಲಿ ಕಟ್ಟಿ ಅರ್ಥಾರ್ಥಿಯಾಗಿ ಹೋದನು. ಹಿಂದಿರುಗುವಷ್ಟರಲ್ಲಿ ಮುಂಗುಸಿಯು ಮಗುವನ್ನು ಹಾವಿನಿಂದ ರಕ್ಷಣೆ ಮಾಡಲು ಹಾವಿನೊಂದಿಗೆ ಸೆಣಸಾಡಿ, ಸಾಯಿಸಿ ತೊಟ್ಟಿಲ ಬಳಿ ಇರಲು ದೇವದತ್ತನು ಆಗಮಿಸಿದನು. ಮುಂಗುಸಿಯು ಮಗುವನ್ನು ಕೊಂದಿತೆಂದು ಪರೀಕ್ಷಿಸದೆ ಅವಿವೇಕಿಯಾಗಿ ಮುಂಗುರಿಯನ್ನು ಕೊಂದನು. ತೊಟ್ಟಿಲಲ್ಲಿ ಮಗು ಸುಖನಿದ್ರೆಯಲ್ಲಿತ್ತು. ಯಜ್ಞದತ್ತೆಯೂ ಬಂದಳು. ನೀವು ಅನಪರಾಧಿಯೂ ಪರೋಪಕಾರಿಯೂ ಆದ ಮುಂಗುಸಿಯನ್ನು ಪರೀಕ್ಷಿಸದೆ ಕೊಂದಿರಿ. ಇನ್ನು ಪಶ್ಚಾತ್ತಾಪವೂ ವಿಪ್ರಲಾಪವೂ ಪ್ರಯೋಜನವಿಲ್ಲ ಎಂದು ಸಂತೈಸಿ, ಮತ್ತೆ ಸಂತೈಸಲು, ಹಿಂದೆ;

**ದಶರಥನೆಂಬ ನರೇಂದ್ರಂ ವಿಶದಯಶಂ ಗಜಮೆಗೆತ್ತು ಋಷಿಪುತ್ರನುಮಂ**
**ಶಿಶು ವನಪರೀಕ್ಷಿತಂ ಕೊಂದು ಶಾಪಮಂ ಭೂಪನಾಗಳಲ್ಲಿಯೆ ಪಡೆದಂ (ಪ.ಸಂ.265)**

ಆದ್ದರಿಂದ ಮನುಷ್ಯನು ಯಶಸ್ಸನ್ನೂ, ಧರ್ಮವನ್ನೂ ಪಾಲಿಸುವುದಾದರೆ ಇಹಪರಗಳನ್ನು ಬಯಸುವುದಾದರೆ ಸಮಸ್ತಕಾರ್ಯಗಳನ್ನು ವಿಚಾರಿಸಿ ಪರೀಕ್ಷಿಸಿ ಕೈಕೊಳ್ಳಬೇಕು ಎಂದು ಹೇಳಿ ಗಂಡನನ್ನು ಸಂತೈಸಿದಳು.

## (5) ಸಮುತ್ಸುಕ

**(ವಿಶ್ವಾಸ ಪ್ರಕರಣಂ– ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟಕಥೆ– ಭೂಭುಜಂ ಸಮುತ್ಸುಕನಾಗಲಾಗದು–ಪು.ಸಂ.236)**

ಕಾಗೆಗಳಿಗೂ ಗೂಬೆಗಳಿಗೂ ವೈರತ್ವ ಉಂಟಾಗಿ ಗೂಗೆಯ ವಂಶವನ್ನು ನಿರ್ಮೂಲನ ಮಾಡಲು ಕಾಗೆಗಳ ಸಮೂಹದ ಚಿರಂಜೀವಿಯು, 'ನಾವು ವಿನಾಶರಾಗುವ ಶತ್ರುಗಳಾಗಿದ್ದೇವೆ' ಎಂದು ಹೇಳಿದ ಮಾತನ್ನು ಮೇಘವರ್ಣನು ಕೇಳಿಸಿಕೊಂಡು, 'ಹೆಚ್ಚು ಮಾತಿನಿಂದೇನು ಪ್ರಯೋಜನ?' ಯುದ್ಧದಲ್ಲಿ ಭೀಕರವಾದ ನನ್ನ ಭುಜಬಲದಿಂದ ಅರಿಮರ್ದನನನ್ನು ಸಂಹರಿಸಿ ಅರಿಮರ್ದನನೆಂಬ ಹೆಸರನ್ನು ನಾನು ಧರಿಸಿರುವೆನು ಎನ್ನಲು, ಚಿರಂಜೀವಿಯು, ನೀವು ಅರಿಮರ್ದನನೊಡನೆ ಕಾದಾಡಿ ಗೆಲ್ಲುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಗೂಗೆಗಳು ಹಗಲುಗುರುಡರಾದ್ದರಿಂದ ಇಕ್ಕಟ್ಟಾದ ಗುಹಾಗಹ್ವರಗಳಲ್ಲಿ ಹೊಕ್ಕಿರುವುವು. ಆದ್ದರಿಂದ ಉಪಾಯ ವಿಲ್ಲದ ಅವುಗಳೊಡನೆ ಗೆಲ್ಲುವುದು ಸಾಧ್ಯವಿಲ್ಲ. ಮತಿಹೀನರಾದ ಮನುಷ್ಯರು ಪತಂಗ ವೃತ್ತಿಯಿಂದ ಬಾಳುವರು. ಆದ್ದರಿಂದ ರಾಜನು ತನಗೆ ಅಹಿತನಾಗಿರಲು ಮೈಮರೆತು ವರ್ತಿಸುವ ಭೂಪನು ತನ್ನ ಸೈನಿಕರ ಹೆಂಡಿರ ಆಕ್ರಂದನವನ್ನು ಹಗಲಿರುಳೂ ಕೇಳುತ್ತಿ ರುವನು.ಅದರಿಂ ಭೂಭುಜಂ ಸಮತ್ಸುಕನಾಗಲಾಗದು. ಹೇಗೆಂದರೆ, ಧರ್ಮರಾಜನು ಜೂಜಾಡಿ ಮೇದಿನಿಯನ್ನು ಸೋತು ಹೆಂಡತಿ ಸೋದರರ ಸಹಿತ ವನವಾಸ ಮಾಡಲು, ಆಯಾಸಕ್ಕೆ ಬೇಸತ್ತು ದ್ರೌಪದಿಯು, ದೇವಾ! 'ನೀನು ನಿನ್ನ ಸತ್ಯವನ್ನೇ ಕಾಪಾಡಿ ನಿನ್ನ ಸೋದರರು ಬನ್ನದ ಕೂಳನ್ನುಂಡರು. ವನವಾಸ ಮಾಡಿ ನಾರುಡೆಯುಟ್ಟು ಬೇರನ್ನು ಭೀಕ್ಷೆಯನ್ನು ತಿಂದು ಕಂದಿ ಕುಂದಿ ಹೇಡಿಯ ಮನಸ್ಸಿನಂತೆ ಅಲ್ಲಾಡುತ್ತಿರುವನು. ಇವರನ್ನು ಕೌರವರ ಮೇಲೆ ಹೋರಾಟಕ್ಕೆ ಬಿಡು, ತಡೆದಿರಬೇಡ' ಎಂದಾಗ "ಕೀರ್ತಿಯನ್ನು ತಡೆಯಲೂ ಸುಖವನ್ನು ಹೊಂದಲೂ ಸಾಮಾನ್ಯ ಜನಗಳನ್ನು ಮೀರಲೂ ಉತ್ಸಾಹದಿಂದ ಉದ್ಯೋಗಶೀಲರಾದ ಮನುಷ್ಯರ ತೊಡೆಯಮೇಲೆ ಲಕ್ಷ್ಮೀ ನೆಲೆಸಿರುವಳು' ಎಂಬ ನೀತಿಯನ್ನು ಧರ್ಮರಾಯ ಹೇಳಿದನು.

## (6) ಬುದ್ಧಿಹೀನತೆ

**(ಮಿತ್ರಕಾರ್ಯ ಪ್ರಕರಣಂ–ಕಾಗೆಯುಂ ಆಮೆಯುಂ ಸಾರಂಗಮುಂ ಇಲಿಯುಂ–**
**ಟೀ॥ ವಿಪತ್ತು ಬಹ ಕಾಲಕ್ಕೆಂತವರುಂ ಮತಿಗಿಡುವರ್– ಪು.ಸಂ.332)**

ಒಂದು ದಿನ ಬೆಳಗ್ಗೆ ಚಿತ್ರಾಂಗನು ಆಹಾರಕ್ಕಾಗಿ ಕಾಡಿಗೆ ಹೋಗಿ ಸಂಚರಿಸುತ್ತಿರಲು ಬೇಡರೊಡ್ಡಿದ ಬಲೆಗೆ ಸಿಕ್ಕಿದುದನ್ನು ಲಘುಪತಕ(ಕಾಗೆ)ನು ಕಂಡು, ಆಮೆ ಮತ್ತು ಹಿರಣ್ಯರೋಮ(ಇಲಿ)ಗಳಿಗೆ ತಿಳಿಸಲು, ಮೂವರು ಸೇರಿ ಬಂದು ಪಾಶಕ್ಕೆ ಸಿಕ್ಕಿದ್ದ ಚಿತ್ರಾಂಗ(ಜಿಂಕೆ)ನನ್ನು ಕಂಡು, ನೀನಾದರೋ ಬುದ್ಧಿವಂತ, ಇಂತಹ ಕಡೆಗೆ ಹೇಗೆ ಬಂದು ಸಿಲುಕಿಕೊಂಡೆ ಎನ್ನಲು,

ಟೀ॥ ರಾವಣಂ ಸೀತೆಯನುಯ್ವಲ್ಲಿ ದೋಷಮೆಂಬುದನರಿದುದಿಲ್ಲ, ಶ್ರೀರಾಮಂ ಮಾಯಾಮೃಗವೆನಿಸುವಲ್ಲಿ ಕೃತಕಮೃಗ–ಮೆಂದರಿದುದಿಲ್ಲ, ಧರ್ಮಸುತಂ ಜೂಜಿನಲ್ಲಿ ತನಗೆ ಕೇಡೆಂಬುದನರಿದುದಿಲ್ಲ. ವಿಪತ್ತು ಬಹ ಕಾಲಕ್ಕೆಂತವರುಂ ಮತಿಗಿಡುವರ್ **(ಪು.ಸಂ.332)** ಆದ್ದರಿಂದ ಇದನ್ನು ಯಾರೂ ಪರಿಹರಿಸಲಾರರು. ಇನ್ನು ನನ್ನಿಂದಸಾಧ್ಯವೇ? ಎಂದು ಹೇಳಿತು.

## (7) ವಾಗ್ದೋಷ

**(ವಿಶ್ವಾಸ ಪ್ರಕರಣಂ–ಶಿಶುಪಾಲನ ಕಥೆ– ಆತಂ ವಾಗ್ದೋಷದಿಂ ನಿಶ್ಶೇಷಜೀವಿತನಾದ ಕಥೆಯಂ ನಿಮ್ಮಡಿ ಕೇಳ್ದರಿಯಿರಕ್ಕುಮ್–ಪು.ಸಂ.254)**

ಕಾಗೆಗಳಿಗೂ ಗೂಗೆಗಳಿಗೂ ವೈರತ್ವ ಬೆಳೆಯಲು ಪ್ರಮುಖ ಕಾರಣ 'ಮಾತು'. ಉಲೂಕರಾಜನಿಗೆ ಆಗಬೇಕಿದ್ದ ಪಟ್ಟಾಭಿಷೇಕವನ್ನು ತಪ್ಪಿಸಿದ ಕಾಗೆಯನ್ನು ಕುರಿತು, 'ನಾನು ಕಾಕಾಬಲವನ್ನು ಹರನು ಬಂದು ರಕ್ಷಿಸಿದರೂ ಕೊಂದಲ್ಲದೆ ಬಿಡೆನು'. ಎಂದು ಉಲೂಕಾಧಿಪತಿ ಅತಿಪ್ರತಿಜ್ಞೆ ಮಾಡಿತು. ಇತ್ತ ವಾಯಸವು, 'ಎಲೈ ನಯವಾದ ನಾಲಗೆಯೆ ನಿಷ್ಠುರವನೆಂದುಂ ನುಡಿಯದಿರು; ಮಧುರವನೆ ನುಡಿ; ಮಧುರವೆಂಬುದು ಸರ್ವಜನಪ್ರಿಯವಾಗಿಹುದು. ಜಯವನ್ನು ಕೀರ್ತಿಯನ್ನು ಅಭಿವೃದ್ಧಿಯನ್ನು ಒಳಿತನ್ನು ಕಾರ್ಯಸಿದ್ಧಿಯನ್ನು ಸತ್ಫಲವನ್ನು ಬಯಸುವ ಮನುಜನು ಸತತವಾಗಿ ವೈರಿಗಳಲ್ಲಿ ಪ್ರಿಯವಾದುದನ್ನೇ ನುಡಿಯಬೇಕು' ಎಂದು ತನ್ನನ್ನು ತಾನೇ ನಿಂದಿಸಿಕೊಂಡಿತು. ಅಂದಿನಿಂದ ಅವರಿಬ್ಬರ ನಡುವೆ ವೈರತ್ವ ಬೆಳೆಯಿತು ಎಂದು ಚಿರಂಜೀವಿ ಹೇಳಲು ಮೇಘವರ್ಣನು, 'ಮಾತಿನಿಂದ ಬಂದ ವೈರವನ್ನು ಸಾಧಿಸಿಕೊಂಡು ಯುದ್ಧಮಾಡಿ ಕೊಂದು ಹಾಕಿದರೆಂಬ ಕಥೆಗಳನ್ನು ಎಂದೂ ನಾನು ಕೇಳಿಲ್ಲ' ಎನ್ನಲು, ಚಿರಂಜೀವಿಯೂ ಶಿಶುಪಾಲನ ಕಥೆಯನ್ನು ಹೇಳಿತು. ಯುಧಿಷ್ಠಿರನು ರಾಜಸೂಯಯಾಗ ಮಾಡಲು ಅಪೇಕ್ಷಿಸಿ ಎಲ್ಲರನ್ನು ಕರೆಯಿಸಿ ಯಾಗವನ್ನು ಮಾಡಿದ ಬಳಿಕ, ಭೀಮನು ಅಗ್ರಪೂಜೆಗೆ ಅಗ್ರೇಸರರು ಯಾರು ಹೇಳಿರಿ ಎಂದು ಕೇಳಲು, ಗಾಂಗೇಯನು ಗಂಭೀರಧ್ವನಿಯಿಂದ ಶ್ರೀಕೃಷ್ಣನಿಗೆ ಭಕ್ತಿಯಿಂದ ಅಗ್ರಪೂಜೆಯನ್ನು ಅರ್ಪಿಸು ಎಂದನು. ಆಗ ಯಮನಂದನನು ಆನಂದ ಮನಸ್ಕನಾಗಿ ದೇವಕಿನಂದನನಿಗೆ ಅಗ್ರಪೂಜೆ ಅರ್ಪಿಸಿದನು. ಆಗ ಶಿಶುಪಾಲನು ಕ್ರೋಧಾಕ್ರಾಂತನಾಗಿ ಯುಧಿಷ್ಠಿರನಿಗೆ, ನಿಷ್ಠುರವಾಗಿ ಗಾಂಗೇಯನಿಗೆ ನೋಯುವಂತೆ ನುಡಿದನು. ಅಲ್ಲದೆ, ಕೃಷ್ಣನನ್ನು ಬಾಯಿಗೆ ಬಂದಂತೆ ಭಂಗಿಸಿ ಹೆಂಡಿರನ್ನು ಬಯ್ಯುವಂತೆ ಬಯ್ಯಲು ಶ್ರೀಕೃಷ್ಣನು ಶಿಶುಪಾಲನನ್ನು ಹತ್ಯೆಮಾಡಿದನು. ಅಲ್ಲದೆ, ಅಸಾಧ್ಯಬಲರಾದ ಎಷ್ಟೋ ಜನ ದಾನವ ಮಾನವರು ವಾಕ್ಪಾರುಷ್ಯದಿಂದ ಕೆಟ್ಟರು ಎಂದು ಚಿರಂಜೀವಿ ಮೇಘವರ್ಣನಿಗೆ ಹೇಳಿತು.

## (8) ಇತರೆ ಸಂದರ್ಭಗಳು

ಭೇದ ಪ್ರಕರಣದ ರಾಜಹಂಸನು ಆಂದೆಯುಂ ಕಥೆಯಲ್ಲಿ ಬಿಲ್ಲಾಳನೊಬ್ಬನು ವಕ್ರವಾಗಿ ಕೂಗುತ್ತಿದ್ದ ರಾಜಹಂಸ ಪಕ್ಷಿಯನ್ನು ಅನಿಷ್ಟ ಹಕ್ಕಿಯೆಂದು ಭಾವಿಸಿ ಕೊಲ್ಲಲು ಮುಂದಾದಾಗ, ಶ್ರೀ ರಾಮನು ಕಾಕಾಸುರನ ಮೇಲೆ ಕೋಪದಿಂದ ಬಾಣ ಪ್ರಯೋಗಿಸಿದಂತೆ ಪಕ್ಷಿಶ್ರೇಷ್ಠ ರಾಜಹಂಸನನ್ನು ಕೊಂದನು **(ಪು.ಸಂ.148)**. ಟಿಟ್ಟಿಭ ಮಿಥುನಂಗಳ ಕಥೆಯಲ್ಲಿ ಚಂಡಪರಾಕ್ರಮನು ಮಧುರಾಲಾಪೆಗೆ, ನನ್ನ ಸಾಮರ್ಥ್ಯವನ್ನು ಅರಿಯದೆ ವೈರದಿಂದ ವರ್ತಿಸಿದ ಈ ಕಡಲನ್ನು ಕುಡಿದು ಅಂಡಗಳನ್ನು ಹುಡುಕಿ ತಂದುಕೊಡುವೆ. ಆ ಸಾಗರವನ್ನು ಒತ್ತಿ ನಿನ್ನ ತತ್ತಿಗಳನ್ನು ತಂದುಕೊಡುವೆ. ಇಲ್ಲದಿದ್ದರೆ ಅಗಸ್ತ್ಯನಂತೆ ಕಡಲನ್ನು ಹೀರುವೆ ಎಂದಿತು **(ಪು.ಸಂ.180)**. ಪಕ್ಷಿಕುಲದ ಸ್ವಾಮಿ ಗರುಡನು ತನ್ನ ಪರಿವಾರವನ್ನು ಕಾಪಾಡಿಕೊಳ್ಳಲು ಮುಕುಂದನನ್ನು ಕಂಡು ಕೈಮುಗಿದು, ಬಗೆಬಗೆಯಿಂದ ಸ್ತುತಿಸುವುದು ವಿಶೇಷವಾಗಿದೆ. ದುಷ್ಟಬುದ್ಧಿ ಧರ್ಮಬುದ್ಧಿ ಕಥೆಯಲ್ಲಿ ದುಷ್ಟಬುದ್ಧಿಯು ತನ್ನ ತಂದೆಗೆ ಮರದ ಪೊಟರೆಯೊಳಗೆ ಅವಿತುಕೊಂಡು ಸಾಕ್ಷಿ

ಹೇಳಿ ಎನ್ನಲು, ತಂದೆಯು 'ಸಮಸ್ತ ಪ್ರಪಂಚವೂ ಛೀಮಾರಿ ಹಾಕಲು ಪರಧನವನ್ನು ಕಪಟವೃತ್ತಿಯಿಂದ ವಂಚಿಸಿ ಪಡೆದು ಕೌರವನು ರಾಜ್ಯಶ್ರೀ ಸಹಿತ ರೌರವವನ್ನು ಅನಭವಿಸಿದನು. ಆದ್ದರಿಂದ ವಿಶ್ವಾಸಘಾತುಕವೂ ಕೇಡನ್ನು ಉಂಟುಮಾಡುವುದು. **(ಪು.ಸಂ.193)** ಎಂದು ಹೇಳುವನು.

ವಿಶ್ವಾಸ ಪ್ರಕರಣದ ಗೂಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟ ಕಥೆಯಲ್ಲಿ ಗೂಗೆಗಳೆಲ್ಲವೂ ಸೇರಿ ವಿಹಂಗಮ ಕುಲಚಕ್ರವರ್ತಿ ಪದವಿಗೆ ಯೋಗ್ಯನಾದವನನ್ನು ಆರಿಸಿ ಅವನಿಗೆ ಶುಭಲಗ್ನದಲ್ಲಿ ಪಟ್ಟಾಭಿಷೇಕ ಮಾಡಬೇಕಾದ ಸಂದರ್ಭದಲ್ಲಿ ರಾಮರಾಜ್ಯಾಭಿಷೇಕದ ಮಂಟಪಕ್ಕೆ ಕೈಕೆ ಬಂದಂತೆ ಗೂಗೆ ರಾಜನ ರಾಜ್ಯಾಭಿಷೇಕ ಮಂಟಪವಾಗಿದ್ದ ವಿಶಾಲವಾದ ಆಲದಮರದ ಮೇಲೆ ಕಾಗೆ ಬಂದು ಕರ್ಕಶಸ್ವರದಿಂದ  ಕೂಗಿತು. ಅದನ್ನು ಕೇಳಿ ಪಕ್ಷಿಪ್ರಧಾನರು ಶಕುನ ನಿಮಿತ್ತಗಳನ್ನು ನೋಡಿ ಮಾಡಬೇಕು. ಈ ವಾಯಸಸ್ವರ ದುಸ್ತರವಾಗಿದೆ. ಇದು ಪಕ್ಷಿ ಜಾತಿಯಾದುದರಿಂದ ಇದಕ್ಕೆ ತಿಳಿಸಬೇಕು ಎಂದರು.

ಅರಿಮರ್ದನನೊಡನೆ ಸಂಧಿಕಾರ್ಯಕ್ಕೆ ಯಾರನ್ನು ದೂತರನ್ನಾಗಿ ಕಳುಹಿಸಬೇಕೆಂಬ ಸ್ಪಷ್ಟತೆಗೆ ಚಿರಂಜೀವಿಯು ಮೇಘವರ್ಣನಿಗೆ, ಸತ್ತ್ವವೂ ದೃಢವೂ ಶೌರ್ಯವೂ ಧೈರ್ಯವೂ ಸ್ನೇಹವೂ ಮೋಹವೂ ಸಾಹಸವೂ ಸೈರಣೆಯೂ ಇರುವವರನ್ನು ದೂತಕಾರ್ಯಕ್ಕೆ ಕಳುಹಿಸಬೇಕು. ಹೇಗೆಂದರೆ ಚಿರಂತನ ಕಾರ್ಯಗಳಲ್ಲಿ ಹನುಮಂತನಂಥವನನ್ನು ರಾಮನು ದೂತನನ್ನಾಗಿ, ಮುರಾಂತಕನಂಥವನನ್ನು ಯುಧಿಷ್ಠಿರನು ದೂತಕಾರ್ಯಕ್ಕೆ ಕಳುಹಿಸಿದನು. ಅದರಿಂದ ಇಂತಹ ವಿಷಯ ಕಾರ್ಯವು ನನ್ನಿಂದಲ್ಲದೆ ಸಾಧ್ಯವಾಗದು ಎಂದು ಹೇಳಿತು. ಕಪೋತಂ ಕಿರಾತಂಗೆ ತನ್ನಸುವನ್ನಿತ್ತ ಕಥೆಯಲ್ಲಿ ಶಬರನಿಗೆ ತನ್ನ ಶರೀರವನ್ನೇ ಅರ್ಪಿಸಿದ ಕಪೋತಕಲೋತ್ತಮನು ಪರೋಪಕಾರವನ್ನು ದೃಢವಾಗಿ ನಿರ್ಧರಿಸಿ ದಶಶಿರನ ರೌದ್ರಕೋಪಾಗ್ನಿಶಿಖಾಳಿಯನ್ನು ಎದುರಿಸಿದ ಆ ಜಟಾಯುವಿನಂತೆ ಪ್ರಜ್ವಲಿಸುವ ಆ ಬೇಡನ ಬೆಂಕಿಗೆ ಬಿದ್ದಿತು. ಹೀಗೆ ಪೌರಾಣಿಕ ಪ್ರಸಂಗಗಳು ಪಂಚತಂತ್ರದ ಕಥಾ ನಿರೂಪಣೆಗೆ, ಅದರ ಬೆಳವಣಿಗೆಗೆ ಮತ್ತು ಅದರ ಶ್ರೀಮಂತಿಕೆಗೆ ಪೂರಕವಾಗಿ ಬಂದಿರುವುದು ವಿಶೇಷವಾಗಿದೆ.

'ಕರ್ಣಾಟಕ ಪಂಚತಂತ್ರಂ' ಕೃತಿಯಲ್ಲಿನ ಉಲ್ಲೇಖಗೊಂಡಿರುವ ಪೌರಾಣಿಕ ಪ್ರಸಂಗಗಳು ಪಂಚತಂತ್ರ ಕಥೆಗಳ ಸಾಂದರ್ಭಿಕತೆಯ ತೀವ್ರತೆಯನ್ನು ಅದರ ಹೆಚ್ಚುಗಾರಿಕೆಯನ್ನು ಪುಷ್ಟೀಕರಿಸುತ್ತವೆ. ಈ ಮೂಲಕ ಪಂಚತಂತ್ರ ಕಥೆಗಳಲ್ಲಿ ನಿರೂಪಿತಗೊಂಡಿರುವ ನೀತಿಯನ್ನು ಅರ್ಥೈಸಿಕೊಳ್ಳಲ ನೇರವಾಗಿ ಸಹಕರಿಸುತ್ತವೆ. ಈ ಮೂಲಕ ನಾವು ಕಂಡಿರುವ ಜಗತ್ತು ಮತ್ತು ಕಾಣಬೇಕಾಗಿರುವ ಜಗತ್ತಷ್ಟೇ ಜಗತ್ತಲ್ಲ. ಅದರಾಚೆ ನಮ್ಮ ದೃಷ್ಟಿಯ ವಿಸ್ತಾರ ನಮ್ಮ ಬದುಕನ್ನು, ಬದುಕಿನ ಅನುಭವವನ್ನು ವಿಸ್ತರಿಸುತ್ತದೆ. ಇದರ ಸಾಧ್ಯತೆಗೆ ಪಂಚತಂತ್ರಂ ಪೂರಕವಾಗಿ ನಿಲ್ಲುತ್ತದೆ. ಎ.ಸಿ.ಬ್ರಾಡ್ಲೆ ಹೇಳುವಂತೆ; 'ಯಾವುದೇ ಕಾವ್ಯ ಮಹತ್ತಾದುದೆನಿಸಿಕೊಳ್ಳಬೇಕಾದರೆ ಒಂದರ್ಥದಲ್ಲಿ ಅದು ವರ್ತಮಾನಕ್ಕೆ ಸಂಬಂಧಿಸಿದ್ದಾಗಿರಬೇಕು' (ಜಿ.ಎಸ್.ಎಸ್.ಸಮಗ್ರ ಗದ್ಯ, ಸಂ-3, ಪು.ಸಂ.211)- ಈ ಹಿನ್ನೆಲೆಯಲ್ಲಿ 'ಕರ್ಣಾಟಕ ಪಂಚತಂತ್ರಂ' ಸದಾ ವರ್ತಮಾನಕ್ಕೆ ಸ್ಪಂದಿಸುತ್ತದೆ ಮತ್ತು ವರ್ತಮಾನವನ್ನು ಕೇಂದ್ರೀಕರಿಸುತ್ತದೆ.

******

## ಆಕರ ಗ್ರಂಥ


1. ಗುಂಡ್ಮಿ ಚಂದ್ರಶೇಖರ್ ಐತಾಳ್(ಗದ್ಯಾನುವಾದ), **ದುರ್ಗಸಿಂಹ ಕವಿಯ ಕರ್ಣಾಟಕ ಪಂಚತಂತ್ರಂ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2009


## ಪರಾಮರ್ಶನ ಗ್ರಂಥಗಳು


1. ನಾರಾಯಣ ಪಿ. ವಿ., **ಹಳಗನ್ನಡ ಪದಸಂಪದ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2013
2. ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ, **ಪುರಾಣನಾಮ ಚೂಡಾಮಣಿ,** ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 2003
3. ಮುಗಳಿ ರಂ.ಶ್ರೀ., **ಕನ್ನಡ ಸಾಹಿತ್ಯ ಚರಿತ್ರೆ,** ಗೀತಾ ಬುಕ್ ಹೌಸ್, ಮೈಸೂರು, 2014
4. ವರದರಾಜ ಹುಯಿಲಗೋಳ, **ದುರ್ಗಸಿಂಹನ ಪಂಚತಂತ್ರ ಸಮೀಕ್ಷೆ,** ಸಾಹಿತ್ಯಭಂಡಾರ, ಹುಬ್ಬಳ್ಳಿ, 1976
5. ವಿಶ್ವಾಮಿತ್ರ ರಾ.ಮೋ., **ಜನಪ್ರಿಯ ಭಾರತ,** ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2007
6. ಶಿವರುದ್ರಪ್ಪ ಜಿ. ಎಸ್., **ಸಮಗ್ರ ಗದ್ಯ ಸಂ.3,** ಕಾಮಧೇನು ಪುಸ್ತಕ ಭವನ, ಬೆಂಗಳೂರು, 2007
7. ಶೇಷಗಿರಿರಾವ್ ಎಲ್. ಎಸ್., **ಸಮಗ್ರ ವಿಮರ್ಶಾ ಸಾಹಿತ್ಯ ಸಂ.3,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2010
8. **ಪ್ರಬುದ್ಧ ಕರ್ಣಾಟಕ,** ಸಂಪುಟ-43, ಸಂಚಿಕೆ-3, ಮೈಸೂರು ವಿಶ್ವವಿದ್ಯಾನಿಲಯ



**ಡಾ. ಗಿರೀಶ್ ಮೂಗ್ತಿಹಳ್ಳಿ**

ಸಂಶೋಧಕರು ಮತ್ತು ಚಿಂತಕರು

ಚಿಕ್ಕಮಗಳೂರು- 577101, ಕರ್ನಾಟಕ

ಸಂಪರ್ಕಸಂಖ್ಯೆ : 8073403112

ಈ-ಮೇಲ್ : girishmugthihalli8@mail.com


****************

Volume XX : July to December – 2022, ISSN 2250-1711
Journal of Veda Samskrita Academy [Recognised in the UGC-CARE List]

# ಪಾಣಿನೀಯ ಅಷ್ಟಾಧ್ಯಾಯಿಯಲ್ಲಿ ಉಕ್ತವಾದ ರಾಜಾಡಳಿತದ ವ್ಯವಸ್ಥೆ ಮತ್ತು ಶಾಸನಗಳು

**ಡಾ. ಅನುಪಮಾ ಬಿ., ಬೆಂಗಳೂರು, ಕರ್ನಾಟಕ**

***ಪತ್ರಿಕಾ ಸಾರ* :**
ಸಂಸ್ಕೃತದ ವ್ಯಾಕರಣಶಾಸ್ತ್ರದ ಉದ್ಗ್ರಂಥವಾದ "ಅಷ್ಟಾಧ್ಯಾಯಿ" ಯಲ್ಲಿ ಪಾಣಿನಿಯು ತನ್ನ ಕಾಲದಲ್ಲಿ ಪ್ರಚಲಿತದಲ್ಲಿದ್ದ ರಾಜ್ಯಾಡಳಿತದ ಮತ್ತು ಶಾಸನಗಳ ಸಮಗ್ರ ಪರಿಚಯವನ್ನು ನೀಡಿದ್ದಾನೆ. ಅವನ ಕಾಲದಲ್ಲಿ ರಾಜ್ಯ ಮತ್ತು ಸಂಘ ಎಂಬ ಎರಡು ಬಗೆಯ ಶಾಸನಗಳು ಪ್ರಚಲಿತವಾಗಿದ್ದವು. ರಾಜನಾದವನು ಈ ಎರಡಲ್ಲಿ ಒಂದರ ಅಧಿಪತಿಯಾಗಿರುತ್ತಿದ್ದನು. ಅದನ್ನೇ ರಾಜ್ಯವೆಂದು ಕರೆಯುತ್ತಿದ್ದರು. ಐತರೇಯ ಬ್ರಾಹ್ಮಣದಲ್ಲಿಯೂ ಈ ರೀತಿಯ ವಿಭಾಗಗಳ ಉಲ್ಲೇಖಗಳಿವೆ. ಅಲ್ಲಿ ಭೌಜ್ಯ, ಸಾಮ್ರಾಜ್ಯ, ಸ್ವಾರಾಜ್ಯ, ವೈರಾಜ್ಯ ಇನ್ನೂ ಮುಂತಾದ ಹೆಸರುಗಳಿವೆ. ಒಂದು ನಿರ್ದಿಷ್ಟವಾದ ಅಳತೆಯ ಭೂಭಾಗಕ್ಕೆ ಜನಪದವೆಚಿದೂ, ಅದಕ್ಕಿಂತ ಹೆಚ್ಚಾದ ಭೂಪ್ರದೇಶದ ಒಡೆಯನನ್ನು ಸಾರ್ವಭೌಮನೆಂದು ಕರೆಯುತ್ತಿದ್ದರು. ಪಾಣಿನಿಯು ಸಾಮಾಜಿಕ ಪರಿಷತ್ತು, ವಿದ್ಯಾಸಂಬಂಧಿ ಪರಿಷತ್ತು ಹಾಗು ರಾಜನೈತಿಕ ಪರಿಷತ್ತು ಎಂಬ ಮೂರು ಬಗೆಯ ಮಂತ್ರಿಪರಿಷತ್ತುಗಳಿದ್ದವು ಎಂದು ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ. ಪ್ರಸ್ತುತ ಪತ್ರಿಕೆಯು ಪಾಣಿನಿಯ ಕಾಲದ ಭಾರತವರ್ಷದ ರಾಜ್ಯಾಡಳಿತದ ಬಗ್ಗೆ ತಿಳಿಸುವ ಒಂದು ಪ್ರಾಮಾಣಿಕ ಕಿರು ಪ್ರಯತ್ನವಷ್ಟೆ.

**ಸೂಚಿಪದಗಳು:**
ಪಾಣಿನಿ. ಅಷ್ಟಾಧ್ಯಾಯಿ, ಸೂತ್ರ ಶಾಸನ. ಭೌಜ್ಯ, ಸಾಮ್ರಾಜ್ಯ, ಸ್ವಾರಾಜ್ಯ, ವೈರಾಜ್ಯ. ಐತರೇಯ ಬ್ರಾಹ್ಮಣ ...

ಪಾಣಿನಿಯು ಸಂಸ್ಕೃತ ಭಾಷೆಯ ವ್ಯಾಕರಣಶಾಸ್ತ್ರದ ಉದ್ಗ್ರಂಥವಾದ "ಅಷ್ಟಾಧ್ಯಾಯಿ" ಯಲ್ಲಿ ಸಂಸ್ಕೃತ ಭಾಷೆಯ ನಿಯಮಗಳನ್ನಷ್ಟೇ ತಿಳಿಸಿಲ್ಲ, ಅಂದು ಬಳಕೆಯಾಗುತ್ತಿದ್ದ ಎಲ್ಲಾ ಪದಗಳಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸುತ್ತಾ ಸಾಗುತ್ತಾನೆ. ಪಾಣಿನಿಯು ತನ್ನ ಕಾಲದ ರಾಜಕೀಯ ಹಾಗು ರಾಜತಂತ್ರ ಮತ್ತು ಶಾಸನಗಳಿಗೆ ಸಂಬಂಧಿಸಿದ ಮಹತ್ವದ ಮಾಹಿತಿಗಳನ್ನು ವಿಸ್ತೃತವಾಗಿ ದಾಖಲಿಸಿದ್ದಾನೆ. ಅವುಗಳನ್ನು ಈ ಕೆಳಕಂಡಂತೆ ವಿಂಗಡಿಸಬಹುದಾಗಿದೆ.

**ರಾಜ್ಯ ಮತ್ತು ರಾಜ ಶಬ್ದದ ಪರ್ಯಾಯ ಶಬ್ದಗಳಿಗೆ ಸಂಬಂಧಿಸಿದ ಸೂತ್ರಗಳು :**

ಆ ಕಾಲದಲ್ಲಿ ರಾಜ್ಯ ಮತ್ತು ಸಂಘ ಎಂಬ ಎರಡು ರೀತಿಯ ಶಾಸನತಂತ್ರಗಳಿದ್ದವು. ಯಾವ ಆಡಳಿತದ ಸೂತ್ರಧಾರಿ ರಾಜನಾಗಿರುವನೋ ಆ ಪ್ರದೇಶವನ್ನು ರಾಜ್ಯವೆಂದು ಕರೆಯುತ್ತಿದ್ದರು. "ಅಕರ್ಮಧಾರಯೇ ರಾಜ್ಯಮ್" (6.2.130), ಒಂದು ನಿರ್ದಿಷ್ಟವಾದ ಅಳತೆಯುಳ್ಳ ಭೂಪ್ರದೇಶವನ್ನು ಜನಪದವೆಂದು ಕರೆಯುತ್ತಿದ್ದರು. ಆ ಜನಪದವನ್ನೇ "ಪೃಥಿವೀ" ಎಂದು ಅದರ ಅಧಿಪತಿಯನ್ನು ಪಾರ್ಥಿವ ಎಂತಲೂ ಕರೆಯುತ್ತಿದ್ದರು. ಅದಕ್ಕಿಂತಲೂ ಹೆಚ್ಚಾದ ಭೂಪ್ರದೇಶಕ್ಕೆ ಸರ್ವಭೂಮಿ ಎಂದೂ ಅದರ ಅಧಿಪತಿಯನ್ನು ಸಾರ್ವಭೌಮ ಎನ್ನುತ್ತಿದ್ದರು. "ತಸ್ಯೇಶ್ವರಃ ಸರ್ವಭೂಮಿ ಪೃಥಿವೀಭ್ಯಾಮಣಞೌ" (5/1/41–42)

ರಾಜನಿಗೆ ಈಶ್ವರ ಎಂದೇ ಸಂಬೋಧಿಸುತ್ತಿದ್ದರು. 'ಅಧಿರೀಶ್ವರೇ' (1/4/98) ಯಸ್ಮಾದಧಿಕಂ ಯಸ್ಯ ಚೇಶ್ವರ ವಚನಂ ತತ್ರ ಸಪ್ತಮೀ (2/3/9) ಪ್ರಾಚೀನ ಸಂಸ್ಕೃತ ಸಾಹಿತ್ಯಗಳಲ್ಲಿ ಈಶ್ವರ ಎಂಬ ಪದವು ರಾಜನಿಗೆ ಪರ್ಯಾಯವಾಗಿ ಬಳಸುತ್ತಿದ್ದರು. ದೇವವಾಚಿಯಾಗಿ ಅಲ್ಲ. ಯಾಸ್ಕನು ನಿರುಕ್ತದಲ್ಲಿ ರಾಷ್ಟ್ರೀ, ಆರ್ಯ, ನಿತ್ಯವಾನ್ ಹಾಗು ಈಶ್ವರ ಶಬ್ದಗಳು ರಾಜ ಶಬ್ದದ ಪರ್ಯಾಯಗಳೆಂದು ಹೇಳಿದ್ದಾನೆ.

ಪಾಣಿನಿಯು ಆರ್ಯ ಎಂಬ ಪದವು "ಸ್ವಾಮಿ" ಎಂಬ ಪದದ ಪರ್ಯಾಯವೆಂದು ಸೂತ್ರದ ಮೂಲಕ ತಿಳಿಸುತ್ತಾನೆ.

"ಆರ್ಯಃ ಸ್ವಾಮೀ ವೈಶ್ಯಯೋ" (3.1.103) ರಾಜನಿಗೆ ಭೂಪತಿ ಎಂದೂ ಕರೆಯಲಾಗುತ್ತಿತ್ತು. "ನ ಭೂ ವಾಚ್ ಕಿದ್ವಿಧಿಷು" (6.2.19) ಆಧಿಪತ್ಯವೆಂಬ ಪದಕ್ಕೆ ಶಾಸನದ ಪ್ರಣಾಲಿ ಎಂಬ ಅರ್ಥ. ರಾಜ ತಾನು ಗೆದ್ದ ಜನಪದಗಳಿಗೆ ಅಧಿಪತಿಗಳನ್ನು ನೇಮಿಸಲಾಗುತ್ತಿತ್ತು. ಸಾಮ್ರಾಟ ಎಂಬ ಶಬ್ದವು ಅಧಿಕ ಅಧಿಪತಿಗಳನ್ನು ಹೊಂದಿದ " ಮೋ ರಾಜಿ ಸಮಃ ಕ್ವೌ (8.3.25). ಸಮ್ರಾಟ್ ಶಬ್ದೋಹಿ "ಕೃತ್ಸ್ನಭಾಕ್" (ಸಭಾಪರ್ವ 14.2)

## ಪಾಣಿನಿಯು ಉಲ್ಲೇಖಿಸಿರುವ ಮೂರು ಬಗೆಯ ಮಂತ್ರಿಪರಿಷತ್ತುಗಳು :

ಸಾಮಾಜಿಕ ಪರಿಷತ್ತು (4.4.44),
ವಿದ್ಯಾಸಂಬಂಧಿ ಪರಿಷದ್ (4.3.123)
ರಾಜನೈತಿಕ ಮಂತ್ರಿಪರಿಷದ್ (5.2.112).

ಈ ಪರಿಷತ್ತುಗಳ ಸದಸ್ಯರನ್ನು ಪಾರಿಷದ, ಪಾರಿಷದ್ಯ ಎಂದು ಕರೆಯಲಾಗುತ್ತಿತ್ತು. ಪಾರಿಷದರಾಗಲು ನಿರ್ದಿಷ್ಟ ಅರ್ಹತೆಯನ್ನು ಹೊಂದಿರಬೇಕಾಗಿತ್ತು. 'ತತ್ರ ಸಾಧುಃ" ಸಾಮಾಜಿಕ ಪರಿಷತ್ತಿನ ಗೋಷ್ಠಿ ಮನೋರಂಜನೆಯ ಸಂಸ್ಥೆ ಕೂಡ ಪ್ರಚಲಿತದಲ್ಲಿತ್ತು. ಈ ಎಲ್ಲಾ ಪರಿಷತ್ತುಗಳ ಸದಸ್ಯರನ್ನು ಪಾರಿಷದ್ಯ ಎಂದು ಕರೆಯುತ್ತಿದ್ದರು. ಪಾರಿಷದರಾಗಲೂ ನಿರ್ದಿಷ್ಟ ಅರ್ಹತೆಗಳು ನಿಗದಿಯಾಗಿದ್ದವು 'ಪರಿಷದೋಣ್ಯಃ" (4.4.44). ರಾಜನೀತಿಗಳಿಗೆ ಸಂಬಂಧಿಸಿದ ಪರಿಷತ್ತು ವಾಸ್ತವವಾಗಿ ಮಂತ್ರಿಪರಿಷತ್ತಾಗಿತ್ತು. ಆ ಪರಿಷತ್ತಿನ ಸಹಯೋಗದೊಂದಿಗೆ ರಾಜನು ಶಾಸನವನ್ನು ಮಾಡುತ್ತಿದ್ದನು. ಪರಿಷದ್ವಲೋ ರಾಜಾ ( ರಜಃ ಕೃಷ್ಯಾಸುತಿ ಪರಿಷದೋ ವಲಚ್ (5.2.112) ಬೌದ್ಧಸಾಹಿತ್ಯ,

ಕೌಟಿಲ್ಯನ ಅರ್ಥಶಾಸ್ತ್ರ ಮತ್ತು ಅಶೋಕನ ಅಭಿಲೇಖಗಳಲ್ಲಿ ಈ ವಿಷಯದ ಅನೇಕ ಉಲ್ಲೇಖಗಳು ಇಂದಿಗೂ ಕಾಣಸಿಗುತ್ತವೆ. ಮಹಾಸೀಲವ ಜಾತಕದಲ್ಲಿ ರಾಜ ಮತ್ತು ಅಮಾತ್ಯರ ಪರಿಷತ್ತುಗಳನ್ನು ಸುವಿನೀತ ಎಂದು ಕರೆದಿದ್ದಾರೆ. "ಏವಂ ಸುವಿನೀತಾ ಕಿರಸ್ಸ ಪರಿಸಾ" (ಜಾ. 1–234).

ವೈದಿಕ ಯುಗದಲ್ಲಿ "ರತ್ನೀ" ಎಂಬ ಹೆಸರಿನ ಅಧಿಕಾರಿಗಳಿದ್ದರು ಅವರನ್ನೇ ಪಾಣಿನಿಯು "ರಾಜಕೃತ್ವಾ" ಎಂದು ಕರೆದಿದ್ದಾನೆ. ರಾಜನಿ ಯುಧಿಕೃಞಃ (6.2.95) ರಾಜಾನಮ್ ಕೃತವಾನ್ ಇತಿ ರಾಜಕೃತ್ವಾ' .ಮುಖ್ಯಮಂತ್ರಿ ಅಥವಾ ಆರ್ಯಬ್ರಾಹ್ಮಣ ಸೂತ್ರದಲ್ಲಿ "ಆರ್ಯೋ ಬ್ರಾಹ್ಮಣಕುಮಾರಯೋಃ" ಆರ್ಯಕುಮಾರ ಎಂದರೆ ಯುವರಾಜನಿಗೂ, ಆರ್ಯಬ್ರಾಹ್ಮಣ ಎಂದು ಮುಖ್ಯಮಂತ್ರಿಯನ್ನು ಕರೆಯುತ್ತಿದ್ದರು. ಇಲ್ಲಿ ಆರ್ಯ ಎಂಬ ಪದಕ್ಕೆ ಜಾತಿ ಎಂಬ ಅರ್ಥ ಖಂಡಿತವಾಗಿಯೂ ಇರಲಿಲ್ಲ. ಪರಂಪರೆಯಾಗಿ ತ್ಯಾಗಿಯಾದವನೂ. ವಿದ್ವಾಂಸನೂ, ರಾಜಶಾಸ್ತ್ರವನ್ನು ತಿಳಿದವನು ಮಾತ್ರ ಮುಖ್ಯಮಂತ್ರಿಯಾಗುವ ಅರ್ಹತೆಯನ್ನು ಹೊಂದಿರುತಿದ್ದನು. ಅಂತಹವನನ್ನು ಮಾತ್ರ ಬ್ರಾಹ್ಮಣ ಎಂದು ಕರೆಯಲಾಗುತಿತ್ತು. ಅದು ಪದವಿಯನ್ನು ಸೂಚಿಸುತ್ತಿತ್ತು. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಬ್ರಾಹ್ಮಣಪದದ ಅರ್ಥವನ್ನು ಹೀಗೆ ಹೇಳುತ್ತಾನೆ. ಯಾರು ಮಂತ್ರಿ ಪರಿಷತ್ತಿನ ಎಲ್ಲಾ ಸದಸ್ಯರುಗಳಿಂದ ಗೌರವಾದರಗಳಿಗೆ ಪಾತ್ರನಾಗಿರುವನೋ, ಸರ್ವಶಾಸ್ತ್ರಗಳನ್ನು ತಿಳಿದು ಅವುಗಳ ಪರಿಪಾಲನೆಯನ್ನು ಚಾಚೂ ತಪ್ಪದೆ ಮಾಡುತ್ತಾನೋ, ಯಾರು ರಾಜನು ಗೆದ್ದಿರದ ಪ್ರದೇಶಗಳನ್ನು ಜಯಿಸಲು ಸದಾ ಕಾರ್ಯತತ್ಪರನಾಗಿರುತ್ತಾನೋ, ತನ್ನ ರಾಜನು ಗೆದ್ದಿರುವ ಪ್ರದೇಶಗಳಲ್ಲಿ ಶಾಸನವನ್ನು ದೃಢವಾಗಿ ನಿಲ್ಲಿಸಲು ಶ್ರಮಿಸುವನೋ ಅವನೇ ಬ್ರಾಹ್ಮಣ. ಆರ್ಯ, ರಾಜಶಕ್ತಿಯನ್ನು ಪ್ರಜಾಹಿತದೊಡನೆ ಮಾರ್ಯಾದೆಯ ಸರಹದ್ದನ್ನು ಮೀರದಂತೆ ನೋಡಿಕೊಂಡು ರಾಜನನ್ನು ಆ ದಿಕ್ಕಿನಲ್ಲಿರುವಂತೆ ರಾಜ್ಯವನ್ನು ಸುರಕ್ಷಿತವಾಗಿರುವಂತೆ ಸದಾಕಾಲ ಎಚ್ಚರದಿಂದ ಕಾಯುವವನನ್ನೇ ಆರ್ಯ ಎಂದಿದ್ದಾನೆ.

ಈ ವಿಷಯವಾಗಿ ಪಾಣಿನಿಯು "ಅಷಡಕ್ಷೀಣ ಮಂತ್ರ– ಅ–ಷಡ್– ಅಕ್ಷ–ಏನ" ಎಂಬ ವಿಶೇಷವಾಗಿ ಪ್ರಯುಕ್ತವಾಗಿದೆ. ಇದರರ್ಥ 'ಯೋ ದ್ವಾಭ್ಯಾಮೇವ ಕ್ರಿಯತೇ ನ ಬಹುಭಿಃ" ಯಾವ ವಸ್ತುವನ್ನು ಆರು ಕಣ್ಣುಗಳು ನೋಡಿಲ್ಲವೋ ಅಂದರೆ ಕೇವಲ ರಾಜ ಮತ್ತು ಪ್ರಧಾನಮಂತ್ರಿ ವಿಮರ್ಶಿಸುವ ವಿಚಾರವೆಂದು. ಅಂದಿನ ರಾಜಕಾರ್ಯಗಳು ಸ್ಪಷ್ಟವಾಗಿ ನಿರ್ಧಾರಿತ–ಗೊಂಡಿರುತ್ತಿದ್ದವು.

ರಾಜ್ಯದ ಶಾಸನದಲ್ಲಿ ಮೂರು ರೀತಿಯ ಪರಿಕಲ್ಪನೆಗಳು ಮುಖ್ಯವಾಗಿ ಕಂಡು ಬರುತ್ತಿದ್ದವು ಅವು

1. ಯುಗದ ಧರ್ಮ.
2. ಧಾರ್ಮಿಕನಾದ ರಾಜ.
3. ಧಾರ್ಮಿಕರಾದ ಪ್ರಜೆ.

ಸರ್ವಭೂತಗಳಿಗೆ ಆಶ್ರಯ ಹಾಗೂ ಸುಖಕರವಾದ ಜೀವನಕ್ಕಾಗಿ ಈ ಮೂರು ಕಲ್ಪನೆಗಳು ಅತ್ಯಂತ ಪೂರಕಾವಾದ ಸಾಮಗ್ರಿಗಳನ್ನು ಪೂರೈಸುವ ಖಜಾನೆಗಳೇ ಆಗಿದ್ದವು.

ಸರ್ವೈ ವೈನಯಿಕಂ ಕೃತ್ವಾ ವಿನಯಜ್ಞೋ ಬೃಹಸ್ಪತೇಃ । ದಕ್ಷಿಣಾನನ್ತರೋ ಭೂತ್ವಾ ಪ್ರಣಮ್ಯ ವಿಧಿಪೂರ್ವಕಮ್ ॥
ವಿಧಿ ಪಪ್ರಚ್ಛ ರಾಜ್ಯಸ್ಯ ಸರ್ವಭೂತಹಿತೇ ರತಃ । ಪ್ರಜಾನಾಂ ಹಿತಮಾನ್ವಿರಥನ್ ಧರ್ಮಮೂಲಮ್ ॥
ಕೇನ ಭೂತಾನಿ ವರ್ಧಂತೇ ಕ್ಷಯಂ ಗಚ್ಛತಿ ಕೇನ ಚ । ಕಮರ್ಚಂತೋ ಮಹಾಪ್ರಾಜ್ಞ ಸುಖಮತ್ಯನ್ತಮಾಪ್ನುಯುಃ ॥
ಇತಿ ಪೃಷ್ಟೋ ಮಹಾರಾಜಾ ಕೌಸಖ್ಯೇನಾಮಿತೌಜಸಾ । ರಾಜಸತ್ಕಾರಮಖ್ಯಗ್ರಃ ಶಶಂಸಾಸ್ಮೈ ಬೃಹಸ್ಪತಿಃ ॥
ರಾಜಮೂಲೋ ಮಹಾರಾಜ ಧರ್ಮೋ ಲೋಕಸ್ಯ ಲಕ್ಷ್ಯತೇ । ಪ್ರಜಾ ರಾಜಭಯಾದೇವ ನ ಖಾದಂತಿ ಪರಸ್ಪರಮ್ ॥
ರಾಜಾಹ್ಯೇವಾಖಿಲಂ ಲೋಕಂ ಸಮುದೀರ್ಣಂ ಸಮುತ್ಸುಕಮ್ । ಪ್ರಸಾದಯತಿ ಧರ್ಮೇಣ ಪ್ರಸಾದ್ಯ ಚ ವಿರಾಜತೇ ॥

ರಾಜನು ಪಟ್ಟಾಭಿಷಿಕ್ತನಾಗುವ ಸಮಯದಲ್ಲಿ ಕಠೋರವಾದ ಶಪಥವನ್ನು ಕೈಗೊಳ್ಳುತ್ತಿದ್ದನು. " ಒಂದು ವೇಳೆ ನಾನೇನಾದರು ಪ್ರಜೆಗಳಿಗೆ ದ್ರೋಹವೆಸಗಿದರೆ ನನ್ನ ಜನ್ಮದ ದಿನದಿಂದ ನನ್ನ ಮರಣದ ವರೆಗಿನ ಕಾಲದಲ್ಲಿ ಯಾವ ನನ್ನ ಸಂತತಿ, ಸಂಪತ್ತು, ಆಯುಷ್ಯ ಹಾಗು ನನ್ನ ಯಶಸ್ಸು ಸಂಪಾದಿತವಾಗಿದೆಯೋ, ಅವೆಲ್ಲವೂ ನಷ್ಟವಾಗಿ ಹೋಗಲಿ" ಎಂದು ಶಪಥವನ್ನು ಮಾಡಿದ ನಂತರವಷ್ಟೇ ರಾಜನಾಗುತ್ತಿದ್ದನು. ಪಾಣಿನಿಯು "ರಾಜಾ ಪ್ರಕೃತಿರಂಜನಾತ್", "ರಾಜಾ ಪ್ರಜಾರಂಜನಲಬ್ಧವರ್ಣಃ" ಎಂಬ ಸೂತ್ರಗಳಿಂದ ತಿಳಿಸಿದ್ದಾನೆ. ಕೆಲವು ರಾಜಶಾಸನಕ್ಕೆ ಸಂಬಂಧಿಸಿದ ಪದಗಳು

**1. ಸಾಮಯಿಕ :**

"ಸಮಯಾತ್ ನಿಷ್ಪನ್ನಃ ಯುಗಧರ್ಮಃ" ರಾಜ್ಯದಲ್ಲಿ ಎರಡುರೀತಿಯ ಕಾನೂನುಗಳು ಮಾನ್ಯತೆಯನ್ನು ಹೊಂದಿದ್ದವು
ಒಂದು ರಾಜಪರಂಪರೆಯಿಂದ ನಡೆದು ಬಂದ ಕಾನೂನು ಮತ್ತೊಂದು ಜನಸಾಮಾನ್ಯರ ವಿವಿಧ ಸಂಘಟನೆಗಳ ಭಿನ್ನ ಭಿನ್ನ ಕ್ಷೇತ್ರಗಳಲ್ಲಿ ನಡೆದುಕೊಂಡು ಬಂದ ರೀತಿ–ರಿವಾಜುಗಳು.

**2. ಸಾಮಯಾಚಾರಿಕ** :

ಈ ಶಬ್ದವು ಧರ್ಮಕ್ಕೆ ಸಂಬಂಧಿಸಿದುದಾಗಿದೆ. ಆಯಾ ಯುಗಧರ್ಮಕ್ಕೆ ತಕ್ಕಂತ ಆಚಾರವಿಚಾರಗಳು ಯಾವ ಯಾವ ರೀತಿಯ ಆಯ ಸುಂಕಕ್ಕೆ ಸಂಬಂಧಪಟ್ಟ ನೀತಿನಿಯಮಗಳು ಇದರ ಅಡಿಯಲ್ಲಿ ಬರುತ್ತಿತ್ತು. ಪಾಣಿನಿಯು 'ಸಪ್ತಮೀ ಹರಿಣೌ ಧರ್ಮೇಽಹರಣೇ" (6.2.65), ' ತಸ್ಯಧರ್ಮ್ಯಮ್" (4.4.47) ಸೂತ್ರಗಳಲ್ಲಿ ಈ ಸಾಮಯಾಚಾರಿತ ವಿಷಯದ ಧರ್ಮವನ್ನೇ

ಸೂಚಿಸಿದ್ದಾನೆ. ಸೂತ್ರೋದಾಹರಣೆಗಳಲ್ಲಿ ಶುಲ್ಕಶಾಲಾ, ಆಕರ, ಆಪಣ ಇತ್ಯಾದಿ ಈ ಎಲ್ಲಾ ಸಂತೆಗಳಾದರೆ ಅಂಗಡಿಮುಂಗಟ್ಟು-ಗಳನ್ನು ಹಾಕಲು ಎಷ್ಟು ಕರವನ್ನು ಪಾವತಿಸಬೇಕು. ಪರಿಶ್ರಮಪಡುವವರಿಗೆ, ಸರಕಿನ ಮೇಲೆ , ಅಧಿಕಾರಿಗಳನ್ನು ಎಷ್ಟು ಗಂಟೆಗಳ ಕಾಲ ದುಡಿಸಿಕೊಳ್ಳಬೇಕು. ಅವರುಗಳಿಗೆ ಹಣವೆಷ್ಟು ನೀಡಬೇಕು ಎಂಬ ವಿಚಾರಗಳು ರಾಜನ ಕಾನೂನಿಂದಲ್ಲದೆ ಹಿಂದಿನಿಂದ ನಡೆದು ಬಂದ ಸಂಪ್ರದಾಯದಂತೆ ವಿಧಿಸಲಾಗುತ್ತಿತ್ತು.

**3. ಔಪಯಿಕ :**

ಸಾಮ, ದಾನ, ದಂಡ, ಭೇದ ಎಂಬ ಚತುರೋಪಾಯಗಳಿಗೆ ಸಂಬಂಧಿಸಿದ ನಿಯಮಗಳು ಇದರ ಅಡಿಯಲ್ಲಿ ಬರುತ್ತಿತ್ತು.

**4. ವ್ಯಾವಹಾರಿಕ** :

ಈ ವಿಭಾಗದಲ್ಲಿ ವಿವಾಹ, ವಸ್ತುವಿಕ್ರಯ, ಋಣಾದಾನ, ಔಪನಿಧಿಕ (ನಿಕ್ಷೇಪ ನ್ಯಾಸ), ದಾಯವಿಭಾಗ, ಸಮಯ, ವ್ಯಾಪಾರ , ಸಾಹಸ (ಉಗ್ರ ಅಪರಾಧ) ಮುಂತಾದವು. ಪಾಣಿನಿಯು ಇವುಗಳನ್ನೇ ವೇತನಾದಿಭ್ಯೋ ಜೀವಿತ (4.4.13),
ಪಾಣಿನಿಯು ತನ್ನ ಕಾಲದ ಮೂರು ಮಹತ್ತರವಾದ ಸಂಸ್ಥೆಗಳನ್ನು ಆಸ್ಥೆಯಿಂದ ದಾಖಲಿಸಿದ್ದಾನೆ.

1. ಶಿಕ್ಷಣಕ್ಷೇತ್ರದಲ್ಲಿ ಚರಣ.
2. ಸಾಮಾಜಿಕ ಕ್ಷೇತ್ರದಲ್ಲಿ ಗೋತ್ರ.
3. ರಾಜನೈತಿಕ ಕ್ಷೇತ್ರದಲ್ಲಿ ಜನಪದ.

**ಜನಪದಕ್ಕೆ ಸಂಬಂಧಿಸಿದ ಕೆಲವು ಸೂತ್ರಗಳು**

1 ಜನಪದೇ ಲುಪ್ (4.2.81)
2. ಜನಪದಿನಾಂ ಜನಪದತ್ಸರ್ವಂ ಸಮಾನಶಬ್ದಾನಾಂ ಬಹುವಚನೆ (4.3.100).
3. ಜನಪಸಮಾನಶಬ್ದಾತ್ ಕ್ಷತ್ರಿಯಾದಞ್ (4.1.168)
4. ಸುಸರ್ವಾರ್ಧಾಜ್ಜನಪದಸ್ಯ (7.3.12)
5. ಗ್ರಾಮಜನಪದೈಕದೇಶಾದಞ್ (4.3.7)
6. ಜನಪದೀ ವೃತ್ತಿಃ (4.1.42).

ಜನಪದಗಳ ಸೀಮೆಗಳು. ಸಜನಪದ, ಗ್ರಾಮಸಮುದಾಯ ಮತ್ತು ನಗರ, ಜನಪದ ಸಂಸ್ಕೃತಿ, ಕಾಂಬೋಜ, ಗಾನ್ಧಾರ, ಮದ್ರ, ಸಾಲ್ವೆಯ, ಸಾಲ್ವ, ಕಲಕೂಟ, ಕುರು, ಪ್ರತ್ಯಗ್ರಥ, ಕೋಸಲ, ಅಜಾದ, ಕುನ್ತಿ, ಅವನ್ತೀ, ಅಶ್ಮಕ, ಕಾಶಿ, ಮಗಧ, ಕಳಿಂಗ, ಸೌವೀರ, ಅಮ್ಬಷ್ಠ. ಹೀಗೆ ಜನಪದಕ್ಕೆ ಸಂಬಂಧಿಸಿದ ಸಂಪೂರ್ಣಮಾಹಿತಿಯನ್ನು ಪಾಣಿನಿಯು ವಿಸ್ತಾರವಾಗಿ ನೀಡಿದ್ದಾನೆ.
ಪಾಣಿನಿಯು ತನ್ನ ಅಷ್ಟಾಧ್ಯಾಯಿ ಗ್ರಂಥದಲ್ಲಿ ತನ್ನ ಯುಗದ ರಾಜಕಿಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಜನರ ಆಚಾರ-ವಿಚಾರ. ರಾಜನೀತಿ, ಶಾಸನ, ಮಂತ್ರಿಮಂಡಲದ ರಚನೆ ಹಾಗೂ ಅವರರವರ ಪ್ರತ್ಯೇಕ ಬಾಧ್ಯತೆಗಳು, ಶಿಕ್ಷಣ ವ್ಯವಸ್ಥೆ , ಕರ ವ್ಯವಸ್ಥೆ ಭಾರತದ ಸಮಗ್ರ ಭೌಗೋಳಿಕ ಚಿತ್ರಣವನ್ನು ಉಲ್ಲೇಖಿಸಿದ್ದಾನೆ.

## ಪರಾಮರ್ಶನ ಗ್ರಂಥಗಳು:


1. ಪಾಣಿನೀಯ ಅಷ್ಟಾಧ್ಯಾಯಿ.
2. ಯಾಸ್ಕನ ನಿರುಕ್ತ
3. ಕೌಟಿಲ್ಯನ ಅರ್ಥಶಾಸ್ತ್ರ.
4. ವೈದಿಕ ಸಾಹಿತ್ಯ ಚರಿತ್ರೆ
5. ಕಾಶಿಕಾ ವೃತ್ತಿ
6. ಮಹಾಭಾಷ್ಯ.



**ಡಾ. ಅನುಪಮಾ ಬಿ.**
ಸಹಾಯಕ ಪ್ರಾಧ್ಯಾಪಕರು
ವ್ಯಾಕರಣಶಾಸ್ತ್ರ ವಿಭಾಗ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು- 560018
ದೂ.ಸಂ 9379779278
ಈ ವಿಳಾಸ : anupamamys04@ksu.ac.in


*********

**Volume XX : July to December – 2022, ISSN 2250-1711**

**Journal of Veda Samskrita Academy [Recognised in the UGC-CARE List]**

# ಪುರುಷಸೂಕ್ತ ಮತ್ತು ಶ್ರೀಸೂಕ್ತದಲ್ಲಿ ಪುರುಷ ಮತ್ತು ಪ್ರಕೃತಿ ತತ್ವದ ಚಿಂತನೆ

**Dr. Vinayak Namannavar**

Sr.Assistant Professor ,Ex Director of ASR Melukote.

Dept of Manuscriptology.

Karnataka Samskrit University.Bangalore.18

Ph No.9448641523

ಜಗತ್ತಿನ ತಂದೆತಾಯಿಗಳನ್ನು ಕೊಂಡಾಡುವ ಎರಡು ಸುಪ್ರಸಿದ್ಧ ಸೂಕ್ತಗಳು ಪುರುಷಸೂಕ್ತ ಮತ್ತು ಶ್ರೀಸೂಕ್ತ. ಪುರುಷಸೂಕ್ತ ನಾಲ್ಕು ವೇದಗಳಲ್ಲಿ ನಿರೂಪಿತವಾಗಿರುತ್ತದೆ.

(1) ಪುರುಷಸೂಕ್ತ ಋಗ್ವೇದದಲ್ಲಿ ಬಂದಿದೆ. 10 ನೆಯ ಮಂಡಲದ 90 ನೇ ಸೂಕ್ತ. ಇದರಲ್ಲಿ 16 ಮಂತ್ರಗಳಿವೆ.

(2) ಕೃಷ್ಣಯಜುರ್ವೇದದಲ್ಲಿ ತೈತ್ತಿರೀಯಾಣ್ಯಕದಲ್ಲಿ 3 ನೆಯ ಪ್ರಪಾಠಕದ 12 ನೆಯ ಅನುವಾಕ 18 ಮಂತ್ರಗಳಿವೆ.

(3) ಶುಕ್ಲಯಜುರ್ವೇದದಲ್ಲಿ ವಾಜಸನೇಯ ಸಂಹಿತೆಯಲ್ಲಿ 31 ನೆಯ ಅಧ್ಯಾಯ. ಒಟ್ಟು 20 ಮಂತ್ರಗಳಿವೆ.

(4) ಕಾಣ್ವ ಸಂಹಿತೆಯಲ್ಲಿ 35 ನೆಯ ಅಧ್ಯಾಯ. ಈ ರೀತಿ ನಾಲ್ಕು ವೇದಗಳಲ್ಲಿ ಪುರುಷಸೂಕ್ತ ಪ್ರತಿಪಾದಿತವಾಗಿರುತ್ತದೆ. ಪುರುಷೋ–ತ್ತಮನಾದ ಶ್ರೀನಾರಾಯಣನನ್ನು ಪ್ರತಿಪಾದಿಸುವ ಸೂಕ್ತವೇ ಪುರುಷಸೂಕ್ತವೆನಿಸಿದೆ. ಶ್ರೀಮನ್ಮಧ್ವಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲಿ ಈ ರೀತಿಯಾಗಿ ವಿವರಿಸಿದ್ದಾರೆ. ಮತ್ತು ಪುರುಷಸೂಕ್ತಕ್ಕೆ ನಾರಾಯಣನೇ ಪ್ರತಿಪಾದ್ಯನೆಂದು ಸಮರ್ಥಿಸಿರುತ್ತಾರೆ.

(1) ಹೇ ನಾರದ, ಪುರುಷಸೂಕ್ತವು ಯಾವ ರೀತಿ ವಿಷ್ಣುವನ್ನೇ ಹೇಳುವುದೋ, ಹಾಗೆ ಉಳಿದ ವೇದಗಳಾಗಲಿ, ವೇದಾಂತಗಳಾಗಲಿ ಸ್ಪಷ್ಟವಾಗಿ ಹೇಳುವುದಿಲ್ಲ, ಎಂಬುದಾಗಿ ಬೃಹತ್ ಸಂಹಿತೆಯಲ್ಲಿ ಹೇಳಿದೆ.1

(2) ಹೇ ಮಹಾರಾಜ! ಪುರುಷಸೂಕ್ತದಲ್ಲಿ ಹೇಗೆ ವಿಷ್ಣುವೊಬ್ಬನೇ ಹೇಳಲ್ಪಡುವನೋ, ಹಾಗೆಯೇ ಆ ಕಾಲದಲ್ಲಿ ತ್ರೇತಾಯುಗದಲ್ಲಿ ರಾಮನೊಬ್ಬನ ಕುರಿತಾದ ವಿಚಾರ ಮಾಡಲ್ಪಡುತ್ತಿತ್ತು ಎಂಬುದಾಗಿ ಸ್ಕಂದಪುರಾಣ ವಚನವು ತಿಳಿಸುತ್ತದೆ.2

(3) ಪೂರ್ಣನಾದ್ದರಿಂದ "ಪುರುಷ"ನೆಂದು ಕರೆಯಲ್ಪಡುವ ವಿಷ್ಣುವಿಗಿಂತಲೂ ಶ್ರೇಷ್ಠವಾದ ವಸ್ತು ಯಾವುದೂ ಇಲ್ಲ ಎಂಬುದಾಗಿ ಕಾಠಕೋಪನಿಷತ್ತಿನಲ್ಲಿ ಹೇಳಿದೆ.3

(4) ಪುರುಷನ ದೆಸೆಯಿಂದ ಜಗತ್ ಸೃಷ್ಟಿಯನ್ನು ಹೇಳಿದ ಪ್ರಯುಕ್ತ ಪುರುಷಸೂಕ್ತದಲ್ಲಿರುವ ಪುರುಷಪದವು ನಾರಾಯಣ ವಾಚಕ ವಾಗಿದೆ.4 ಹೀಗಾಗಿ ಪುರುಷಸೂಕ್ತಪ್ರತಿಪಾದ್ಯ ನಾರಾಯಣನು ಎಂಬುದು ಪ್ರಮಾಣಾಂತರಗಳಿಂದ ವಿಹಿತವಾಗಿರುತ್ತದೆ. ಭಗವಂತನಿಗೆ ಮೂರು "ಪುರುಷ" ನಾಮಕ ರೂಪಗಳಿವೆ.

(1) ಬ್ರಹ್ಮಾಂಡದ ಸೃಷ್ಟಿಗಿಂತಲೂ ಮೊದಲು ಬ್ರಹ್ಮಾಂಡದ ಸೃಷ್ಟಿಗೆ ಕಾರಣವಾದ ಮಹತ್ತತ್ವದ ಸೃಷ್ಟಿ ನಡೆಸುವ ಪುರುಷರೂಪ ಮೊದಲನೆಯದು.

(2) ಬ್ರಹ್ಮಾಂಡದ ಸೃಷ್ಟಿಯು ಬಳಿಕ ಬ್ರಹ್ಮಾಂಡದಲ್ಲಿ ವ್ಯಾಪಿಸಿರುವ ಪುರುಷರೂಪ ಎರಡನೆಯದು.

(3) ಬ್ರಹ್ಮಾಂಡದೊಳಗೆ ಸೃಷ್ಟರಾದ ಪ್ರತಿಯೊಬ್ಬ ಪುರುಷರ ಹೃದಯದಲ್ಲಿ ನೆಲೆಸಿರುವ ಪುರುಷರೂಪ ಮೂರನೆಯದು.

ಈ ಮೂರು ಪೌರುಷ ರೂಪಗಳನ್ನು ತಿಳಿದವರು ಮುಕ್ತರಾಗುತ್ತಾರೆಂದು ಮತ್ಸ್ಯಪುರಾಣದಲ್ಲಿ ಹೇಳಿದೆ.5 ಭಗವಂತನ ಪುರುಷ ತತ್ವಗಳು ಮೂರು ರೀತಿಯಾಗಿದೆ.

(1) ಬ್ರಹ್ಮದೇವರ ಪರಕಾಲ ಅಂದರೆ ಶ್ರೀಹರಿಯ ನಿಮೇಷವೆಂಬ ಕಾಲದ ಕೊನೆಯಲ್ಲಿ ಶ್ರೀಹರಿಯು ತನ್ನ ಇಚ್ಛೆಯಿಂದ ಕಾಲವನ್ನೂ ಜೀವರ ಅದೃಷ್ಟವನ್ನು ಪ್ರಕೃಯನ್ನು ತನ್ನ ಶಕ್ತಿಯಿಂದಲೇ ವಿಶೇಷವಾಗಿ ಅನುಗ್ರಹಿಸುವನು. ಅಂದರೆ ಅವುಗಳ ಶಕ್ತಿಯನ್ನು ವ್ಯಕ್ತವಾಗು–ವಂತೆ ಮಾಡುವನು. ಅನೇಕ ರೂಪಗಳಿಂದ ವಿಹರಿಸುವ ಶ್ರೀಹರಿಯು ಅವುಗಳನ್ನು ಉಪಯೋಗಿಸಿ ಕೊಂಡು ಸೃಷ್ಟಿಗೆ ತೊಡಗುವನು. ಹಾಗೂ ವಿಕಾರಹೊಂದುವ ಸ್ವಭಾವವುಳ್ಳ ಮಹತ್ತತ್ವವು ಸ್ಪಷ್ಟವಾಯಿತು. ಈ ಸೃಷ್ಟಿ ನಡೆಸಿದ ಪುರುಷರೂಪ ಮೊದಲನೆಯದು.6

(2) ಬ್ರಹ್ಮಾಂಡದ ಹೊರಗಿನ ಸೃಷ್ಟಿಯಾದ ನಂತರ ಸ್ಪಷ್ಟವಾದ ತತ್ವಗಳೆಲ್ಲವೂ ಒಂದೊಂದು ಬ್ರಹ್ಮಾಂಡವನ್ನು ನಿರ್ಮಿಸಲಾರದಾದವು. ಆಗ ಭಗವಂತನನ್ನು ಈ ತತ್ವಾಭಿಮಾನಿದೇವತೆಗಳು ಸ್ತೋತ್ರಮಾಡಿ ಬೇಡಿಕೊಂಡರು. ಪ್ರಸನ್ನನಾದ ಭಗವಂತನು ತನ್ನ ಚೇಷ್ಟರ ರೂಪದಿಂದ ಆ ತತ್ವಗಳಲ್ಲಿ ಪ್ರವೇಶ ಮಾಡಿದನು. ಮತ್ತು ಅವುಗಳ ಶಕ್ತಿಯನ್ನು ಪ್ರಚೋದಿಸಿದನು. ಆಗ ಪಂಚಭೂತಗಳ ಪರಸ್ಪರ ಸಂಯೋಗದಿಂದ ಬ್ರಹ್ಮಾಂಡವನ್ನು ಸೃಷ್ಟಿಸಿದನು. ಇದೇ ಜೀವರಿಗೆ ಸಂಸಾರರೂಪ ಭಯವನ್ನುಂಟು ಮಾಡುವ ಮನೆಯಾಗಿದೆ.

ಹೀಗೆ ಶ್ರೀಹರಿಯು ಕಾಲ, ಕರ್ಮ, ಸ್ವಭಾಗಳಿಲ್ಲದ್ದು. ಶಕ್ತಿಪ್ರದನಾದ್ದರಿಂದ ದೇವರ ವಿಲಕ್ಷಣನಾಗಿದ್ದಾನೆ. ಹೀಗೆ ಬ್ರಹ್ಮಾಂಡವನ್ನು ಸೃಷ್ಟಿಸಿ ಅದರಲ್ಲಿ ವ್ಯಕ್ತನಾದ ಶ್ರೀಹರಿಗೆ ಪುರುಷನೆಂದು ಹೆಸರು. ಇದು ಎರಡನೆಯ ಪುರುಷರೂಪವಾಗಿದೆ.

(3) ಭಗವಂತನಾದ ಶ್ರೀಹರಿಯು ಸಕಲ ಪ್ರಾಣಿಗಳಿಗೂ ಪಂಚಭೂತಾತ್ಮಕವಾದ ದೇಹಗಳನ್ನು ನಿರ್ಮಿಸಿ ಆ ದೇಹಗಳಲ್ಲಿ ಇಂದ್ರಿಯಗಳ

ವ್ಯಾಪಾರ ಮಾಡಿಸುವುದಕ್ಕಾಗಿ ಆ ಸಕಲ ಪ್ರಾಣಿಗಳ ಶರೀರಗಳನ್ನು ಒಂದು ರೂಪದಿಂದ ವ್ಯಾಪಿಸಿರುವುದಲ್ಲದೆ ಅವುಗಳ ಹೃದಯ–ದಲ್ಲಿಯೂ ಬಿಂಬರೂಪಿಯಾಗಿ ಇರುತ್ತಾನೆ. ಹೀಗೆ ಸಕಲ ಪ್ರಾಣಿಗಳ ಹೃದಯದಲ್ಲಿ ನೆಲೆಸಿರುವುದರಿಂದಲೇ ಅವನಿಗೆ ಪುರುಷನೆಂಬ ಹೆಸರು. ಇದು ಭಗವಂತ ಮೂರನೆಯ ರೂಪವಾಗಿರುತ್ತದೆ. ಹೀಗೆ ಪುರುಷರೂಪಿಯಾದ ಭಗವಂತನೂ ವಿಷ್ಣುವಿನ ಅವತಾರ

(1) ಮೊದಲನೇ ಅವತಾರ ಪುರುಷ. ಮಹದಾದಿ ತತ್ವಗಳನ್ನೂ ಬ್ರಹ್ಮಾಂಡವನ್ನು ಸೃಜಿಸಿದ್ದಾನೆ.

(2) ಎರಡನೆ ಅವತಾರ ಪುರುಷ. ಬ್ರಹ್ಮಾಂಡವನ್ನು ಪ್ರವೇಶಿಸಿ ಬ್ರಹ್ಮಾಂಡವನ್ನು ನಿಯಂತ್ರಿಸುತ್ತಾನೆ.

(3) ಮೂರನೆಯ ರೂಪ ಚತುರ್ಮುಖ. ಬ್ರಹ್ಮನ ವಿರಾಟ್ ಶರೀರದಲ್ಲಿ ಮೂರನೆಯ ಪುರುಷಾವತಾರ ತಾಳಿ ನೆಲೆಸಿದ್ದಾನೆ.7 "ಪುರುಷ" ಎಂಬುದಕ್ಕೆ ಅನೇಕ ಅರ್ಥ ವಿಶೇಷಗಳಿದ್ದು ಅವು ಈ ಕೆಳಗಿನಂತೆ ವಿವರಿಸಲಾಗಿದೆ. ಭಗವಂತನ "ಪುರುಷ" ನಾಮದ ಅರ್ಥ ವಿಶೇಷಗಳು

(1) ಜೀವಾತ್ಮರ ಶರೀರಗಳಲ್ಲಿ ಹೃದಯವೆಂಬ ಪಟ್ಟಣದಲ್ಲಿ ನೆಲೆಸಿರುವವನು.1

(2) ಎರಡು ಕಾಲುಗಳುಳ್ಳ, ನಾಲ್ಕು ಕಾಲುಗಳುಳ್ಳ ಶರೀರಗಳನ್ನು ನಿರ್ಮಿಸಿದ ಭಗವಂತನು ಹಕ್ಕಿಯ ರೂಪದಿಂದ ಅಂತಹ ಶರೀರಗಳನ್ನು ಪ್ರವೇಶಿಸಿದನು. ಆ ಎಲ್ಲ ಶರೀರಗಳಲ್ಲೂ ಹೃದಯ ಪಟ್ಟಣದಲ್ಲಿರುವ ಪ್ರಯುಕ್ತ ಅವನು ಪುರುಷ ಎಂದೇ ಪ್ರಸಿದ್ಧ–ನಾಗಿರುವನು.2

(3) ನವದ್ವಾರಗಳಿಂದ ಕೂಡಿದ ಶರೀರದಲ್ಲಿ ಮಹಾತ್ಮನಾದ ಇವನು ವ್ಯಾಪಿಸಿ ಇರುವುದರಿಂದ ಇವನಿಗೆ "ಪುರುಷ" ಎಂದು ಹೆಸರು.3

(4) ಅಸಾಧಾರಣ ಪುರುಷತ್ವವುಳ್ಳವನು.4

(5) ಸೃಷ್ಟಿಯ ಮೊದಲಿನಿಂದಲೂ ಇರುವವನು.5

(6) ಅತ್ಯಧಿಕವಾದ ಜಗತ್ ಸೃಷ್ಟಿಯೇ ಮೊದಲಾದ ಚಟುವಟಿಕೆಯುಳ್ಳವನು.—6

(7) ಅನೇಕಾನೇಕ ದೈತ್ಯರನ್ನು ಸಂಹರಿಸುವವನು.7

(8) ಮೋಕ್ಷರೂಪವಾದ ಪೂರ್ಣವನ್ನಾಗಲೀ, ಪೂರ್ಣವೆನಿಸಿರುವ ತನ್ನನ್ನೇ ಆಗಲಿ ನೀಡುವವನು.8

(9) ಭಗ ಎನಿಸುವ ಸಮಗ್ರ ಐಶ್ವರ್ಯ ಮೊದಲಾದ ಆರು ಗುಣಗಳನ್ನು ಪೂರ್ಣವಾಗಿ ಹೊಂದಿರುವವನು.9

(10) ಜೀವರ ದೇಹವನ್ನು ಬೆಚ್ಚಗೆ ಇಡುವವನು.10

(11) ಭಕ್ತರಿಗೆ ತುಂಬಾಲ ನೀಡುವವನು.11

(12) ಗುಣಪೂರ್ಣನಾಗಿರುವವನು.12

(13) ಪ್ರಜೆಗಳಿಂದ ಜಗತ್ತನ್ನು ತುಂಬಿಸುವವನು.13

(14) ಎಲ್ಲರನ್ನೂ ಪಾಲಿಸುವವನು.14

(15) ಭಕ್ತರನ್ನು ಜ್ಞಾನಭಕ್ತ್ಯಾದಿಗಳಿಂದ ತುಂಬಿಸುವವನು ಮತ್ತು ಅವನ ಅವಿದ್ಯಾಕಾಮಾದಿ ದೋಷಗಳನ್ನು ನಾಶಗೊಳಿಸುವವನು.15

(16) ಭಕ್ತರ ಸರ್ವಪಾಪಗಳನ್ನು ಪರಿಹರಿಸುವವನು.16

(17) ಪೂರ್ಣನಾದ ತನ್ನನ್ನು ಚೆನ್ನಾಗಿ ಬಲ್ಲವನು.17

(18) ಪೂರ್ಣಗಳಾದ ಪ್ರೇರಕತ್ವ ಹಾಗೂ ವ್ಯಾಪ್ತಿವುಳ್ಳವನು.18 (ಭಗವಂತನ ಪ್ರಸಿದ್ಧವಾದ ವಿಷ್ಣುನಾಮದ ಷಕಾರವು ಅವನ ಪ್ರೇರಕತ್ವ ಹಾಗೂ ವ್ಯಾಪ್ತಿಗಳನ್ನು ತಿಳಿಸುವುದು.) ಹದಿನಾರು ತತ್ತ್ವಗಳಿಂದ ಸಂಪನ್ನವಾಗಿರುವ, ಒಂಭತ್ತು ಬಾಗಿಲುಗಳುಳ್ಳ ಪುಣ್ಯವಾದ ಪುರವನ್ನು (ಶರೀರವನ್ನು) ವ್ಯಾಪಿಸಿ ಮಹಾನ್ ಎನಿಸಿರುವ ಭಗವಂತನು ಆತ್ಮಾ ಅಂತರಾತ್ಮಾ ಎಂಬ ಎರಡು ರೂಪಗಳಿಂದ ಪವಡಿಸಿದ್ದಾನೆ. ಆದುದರಿಂದ ಅವನ್ನು "ಪುರುಷ"ನೆಂಬ ಹೆಸರಿನಿಂದ ಕರೆಯುತ್ತಾ.19 (ಪುರಿ ಶೇತೇ ಇತಿ ಪುರುಷಃ) ಬ್ರಹ್ಮಸೂತ್ರಗಳ ಗುಹಾಧಿಕರಣದಲ್ಲಿ ಇದನ್ನು ಸ್ಪಷ್ಟ ಪಡಿಸಿದ್ದಾರೆ. ಆ ಪುರುಷರು ಜರಾಮರಣಗಳಿಂದ ರಹಿತನಾದವನು. ಮೂರ್ತಾಮೂರ್ತಸ್ವರೂಪ–ಗಳಿಗೂ ಪ್ರೇರಕನು, ಸರ್ವವ್ಯಾಪಕನು, ಸರ್ವಜ್ಞತ್ವವೇ ಮೊದಲಾದ ಗುಣಗಳಿಂದ ಸಂಪನ್ನನಾಗಿರುವವನು. ಸೂಕ್ಷ್ಮಾತಿಸೂಕ್ಷ್ಮನು, ಸರ್ವಪ್ರಾಣಿಗಳಿಗೂ ಮತ್ತು ಸತ್ತ್ವಾದಿಗುಣಗಳಿಗೂ ಆಶ್ರಯಸ್ಥಾನನಾಗಿರುವವನು ಆಗಿದ್ದಾನೆ.20

ಇಲ್ಲಿ "ಜನ್ಮಮೃತ್ಯುಜರಾತಿಗಃ' ಎಂಬ ಶ್ರೀವಿಷ್ಣುಸಹಸ್ರನಾಮದ ಉಕ್ತಿಯನ್ನು ಸರ್ವಾವಸ್ಥಾಪ್ರೇರಕಃ ಶ್ರೀಅಣುಭಾಷ್ಯದ ಉಕ್ತಿಯನ್ನು ಯಃ ಸರ್ವಜ್ಞಃ ಸರ್ವವಿತ್ (ಶ್ರುತಿ) ಮೊದಲಾದ ಉಕ್ತಿಗಳನ್ನು ಸ್ಮರಿಸಿಕೊಳ್ಳಬೇಕು. ಈ "ಪುರುಷ" ರೂಪೀ ಭಗವಂತನು ಶ್ರವಣೇಂದ್ರಿಯಕ್ಕೆ ಜ್ಞೇಯಭೂತವಾದ ಶಬ್ದವನ್ನು ಕೇಳುವಂತೆ ಮಾಡುತ್ತಾನೆ. ಹಾಗೆಯೇ ಚಕ್ಷುರಿಂದ್ರಿಯಕ್ಕೆ ವಿಷಯವಾದ ರೂಪವನ್ನು ಗ್ರಹಿಸುವಂತೆ ಮಾಡುವವನೂ ಪುರುಷನೇ ಆಗಿದ್ದಾನೆ. ದೇಹರೂಪವಾದ ಪುರದಲ್ಲಿ ಪವಡಿಸಿರುವವನೇ ಎಲ್ಲ ಕಾರ್ಯಗಳಿಗೆ "ಕರ್ತೃ" ಎನಿಸಿದ್ದಾನೆ.21 "ಸ ಹಿ ಸರ್ವಕರ್ತಾ" ಉಕ್ತಿಯನ್ನು ಇಲ್ಲಿ ಸ್ಮರಿಸಬಹುದು. ಹೀಗೆ ಪುರುಷರೂಪದ ಭಗವಂತನ ಚಿಂತನೆ ಮಾಡಬಹುದಾಗಿದೆ.

ಪುರುಷ ಪ್ರಕೃತಿ. ವಿಶ್ವದ ದಂದ್ವಗಳು. ಪ್ರಕೃತಿಗೆ ಪುರುಷಬೇಕು. ಪುರುಷನಿಗೆ ಪ್ರಕೃತಿ ಸಾಕು. ಪ್ರಕೃತಿಗೆ ಪುರುಷನ ಆಹ್ವಾನ.

ಪುರುಷನಿಗೆ ಪ್ರಕೃತಿಯಲ್ಲಿ ಆಹ್ವಾನ. ಪುರುಷನಿಂದ ಪ್ರಕೃತಿಯ ಆಸ್ವಾದ. ಪ್ರಕೃತಿಯಿಂದ ಪ್ರತಿಕೃತಿಗಳ ನಿರ್ಮಾಣ. ಪುರುಷ ಪ್ರಕೃತಿ ದ್ವಂದ್ವಗಳು. ಇವು ಆದಿಮೂಲ. ಜಗದ ಹುಟ್ಟು ಇವರ ಸೃಷ್ಟಿ. ಜೀವರ ಜೀವನಕ್ಕೆ ಇವರೇ ನಾಂದಿ. ಬದುಕಿಗೆ ಇವರೇ ನಾಂದಿ. ಬದುಕಿಗೇ ಇವರೇ ಹಾದಿ. ಪುರುಷ "ಈಶಾವಾಸ್ಯ" ಎಲ್ಲೆಡೆ ವ್ಯಾಪ್ತ. ಪ್ರಕೃತಿ ಅವನ ಒಡನಾಡಿ ಅದುವೆ ಶ್ರೀಲಕ್ಷ್ಮೀತತ್ವ. ನಾರಾಯಣ (ಪುರುಷ) ಪ್ರಕೃತಿ (ಲಕ್ಷ್ಮಿ) ಈ ದ್ವಂದ್ವ ಒಂದು. ಒಂದರಲ್ಲಿ ಎರಡಿದ್ದೀತು. ಎರಡು ಒಂದೆ ಆಗಿದ್ದವು. ಒಂದು ಎರಡಾಯಿತು.22
"ಶ್ರಿಯಃ ಸೂಕ್ತಂ" ಶ್ರೀಸೂಕ್ತವಾಗಿದೆ. ಲಕ್ಷ್ಮೀಯ ತತ್ವವನ್ನೆ 15 ಮಂತ್ರಗಳಿಂದ ವರ್ಣಿಸುತ್ತದೆ. ಋಗ್ವೇದ ಪಂಚಮ ಮಂಡಲದ ಖಿಲ ಸೂಕ್ತವೆಂದು ಪ್ರಸಿದ್ಧವಾಗಿರುತ್ತದೆ. ಇಲ್ಲಿ "ಜಾತವೇದಃ" ಅಂದರೆ ನಾರಾಯಣ ತಂದೆಯಿಂದ ತಾಯಿ ಹತ್ತಿರ ಹೋಗುವುದೇ ಶ್ರೀ-ಸೂಕ್ತದ ವೈಶಿಷ್ಟ್ಯವಾಗಿರುತ್ತದೆ.23 ಪ್ರಕೃತಿಯೆಂಬುದು "ಪ್ರ" ಉಪಸರ್ಗದೊಂದಿಗೆ ಕೃತಿ ಶಬ್ದದಿಂದ ಒಡಗೂಡಿದೆ. "ಪ್ರ" ಎಂದರೆ ಪ್ರಕೃಷ್ಟವಾದ (ಶ್ರೇಷ್ಠವಾದ) ಕೃತಿ "ನಿಯಾಮಕ" ಸತ್ವ, ರಜೋ, ತಮೋ ಈ ರೀತಿ ಮೂರು ಗುಣಗಳಿಂದ ಕೂಡಿದ ರೂಪವೆ ಪ್ರಕೃತಿ. ಅದುವೆ ಲಕ್ಷ್ಮೀ ತತ್ವವಾಗಿದೆ. ಪ್ರಕೃತಿ ಪುರುಷ, ವಿಷ್ಣು ಲಕ್ಷ್ಮೀ, ಎರಡೂ ಎಲ್ಲವನ್ನೂ ಕೊಡುವವು. ಮಾಡುವವು, ಕಾಪಾಡುವವು, ಕೊಲ್ಲುವವು, ಅಂತೆಯೇ ಇವೆರಡೂ ಬ್ರಹ್ಮ. ಪುರುಷ "ಪರಬ್ರಹ್ಮ! ಪ್ರಕೃತಿ" ಮಹದ್‌ಬ್ರಹ್ಮ. ಇದು ವೇದ, ಗೀತೆಯ ಮಾತು. ಪುರುಷ ತನ್ನ ಶಕ್ತಿಯ ಅಭಿವ್ಯಕ್ತಿಗೆ ಪ್ರಕೃತಿಯನ್ನು ಮಾಧ್ಯಮವಾಗಿರಿಸಿದ. "ಪ್ರಕೃತಿಃ ಸೂಯತೇ ಸ ಚರಾಚರಮ್" ಎಂದು ಗೀತಾ. ಜಡ, ಚೇತನವೆಲ್ಲ ಪ್ರಕೃತಿಯ ಸಂತಾನ. ವಿಶ್ವದ ಹಸಿರು ಈ ಪ್ರಕೃತಿಯ ಬಸಿರು. ಇದು ಜಡಪ್ರಕೃತಿ. ಇವಳದ್ದು ಸದಾ ತುಂಬಿದ ಒಡಲು. ಅಂತೆಯೇ ಎಲ್ಲರ ಒಡಲು ತುಂಬುವಳು. ಜಗಕೆ ಇವಳೇ ಇಂಬು. ಆದ್ದರಿಂದ ಜಗದ ಅಂಬಾ. ಅಂಬುಜಳು. ಪ್ರಕೃತಿ ಇಲ್ಲದೇ ಯಾರ ಬದುಕೂ ಇಲ್ಲ. ಬದುಕಿಗೆ ಇವಳೇ ಆಧಾರ. ಏನು ಬಿಟ್ಟರೂ ಇವಳನ್ನು ಬಿಟ್ಟಿರಲಾರರು. ಶ್ರೀಕೃಷ್ಣನಿಗೆ ಒಮ್ಮೆ ಅಗ್ರಪೂಜೆ ರಾಯಸೂಯದಲ್ಲಿ, ಕೃಷ್ಣ ಮಡದಿ ಇವರಿಗೆ ಮನೆಮನದಲ್ಲಿ ನಿತ್ಯ ಅಗ್ರಪೂಜೆ. ಶುಕ್ರವಾರ ಇವಳದ್ದು. ದೀಪಾವಲಿ, ನವರಾತ್ರಿ, ಶ್ರಾವಣ ಇವಳದ್ದೇ ಹಬ್ಬ. ಎಲ್ಲರ ಬದುಕನ್ನು ನಿತ್ಯಹಬ್ಬ ಮಾಡಿದವಳು ಈ ಮಹಾಲಕ್ಷ್ಮೀ. "ನಾನೇ" "ನಾನು" ಎಂದು ಬೀಗಿದವರೂ ಇವಳಿಗೆ ಬಾಗುವವು. ಎಲ್ಲರ ಇರುವಿಕೆ, ಇಳಿಯುವಿಕೆ ಇವರ ಕಟಾಕ್ಷದಿಂದ. ಇವಳಿದ್ದರೆ ಎಲ್ಲವೂ. ಅಂತೆಯೇ ಇವಳು ಎತ್ತರದ ಅಮ್ಮ. ಎಲ್ಲರ ಅಮ್ಮ "ಎಲ್ಲಮ್ಮ". ಅಂತೆಯೇ ಎಲ್ಲರೂ ಇವಳನ್ನೇ ಕರೆಯುವರು. ಕೂಗುವರು "ಭಾಗ್ಯದಾ ಲಕ್ಷ್ಮೀ ಬಾರಮ್ಮಾ, ನಮ್ಮಮ್ಮಾ ನೀ ಸೌಭಾಗ್ಯದಾ ಲಕ್ಷ್ಮೀಬಾರಮ್ಮಾ" "ಬಾರಮ್ಮ ಸಿರಿಯೇ" "ಬಾರೇ ಭಾಗ್ಯದ ನಿಧಿಯೇ" ಎನ್ನುವರು ಹರಿದಾಸರು. ಅತಿದೊಡ್ಡ ಕಾರಣ ಶಕ್ತಿ ಪುರುಷ. ಪರತತ್ತ್ವ ಪರಬ್ರಹ್ಮದೇವರು. ಅತಿದೊಡ್ಡ ಕಾರ್ಯಶಕ್ತಿ ಚೇತನ ಪ್ರಕೃತಿ. ಜಡಪ್ರಕೃತಿ. ಇದೇ ಮಹಾಲಕ್ಷ್ಮಿ. ಇದು ಅವ್ಯಕ್ತ. ಎಲ್ಲವೂ ತುಂಬಿದೆ ಇವಳಲ್ಲಿ. ಆದರೆ "ಅವ್ಯಕ್ತ" ಕಾಣದ ಶಕ್ತಿ. ಕಾಣುವಂತೆ ಮಾಡುವವಳು ಇವಳೇ. ಅದಕ್ಕೆ "ಅವ್ಯಕ್ತ" ಇವಳ ಹೆಸರು. ಅಂತೆಯೇ ಎಲ್ಲರದೂ ಇವಳೆಡೆಗೆಯೇ ಲಕ್ಷ್ಯ. ಆಕರ್ಷಣೆ ಇವಳ ಮುಖ್ಯ ಲಕ್ಷಣ. ಆದ್ದರಿಂದ ಇವಳು "ಲಕ್ಷ್ಮೀ". ಎಲ್ಲರನ್ನು ಹೊತ್ತು, ಹೆತ್ತು, ಸದಾ ಮತ್ತೆ ಹೊತ್ತಿರುವಳು. ಅದಕ್ಕೆ ಜಗನ್ಮಾತಾ. ಮಹಾಮಾತಾ. ಮಹಾಮಾಯಿ, "ಪುರುಷ" ಪ್ರಕೃತಿ "ಗಂಡುಹೆಣ್ಣು" "ವಿಷ್ಣು ಲಕ್ಷ್ಮೀ" ರೂಪದಿಂದ, ಗುಣದಿಂದ ಅಸಮರು. ಇದು ಸಹಜತೆ. ಇದು ನಿಸರ್ಗ. ಆದರೂ ಸದಾ ಕೂಡಿರುವವು. ಆದ್ದರಿಂದ ಸಮರು. ಅಂತೆಯೇ "ಸಮಾಸಮಳು" 'ಸಮನಾ' ಎನ್ನಿಸುವಳೇ ಮಹಾಲಕ್ಷ್ಮಿ.24 ಅಂತೆಯೇ ಸ್ತ್ರೀಪುರುಷರಲ್ಲಿ ಅನೇಕ ಸಮಾನತೆ ಇವೆ. ಅಸಮಾನತೆ ಇವೆ. ಇದೇ ವಿಶ್ವದ ಸಹಜತೆ. ಸಮತೆ, ಸಮಾನತೆ ಬಹಿರಂಗ. ವಿಷಮತೆ, ಅಸಮಾನತೆ ಅಂತರಂಗ. ಅಂತೆಯೇ ಸೂತ್ರ "ಸಮನಾ" ಎಂದಿತು. ಪುರುಷ ಶಕ್ತಿಮಾನ್. ಲಕ್ಷ್ಮೀಮಹಾಶಕ್ತಿ. ಪುರುಷ ವಿದ್ಯುತ್. ಪ್ರಕೃತಿ ಬೆಳಕು. ಇವರಿಬ್ಬರದು ಬಿಡದ ನಂಟು. ಬಿಡಿಸಲಾಗದ ಗಂಟು. ಅವಳಿದ್ದಲ್ಲಿ ದೇವರು, ದೇವರಿದ್ದಲ್ಲಿ ಅವಳು. ಇದು ಅವರ ಸಾಂಗತ್ಯ.

"ದ್ವಿಧಾ ಕೃತ್ವಾ ಆತ್ಮನೋ ದೇಹಂ ಅರ್ಧೇನ ಪುರುಷೋ ಭವತ್ ಅರ್ಧೇನ ನಾರೀ....|| -ಮನುಸ್ಮೃತಿ 1-32

ಒಂದೇ ದೇಹ, ಒಂದು ಶಕ್ತಿ ಎರಡಾಗಿ ವಿರಾಟಕ್ಕೆ ಜನ್ಮ ನೀಡಿದವು. ಈ ಅರ್ಧನಾರೀ ನರರು, ಪ್ರಕೃತಿ ಪುರುಷರು. ಈ ಪ್ರಕೃತಿ ಮಹಾಲಕ್ಷ್ಮೀದೇವಿ. ಎರಡು ಚೇತನ ಒಂದಾದರೂ ಎರಡು ಎರಡೇ. ಪುರುಷನಿಂದ ಭಿನ್ನ. ಆದರೆ ಪುರುಷಾಧೀನ ಈ ಪ್ರಕೃತಿ. ಲಕ್ಷ್ಮೀಚೇತನ. ಪುರುಷಶಕ್ತಿಯ ವಿರಾಟ್‌ರೂಪ. ಪುರುಷನ ಎಲ್ಲ ಕಾರ್ಯಗಳ ಸದಾ ಸಂಗಾತಿ. ಸಹಕಾರಿ. ಎರಡೂ ಕೂಡಿ ಆಡಿದ ಆಟ. ಮಾಡಿದ ಲೀಲೆ, ತೋರಿದ ವೈಭವ ಈ ವಿಶ್ವಪ್ರಪಂಚ. ಮಹಾಲಕ್ಷ್ಮೀ ಚಿದ್ರೂಪಳು. ಅಪ್ರಾಕೃತಳು. ಜಡಕ್ಕೆ ಒಡೆಯಳು. ಜಡಳಲ್ಲ. ಜಡವನ್ನು ಆಡಿಸುವಳು. ಓಡಿಸುವಳು, ಕೂಡಿಸುವಳು. ಕಡೆಗೆ ಬಯಲು ಮಾಡುವಳು. ಇವಳು ಬಹುರೂಪಿ. ಮಹಾಲಕ್ಷ್ಮೀ. ಇದು ಅವಳ ಅರಿವು. "ಸಾತ್ವಿಕಸ್ಯ ಜ್ಞಾನಶಕ್ತಿ, ರಾಜಸಸ್ಯ ಕ್ರಿಯಾತ್ಮಿಕಾ, ದ್ರವ್ಯಶಕ್ತೀ ತಾಮಸಸ್ಯ" ಇವು ತ್ರಿಗುಣಶಕ್ತಿ.

## ಪ್ರಕೃತಿ ಲಕ್ಷ್ಮೀ ಜಿಜ್ಞಾಸಾ

"ಜಿಜ್ಞಾಸೆ" ಅರಿವು. ಅರಿವು ಮೂರು ಬಗೆ. ವ್ಯಕ್ತಿಯ ಸ್ವರೂಪ. ಅವರ ಸಾಧನೆ, ಅವರು ಪಡೆದ ಲ. ಅವರಿಗಾಗಿ ನಮ್ಮ ಸಾಧನೆ. ನಮಗೆ ದೊರೆವ ಲ. ಇದು ಜಿಜ್ಞಾಸೆ. ಲಕ್ಷ್ಮೀದೇವಿಯ ಅರಿವಿಗೆ ಆಧಾರ ವೇದಗಳು. ಉಪನಿಷತ್ತು, ಪಂಚರಾತ್ರ, ರಾಮಾಯಣ, ಮಹಾಭಾರತ, ಭಾಗವತಾದಿ ಎಲ್ಲ ಪುರಾಣಗಳು, ಬ್ರಹ್ಮಸೂತ್ರ, ಭಗವದ್ಗೀತೆ, ಸ್ಮೃತಿಗಳು, ಎಲ್ಲ ದರ್ಶನಗಳು, ಮತಗಳು, ದಾಸಸಾಹಿತ್ಯ, ಜಾನಪದ ಜೀವನ ಸಾಹಿತ್ಯ, ಸಂಪ್ರದಾಯ, ಶ್ರದ್ಧೆ, ದೇವಪೂಜಾ ಆಚರಣೆಗಳೇ ಲಕ್ಷ್ಮೀಜ್ಞಾನಕ್ಕೆ ಆಧಾರ. ಆಕರಗಳು ಇದು ಲಕ್ಷ್ಮೀ ಸಾಹಿತ್ಯ. ಭಾರತೀಯ ವಾಙ್ಮಯ.

## ಲಕ್ಷ್ಮೀ ಸ್ವರೂಪ

ಪತಿಯಿಂದ ಸದಾ ಕೂಡಿರುವ ಪತ್ನಿ. ಪತಿಗೆ ಸಮಳು. "ಶ್ರೀರಪಿ ಅಖಿಲ ಶಬ್ದೋಕ್ತಾ" "ವೇದೈಶ್ಚ ಸರ್ವೈಃ ವೇದ್ಯಾ" ಮಹಾ-ಲಕ್ಷ್ಮೀಯನ್ನು ಸಮಗ್ರ ಶಬ್ದ ಪ್ರಪಂಚ ವರ್ಣಿಸುವುದು. ಎಲ್ಲ ಶಬ್ದಗಳು ಅವಳ ನಾಮ. ಅನಂತ ವೇದಗಳೂ ಅವಳ ಗಾಥಾ. ಆಧ್ಯಾತ್ಮಿಕ ವಾಙ್ಮಯವೆಲ್ಲ ಅವಳ ಚರಿತ್ರೆ ಕಾವ್ಯ. "ಲಯೇ ವಾಪ್ಯಥವಾ ಸೃಷ್ಟೌ ಅಂತರಾಲೇಽಪಿ ನಕ್ವಚಿತ್ ಪ್ರಕೃತ್ಯಾ ರಹಿತಂ ಬ್ರಹ್ಮ" ಪರಬ್ರಹ್ಮ ತಾನು ಗೈಯುವ ಪ್ರಲಯ, ಸೃಷ್ಟಿ, ಮಧ್ಯದ ಯಾವುದೇ ಕ್ಷಣ, ಕಾರ್ಯ ಇವಳಿಲ್ಲದೇ ಮಾಡುವುದಿಲ್ಲ. ಇದು ಇವಳ ಹಿರಿಮೆ. ವಿಶ್ವವೇ ಮಹಾಮನೆ. ಪ್ರಪಂಚ ಒಂದು ಕುಟುಂಬ. ಮಹಾಲಕ್ಷ್ಮೀ ಈ ಮನೆಯ ಮಹಾತಾಯಿ. ವಿಶ್ವ ಅವಳ ಕುಟುಂಬ. ವಿಶ್ವಕುಟುಂಬಿನಿ. "ಮಾತಾ ಚ ಕಮಲಾದೇವಿ ಪಿತಾ ದೇವೋ ಜನಾರ್ದನಃ" ಇದು ಅವಳ ಸ್ವರೂಪ. ಅನಂತಜೀವರು ಅವಳ ಮಕ್ಕಳು. ಮಕ್ಕಳು ಅವಳಿಗೆ ಮೆಚ್ಚು. ಮಕ್ಕಳಿಗೆ ಈ ತಾಯಿ ಅಚ್ಚುಮೆಚ್ಚು. ಆದ್ದರಿಂದ "ಮಾತೃದೇವೋ ಭವ" ತಾಯಿಯೇ ದೇವರೆಂದು ವೇದ. ಎದ್ದರೂ ಬಿದ್ದರೂ, ಎಲ್ಲ ನೋವು ನಲಿವುಗಳಲ್ಲಿ "ಅವ್ವಾ" "ಅಮ್ಮಾ" ಎಂದು ಮೊದಲ ಧ್ವನಿ. ಎಲ್ಲರಿಗೂ ಸದಾ ಇವಳ ನೆನಪು! ವಿಶ್ವ ಇವಳನ್ನು ತಾಯಿಯ ರೂಪದಲ್ಲಿ ಕಾಣುವುದು. ದೇವರು ತಾಳಿದ ತಾಯಿರೂಪ ಇವಳು. ಇವಳಲ್ಲಿ ದೇವ. "ರಮಾದಿನಿಷ್ಠ ರಮಾದಿ ನಾಮಕ" ಎನ್ನುವರು ಶ್ರೀರಾಘವೇಂದ್ರರು. ಹರಿಯ ಪ್ರತಿಬಿಂಬ ಇವಳು. ಇವಳ ಪ್ರತಿಬಿಂಬ ವಿಶ್ವದ ಸ್ತ್ರೀಯರು. ಸ್ತ್ರೀದೇವತೆಗಳು. ಇವಳು ಅವಳ ಬಿಂಬಳು. ಪ್ರಕೃತಿಯ ರೂಪದಿಂದ ಕಣ್ಣಿಗೆ ಕಾಣುವ ಪ್ರತ್ಯಕ್ಷ ದೇವತೆ. "ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ" ಇದು ಇವಳ ವಿಶ್ವರೂಪ. ಪ್ರತಿಚೇತನಕ್ಕೂ ಇವಳ ಸಂಬಂಧ. ಇದೇ ಪ್ರಕೃತಿಬಂಧ. ಇವಳಲ್ಲಿದೆ ಬಂಧಕಶಕ್ತಿ. ಬಂಧನದ ಬಿಡುಗಡೆಯೂ ಇವಳಿಂದ. ಇವಳು ಬ್ರಹ್ಮಾದಿ ಎಲ್ಲ ದೇವತೆಗಳ ತಾಯಿ. ವಿಶ್ವದ ಒಡತಿ. ಹಗಲು ರಾತ್ರಿಗಳಿಗೆ ದೇಶ, ಕಾಲಗಳಿಗೆ ಇವಳೇ ಒಡತಿ. ರಾತ್ರಿಸೂಕ್ತ ರಕ್ಷಣೆಗಾಗಿ ಇವಳನ್ನು ಪ್ರಾರ್ಥಿಸುವುದು. ಲಕ್ಷ್ಮೀ ಚಪಲಾ, ಚಂಚಲಳು. ಎಲ್ಲಿಯೂ ಸ್ಥಿರವಾಗಿರುವುದಿಲ್ಲ. ಸಂಪತ್ತಿನಿಂದ ಏರಿದವರನ್ನು ಇಳಿಸುವಳು. ಇಳಿದವರನ್ನು ಏರಿಸುವಳು. ಇವಳು ಬರುವ ಸುಳಿವೂ ದೊರೆಯದು, ಹೋಗುವ ಬಗೆ ತಿಳಿಯುವುದೇ ಇಲ್ಲ. ಅವಳ ಈ ಕಾರ್ಯದ ಅನುಭವ ಎಲ್ಲರಿಗೂ ಇರುವುದು. ಇದು ಅವಳ ಗುಣವೇ. ಆದರೂ ಲಕ್ಷ್ಮೀದೇವಿ ಚಂಡಿ, ಮಿತಿ ಇಲ್ಲದ ಅಪಾರಶಕ್ತಿಗೆ ಚಂಡ ಎನ್ನುವರು. ಇವಳದ್ದೂ ಅಪರಿಮಿತ ಶಕ್ತಿ. ಅಂತೆಯೇ ಚಂಡಿ, ಚಂಡಿಕಾ (ಚಡಿ=ಕೋಪೇ) ಸಿಟ್ಟಿಗೆ ಇವಳು ಅಭಿಮಾನಿ. ಈ ದುರ್ಗೆಯಿಂದ ಹುಟ್ಟಿದ್ದು ಸಿಟ್ಟು. ಅಂತೆಯೇ ದೇವತೆಗಳಿಗೆ ಅವಳ ಅಂಜಿಕೆ. "ಭೀಷಾಸ್ಮಾದ್ ವಾತಃ ಪವತೇ" ಗಾಳಿ ಬೀಸುವುದು, ಸೂರ್ಯ ಬರುವುದು, ಎಲ್ಲ ಇವಳ ಭಯದಿಂದ ಇವಳು ಚಂಡಿಕಾ. ಇವಳು ಹರಿಪ್ರಿಯಾ. "ಸರ್ವೇಭ್ಯೋಽಪಿ ಪ್ರಿಯತಮಾ ಹರೇಃ" ಎಲ್ಲರಿಗಿಂತ ಹರಿಗೆ ಅತಿ ಮೆಚ್ಚಿನವಳು. ಇವಳ ಪ್ರೀತಿಗಾಗಿ ಹರಿಯು ವಿಶ್ವದ ಸೃಷ್ಟಿ ಮಾಡುವ. "ಮಮ ಭರ್ತುಃ ಏತಾದೃಶ ಮಹಿಮಾವಾನ್" ನನ್ನ ಗಂಡನ ಮಹಿಮೆ, ಹಿರಿಮೆ ಇಷ್ಟು ಅದ್ಭುತವೆಂದು ತಿಳಿದು ಹರ್ಷಿಸಲು ತನ್ನ ಎಲ್ಲ ಕಾರ್ಯ ಲಕ್ಷ್ಮಿಯ ಸಂತೋಷಕ್ಕಾಗಿಯಂತೆ ಎನ್ನವರು ವಾದಿರಾಜರು. ಇದು ಜಗಕೆ ಶಿಕ್ಷಣ ಪ್ರಯೋಜನಕ್ಕಾಗಿ ಪ್ರೀತಿ ಅಲ್ಲ. ಪ್ರೀತಿಯೇ ಪ್ರಯೋಜನ. ಅವಳು "ವಿಶ್ವಪ್ರಿಯೇ, ವಿಶ್ವಮನೋನುಕಲೇ" ಎಂದು ಋಗ್ವೇದ. ಇದು ಲಕ್ಷ್ಮಿಯ ಸ್ವರೂಪ. ಇವಳು "ಯೋಗಮಾಯಾ". ಇವರದ್ದು ಮಾಸದ ಪ್ರೀತಿ. ಮುರಿಯದ ಬಂಧ. ಮುನಿಸಿಲ್ಲದ ಮನಸು. ಹುಸಿಯಾಗದ ಹರೆಯ! ಕಳೆಗುಂದದ ಶಕ್ತಿ. ಆರದ ತೇಜ. "ಶ್ರೀಯಂ ವಸಾನಾ ಅಮೃತತ್ತ್ವ –ಮಾಯಾನ್" ಭಕ್ತರಿಗೆ ಮೋಕ್ಷ ಕೊಡುವ ಸಾಮರ್ಥ್ಯ. ಇವಳು ಬಂಧಕಳು. ಮೋಚಕಳು. ಮೋಕ್ಷಕ್ಕೂ ಬೇಕು ಮಹಾಲಕ್ಷ್ಮೀ. ಅವಳೇ ಶ್ರೀಸೂಕ್ತ ಪ್ರತಿಪಾದ್ಯ ಪ್ರಕೃತಿ ಮಹಾಲಕ್ಷ್ಮಿ.

# Foot Noots

1. ಯಥಾ ಹಿ ಪೌರುಷಂ ಸೂಕ್ತಂ ವಿಷ್ಣೋರೇವಾಭಿಧಾಯಕಮ್ ನ ತಥಾ ಸರ್ವ ವೇದಾಶ್ಚ ವೇದಾಂಗಾನಿ ಚ ನಾರದ ||

–ಶ್ರೀಬ್ರಹ್ಮಸೂತ್ರಭಾಷ್ಯ 1–2–26

2. ತಸ್ಮಿನ್‌ಕಾಲೇ ಮಹಾರಾಜ ರಾಮ ಏವಾಭಿದೀಯತೇ ಯಥಾ ಹಿ ಪೌರುಷೇ ಸೂಕ್ತೇ ವಿಷ್ಣುರೇವಾಭಿಧೀಯತೇ ||

–ಶ್ರೀಬ್ರಹ್ಮಸೂತ್ರಭಾಷ್ಯ 1–2–23

3. ಪುರುಷಾನ್ನ್ ಪರಂ ಕಿಂಚಿತ್ (ಕಾಠಕೋಪನಿಷತ್)
4. ತಸ್ಮಾದ್ ವಿರಾಳಜಾಯತ ವಿರಾಜೋ ಅಧಿಪೂರುಷಃ ||
5. ವಿಷ್ಣೋಸ್ತು ಪುರುಷಾಖ್ಯಾನಿ ತ್ರೀಣಿ ರೂಪಾಣ್ಯತೇ ವಿದುಃ ಪ್ರಥಮಂ ಮಹತಃ ಸೃಷ್ಟ್ರ ದ್ವಿತೀಯಂತ್ವಂಡಸಂಸ್ಥಿತಂ ||
   ತೃತೀಯಂ ದೇಹಿನಾಂ ದೇಹೇ ತಾನಿ ಜ್ಞಾತ್ವಾ ವಿಮುಚ್ಯತೇ || ಇತಿ || ಮಾತ್ಸ್ಯೇ ||
6. ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಮ್ ಉತಾ ಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ||

ಪು.ಸೂಕ್ತ. ಮಂ–2

ಏತಾವಾನಸ್ಯ ಮಹಿಮಾತೋಜ್ಯಾಯಾಂಶ್ಚ ಪುರುಷಃ ಪಾದೋಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ||–ಪು.ಸೂಕ್ತ. ಮಂ–3

ನಮಃ ಪರಸ್ಮೈ ಪುರುಷಾಯ ಭೂಯಸೇ ಸಮದ್ಭವಸ್ಥಾನ ನಿರೋಧ ಲೀಲಯಾ

ಗೃಹೀತ ಶಕ್ತಿತ್ರಿತಯಾಯ ದೇಹಿನಾಂ ಅಂತರ್ಧ್ರುವಾಯಾನುಪಲಭ್ಯವರ್ತ್ಮನೇ || –ಭಾಗವತ 2–4–12

7. ಆದ್ಯೋಽವತಾರೋ ವಿಷ್ಣೋಸ್ತು ಪುರುಷೋ ನಾಮಕೀರ್ತತಃ ಅಸೃಜತ್ ಸ ಮಹತ್ತತ್ತ್ವಂ ಸ ಏವಾಂಚಂ ಸಮಾವಿಶತ್
ಸ ಬ್ರಹ್ಮಣೋ ಹೃದಿಸ್ಥತ್ವಾತ್ ಹ ಖುದಯಂ ಚೇತಿ ಕೀರ್ತ್ಯತೇ || –ಶ್ರೀಭಾಗವತ ತಾತ್ಪರ್ಯ 3–2–8

1. ಪೂರ್ಷು ಶರೀರೇಷು ಪುರಿ ಹೃದಯಾಖ್ಯಪತ್ತನೇ ಶೇತೇ ಅಸ್ತಿ ಇತಿ ಪುರುಷಃ ||

2. ಪುರುಶ್ಚಕ್ರೇ ದ್ವಿಪದಃ ಪುರುಶ್ಚಕ್ರೇ ಚತುಷ್ಪದಃ ಪುರಃ ಸ ಪಕ್ಷೀಭೂತ್ವಾ ಪುರಃ ಪುರುಷ ಆವಿಶದಿತಿ ಸ ವಾ ಅಯಂ ಪುರುಷಃ ಸರ್ವಾಸು ಪೂರ್ಷು ಪುರಿಶಯಃ || –ಬೃಹದಾರಣ್ಯಕೋಪನಿಷತ್ (4–5–18)

3. ನವದ್ವಾರಂ ಪುರಂ ಪುಣ್ಯಂ ಏತೈರ್ಭಾವೈಃ ಸಮನ್ವಿತಮ್
ವ್ಯಾಪ್ಯ ಶೇತೇ ಮಹಾತ್ಮಾ ಯಃ ತಸ್ಮಾತ್ ಪುರುಷ ಉಚ್ಯತೇ || –ಮಹಾಭಾರತ ಶಾಂತಿಪರ್ವ (210–37)

4. ಪುರುಷತ್ವಗುಣವತ್ವಾತ್ ಪುರುಷಃ || ಶ್ರೀವಾದಿರಾಜೀಯ ಪುರುಷಸೂಕ್ತ ವ್ಯಾಖ್ಯಾನ.

5. ಪುರ್ ಅಗ್ರಗಮನೇ, ಇತ್ಯತಃ ಪುರುಷಃ ಸೃಷ್ಟೇಃ ಪ್ರಾಗ್ವಿದ್ಯಮಾನಃ –ಶ್ರೀಸತ್ಯಸಂಧೀಯ ವ್ಯಾಖ್ಯಾನ.

6. ಪುರುರ್ಬಹುಲಃ ಷಃ ಚೇಷ್ಟಾ ಯಸ್ಯ ಸಃ ಪುರುಷಃ ಷಕಾರಃ ಪ್ರಾಣ ಆತ್ಮೇತಿ ಶ್ರೇತೇಃ || –ಶ್ರೀ ಸತ್ಯಸಂಧೀಯವ್ಯಾಖ್ಯಾನ

7. ಪುರೂನ್ ಬಹೂನ್ ದೈತ್ಯಾನ್ ಸ್ಯತಿ ನಾಶಯತೀತಿ ಪುರುಷಃ ಷೋ ಅಂತಕರ್ಮಣಿ.

8. ಪುರು ಪೂರ್ಣಂ ಮೋಕ್ಷಾಖ್ಯಂ ಲಂ ಸ್ವಾತ್ಮಾನಮೇವ ಸನೋತಿ ದದಾತಿ ಇತಿ –ಶ್ರೀಸತ್ಯಸಂಧೀಯವ್ಯಾಖ್ಯಾನ

9. ಪುರವಃ ಪೂರ್ಣಾಃ ಷಾಃ ಷಡ್ಗುಣಾಃ ಯಸ್ಯ ಸಃ ಪುರುಷಃ –ಶ್ರೀ ವಾದಿರಾಜೀಯ ವ್ಯಾಖ್ಯಾನ

10. ಪುರಂ ಓಷತಿ ದಹತೀತಿ ಪುರುಷಃ ||'ಉಷ ದಾಹೇ'

11. ಪುರು ಬಹುಲಂ ಸನೋತಿ ದದಾತೀತಿ ಪುರುಷಃ "ಷಣು ದಾನೇ"

12. ಪ್ರಿಯತೇ ಪೂರ್ಯತೇ ಗುಣೈರಯಮಿತಿ ಪುರುಷಃ ಪೃ ಪಾಲನಪೂರಣಯೋಃ

13. ಪ್ರಜಾಭಿಃ ಜಗತ್ ಪೃಣಾತಿ ಪೂರಯತೀತಿ ಪುರುಷಃ ಪೃಪಾಲನಪೂರಣಯೋಃ

14. ಪೃಣಾತಿ ಸರ್ವಾನ್ ಪಾಲಯತೀತಿ ಪುರುಷಃ ಪೃಪಾಲನಪೂರಣಯೋಃ

15. ಪೃಣಾತಿ ಭಕ್ತಾನ್ ಗುಣೈಃ ಪೂರಯತಿ, ಸಾಧಯತಿ ಭಕ್ತಾನಾಂ ದೋಷಾನ್ ನಾಶಯತೀತಿ ಪುರುಷಃ (ಪೃಪೂರಣೇ, ಪದಲ್ಯ ವಿಶರಣಗತ್ಯವಸಾಧನೇಷು)

16. ಪುರು ಸರ್ವಂ ಪಾಪಜಾತಂ ಓಷತಿ ದಹತಿ ಇತಿ ಪುರುಷಃ ಉಷ ದಾಹೇ

17. ಪುರು ಬ್ರಹ್ಮ ಸರತಿ ಸಮ್ಯಗ್ ಜಾನಾತೀತಿ ಪುರುಷಃ ||
ಸೃ ಗತೌ ಪುರು ಬ್ರಹ್ಮ ಗುಣಾಧಿಕ್ಯಾತ್ ತದ್‌ಜ್ಞಾನಾತ್ ಪುರುಷಃ ಸ್ಮೃತಃ || –ಗೀತಾ (2–15)

18. ಪುರುಃ ಪೂರ್ಣಾಃ ಷಃ ಪ್ರಣೇತೃತ್ವಂ ವ್ಯಾಪ್ತತ್ವಂ ಚ ಯಸ್ಯ ಸಃ ಪುರುಷಃ ||

19. ನವದ್ವಾರಂ ಪುರಂ ಪುಣ್ಯಮೇತೈರ್ಭಾವೈಃ ಸಮನ್ವಿತಮ್
ವ್ಯಾಪ್ಯ ಶೇತೇ ಮಹಾನಾತ್ಮಾ ತಸ್ಮಾತ್ ಪುರುಷ ಉಚ್ಯತೇ || –ಶಾಂತಿಪರ್ವ 210 ಅ.

20. ಅಜರಃ ಸೋಮರಶ್ಚೈವ ವ್ಯಕ್ತವ್ಯಕ್ತೋಪದೇಶವಾನ್
ವ್ಯಾಪಕಃ ಸಗುಣಃ ಸೂಕ್ಷ್ಮಃ ಸರ್ವಭೂತಗುಣಾಶ್ರಯಃ || –ಶಾಂತಿಪರ್ವ 210 ಅ

21. ಶ್ರೋತ್ರಂ ವೇದಯತೇ ವೇದ್ಯಂ ಸ ಶೃಣೋತಿ ಸ ಪಶ್ಯತಿ
ಕಾರಣಂ ತಸ್ಯ ದೇಹೋಯಂ ಸ ಕರ್ತಾ ಸರ್ವಕರ್ಮಣಾಮ್ || –ಶಾಂತಿಪರ್ವ 210 ಅ.

22. ಸ ವೈ ನೈವರೇಮೆ ತಸ್ಮಾದೇಕಾಕಿ ನ ರಸಮೇತ "ಸ ದ್ವಿತೀಯಂ ಐಚ್ಚತ್|| –ಬೃಹದಾರಣ್ಯಕ ಉ.1–1

23. ಜಾತವೇದೋ ಮ ಆವಹ || –ಶ್ರೀಸೂಕ್ತ1

24. Lakshmi in Sanskrit is derived from the root word "laksha,lakshaa, Meaning to perceive, observe-know understand and Goal, aim.

*************

**Volume XX : July to December – 2022, ISSN 2250-1711**
**Journal of Veda Samskrita Academy [Recognised in the UGC-CARE List]**

# ‘ಗೈರ ಸಮಜೂತಿ’ಗೊಂದು ಸಮಜೂತಿ

**ಡಾ. ಮೈತ್ರಿ ಭಟ್,**
ಉಪನ್ಯಾಸಕಿ, ಕನ್ನಡ ವಿಭಾಗ,
ವಿವೇಕಾನಂದ ಕಾಲೇಜು,
ನೆಹರೂ ನಗರ, ಪುತ್ತೂರು – 574203, ದಕ್ಷಿಣಕನ್ನಡ, ಕರ್ನಾಟಕ
**ಮೊಬೈಲು ಸಂಖ್ಯೆ:** 9449793584
**ಮಿಂಚಂಚೆ:** bhatmaithri@gmail.com

‘ಗೈರ ಸಮಜೂತಿ’ ಒಂದು ಅಧುನಿಕ ಪುರಾಣ ಎಂದ ರಾಘವೇಂದ್ರ ಪಾಟೀಲರ ಕಾದಂಬರಿಯು ಪುರಾಣದ ಆವರಣವನ್ನು ತನ್ನೊಳಗೆ ಹೊಂದಿದ ಆಧುನಿಕ ಪುರಾಣವಾಗಿದೆ. ‘ತಾಯ ನೆತ್ತರವ ಹಂಚಿಕೊಂಡೆನ್ನ ಮೇಲೆ ವಾತ್ಸಲ್ಯದ ಮಳೆಗರೆದ ಅಕ್ಕಂದಿರಿಗಲ್ತೆ!’ ಎಂಬ ಬಾಗಿನವೇ ಮನಮುಟ್ಟುವಂತಿದೆ. ತನ್ನ ಮೇಲೆ ಪ್ರಭಾವ ಬೀರಿರಬಹುದು ಅಥವಾ ಬೀರಿದರು ಎನ್ನಲಾದ ಹೋಮರ, ಡಾಂಟೆ ಎಂದು ಆರನೋ ನೆನೆವ ಬದಲು ತನ್ನದೇ ನೆಲದ ಕರುಳ ಬಳ್ಳಿಯ ಕುಡಿಗಳಿಗೆ ನೀಡಿದ ಬಾಗಿನದ ಅನನ್ಯತೆಗೆ ಏನನ್ನಲಿ? ಮತ್ತೆ ಮುಂದುವರಿದು ತಾಯ್ನುಡಿಯ ತನಿವಾಲು ಕುಡಿದು ಆ ಮೂಲಕ ಕರುಳಬಳ್ಳಿಯ ಪ್ರೀತಿಯ ಜಾಲವನ್ನು ಜಗದಗಲಕ್ಕೂ ಹೆಣೆದ ಅಕ್ಕನಿಂದ ಮೊದಲ್ಗೊಂಡು ಹೆಸರುಳ್ಳ ಎಲ್ಲರೂ ಸಾಹಿತ್ಯಕಾರ್ತಿಯರೇ ಎನ್ನುತ್ತಾ ನೆನೆದ ನೆನೆಸಿದ ಪರಿ ವಿಶೇಷವೂ ವಿನೂತನವೂ ಆಗಿದೆ.

ಸಾಹಿತಿ ಇತರರಿಗಿಂತ ಏಕೆ ಭಿನ್ನ? ಆತನಲ್ಲಿರುವ ವಿಶೇಷತೆಗಳಾದರೂ ಏನು? ಯಾವ ಕಾರಣ ಆತನನ್ನು ಬರೆಯುವಂತೆ ಪ್ರೇರೇಪಿಸುತ್ತದೆ ಎಂಬ ಪ್ರಶ್ನೆಗಳಿಗೆ ಉತ್ತರವೆಂಬಂತೆ ಪಾಟೀಲರ ಆರಂಭದ ಸಾಲುಗಳು ಮನಸೆಳೆಯುತ್ತವೆ. ಸಾಹಿತ್ಯ ರಚನೆಯ ಅವಸ್ಥಾಂತರಗಳ ಬಗ್ಗೆ ದೃಷ್ಟಿ ಹಾಯಿಸುವ ಅವರು, ‘ಬದುಕಿನ ವಿಕ್ಷಿಪ್ತ ವಿಚಿತ್ರಗಳೇ’ ಈ ಕೃತಿ ಮೂಡಲು ಕಾರಣ ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಗುರುತಿಸುವಂತೆ ಒಳಗಿನ ಅದಾವುದೋ ಒತ್ತಡವನ್ನು ಮನಸ್ಸಿನಿಂದ ಹೊರಹಾಕುವ ಪ್ರಕ್ರಿಯೆಯೇ ಸಾಹಿತ್ಯದ ಹುಟ್ಟಿಗೆ ಕಾರಣ ಎನ್ನುವುದನ್ನು ಪಾಟೀಲರ – ಎನ್. ಪಿ. ಭಟ್ಟರ ಮಗನ ದುರಂತ ವಿಚಾರ ಹಾಗೂ “ಈ ಸ್ಮೃತಿ ನನ್ನ ಬಳಿಗೆ ನಿನ್ನ ಕಥನದಲ್ಲಿ ನನ್ನನ್ನು ದಾಖಲಿಸಿ ನನ್ನಿಂದ ಬಿಡುಗಡೆಯನ್ನು ಪಡೆದುಕೋ ಎಂದು ಹೇಳಿಕೊಳ್ಳುತ್ತ ಸುಷುಪ್ತಿಯಿಂದ ಜಾಗೃತಪ್ರಜ್ಞೆಗೆ ಬಂದಿತು..! ಕರುಳ ಕೊರೆಯುತ್ತಿದ್ದ ವಿಕ್ಷಿಪ್ತ ಸಂಗತಿಯದು..!” ಎಂಬುದು ಸಮರ್ಥಿಸುತ್ತದೆ.

ಹಾಗೆ ನೋಡಿದರೆ, ಕಾದಂಬರಿಯ ಶೀರ್ಷಿಕೆಯೇ ಬಹಳ ಅರ್ಥಪೂರ್ಣವಾದುದಾಗಿದೆ. ‘ಗೈರ ಸಮಜೂತಿ’ಎಂಬ ಪದದ ಅರ್ಥ ‘ತಪ್ಪುಕಲ್ಪನೆ’ ಅಥವಾ ‘ಭ್ರಾಂತಿ’. ಅಂದರೆ ಇರುವಂತೆ ನೋಡುವುದಕ್ಕೂ, ಕಾಣುವಂತೆ ನೋಡುವುದಕ್ಕೂ ಇರುವ ಅಂತರವನ್ನು ಸೂಚಿಸುತ್ತದೆ. ಬೆಟಗೇರಿ ಮತ್ತು ಐನಾಪುರ ಎಂಬ ಎರಡು ಗ್ರಾಮಗಳ ಎರಡು ಬ್ರಾಹ್ಮಣ ಕುಟುಂಬಗಳ ನಡುವೆ ನಡೆವ ಘಟನೆಗಳು, ಹಾಗೂ ಆ ಘಟನೆಗಳ ಪರಿಣಾಮ, ಆ ಮೂಲಕ ಉಂಟಾಗುವ ಸಾಮಾಜಿಕ ಹಾಗೂ ಸಾಂಸಾರಿಕ ವಿಘಟನೆಗಳನ್ನು, ಜೊತೆಗೆ ಮಾನಸಿಕ ತಳಮಳವನ್ನೂ ಕಾದಂಬರಿಯು ವಿಶ್ಲೇಷಿಸುತ್ತದೆ. ಆ ಕಾಲದ ರಾಜಕೀಯ ಕ್ರಿಯೆಗಳನ್ನೂ ಅವು ಬೀರಿದ ಪರಿಣಾಮದ ವಿವರವನ್ನೂ ಕಾದಂಬರಿಯು ಒಳಗೊಂಡಿದೆ. ಧರ್ಮ, ತತ್ತ್ವ, ಸಮಾಜ, ರಾಜಕೀಯ, ಹಾಗೂ ಕುಟುಂಬವಲಯಗಳಲ್ಲಿ ತುಂಬಿರುವ ‘ಗೈರ ಸಮಜೂತಿ’ಗಳ ವಿಚಾರಗಳು ಕಾದಂಬರಿಯಲ್ಲಿದೆ. ತನ್ನ ಗಂಡನಿಗೆ ಸದ್ಗತಿ ಸಿಗಬೇಕಾದರೆ ವಚ್ಚಕ್ಕ ಮೈನೆರೆಯುವ ಮುನ್ನ ಅವಳನ್ನು ಅಚ್ಯುತನಿಗೆ ಮದುವೆ ಮಾಡಿ ಕೊಡಬೇಕೆನ್ನುವ ಅಂಬಕ್ಕನ ಸಮಜೂತಿ, ಹೋಲಿಕೆಯ ಕಾರಣದಿಂದಾಗಿ ಕೃಷ್ಣಾಜಿ ಎಂದು ತಿಳಿದು ಅಚ್ಯುತನನ್ನು ಪೋಲೀಸರು ಗುಂಡಿಕ್ಕಿ ಕೊಲ್ಲುವುದು, ವಚ್ಚಕ್ಕನ ಜೀವನ ಬಲಿಯಾಗುವುದು, ಅಡುಗೆ ಮನೆಯ ಹಾಲು ಮಾಯವಾಗುವುದು, ಅರಿವಾಗದ ಸಂಬಂಧಗಳ ವಿವರಗಳು, ಸುಖ–ದುಃಖದ ಬಗೆಗೆ ಹೊಂದಿದ ತಿಳಿವಳಿಕೆಗಳು, ಗುರುವಿನ ಆದೇಶದಂತೆ ಜಬಾಲೆಯ ಉದ್ಧಾರ ಮಾಡಲು ಹೊರಟ ಕುಮಾರಿಲನಾಥನ ಬಗ್ಗೆ ಸಹೋದ್ಯೋಗಿಗಳ ಭಾವನೆ, ಹಿಂದೂ–ಮುಸ್ಲಿಂ ನಡುವೆ ವೈಮನಸ್ಯ ಹೀಗೆ ಸಮಜೂತಿಗಳ ವಿವರವೇ ಕಾದಂಬರಿಯುದ್ದಕ್ಕೂ ಹರಡಿದೆ.

ಪಾಟೀಲರ ಬದುಕಿನಲ್ಲಿ ಬಂದ ಕೃಷ್ಣಕ್ಕ, ರಾಧಾಬಾಯಿ, ಶಾಮಕ್ಕ, ಬಕುಲಾಬಾಯಿ ಕೇವಲ ಪಾತ್ರಗಳಾಗಿ ಮೂಡಿ ಬಂದಿಲ್ಲ ಎನ್ನುವುದು ಅವರೇ ಹೇಳಿಕೊಂಡಂತೆ ನಿಜವಾದರೂ, ಅವರೆಲ್ಲ ಕಲ್ಪನೆ ಮತ್ತು ಕಾದಂಬರಿಗೆ ಪ್ರೇರಕರೂ ಆಗಿದ್ದಾರೆ. ಬ್ರಾಹ್ಮಣ ಸಂಸ್ಕಾರದಲ್ಲಿ ವಿಧವೆಯಾಗಿ ಮಡಿ ಆಗುವುದೆಂದರೆ ಬರೀ ತಲೆ ಬೋಳಿಸಿಕೊಂಡು ಕೆಂಪುಸೀರೆ ಉಟ್ಟುಕೊಳ್ಳುವುದು ಮಾತ್ರವಲ್ಲ. ತನ್ನದಲ್ಲದ ತಪ್ಪಿಗೆ ಜೀವನವಿಡೀ ಮನಸ್ಸನ್ನೂ ದಂಡಿಸಿ ಬಾಳುವ ಕ್ರಿಯೆ. ಇಲ್ಲಿ ಹೆಣ್ಣಿನ ಇಚ್ಛೆ ಅಥವಾ ಸಮಾಜದ ಒತ್ತಾಯ ಯಾವುದು ಪ್ರಮುಖವಾಗಿತ್ತು ಎನ್ನುವುದನ್ನು ವಿಶ್ಲೇಷಿಸುವುದೂ ಕಷ್ಟವೇ. ಏನೂ ಅರಿಯದ ವಯಸ್ಸಿನಲ್ಲಿ ಮಡಿ ಆದಂತಹ ಹೆಣ್ಣಿಗೆ ಯಾವುದರ ಅರಿವೂ ಇರಲಾರದು.

ಇಲ್ಲಿನ ಘಟನೆಗಳು ಕೇವಲ ವಾಸ್ತವ ಲೋಕದ ಪ್ರತಿಫಲನ ಮಾತ್ರವಾಗದೆ, ಕಥನಕ್ಕಾಗಿ ಘಟನೆಗಳ ಹೆಣಿಗೆಯೂ ಆಗದೆ, ಲೋಕದ ಅನುಭವ ಪ್ರಪಂಚವನ್ನು ಕಣ್ಣ ಮುಂದಿಡುವ ಪರಿ ಅನನ್ಯವಾಗಿದೆ. ಕಥೆಯ ಮೂಲಕ ಬದುಕನ್ನೂ, ಬದುಕಿನ ವಿವರಗಳನ್ನೂ ಅರಿಯುವ ಪರಿ ಇಲ್ಲಿದೆ. ಮನುಷ್ಯನ ಅರಿವಿಗೊಂದು ಮಿತಿ ಇದೆ. ಆ ಮಿತಿ ಕೆಲವೊಮ್ಮೆ ‘ಗೈರ ಸಮಜೂತಿ’ಗಳಿಗೆ ಕಾರಣವಾಗುತ್ತದೆ ಎಂಬುದನ್ನು ಕಾದಂಬರಿಯು ವಿಷದಪಡಿಸುತ್ತದೆ.

ಕಾದಂಬರಿಯ ಹೊದಿಕೆಯಲ್ಲಿ ಸ್ವಾತಂತ್ರ್ಯ ಹೋರಾಟವೂ, ಆದರ್ಶದ ವಿಚಾರಗಳೂ ಸೇರಿಕೊಂಡಿರುವುದರೊಂದಿಗೆ ಬೆಳಗಾವಿಯ ಪ್ರಾದೇಶಿಕ ಭಾಷಾ ಬಳಕೆಯ ಮೂಲಕ ಕಾದಂಬರಿಯು ಅನನ್ಯತೆಯನ್ನೂ ಕಾಯ್ದುಕೊಂಡಿದೆ.

ತಾಯಿ ಮತ್ತು ಮಗುವಿನ ಉಳಿವಿಗಾಗಿ ಮೈದುನ ಮಾಧವ ಗೌಡ ತಡೆದರೂ ಮುಸ್ಲಿಂ ಮನೆಗೆ ಹೋಗಿ ಹೆರಿಗೆ ಮಾಡಿಸಲು ಮುಂದಾಗುವ ವಚ್ಚಕ್ಕನು ವಚ್ಚಕ್ಕ ಗೌಡತಿಯಾಗಿ ಬೆಳೆಯುವ ಪರಿ ಭಾರತೀಯ ಸನಾತನ ಸಂಸ್ಕೃತಿಯ ಸತ್ತ್ವ ಮತ್ತು ಆಧುನಿಕ ತಲೆಮಾರಿನ ಉಳಿವನ್ನೂ ಸೂಚಿಸುವುದರೊಂದಿಗೆ, ಹೆಣ್ಣಿನ ಅಂತರಂಗವನ್ನು ಅರಿಯುವಲ್ಲಿ, ಅರಿತು ಮುನ್ನಡೆಯುವಲ್ಲಿ ಹೆಣ್ಣು ಎಲ್ಲಾ ತಡೆಗಳನ್ನೂ ಮೀರಿ ನಿಲ್ಲುವ ರೀತಿಯನ್ನು ಸೂಚಿಸುತ್ತದೆ. ಪೋಲೀಸರ ಗೈರ ಸಮಜೂತಿಯಿಂದಾಗಿ ಅಚ್ಯುತ ಪುಣೆಯ ರೈಲು ನಿಲ್ದಾಣದಲ್ಲಿ ಗುಂಡೇಟಿಗೆ ಬಲಿಯಾದಾಗ ಆ ಗೈರ ಸಮಜೂತಿಯ ಶೂಲಕ್ಕೆ ಬಲಿಯಾಗುವುದು ವಚ್ಚಕ್ಕನ ಬಾಳು. ಹೀಗೆ ತನ್ನ ವೈಯಕ್ತಿಕ ಬದುಕು ಬಲಿಯಾದರೂ ಸಾಮಾಜಿಕವಾಗಿ ತನ್ನ ಬದುಕಿನ ಅಸ್ತಿತ್ವವನ್ನು ಕಂಡುಕೊಂಡವಳು ವಚ್ಚಕ್ಕ. ಬಾಲ ವಿಧವೆಯಾದ ವತ್ಸಲಾ ಬದುಕನ್ನು ಸವಾಲಾಗಿ ಎದುರಿಸಿ ನಡೆವ ದಿಟ್ಟತನ, ವ್ಯಕ್ತಿತ್ವ ವಿಕಸನವಾಗಿ ಪರಿಪಕ್ವತೆಯತ್ತ ಸಾಗುವ ರೀತಿ, ಅವಳಿಗೆ ಸಹಕರಿಸುವ ಸತ್ಯಬೋಧರ ಪಾತ್ರ ಮನಮುಟ್ಟುವಂತಿದೆ. ಆಕಾಂಕ್ಷೆಗಳಿಂದ ಹೊರಬಂದು ನಿರ್ಲಿಪ್ತವಾಗಿ ಬದುಕನ್ನು ಬಂದಂತೆ ಸ್ವೀಕರಿಸಿದಾಗ ಸಿಗುವ ಮಾನಸಿಕ ನೆಮ್ಮದಿಯನ್ನು ವಚ್ಚಕ್ಕನಲ್ಲಿ ಕಾಣಬಹುದು. ಹೀಗೆ ಇಂದ್ರಿಯ ಬಯಕೆಗಳನ್ನು ಮೀರಿ ದೇಹವನ್ನು ಪ್ರೀತಿಸುವುದು ಸಾಧ್ಯವಿದೆ ಎಂಬುದನ್ನು ಕಾದಂಬರಿಯು ಸಾರುತ್ತದೆ. ಬಾಳಿನ ಮಾಗುವಿಕೆಯೇ ಕಾದಂಬರಿಯ ಮೂಲವೂ ಆಗಿದೆ. ಪೌರಾಣಿಕ, ಸಾಮಾಜಿಕ, ರಾಜಕೀಯ ಹಾಗೂ ತಾತ್ತ್ವಿಕ ಆಯಾಮಗಳನ್ನೊಳಗೊಂಡಿರುವ ಕಾದಂಬರಿಯು ಮದುವೆ, ಸಂಸಾರ, ಮಕ್ಕಳು ಅದರಾಚೆಗೂ ಒಂದು ಬದುಕಿದೆ ಎಂಬುದನ್ನು ವಚ್ಚಕ್ಕನ ಮೂಲಕ ಸಾರುತ್ತದೆ. ಅವಳ ಜೀವ-ಜೀವನ ಪ್ರೀತಿ, ಸ್ತ್ರೀ ಕುಟುಂಬದಾಚೆಗೂ ಸಮಾಜಮುಖಿಯಾಗಿ ವಿಕಸನ ಹೊಂದುವುದನ್ನೂ, ಹೊಂದಬೇಕಾಗಿರುವುದನ್ನೂ ಸೂಚಿಸುತ್ತದೆ.

ಬ್ರಾಹ್ಮಣ ಸಮುದಾಯದ ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಮಾನಸಿಕ ತಲ್ಲಣಗಳು, ಸಂಕಟಗಳು, ರೀತಿ-ನೀತಿಗಳು, ಆ ಸಮುದಾಯ ಸಾಗಿ ಬಂದ ಹಾದಿಯನ್ನು ಕಾದಂಬರಿಯು ಚಿತ್ರಿಸುವ ಮೂಲಕ ಒಂದು ಸಮುದಾಯದ ವಿಧವಾ ಸಮಸ್ಯೆ ಹೇಗಿತ್ತು ಅನ್ನುವುದನ್ನು ಇಂದಿನ ಜನಾಂಗಕ್ಕೆ ಕಾದಂಬರಿಯು ಮುಟ್ಟಿಸುತ್ತದೆ. ಆ ಮೂಲಕ ಬಂಗಾರದ ಕರಡಿಗೆಯೊಳಗೆ ಮುಚ್ಚಿದ ಸತ್ಯದ ಮುಚ್ಚಳ ತೆಗೆದು ತೋರುವ ಯತ್ನವಿದೆ.

ಕಾದಂಬರಿಯ ಕೊನೆಯಲ್ಲಿ ನಿಸರ್ಗವನ್ನು ಜೊತೆಯಾಗಿ ಎರಡು ಪಾರಿವಾಳಗಳನ್ನು ಹೆಗಲ ಮೇಲೆ ಕೂರಿಸಿಕೊಂಡು ಶುಭ್ರ ಬಿಳಿ ಸೀರೆಯನ್ನುಟ್ಟು ಸಾಗುವ ವಚ್ಚಕ್ಕ ಶಾಂತಿ, ಸೌಹಾರ್ದತೆ ಹಾಗೂ ಕಲ್ಮಶರಹಿತ ಮನಸ್ಸಿಗೆ ಸಂಕೇತವಾಗುತ್ತಾಳೆ. ಇಲ್ಲಿ ವಚ್ಚಕ್ಕನು ಎರಡು ಜೀವದ ಉಳಿವಿಗಾಗಿ ಹೊರಟ ಸಂಕೇತವಾಗಿ ಎರಡು ಪಾರಿವಾಳಗಳು ಹೆಗಲೇರಿವೆಯೆನಿಸುತ್ತದೆ. ಆ ಎರಡು ಜೀವಗಳು ಅಂದರೆ ತಾಯಿ ಮತ್ತು ಮಗುವಿನ ಜವಾಬ್ದಾರಿ ತನ್ನದೆಂಬುದನ್ನು ಸಂಕೇತಿಸುವಂತಿದೆ.

ವಚ್ಚು-ಅಚ್ಯುತನ ಮದುವೆಯ ಸಂದರ್ಭದಲ್ಲಿ ಬಳಕೆಯಾಗಿರುವ ಆರತಿ ಹಾಡು, ಹಸೆಗೆ ಕರೆಯುವ ಹಾಡು ಹಾಗೂ ಹೆಣ್ಣು ಒಪ್ಪಿಸುವ ಹಾಡುಗಳು ಆಧುನಿಕತೆಯ ಭರಾಟೆಯಲ್ಲಿ ಮರೆತುಹೋದ ಸಂಪ್ರದಾಯದ ಹಾಡುಗಳನ್ನು ಮತ್ತೆ ನೆನಪಿಸುತ್ತವೆ. ನಮ್ಮ ಸಂಸ್ಕೃತಿ ಸಂಪ್ರದಾಯದ ಕೊಂಡಿಯ ಜೀವಂತಿಕೆಯನ್ನು ಉಳಿಸುವಲ್ಲಿ ಕಾದಂಬರಿಕಾರರ ಈ ಪ್ರಯತ್ನ ಶ್ಲಾಘನೀಯ.

ಹೆಣ್ಣಿನ ಬದುಕಿನಲ್ಲಿ ಗೃಹಿಣಿ ಧರ್ಮ ಅಂದರೇನು ಎಂಬುದನ್ನು ಅಂಬಕ್ಕ ಮತ್ತು ಕೃಷ್ಣಾಬಾಯಿ ವಚ್ಚಕ್ಕನಿಗೆ ಉಪದೇಶಿಸಿದರೆ, ಅಚ್ಯುತನ ಮರಣಾನಂತರ ಅವಳಿಗೆ ವಿಧವಾ ಧರ್ಮವನ್ನು ಅಂಬಕ್ಕ ಬೋಧಿಸುವುದು ಹೆಣ್ಣಿಗೆ ಇದ್ದಂತಹ ಕಟ್ಟಳೆಗಳು ಏನು ಎಂಬುದನ್ನು ತಿಳಿಸಿದರೆ, ವಚ್ಚಕ್ಕ ಕಾಣುವ ಕನಸುಗಳು –ಅಚ್ಯುತ ಬಂದಂತೆ, ಚಂದ್ರನ ವಿಘಟನೆ, ಗಾಂಧಿ-ಕಾಳಿಂಗ ಸರ್ಪ- ಇವೆಲ್ಲವೂ ಅವಳ ಬದುಕಿನ ಘಟನೆಗಳಿಗೆ ಪೂರಕವಾಗಿ ಮನಸ್ಸಿನ ವಿಪ್ಲವವನ್ನು ಸೂಚಿಸುವ ರೀತಿಯಲ್ಲಿಯೇ ಹೆಣಿಗೆಯಾಗಿವೆ.

ಯಾವುದೋ ಒಂದು ನೋವು ಬದುಕಿನಲ್ಲಿ ಧುಃತ್ತನೆ ಎದುರಾದಾಗ ಅದು ಬೀರುವ ಪರಿಣಾಮವನ್ನು ರಾಘಪ್ಪನ ವರ್ತನೆಯಲ್ಲಿ ಕಾಣಬಹುದು. ಅದುವರೆಗೂ ಹಸಿವು ಹಸಿವು ಎಂದು ಮೆಣಸಿನ ಪುಡಿಯನ್ನಾದರೂ ತಿನ್ನುತ್ತಿದ್ದ ರಾಘಪ್ಪ ಊಟದ ಬಗೆಗೆ ಹಾಗೂ ವಸ್ತ್ರದ ಬಗೆಗೂ ನಿರ್ಲಕ್ಷ್ಯವನ್ನು ತಾಳುತ್ತಾರೆ. ರಾಘಪ್ಪನ ಈ ಬದಲಾವಣೆ ಅತಿಯಾದ ದುಃಖದ ಪರಿಣಾಮವನ್ನು ಅಂದರೆ ವ್ಯಕ್ತಿ ಮಿತಿಮೀರಿದ ಶೋಕಕ್ಕೆ ಒಳಗಾದಾಗ ಪ್ರಾಪಂಚಿಕ ಬದುಕಿನ ವ್ಯಾಮೋಹವನ್ನು ಕಳೆದುಕೊಳ್ಳುವುದನ್ನು ಇದು ಸೂಚಿಸುತ್ತದೆ.

ಚಿಕ್ಕಪ್ಪ ಸತ್ಯಬೋಧ ಆಚಾರ್ಯರು ವಚ್ಚಕ್ಕನಿಗೆ ಅಕ್ಷರ ಕಲಿಸುವ ಮೂಲಕ ಭಾರತೀಯ ಆಧ್ಯಾತ್ಮಿಕತೆಯ ಶಿಕ್ಷಣ ನೀಡುವುದರೊಂದಿಗೆ ಹೆಣ್ಣಿನ ಶಿಕ್ಷಣದ ಬಗ್ಗೆ ಗಮನವನ್ನು ಸೆಳೆಯುತ್ತಾರೆ. ಆ ಮೂಲಕ ಬದಲಾವಣೆಗಳಾಗಬೇಕಿರುವುದರ ಬಗ್ಗೆ ಹಾಗೂ ಬದಲಾಗಬೇಕಿರುವುದರ ಬಗೆಗೂ ಒಂದು ಒಳನೋಟವನ್ನು ನೀಡುತ್ತಾರೆ. ವಚ್ಚಕ್ಕ ದೇಹವನ್ನು ಪ್ರೀತಿಸಿಯೂ ಇಂದ್ರಿಯಗಳನ್ನು ಜಯಿಸುವುದರಲ್ಲಿ ಕುಮಾರಿಲನಾಥರು ಹಾಗೂ ಸಮಾಜಮುಖಿಯಾಗಿ ಬದಲಾಗುವುದರಲ್ಲಿ ಅಜ್ಜಿ ರಾಧಾಬಾಯಿಯ ಪ್ರಭಾವವಿದೆ.

ಮನುಷ್ಯತ್ವ ಅನ್ನೋದು ಜಾತಿಯೊಳಗೆ ಇರುವುದಿಲ್ಲ ಅಂತಃಕರಣದೊಳಗೆ ಇರುತ್ತದೆ ಅನ್ನುವುದನ್ನು ಹೆಣ್ಣುಮಗಳ ಮೂಲಕ ವಿಶ್ಲೇಷಿಸುವ ಕಾದಂಬರಿಯು ಸ್ವಾತಂತ್ರ್ಯಪೂರ್ವ ಸಂದರ್ಭ ಭಾರತದ ಬ್ರಾಹ್ಮಣ ಸಮುದಾಯದ ವಿಧವೆಯರ ಸ್ಥಿತಿಗತಿ, ಅವರ ಉದ್ಧಾರಕ್ಕಾಗಿ ನಡೆದ ಪ್ರಯತ್ನಗಳು, ಸ್ವಾತಂತ್ರ್ಯ ಹೋರಾಟದ ವಿವರಗಳನ್ನು ಒಳಗೊಂಡಿದೆ. ಬದಲಾವಣೆ ಎಂಬುದು ಅಂತಃಕರಣದಿಂದಾಗಬೇಕು; ಯಾವ ಜೀವವೂ ಶಾಶ್ವತ ಅಲ್ಲ; ದೇಹ-ಮನಸ್ಸುಗಳ ಆಘಾತಗಳಿಂದ ತಳಮಳಕ್ಕೆ ಒಳಗಾಗದೆ ಧೀರತೆಯಿಂದ ಎದುರಿಸಬೇಕು ಎಂಬುದರತ್ತ ಕಾದಂಬರಿಯು ಗಮನವನ್ನು ಸೆಳೆಯುತ್ತದೆ.

**********

Volume XX : July to December – 2022, ISSN 2250-1711
Journal of Veda Samskrita Academy [Recognised in the UGC-CARE List]

# ಜಿ. ವಿ. ಅಯ್ಯರ್ ಕಂಡ ಶಂಕರಾಚಾರ್ಯ
# (ಸಂಸ್ಕೃತ ಬೆಳ್ಳಿ ತೆರೆಯಲ್ಲಿ ಒಂದು ವಿನೂತನ ಪ್ರಯೋಗ)

**ಕೊಟ್ರೇಶ್ ಬಿ. ಎ., ಬೆಂಗಳೂರು, ಕರ್ನಾಟಕ**

ಅಯ್ಯರ್ ಅವರದು ಬಹು ಅಪೂರ್ವವಾದ ವ್ಯಕ್ತಿತ್ವ. ರಂಗ ಮಂಟಪದಿಂದ ಸಿನಿಮಾ ಪ್ರಪಂಚಕ್ಕೆ ದಾಳಿಯಿಟ್ಟು ಅಲ್ಲಿ ಅಪೂರ್ವವಾದ ಸಾಧನೆ ಮಾಡಿದ ಅವರ ಬಹುಮುಖದ ಪ್ರತಿಭೆಯನ್ನು ಅನೇಕರು ಅನೇಕ ವಿಧವಾಗಿ ಲೇಖನಗಳಲ್ಲಿ ದಾಖಲಿಸಿದ್ದಾರೆ. ಅವರ ಮಹತ್ವಾಕಾಂಕ್ಷೆಗಳಲ್ಲಿ ಶಂಕರರ ಬಗ್ಗೆ ಒಂದು ಚಿತ್ರವನ್ನೇ ಸಂಸ್ಕೃತದಲ್ಲಿ ಸಿದ್ಧಪಡಿಸಬೇಕೆಂಬುದು ಮುಖ್ಯವಾದದ್ದು, ಸಂಸ್ಕೃತದಲ್ಲಿ ಅದು ಸಿದ್ಧವಾದದ್ದು ಅದು ನಮಗೆ ಕನ್ನಡದಲ್ಲಿ ಸಿದ್ಧವಾದಂತೆಯೇ ಜನಪ್ರಿಯವಾಯಿತು. ನಟರಾಗಿ, ನಿರ್ದೇಶಕರಾಗಿ, ನಿರ್ಮಾಪಕರಾಗಿ ಅವರು ಗಳಿಸಿದ ಕೀರ್ತಿ ಅಪಾರವಾದುದು. ಅದ್ವೈತ ತತ್ವದ ಪ್ರಚಾರಕರಾಗಿ ಶಂಕರರು ಮಾಡಿದ ಸಾಹಸ ಕಾರ್ಯವನ್ನು ಒಂದು ಸಿನಿಮಾದಲ್ಲಿ ಹಿಡಿದಿಡಲು ಸಾಧ್ಯವೇ ಎಂದು ಜನರು, ತಿಳಿದವರು, ಚರ್ಚೆ ಮಾಡುತ್ತಿದ್ದಾಗಲೇ ಅದನ್ನು ಸಾಧಿಸಿ ಆಶ್ಚರ್ಯವನ್ನುಂಟುಮಾಡಿದ ದೊಡ್ಡ ವ್ಯಕ್ತಿ ಅಯ್ಯರ್ ಅವರು. ಈ ಚಲನಚಿತ್ರದ ಮೊದಲ ದೃಶ್ಯದಲ್ಲಿ ಪೂರ್ಣಾನದಿಯ ಸ್ನಾನ ಘಟ್ಟವೊಂದರಲ್ಲಿ ಸೂರ್ಯೋದಯದ ಸಮಯದಲ್ಲಿ ಬ್ರಾಹ್ಮಣ ಸಮುದಾಯವು ಸೂರ್ಯನಿಗೆ ಅರ್ಘ್ಯವನ್ನು ಸಮರ್ಪಿಸಿ ಗಾಯತ್ರೀ ಮಂತ್ರವನ್ನು ಘೋಷಿಸುತ್ತಿರುವ ಸನ್ನಿವೇಶವಿದೆ. ಮತ್ತೊಂದು ಕಡೆ ಜೈನರೂ, ಸಾಂಖ್ಯರೂ, ಶಾಕ್ತೇಯರೂ, ಕಾಪಾಲಿಕರೂ, ಪ್ರಾತಃಕಾರ್ಯದಲ್ಲಿ ನಿರತರಾಗಿದ್ದಾರೆ. ಕರ್ಮನಿಷ್ಠರಾದ ಬ್ರಾಹ್ಮಣ ವರ್ಗದವರ ಬಳಿ ಶಿಶು ಶಂಕರನು ಅಂಬೆಗಾಲು ಕೃಷ್ಣ, ಯಮ ಮತ್ತು ಮಾರ್ಕಂಡೇಯರ ಬೊಂಬೆಗಳನ್ನು ಹಿಡಿದುಕೊಂಡು ಆಟವಾಡುತ್ತಿದ್ದಾನೆ . ಬ್ರಾಹ್ಮಣರು ಸೂರ್ಯನನ್ನು ಕುರಿತ ಋಕ್ಕುಗಳನ್ನು ಘೋಷಿಸುತ್ತಿದ್ದಾರೆ. ಆದರೆ ಇತರರ ಘೋಷಣೆಗಳು ಬ್ರಾಹ್ಮಣರ ಘೋಷಣೆಗಳನ್ನು ಮುಂದೆ ಶಿವಗುರು ಶಂಕರನಿಗೆ ಉಪನಯನವನ್ನು ಮಾಡುವಂತೆ ನಟನೆಮಾಡಿ ಗಾಯತ್ರೀ ಮಂತ್ರವನ್ನು ಉಪದೇಶಿಸುವ ಚಿತ್ರವಿದೆ. ಶಂಕರನನ್ನು ಹತ್ತಿರಕ್ಕೆ ಕರೆದ ಶಿವಗುರು ಮಗುವಿಗೆ ಹೇಳುತ್ತಾನೆ ನಾನಿನ್ನು ಹೋಗುತ್ತೇನಪ್ಪಾ 'ಮಗು ಕೇಳುತ್ತದೆ ಯಾಕೆ? ಸಂವಾದ ಮುಂದುವರಿಯುತ್ತದೆ. (ಈ ಸಮಯದಲ್ಲಿ ಕಪ್ಪು ಬಣ್ಣದ ಬಾಲಕನೊಬ್ಬನು ಶಿವಗುರುವಿನ ಕಾಲಿನಿಂದ ಅವರ ಶರೀರವನ್ನು ಪ್ರವೇಶಿಸಿ ಹೊರಬರುತ್ತಾನೆ. ಅವನು ಶಂಕರನ ಬಳಿ ಬಂದು, "ನಿಮ್ಮ ತಂದೆ ಹೇಳಲಿಲ್ಲವೇ ಮೃತ್ಯು ಬಂದರೆ ಅಳಕೂಡದು, ಅವನು ಮಿತ್ರನಂತೆ – ಎನ್ನಲಿಲ್ಲವೇ , ನಾನೇ ಆ ಮೃತ್ಯು". ಆರ್ಯಾಂಬೆಗೆ ಶಿವಗುರುವಿನ ಮರಣವು ತಿಳಿಯ ಬರುತ್ತದೆ. ಬಳಿಕ ಶಿವಗುರುವಿನ ಶವಸಂಸ್ಕಾರ, ಮೃತ್ಯು ಶಂಕರನಿಗೆ ಮುಂದುವರಿಯುವಂತೆ ಸೂಚಿಸುತ್ತಾನೆ).

ಶಂಕರನು ಸಂನ್ಯಾಸಿಯಾಗುವ ಸನ್ನಿವೇಶವನ್ನು ಅಯ್ಯರ್ ಅವರು ತುಂಬ ಪ್ರಭಾವಶಾಲಿಯಾಗಿ ನಿರ್ಮಿಸಿದ್ದಾರೆ. ಬೆಳಗಾದರೆ ಇನ್ನೂ ಏಳದೇ ಇದ್ದ ಶಂಕರನಿಗೆ ಏಳುವಂತೆ ಹೇಳಿ ತಾಯಿ ಆರ್ಯಾಂಬ ತುಳಸಿಯ ಗಿಡಕ್ಕೆ ನೀರೆರೆಯಲು ಹೋಗುತ್ತಾಳೆ. ಶಂಕರನಿಗೆ ಎಚ್ಚರವಾಗಿ ಅವನು ಒಂದು ಧೋತಿಯನ್ನು ಎಳೆದುಕೊಂಡು ಸ್ನಾನಕ್ಕೆಂದು ಓಡುತ್ತಾನೆ. ನದಿಯ ಸೋಪಾನವನ್ನು ಇಳಿಯುತ್ತಿರುವಾಗ ಅಲ್ಲಿದ್ದ ಮೃತ್ಯುವು ನಿನ್ನ ನಿರೀಕ್ಷೆಯಲ್ಲಿದೆ ಎನ್ನುತ್ತಾನೆ. ಜ್ಞಾನವನ್ನು ಅವನೆಲ್ಲೋ ಎಂದು ಶಂಕರ ಕೇಳಿದಾಗ ಅವನು ಒಂದು ಕಡೆಗೆ ಕೈಮಾಡಿ ತೋರಿಸುತ್ತಾನೆ. ಅಲ್ಲಿ ಒಬ್ಬ ಸಂನ್ಯಾಸಿ ಧ್ಯಾನದಲ್ಲಿರುವುದು ಕಂಡು ಬರುತ್ತದೆ. ಜ್ಞಾನ ಕೂಡ ಅಲ್ಲಿಯೇ ಧ್ಯಾನದಲ್ಲಿದ್ದಾನೆ. ಶಂಕರನು ತನ್ನ ಬಟ್ಟೆಯನ್ನು ಒಣಗಲು ಹರಡಿ ತಾನುಟ್ಟಿದ್ದ ಬಟ್ಟೆಯನ್ನು ಬಿಚ್ಚಿ ಒಗೆಯಲು ಮುಂಚೆ ನೀರಿನಲ್ಲಿ ಜಾಲಾಡುತ್ತಾನೆ. ಆ ಬಟ್ಟೆ, ಹರಿಯುವ ನೀರಿನಲ್ಲಿ ಮುಂದೆ ಹೋಗಿ ಬಿಡುತ್ತದೆ. ಅವನ್ನು ತರಲು ಶಂಕರನು ನೀರಿಗೆ ಧುಮುಕುತ್ತಾನೆ. ಮೃತ್ಯು ಕೂಗಿ ಹೇಳುತ್ತಾನೆ, ಶಂಕರಾ ಮುಂದೆ ಹೋಗಬೇಡ. ಅಲ್ಲಿ ಸುಳಿಯಿದೆ. ಮೊಸಳೆಗಳಿವೆ. ಶಂಕರನು ನೀರಿನಲ್ಲಿ ಮುಳುಗಿ ಬಿಡುತ್ತಾನೆ. ಮೃತ್ಯು ನಗುತ್ತಾನೆ. ಜ್ಞಾನನು ಇಷ್ಟು ಹೊತ್ತಿಗೆ ಆರ್ಯಾಂಬೆಯ ಬಳಿಗೆ ಓಡಿ ಹೋಗಿ ಅವಳನ್ನು ಕರೆತರುತ್ತಾನೆ. ಅಯ್ಯೋ, ಸಂನ್ಯಾಸಿಯಾಗುತ್ತೇನೆ ಎಂದು ಹೇಳುತ್ತಲೇ ಇದ್ದ. ಸದ್ಯ ಬದುಕಿ ಬಂದರೆ ನೂರು ವರ್ಷ ಸಂನ್ಯಾಸಿಯಾಗಿಯೇ ಇರಲಿ ಎನ್ನುತ್ತಾಳೆ. ಅಷ್ಟು ಹೊತ್ತಿಗೆ ಮುಳುಗುತ್ತಿದ್ದ ಶಂಕರನನ್ನು ನೋಡುತ್ತಿದ್ದ ಮೃತ್ಯುವು ನೀರಿಗೆ ಧುಮುಕಿ ಶಂಕರನನ್ನು ಹಿಡಿದು ಎಳೆದು ನದೀತೀರಕ್ಕೆ ತರುತ್ತಾನೆ. ಅವನು ಆರ್ಯಾಂಬೆಗೆ ಹೇಳುತ್ತಾನೆ,; ಅಮ್ಮಾ, ಶಂಕರನನ್ನು ಮೊಸಳೆಯ ಬಾಯಿಂದ ಉಳಿಸಿ ತಂದಿದ್ದೇನೆ ಮೂರು ಜನ ಬಾಲಕರೂ ಆರ್ರ್ಯಾಂಬೆಯೊಡನೆ ಮನೆಗೆ ಬರುತ್ತಾರೆ . ಮನೆಯ ಹೊರಗಡೆ ತಮ್ಮಟೆಯ ಶಬ್ದ ಒಬ್ಬನು ಗಟ್ಟಿಯಾಗಿ ಎಲ್ಲರಿಗೂ ಕೇಳುವಂತೆ ಘೋಷಿಸುತ್ತಾನೆ, ಈ ದಿನ ರಾತ್ರಿ ಕೃಷ್ಣದೇವಾಲಯದ ಪ್ರಾಂಗಣದಲ್ಲಿ ನಚಿಕೇತ ಸುಮೋಕ್ಷ ಎಂಬ ನರ್ತನ ಕಥೆಯಿದೆ. ಎಲ್ಲರೂ ಬನ್ನಿ. ಎಲ್ಲರೂ ಆ ರಾತ್ರಿ ಆ ಕಥೆಗೆ ನೋಡಲು ಹೋಗುತ್ತಾರೆ. ನಚಿಕೇತನ ಕಥೆಯನ್ನು ನೃತ್ಯನಾಟಕದಂತೆ ಚಿತ್ರಿಸಲಾಗಿದೆ. ಈ ಕಥೆ ಬಹು ಪ್ರಸಿದ್ಧವಾದದ್ದು ವಾಜಶ್ರವಸನು ನಚಿಕೇತನನ್ನು ಯಮನಿಗೆ ದಾನ ಮಾಡಿದ್ದು, ನಚಿಕೇತನು ಯಮನ ಬಳಿಗೆ ಸಾರಿ ಅವನಿಗಾಗಿ ಕಾದು ಅವನಿಂದ ಮೂರು ವರಗಳನ್ನು ಪಡೆದು ಕೊನೆಗೆ ಆತ್ಮತತ್ವವನ್ನು ಪಡೆದದ್ದು, ಈ ಕಥೆಯ ನೃತ್ಯ ನಾಟಕವನ್ನು ನೋಡಿ ಮೂವರು ಮನೆಗೆ ಹಿಂದಿರುಗುತ್ತಾರೆ. ನಾಟಕದಿಂದ ಶಂಕರನ ಮನಸ್ಸು ಕದಡಿ ಹೋಗಿದೆ. ನಚಿಕೇತನ ನಿರ್ಧಾರವು ಪ್ರಚಂಡ ಪರಿಣಾಮವನ್ನುಂಟುಮಾಡಿದೆ. ಹಿಮಾಲಯಕ್ಕೆ ಹೋಗಲು ನಿರ್ಧರಿಸಿದ ಶಂಕರನಿಗೆ ಕಂಡ ಹಿಮಾಲಯವೂ ಗಂಗಾ ನದಿಯೂ ಬಹು

ವೈಭವಯುಕ್ತವಾಗಿ ಕಾಣುವಂತೆ ಮಾಡಬೇಕೆಂದು ಅಯ್ಯರ್ ಅವರ ಇಷ್ಟ. ಅದಕ್ಕಾಗಿ ಅವರು ಕುಲೂ ಕಣಿವೆಯ ಚಿತ್ರವನ್ನೇ ಆರಿಸಿ ಕೊಂಡಿದ್ದಾರೆ. ದೈತ್ಯ ಪರ್ವತಗಳು, ಪವಿತ್ರನದಿಗಳು, ಸುಂದರಕಾನನ ಪ್ರಾಂತ. ಒಟ್ಟು ರಮ್ಯವಾದ ವಾತಾವರಣ. ನದಿತೀರದಲ್ಲಿ ಜೈನರು, ಬೌದ್ಧರು ಮುಂತಾಗಿ ತಮ್ಮ ತಮ್ಮ ಮತದ ಸಿದ್ಧಾಂತಗಳನ್ನು ಉಚ್ಚರಿಸುತ್ತಿರುವ ಕೋಲಾಹಲ. ಒಂದು ಕಡೆ ವೇದಘೋಷದ ಮೊದಲಾದ ಉಚ್ಚಾರಣೆ. ಇಂಥ ಆವರಣದಲ್ಲಿ ಶಂಕರನ ಸಹಪಾಠಿಯಾಗಿದ್ದ ವಿಷ್ಣು ಎಂಬ ಯುವಕನು ಎದುರಿಗೆ ನಿಂತು ಆಶ್ಚರ್ಯ-ವನ್ನು ವ್ಯಕ್ತಪಡಿಸುತ್ತಾನೆ. ಶಂಕರನು ತನ್ನ ತಾಯಿಯ ಅಪ್ಪಣೆ ಪಡೆದು ಸಂನ್ಯಾಸಿಯಾಗಿರುವುದಾಗಿ ವಿಷ್ಣುವಿಗೆ ತಿಳಿಸುತ್ತಾನೆ ಶಂಕರನು ತಪಸ್ಸಿಗೆ ನಿಲ್ಲುತ್ತಾನೇನೋ ಎಂಬ ಅನುಮಾನ ವಿಷ್ಣುವಿಗೆ ಶಂಕರನು ಹೇಳುತ್ತಾನೆ, ನಿಷ್ಕಾಮ ಕರ್ಮವೂ ತಪಸ್ಸೇ ಅಲ್ಲವೆ? ಆಗ ವಿಷ್ಣುವು, ಸರಿ ಹಾಗಾದರೆ, ನಾನೂ ನಿನ್ನೊಡನೆ ಬರುತ್ತೇನೆ ಎಂದು ಅವನನ್ನು ಅನುಸರಿಸುತ್ತಾನೆ. ಶಂಕರ, ವಿಷ್ಣು ಇವರ ಸುತ್ತಾಟದ ಸೂಚನೆಗಾಗಿ ಕೆಲವು ಸ್ಥಳಗಳ ಸುಂದರ ಚಿತ್ರಣಗಳಿವೆ. ನರ್ಮದಾ ತೀರಕ್ಕೆ ಬಂದಾಗ ವಿಷ್ಣುವು ಶಂಕರನಿಗೆ ಒಂದು ಪ್ರಶ್ನೆಯನ್ನು ಹಾಕುತ್ತಾನೆ, ಬ್ರಹ್ಮಚಾರಿಯು ಗ್ರಹಸ್ಥನಾಗಬೇಕು. ಬಳಿಕ ವನವಾಸ, ಬಳಿಕ ಸಂನ್ಯಾಸ – ಇದು ಕ್ರಮವಲ್ಲವೆ? ಶಂಕರನ ಉತ್ತರ , ಬ್ರಹ್ಮಚರದಿಂದಲೇ ಸಂನ್ಯಾಸ ಎಂದು ವಿಧಿ ಇದೆ. ಇದು ಹೆಚ್ಚು. ಶೀಘ್ರವಾದದೆಂದು ನನಗೆ ರುಚಿಸಿತು. ಹತ್ತಿರದಲ್ಲಿ ಎಲ್ಲೋ ಗೋವಿಂದ ಭಗವತ್ಪಾದರ ಆಶ್ರಮವಿರಬೇಕು ಎಂದು ಯೋಚಿಸುತ್ತಿರುವಷ್ಟರಲ್ಲಿಯೇ ನರ್ಮದೆಯ ಪ್ರವಾಹದ ಅಲೆಗಳು ಅವರಿಬ್ಬರನ್ನು ಮುಳುಗಿಸಿಬಿಡುತ್ತದೆ. ಕೊನೆಗೆ ಪ್ರವಾಹ ಕಡಿಮೆಯಾಗಿ ಶಂಕರನ ಕಮಂಡಲುವಿನಲ್ಲಿ ನೀರು ತುಂಬಿಕೊಳ್ಳುತ್ತದೆ. ಶಂಕರನು ಗೋವಿಂದ ಭಗವತ್ಪಾದರ ಗುಹೆಯ ಬಳಿಗೆ ಬಂದಾಗ ಅನೇಕ ಸಂನ್ಯಾಸಿಗಳು ಕಾಣಬರುತ್ತಾರೆ. ಶಂಕರನು ಗವಿಯ ಬಳಿ ನಿಂತು, "ಸರ್ವವೇದಾಂತಸಿದ್ಧಾಂತಗೋಚರಂ ತಮಗೋಚರಂ । ಗೋವಿಂದಂ ಪರಮಾನಂದಂ ಮದ್ಗುರುಂ ಪ್ರಣತೋಸ್ಮ್ಯಹಮ್" ಎಂದು ಹೇಳಿ ಸಾಷ್ಟಾಂಗ ಪ್ರಣಾಮ ಮಾಡುತ್ತಾನೆ. ಗೋವಿಂದ ಭಗವತ್ಪಾದರು ನೀನಾರು? ಎಂದು ಕೇಳುತ್ತಾರೆ. ಆಗ ಶಂಕರರು ಹೇಳಿದ ಶ್ಲೋಕಗಳು ಆತ್ಮ ಪಂಚಕ ಎಂಬ ಪ್ರಸಿದ್ಧ ಕೃತಿಗಳಾಗಿವೆ. "ಸಾಕ್ಷೀ ನಿತ್ಯಃ ಪ್ರತ್ಯಗಾತ್ಮಾ ಶಿವೋಹಂ." ಗೋವಿಂದ ಭಗವತ್ಪಾದರು ಅಂದರೆ ನೀನೇ ನಾನು ಎನ್ನುತ್ತಾರೆ. ಅಮರ ಎಂದರೂ ಶಾಶ್ವತ ಎಂದರೂ ಒಂದೇ ಎಂದು ಉತ್ತರಿಸುತ್ತಾನೆ. ಆಗ ಗುರುಗಳು, ಇತ್ತ ಬಾ ಮಗು ಎಂದು ಆದರಿಸುತ್ತಾರೆ. ಅಲ್ಲದೆ ನೀನು ಪರಮಹಂಸನಾಗುತ್ತೀ ಎಂದು ಹರಸುತ್ತಾರೆ. ದೃಶ್ಯ ಬದಲಾಗುತ್ತದೆ, ಛಾಂದೋಗ್ಯಪನಿಷತ್ತಿನ ಮೊದಲ ಭಾಗವನ್ನು ಶಂಕರರು ಓದುತ್ತಿದ್ದಾರೆ. ಸತ್ಯಕಾಮ ಜಬಲಾ ಇವರ ಸಂವಾದದ ಭಾಗ, ಸತ್ಯಕಾಮನ ಮಾತು, ನನಗೆ ಬ್ರಹ್ಮಚರ್ಯವನ್ನು ನೀಡುತ್ತಾರಂತೆ. ನನ್ನ ಗೋತ್ರವೇನಮ್ಮಾ, ಜಬಲಾಳ ಪೂರ್ವ ಜೀವನದ ಮತ್ತು ಸತ್ಯಕಾಮನು ಜನಿಸಿದ ಸನ್ನಿವೇಶಗಳ ವೈವಿಧ್ಯದ ಆವರಣದ ಚಿತ್ರ ಅರ್ಥಪೂರ್ಣವಾಗಿದೆ. ಕೊನೆಗೆ ಜಬಲಾ ಹೇಳುತ್ತಾಳೆ, ನಿನ್ನ ಗೋತ್ರ ನನಗೆ ತಿಳಿಯದು. ಯೌವನದಲ್ಲಿ ಪರಿಚಾರಿಣಿಯಾಗಿದ್ದೆ. ಗೋತ್ರಗಳ ನೆನಪಿಡಲಿಲ್ಲ. ನಾನು ಜಬಲಾ, ನೀನು ಸತ್ಯ ಕಾಮ. ಇದು ಸತ್ಯ – ಇಷ್ಟನ್ನು ಗುರುಗಳಿಗೆ ಹೇಳು." ಈ ಮಾತನ್ನು ಗುರುಗಳಿಗೆ ಸತ್ಯಕಾಮನು ತಿಳಿಸಿದಾಗ ಗುರುಗಳು ಬ್ರಾಹ್ಮಣನಲ್ಲದವನು ಹೀಗೆ ಸತ್ಯವನ್ನು ಹೇಳಲಾರ. ಬಾ ಮಗು ನಿನಗೆ ನಾನು ಬ್ರಹ್ಮೋಪದೇಶವನ್ನು ಮಾಡುತ್ತೇನೆ ಎಂದು ನುಡಿದರು. ಗೋವಿಂದ ಭಗವತ್ಪಾದರ ಗವಿಯಲ್ಲಿ ಶಂಕರನು ನಮಸ್ಕಾರ ಮಾಡುವ ಚಿತ್ರ. "ಋತಂ ಚ ಸ್ವಾಧ್ಯಾಯಪ್ರವಚನೇ ಚ" ಮುಂತಾದ ಮಂತ್ರಗಳ ಘೋಷಣೆ. ಗುರುಗಳು ಶಂಕರನಿಗೆ ವಾರಣಾಸಿಯ ಪ್ರಯಾಣ ಶುಭವಾಗಲಿ ಎಂದು ಹರಸುತ್ತಾರೆ. ಸತ್ಯಕಾಮ ಜಾಬಾಲಿಯ ಕಥೆಗೂ ಶಂಕರನ ಕಥೆಗೂ ದೂರದ ಸಂಬಂಧದ ಕಲ್ಪನೆಯಿದೆ ಇಲ್ಲಿ-ಬ್ರಹ್ಮಚರ್ಯ ನೀಡುವುದರಲ್ಲಿ ಶಂಕರರಿಗೆ ಅನೇಕ ಶಿಷ್ಯರು ದೊರಕಿ ಅವರು ಅವನೊಡನೆ ವಾರಣಾಸಿಗೆ ಪ್ರಯಾಣ ಮಾಡುತ್ತಾರೆ. ಶಂಕರನು ವಾರಣಾಸಿಯ ಮಣಿಕರ್ಣಿಕಾ ಘಟ್ಟದಲ್ಲಿ ಶಿಷ್ಯರೊಡನೆ ಕಾಣ ಬರುವ ಚಿತ್ರದಿಂದ ಮುಂದಿನ ಕಥೆ ಬೆಳೆಯುತ್ತದೆ. ಇಲ್ಲಿ ಶಂಕರರ ಬಾಲ್ಯ ಮಿತ್ರ ವಿಷ್ಣುವಿನ ಭೇಟಿಯುಂಟಾಗಿ ಇಬ್ಬರೂ ಪರಸ್ಪರ ತಬ್ಬಿಕೊಳ್ಳುತ್ತಾರೆ. ವಿಷ್ಣುವಿಗೆ ಶಂಕರರ ಅನೇಕ ಶಿಷ್ಯರನ್ನು ನೋಡಿ ಆಶ್ಚರ್ಯವಾಗುತ್ತದೆ. ತನ್ನನ್ನೂ ಶಿಷ್ಯನನ್ನಾಗಿ ಸ್ವೀಕರಿಸಬೇಕೆಂದು ವಿಷ್ಣು ಬೇಡಿಕೊಳ್ಳುತ್ತಾನೆ. ಶಂಕರರು ತಮ್ಮ ಉತ್ತರೀಯವನ್ನು ವಿಷ್ಣುವಿಗೆ ಹೊದೆಸಿ ಪದ್ಮಪಾದನೆಂಬ ಹೆಸರನ್ನು ಕೊಡುತ್ತಾರೆ. ಮಣಿಕರ್ಣಿಕಾ ಘಟ್ಟದಲ್ಲಿ ಶಂಕರರ ಪ್ರವಚನವಾಗುತ್ತದೆ. ಅಲ್ಲಿಯೇ ತೋಟಕನೆಂಬ ಶಿಷ್ಯನ ಸ್ವೀಕಾರವೂ ನಡೆಯುತ್ತದೆ. ವಿದ್ಯಾವಾಚಸ್ಪತಿ ಎಂಬ ವಿದ್ವಾಂಸನು ನಮಸ್ಕರಿಸುತ್ತಾನೆ. ಕಾಶಿಕಾಪುರಾಧೀಶ್ವರ ಮಹಾರಾಜರಿಂದ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಎಂಬ ಗೌರವದೊಡನೆ ಅವರ ಆಸ್ಥಾನಕ್ಕೆ ಆಹ್ವಾನ ಬರುತ್ತದೆ. ಶಂಕರರು, ನಿಮ್ಮ ಆಹ್ವಾನಕ್ಕೆ ನನ್ನಲ್ಲಿ ಗೌರವವಿದೆ. ಆದರೆ ನಾನು ತತ್ವ ಪ್ರಚಾರಕ್ಕಾಗಿ ಪ್ರಸ್ಥಾನ ಮಾಡುತ್ತಿದ್ದೇನೆ ಎನ್ನುತ್ತಾರೆ. ಎಲ್ಲರೂ ಜಯಕಾರ ಮಾಡುತ್ತಾರೆ . ಗುಂಪಿನಲ್ಲಿ ಶಂಕರರಿಗೆ ಜ್ಞಾನ ಮತ್ತು ಮೃತ್ಯು ಕಾಣಬರುತ್ತಾರೆ. ಮೂವರೂ ಪರಸ್ಪರ ನಗುತ್ತಾರೆ. ವಾರಣಾಸಿಯಲ್ಲಿ ಚಂಡಾಲನಿಗೂ ಶಂಕರರಿಗೂ ನಡೆದ ವಾಗ್ವಾದ ಅವರ ಬಾಳಿನಲ್ಲಿ ನಡೆದ ಅತಿ ಪ್ರಭಾವಯುತವಾದ ಘಟನೆ. ಸ್ವಾಭಾವಿಕವಾಗಿಯೇ ಅಯ್ಯರ್ ಅವರು ಈ ಘಟನೆಗೆ ಪ್ರಾಧಾನ್ಯವನ್ನು ನೀಡಿದ್ದಾರೆ. ವಾರಣಾಸಿಯ ಬೀದಿಯಲ್ಲಿ ಚಂಡಾಲನೊಬ್ಬನು ಬರುತ್ತಿರುತ್ತಾನೆ. ಜನರೆಲ್ಲ ಅವನ ಸಾಂಕರ್ಯಕ್ಕೆ ಹೆದರಿ ಮನೆಯೊಳಕ್ಕೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಿದ್ದಾರೆ. ಪದ್ಮಪಾದನು, ಚಂಡಾಲನಿಗೆ ದೂರ ಹೋಗು ಎಂದು ಹೇಳಿದರೂ ಅವನು ಹಿಂದಿರುಗುವುದಿಲ್ಲ . ನಾವೇ ಏಕೆ ಹೋಗೋಣ ಎನ್ನುತ್ತಾನೆ. ಚಂಡಾಲನು ಮುಂದೆ ಬಂದಹಾಗೆಲ್ಲ ಶಂಕರರೂ ಅವಸರ ಎಂದು ನುಡಿಯುತ್ತಾರೆ. ಚಂಡಾಲನು "ಕೋ ಅಪಸರತು? ಯಾರು ದೂರ ಹೋಗಬೇಕು? ದೇಹವೋ ಆತ್ಮವೋ?

ದೇಹವಾದರೆ ಅತ್ಮವೂ ಚಂಡಾಲವೇ, ಆತ್ಮವಾದರೆ ಎಲ್ಲವೂ ಆತ್ಮವೇ. ಯಾವುದು ದೂರ ಹೋಗಬೇಕು? ಎಂದನು. ಶಂಕರರಿಗೆ ಕೂಡಲೆ ತಮ್ಮ ತತ್ವದ ನೆನಪು ಬಂದು ತಮ್ಮ ಪ್ರಸಿದ್ಧವಾದ ಕೃತಿಯನ್ನು ಹೇಳಿದರು.

"ಬ್ರಹ್ಮವಾಹಮಿದಂ ಜಗಚ್ಚ ಸಕಲಂ ಚಿನ್ಮಾತ್ರವಿಸ್ತಾರಿಕಂ ಸರ್ವಂ ಚೈತದವಿದ್ಯಯಾ ತ್ರಿಗುಣಯಾ ಶೇಷಂ ಮಯಾ ಕಲ್ಪಿತಂ ।
ಇತ್ಥಂ ಯಸ್ಯ ದೃಢಾಮತಿಃ ಸುಖತರೇ ನಿತ್ಯೇ ಪರೇ ನಿರ್ಮಲೇ ಚಂಡಾಲೋಽಸ್ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ ॥

ಹೀಗೆ ಹೇಳಿ ಚಂಡಾಲನ ಕಾಲುಗಳನ್ನೇ ಹಿಡಿಯುತ್ತಾರೆ. ಚಂಡಾಲನು ತನ್ನ ಕಾಲುಗಳನ್ನು ಹಿಂದಕ್ಕೆ ಸರಿಸುತ್ತಾನೆ. ಇತರರು ಚಂಡಾಲನ್ನು ಶಪಿಸುತ್ತಾರೆ . ಅವನು ಅವರನ್ನು ನೋಡಿ ನಕ್ಕು ಹೊರಟು ಹೋಗುತ್ತಾನೆ. ವಿದ್ವಾಂಸನೊಬ್ಬ ಹೇಳುತ್ತಾನೆ. ಇವನು ಮಹಾ ವಿದ್ವಾಂಸ, ಕರ್ಮದಿಂದ ಚಂಡಾಲನಾಗಿದ್ದಾನೆ. ಶಂಕರರು ಚಂಡಾಲನು ನಿಂತಿದ್ದ ಸ್ಥಳವನ್ನು ನೋಡಿ ಒಂದು ಶ್ಲೋಕವನ್ನು ಹೇಳುತ್ತಾರೆ:

ಕಾಶ್ಯಾ ಹಿ ಕಾಶತೇ ಕಾಶೀ ಕಾಶೀ ಸರ್ವ ಪ್ರಕಾಶಿಕಾ ಸಾ ಕಾಶೀ ವಿದಿತಾ ಯೇನ ತೇನ ಪ್ರಾಪ್ತಾ ಹಿ ಕಾಶಿಕಾ ॥

ಶಂಕರನು ವಿಶ್ವನಾಥನ ಲಿಂಗದ ಮೇಲೆ ಕೈಯಿಟ್ಟಾಗ ಇತರರು ತಮ್ಮ ಪಾತ್ರೆಗಳಿಂದ ಅಭಿಷೇಕ ಮಾಡುತ್ತಾರೆ. ಜಾತಿಮತಗಳ ಭೇದವಿಲ್ಲದೆ ಎಲ್ಲರೂ ದೇವರನ್ನು ಮುಟ್ಟಿ ನೀರೆರೆಯುತ್ತಾರೆ. ಶಂಕರರ ಕಥೆ ಮುಂದುವರಿಯುತ್ತದೆ. ಒಬ್ಬ ಮೂಕ ಹುಡುಗನ ತಂದೆ ತಾಯಿಯರು ಆ ಹುಡುಗನನ್ನು ಶಂಕರರ ಬಳಿ ಕರೆ ತಂದು ಆತನು ಮೂಕನಾಗಿರುವುದನ್ನೂ ಉನ್ಮತ್ತನಂತೆ ವ್ಯವಹರಿಸುವುದನ್ನೂ ತಿಳಿಸುತ್ತಾರೆ. ಶಂಕರರು ಅವನನ್ನು ಕುರಿತು. ಯಾತ್ರಿಕನೇ, ನೀನು ಯಾರು? ಎಲ್ಲಿಂದ ಬಂದೆ? ಎಲ್ಲಿಗೆ ಹೋಗುತ್ತೀಯಾ? ಇದು ನಿನ್ನ ಪುರಾತನ ಗೃಹವೇ? ಎಂದು ಕೇಳಿದರು. ಮೂಕ ಬಾಲಕನೇ, ನನ್ನನ್ನು ಗುರುತಿಸಿದವರೇ! ಎಲ್ಲ ವಸ್ತುವಿನಲ್ಲಿ ಆಕಾಶವಿದ್ದರೂ ಆಕಾಶವನ್ನು ಮುಟ್ಟಲು ಯಾರಿಗೂ ಸಾಧ್ಯವಿಲ್ಲ. ಹಾಗೇ ಶುದ್ಧ ಸ್ವಚ್ಛ ನಿತ್ಯಾನುಭವ ರೂಪಿಯಾದ ಆತ್ಮನೇ ನಾನು. ಶಂಕರರು ಆ ಬಾಲಕನನ್ನು ಕುರಿತು, ಈತನು ಸತ್ಯವನ್ನ ಕಂಡವನು. ನನಗೆ ಕೊಟ್ಟು ಬಿಡಿ ಎಂದು ಹೇಳಿ ಆ ಬಾಲಕನಿಗೆ ಹಸ್ತಾಮಲಕ ಎಂಬ ಹೆಸರಿಟ್ಟು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಪ್ರಯಾಗದಲ್ಲಿ ಕುಮಾರಿಲ ಭಟ್ಟರೊಡನೆ ನಡೆದ ಸಂವಾದವೊಂದು ಸುಂದರ ಸನ್ನಿವೇಶ, ತತ್ವಶಾಸ್ತ್ರದಲ್ಲಿರುವ ಮಹತ್ವವನ್ನು ತಿಳಿಸುವ ದೃಶ್ಯ, ಕುಮಾರಿಲ ಭಟ್ಟರು ಹೇಳುತ್ತಾರೆ, ಶಂಕರಾಚಾರ್ಯರೇ, ನಾನು ಕರ್ಮಠನಾದ ಬ್ರಾಹ್ಮಣ. ತರ್ಕ ಮೀಮಾಂಸಾ ಶಾಸ್ತ್ರಗಳಲ್ಲಿ ಸಾಕಷ್ಟು ಪರಿಶ್ರಮವುಳ್ಳವನು. ವೇದವನ್ನು ನಿಂದಿಸುವ ನಾಸ್ತಿಕರನ್ನು ಎದುರಿಸಬಲ್ಲೆ. ಜಗತ್ತಿನಲ್ಲಿ ವೈದಿಕ ಧರ್ಮವನ್ನು ಸ್ಥಾಪಿಸಲು ಪ್ರಯತ್ನಪಟ್ಟೆ. ಅದರಲ್ಲಿ ಸ್ವಲ್ಪ ಎಡವಿದ್ದಕ್ಕಾಗಿ ಈ ಆತ್ಮ ಯಜ್ಞದಲ್ಲಿ ಮುಳುಗಿದ್ದೇನೆ ಎಂದು. ಅವರು ಆಗ ತುಷಾಗ್ನಿಯಲ್ಲಿ ತಮ್ಮನ್ನು ಸುಟ್ಟು ಕೊಳ್ಳುತ್ತಿದ್ದರು. ಈ ಶಿಕ್ಷೆಗೆ ಕಾರಣವನ್ನು ಅವರೇ ಹೇಳಿದರು. ನೋಡಿ ನನ್ನ ತಲೆಯಲ್ಲಿ ಶಿಖೆಯಿದೆಯೇ? ಇಲ್ಲ. ನಾನು ಬೌದ್ಧ ವೇಷಧಾರಿಯಾಗಿದ್ದ ಬೌದ್ಧಗುರು ಧರ್ಮಪಾಲರು ಬೌದ್ಧಮತದ ರಹಸ್ಯಗಳನ್ನು ಬೋಧಿಸುತ್ತಿದ್ದರು . ಅದರಲ್ಲಿ ವೇದಗಳನ್ನು ಕುರಿತ ನಿಂದನೆಯನ್ನು ಕೇಳಲಾರದೆ ನಾನು ಕಣ್ಣೀರನ್ನು ಸುರಿಸಿದೆ. ಇದನ್ನು ಕಂಡ ಅವರು ಅವರ ಶಿಷ್ಯರ ಕೈಲಿ ಹೊರದೂಡಿಸಿದರು. ಆ ಶಿಷ್ಯರು ವೇದಗಳಲ್ಲಿ ಶಕ್ತಿ ಇದ್ದರೆ ನಿನ್ನನ್ನು ಕಾಪಾಡಲಿ ಎಂದು ಹೇಳಿ ಪರ್ವತದ ಮೇಲಿನಿಂದ ನನ್ನನ್ನು ತಳ್ಳಲು ಆಸೆಪಟ್ಟರು. ನಾನು, ಯದಿ ವೇದಾಂ ಪ್ರಮಾಣಂ ನ ಕಿಂಚಿನ್ನೇ ಭವಿಷ್ಯತಿ: ಅಂದರೆ ವೇದಗಳು ಪ್ರಮಾಣಗಳಾದರೆ ನನಗೇನೂ ಆಗದಿರಲಿ ಎಂದು. ಅವರು ನನ್ನನ್ನು ತಳ್ಳಿದರು. ನಾನು ಉರುಳಿ ಬಿದ್ದೆ. ಏನಾಯಿತೋ ಒಂದು ಕಣ್ಣು ಹೋಯಿತು. ನಾನು ವೇದಗಳು ಪ್ರಮಾಣವಾಗಿದ್ದರೆ ಎಂದು ಅನುಮಾನವನ್ನು ಸೂಚಿಸಿದೆನಲ್ಲ. ಅದಕ್ಕೆ ಇರಬಹುದು ಕಣ್ಣು ಹೋದದ್ದು, ಆದರೂ ನಾನೇನು ಸುಮ್ಮನಿರಲಿಲ್ಲ. ವಿದ್ವತ್ಸಭೆಯಲ್ಲಿ ಧರ್ಮಪಾಲನನ್ನು ಸೋಲಿಸಿದೆ. ಅದೇ ವೈದಿಕ ಧರ್ಮದ ವಿಜಯ. ಆದರೆ ಬೌದ್ಧ ತತ್ವಗಳ ರಹಸ್ಯವನ್ನು ತಿಳಿಯುವಾಗ ಗುರುವಿಗೆ ಮೋಸ ಮಾಡಿದೆನಲ್ಲ. ಅದಕ್ಕಾಗಿ ನಾನು ಈ ಆತ್ಮ ಯಜ್ಞವನ್ನು ತುಷಾಗ್ನಿಯಲ್ಲಿ ನೆರವೇರಿಸುತ್ತ ಇದ್ದೇನೆ. ಶಂಕರರು ಹೇಳಿದರು, ನಾನು ರಚಿಸಿರುವ ಶಾರೀರಕ ಸೂತ್ರ ಭಾಷ್ಯಕ್ಕೆ ತಮ್ಮಿಂದ ವಾರ್ತಿಕವನ್ನು ಬರೆಯಿಸಲು ಸಂಕಲ್ಪಿಸಿ ಇಲ್ಲಿಗೆ ಬಂದೆ. ಹೀಗಾಯಿತಲ್ಲ! ಕುಮಾರಿಲಭಟ್ಟರು: ತಮ್ಮ ಬ್ರಹ್ಮಸೂತ್ರ ಭಾಷ್ಯದ ಬಗ್ಗೆ ನಾನು ಬಹು ಪ್ರಶಂಸೆಯನ್ನು ಕೇಳಿದ್ದೇನೆ. ವಾರ್ತಿಕವನ್ನು ಸಂತೋಷದಿಂದ ಬರೆದುಕೊಡುತ್ತಿದ್ದೆ. ಆದರೆ ಮರಣದೀಕ್ಷೆಯನ್ನು ತೆಗೆದುಕೊಂಡಿದ್ದೇನೆ ಅಲ್ಲವೆ?

ಶಂಕರರು: ಈ ನಿರ್ಧಾರವನ್ನು ಬದಲಿಸಲು ಸಾಧ್ಯವಿಲ್ಲವೆ? ಕುಮಾರಿಲಭಟ್ಟ: ಬ್ರಹ್ಮ ಸೂತ್ರಗಳು ಸತ್ಯವಲ್ಲ ಎನ್ನುವುದು ಹೇಗೆ ಬದಲಾಯಿಸಲಾಗುವುದಿಲ್ಲವೋ ಹಾಗೇ ಇದೂ ಸಾಧ್ಯವಿಲ್ಲ. ಶಂಕರ: ಸರಿ, ಸ್ವಸ್ತಿ. ಕುಮಾರಿಲ ಭಟ್ಟ: ಸಾಯುವ ನನ್ನ ಜೀವಕ್ಕೆ ಇನ್ನೂ ಆಸೆ. ಒಂದು ಮುಹೂರ್ತ ಕಣ್ಣು ತುಂಬ ತಮ್ಮ ಗ್ರಂಥವನ್ನು ನೋಡಲು ಆಸೆಯಿದೆ. ಶಂಕರರ ಶಿಷ್ಯರು ಆ ಗ್ರಂಥವನ್ನು ಕುಮಾರಿಲರಿಗೆ ಕೊಡುತ್ತಾರೆ. ತುಷೆಯ ರಾಶಿಯಿಂದ ತಮ್ಮ ತೋಳುಗಳನ್ನು ಹೊರ ತೆಗೆದು ಕುಮಾರಿಲರು ಆ ಗ್ರಂಥವನ್ನು ನೋಡಿ, ಆಹಾ, ಎಂಥ ವಿದ್ವಜ್ಜಾಲ , ಬಹು ತಪಸ್ಸಿನ ಫಲ. ಇರಲಿ. ನನ್ನ ಶಿಷ್ಯ ಮಂಡನಮಿಶ್ರ ಮಾಹಿಷ್ಮತಿಯಲ್ಲಿದ್ದಾನೆ. ಅವನು ನನ್ನ ಹಾಗೆ ತಿಳಿವುಳ್ಳವನು . ಅವನನನ್ನು ಈ ಕೆಲಸಕ್ಕೆ ಹಚ್ಚಿ. ಕಾಲ ಮೀರುತ್ತ ಬಂತು, ನನಗೆ ಅಪ್ಪಣೆ ಕೊಡಿ. ಕುಮಾರಿಲಭಟ್ಟರೂ, ಶಂಕರರೂ ಕೂಡಿ ಈ ಮಂತ್ರವನ್ನು ಪಠಿಸುತ್ತಾರೆ.

ಶಿವಂ ನಿತ್ಯಮೇಕಂ ವಿಭುಂ ತಾರಕಾಸ್ಮಿಂ ಸುಖಾಕಾರಮಾಕಾರಶೂನ್ಯಂ ಸುಮಾನ್ಯಂ

ಮಹೇಶಂ ಕಲೇಶಂ ಸುರೇಶಂ ಪರೇಶಂ ನರೇಶಂ ನಿರೀಶಂ ಮಹೀಶಂ ಪ್ರಪದ್ಯೇ ॥
ಇನ್ನು ಚಲನಚಿತ್ರ ಮಂಡನಮಿಶ್ರರ ಮಾಹಿಷ್ಮತಿ ನಗರಕ್ಕೆ ತೆರಳುತ್ತದೆ.
ಮಂಡನಮಿಶ್ರರ ಮನೆಯ ಮುಂದುಗಡೆ ನೇತುಹಾಕಿದ್ದ ಪಂಜರದಲ್ಲಿ ಇದ್ದ ಗಿಣಿಗಳು ಕರ್ಮಮಾರ್ಗದ ಪ್ರಾಧಾನ್ಯವನ್ನು ಕುರಿತ ಸಂಸ್ಕೃತ ವಾಕ್ಯಗಳನ್ನು ಪಠಿಸುತ್ತಾ ಇದೆ . ಶಂಕರರ ಜೊತೆ ಜ್ಞಾನ ಮತ್ತು ಮೃತ್ಯು – ಇವರೂ ಬಂದಿದ್ದಾರೆ. ಇಲ್ಲಿ ಏನೇನು ನಡೆಯುತ್ತದೋ ಎಂದು ಅವರಿಗೆ ಕುತೂಹಲ. ಮೃತ್ಯು ಮುಂದೆ ನುಗ್ಗುತ್ತಾನೆ. ಆಗ ಶಂಕರರು ಅವನನ್ನು ಕೇಳುತ್ತಾರೆ , ಅಯ್ಯಾ ನೀನು ಮಂಡನಮಿಶ್ರರನ್ನು ಮೊದಲು ನೋಡಿ ಬಿಟ್ಟರೆ ನನ್ನ ಭಾಷ್ಯಗಳಿಗೆ ವಾರ್ತಿಕಗಳನ್ನು ಬರೆಯುವವರು ಯಾರು ? ಮೃತ್ಯು: ಅಲ್ಲಿ ಯಾರೂ ಇರಲಿಲ್ಲ. ಆದ್ದರಿಂದ ಬಗ್ಗಿ ನೋಡಿದೆ. ಅಷ್ಟೆ! ಇಷ್ಟು ಹೇಳಿ ಅವನು ಹಿಂದಕ್ಕೆ ಬರುತ್ತಾನೆ. ಇಂಥ ಅರ್ಥವತ್ತಾದ ಹಾಸ್ಯವೂ ಈ ಚಲನಚಿತ್ರದಲ್ಲುಂಟು. ಆ ಮನೆಯಲ್ಲಿ ಮಂಡನಮಿಶ್ರರೂ ಭಾರತೀ ದೇವಿಯೂ ಶಂಕರರನ್ನು ಸ್ವಾಗತಿಸುತ್ತಾರೆ. ಶಂಕರರ ಅಂಗೈಗೆ ಭಾರತಿ ತನ್ನ ಕಮಂಡಲುವಿನಿಂದ ನೀರನ್ನು ಹಾಕುತ್ತಾಳೆ. ಶಂಕರರು, ನಾನು ಭಿಕ್ಷಾರ್ಥಿ ಅಲ್ಲ, ವಾದ ಭಿಕ್ಷಾರ್ಥಿ ಎನ್ನುತ್ತಾರೆ . ಮಂಡನರು ತುಂಬಾ ಸಂತೋಷ. ಮೊದಲು ಆಹಾರ ಭಿಕ್ಷೆ ನಡೆಯಲಿ ಎನ್ನುತ್ತಾರೆ. ಎಲ್ಲರೂ ಮನೆಯನ್ನು ಪ್ರವೇಶಿಸುತ್ತಾರೆ. ಈ ಸಂದರ್ಭದಲ್ಲಿ ಅಯ್ಯರ್ ಅವರು ಜ್ಞಾನನು ಗಿಳಿಗಳೊಡನೆ ಮಾತನಾಡಿ ಅವು ಸ್ವಾತಂತ್ರ್ಯ ಹೊಂದಿ ಕೈಲಾಸಕ್ಕೆ ಹಾರಿಹೋಗುವಂತೆ ಪಂಜರದ ಬಾಗಿಲನ್ನು ತೆರೆಯುವ ಒಂದು ಚಿತ್ರವಿದೆ. ಇದರಲ್ಲಿ ಮಂಡನಮಿಶ್ರರು ಕರ್ಮ ಮೀಮಾಂಸೆಯನ್ನು ಬಿಟ್ಟು ವೇದಾಂತ ತತ್ತ್ವವನ್ನೇ ಒಪ್ಪಿಕೊಂಡ ಸೂಚನೆಯಿದೆ. ಶಂಕರರಿಗೂ ಮಂಡನರಿಗೂ ಆದ ವಾಕ್ಯಾರ್ಥದ ವಿವರವನ್ನು ಸೇರಿಸಿಲ್ಲ. ಚಿತ್ರದಲ್ಲಿ ಅದನ್ನು ತರಲಾಗುವುದಿಲ್ಲ. ಇವರಿಬ್ಬರ ವಾದ ಪೂರೈಸಿದಾಗ ಭಾರತಿಯು ಹೇಳುತ್ತಾಳೆ, ಶಂಕರ ಭಗವತ್ಪಾದರು ಅಜೇಯರು ನಿಜ. ಆದರೆ ನಾನೇ ವಾದಕ್ಕೆ ನಿಂತರೆ? ಶಂಕರರು, ತಾಯಿ! ವಾಚಾಮಗೋಚರವಾದ ಅನುಭವಗಳಿಗೆ ವಾದವೇಕೆ? ಹೇಳಿ ಭಾರತೀದೇವಿ, ನೀವು ನನ್ನ ಬಾಯಿಯನ್ನು ಕಟ್ಟಿ ಹಾಕಿದ್ದೀರಿ . ಹಾಗಾದರೆ ಈಗ ನಾನೇನು ಮಾಡಲಿ? ಶಂಕರರು, ನಮ್ಮನ್ನು ಕಾಪಾಡುತ್ತಾ ನನ್ನೊಡನೆ ಇದ್ದು ಬಿಡಿ ಎಲ್ಲರೂ ಈ ಮಾತನ್ನು ಒಪ್ಪಿ ಜಯಜಯಕಾರ ಮಾಡುತ್ತಾರೆ. ಶಂಕರರು ಮಂಡನಮಿಶ್ರರಿಗೆ ಸಂನ್ಯಾಸ ದೀಕ್ಷೆಯನ್ನು ನೀಡಿ ಅವರಿಗೆ ಸುರೇಶ್ವರ ಎಂಬ ಹೆಸರನ್ನು ನೀಡಿ ತಮ್ಮ ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ಇಷ್ಟಾದ ಮೇಲೆ ಶಂಕರರೂ ಅವರ ನಾಲ್ಕು ಜನ ಶಿಷ್ಯರೂ ಭಾರತೀದೇವಿಯೂ ಹಿಮಾಲಯದ ಕುಲು ಕಣಿವೆಯಲ್ಲಿರುತ್ತಾ ಭಾರತದಲ್ಲೇ ವೈದಿಕ ಧರ್ಮವು ಹುಟ್ಟಿದ್ದರೂ ಇಲ್ಲಿ ಅದು ಶಿಥಿಲವಾಗುತ್ತಿದೆಯಲ್ಲ ಇದರ ಉದ್ಧಾರಕ್ಕೆ ಏನಾದರೂ ಮಾಡಬೇಕು ಎಂದು ಚಿಂತಿಸುತ್ತಾ ಇರುವ ಚಿತ್ರಗಳಿವೆ. ಇಂಥ ಕಾಲದಲ್ಲಿ ಭಾರತೀದೇವಿಯು ಅವರಿಗೆ ಆಹಾರದ ಅನುಕೂಲಗಳನ್ನು ಏರ್ಪಡಿಸಿ ಭಿಕ್ಷೆಯನ್ನು ಹಾಕುತ್ತ ಇರುತ್ತಾಳೆ. ಭರತಭೂಮಿಯು ತ್ರಿಕೋಣಾಕಾರವಾಗಿರುವುದರಿಂದ ಇದು ಶ್ರೀಚಕ್ರದ ಪ್ರತಿನಿಧಿಯಾಗಿದೆ ಎಂದು ಶಂಕರರು ಹೇಳುತ್ತಾರೆ. ಸುರೇಶ್ವರರು ಭಾರತದ ಬಗ್ಗೆ ಮಾತನಾಡುತ್ತ, ನಾನು ಕಾಮರೂಪ, ಕಶ್ಮೀರ, ಕಾಶಿ, ಮುಂತಾದ ಪ್ರದೇಶಗಳು ನನಗೆ ಗೊತ್ತು ಆದರೆ ಕನ್ಯಾಕುಮಾರಿಯನ್ನು ನೋಡಿಲ್ಲ ಎನ್ನುತ್ತಾರೆ. ಅವಶ್ಯವಾಗಿ ನೋಡೋಣ ಎನ್ನುತ್ತಾರೆ ಶಂಕರರು.

**ಮುಂದಿನ ದೃಶ್ಯ ಶೃಂಗೇರಿಯ ಪರ್ವತಾರಣ್ಯಕ್ಕೆ ಚಲಿಸುತ್ತದೆ –**

ಶೃಂಗೇರಿಯ ಭವ್ಯ ವಾತಾವರಣವನ್ನು ನದೀ ಪರ್ವತಾರಣ್ಯ ಸೌಂದರ್ಯವನ್ನು ಕಂಡ ಭಾರತಿ ಈ ಭಾಗವು ನನಗೆ ತುಂಬ ಮೆಚ್ಚಿಕೆಯಾಗಿದೆ ಎನ್ನುತ್ತಾಳೆ. ಶಂಕರರು, ಹಾಗೇ ಆಗಲಿ. ಇಲ್ಲಿಯೇ ನೆಲೆ ನಿಲ್ಲಿ, ತುಂಗೆಯ ನದಿಯೂ ಇದೆ. ಬನ್ನಿ ಎನ್ನುತ್ತಾರೆ. ಅಲ್ಲೊಂದು ಕಡೆ ಒಂದು ಯಜ್ಞ ನಡೆಯುತ್ತಾ ಇತ್ತು. ಪ್ರಾಣಿ ಬಲಿಯನ್ನು ನೀಡದಿದ್ದರೂ ಹಿಟ್ಟಿನಿಂದ ಮಾಡಿದ ಪ್ರಾಣಿಗಳನ್ನು ಬಲಿಕೊಡುತ್ತಿರುವುದನ್ನು ನೋಡಿ ಸುರೇಶ್ವರರಿಗೆ ಕಣ್ಣೀರು ಬಂತು . ಅದನ್ನು ಕಂಡ ಶಂಕರರು ಸುರೇಶ್ವರರು ವ್ಯಸನಹೊಂದಲು ಕಾರಣವನ್ನು ಕೇಳಿದರು. ಪ್ರಾಣಿಬಲಿ ನಿಷಿದ್ಧವಾದರೂ, ಇನ್ನೂ ಅಜ್ಞಾನ ನಾಶವಾಗಲಿಲ್ಲವಲ್ಲಾ ಎಂಬ ದುಃಖ ಎಂದು ಸುರೇಶ್ವರರು ಹೇಳಿದರು. ಅದನ್ನು ಕೇಳಿ ಕರ್ಮ ಮೀಮಾಂಸೆಯನ್ನು ದೂರೀಕರಿಸಿದ್ದ ಸುರೇಶ್ವರರೇ ತಮ್ಮ ಮಹಾಭಾಷ್ಯಕ್ಕೆ ವಾರ್ತಿಕವನ್ನು ರಚಿಸಲು ಸಮರ್ಥರೆಂದು ತಿಳಿದು ಆ ಗ್ರಂಥವನ್ನು ಸುರೇಶ್ವರರಿಗೆ ನೀಡಿದರು. ಶಂಕರರ ವೇದಾಂತ ಭಾಷ್ಯಗಳಿಗೆ ಎಲ್ಲ ಶಿಷ್ಯರೂ ವಾರ್ತಿಕವನ್ನು ಬರೆಯಲು ಅಪೇಕ್ಷಿಸಿದ್ದರು. ಈಗ ಅದು ಸುರೇಶ್ವರರಿಗೆ ಒಪ್ಪಿಸಲ್ಪಟ್ಟಾಗ ಇತರ ಮೂವರಿಗೂ ದುಃಖವಾಗಿ ಅವರು ಮುಷ್ಕರಹೂಡಿದರು. ಇದನ್ನು ಕಂಡು ನಾಲ್ಕು ಜನರಲ್ಲೇ ಇಂಥ ಸಣ್ಣ ವಿಚಾರಕ್ಕೇ ಭಿನ್ನಾಭಿಪ್ರಾಯವುಂಟಾದರೆ, ಭಾರತದಲ್ಲೆಲ್ಲಾ ಉಪನಿಷದ್ಧರ್ಮವನ್ನು ಪ್ರಸಾರ ಮಾಡುವುದು ಸಾಧ್ಯವೇ ಎಂದು ಖಿನ್ನ ಮನಸ್ಕರಾದರು. ಸುರೇಶ್ವರರು ಶಂಕರರ ಪಾದದ ಬಳಿ ಅವರ ಭಾಷ್ಯಗಳನ್ನು ಇಟ್ಟು, "ಪದ್ಮಪಾದರೇ ರಚಿಸಲಿ. ನಾನು ಬೇರೆ ಏನಾದರೂ ರಚಿಸುತ್ತೇನೆ ಎಂದು ಹೇಳಿದರು . ಆಗ ಇತರರಿಗೆ ಜ್ಞಾನೋದಯವಾಯಿತು. ಆಗ ಶಂಕರರು, "ಹಾಗೆ ಆಗಲಿ ಪದ್ಮಪಾದರೇ ಬರೆಯಲಿ, ಸುರೇಶ್ವರರು ನೈಷ್ಕರ್ಮ್ಯ ಸಿದ್ಧಿಯನ್ನು ಬರೆಯಲಿ ಎಂದರು. ಹೀಗೆ ಅಸಮಾಧಾನವು ತೀರ್ಮಾನವಾದ ಮೇಲೆ ಎಲ್ಲರೂ ಭೋಜನಕ್ಕೆ ಕುಳಿತರು. ತಾಯಿ ಭಾರತಿ ಅಡುಗೆಯನ್ನು ಬಡಿಸುತ್ತಿದ್ದಾಗ ಶಂಕರರೂ ಇತರ ಶಿಷ್ಯರೂ ಅನ್ನಪೂರ್ಣೇಶ್ವರಿಯ ಸ್ತೋತ್ರವನ್ನು ಪಠಿಸುತ್ತ ಭೋಜನವನ್ನು ಪೂರೈಸಿದರು.
ಇಲ್ಲಿಯ ವರೆಗೆ ಖಚಿತವಾಗಿ ಮುಂದುವರಿದ ಚಲನ ಚಿತ್ರವು ಮುಂದಿನದನ್ನು ಹ್ರಸ್ವವಾಗಿ ಕೊನೆಗಾಣಿಸುತ್ತದೆ. ಶಂಕರರು ಭಾರತಿಗೆ ಹೇಳುತ್ತಾರೆ, ನಾನಿನ್ನು ಪಾದಪದ್ಮ ಹಸ್ತಾಮಲಕ, ತೋಟಕ, ಸುರೇಶ್ವರರನ್ನು ನಾಲ್ಕು ದಿಕ್ಕುಗಳಿಗೆ ಕಳಿಸಲು ಇಚ್ಛೆಪಡುತ್ತೇನೆ. ಅವರು

ದ್ವಾರಕಾ, ಬದರಿ, ಜಗನ್ನಾಥ, ಪುರಿಗಳಲ್ಲಿ ಇರಲಿ, ಇಲ್ಲಿಯಂತೂ ಶೃಂಗೇರಿಯಲ್ಲಿ ಇದ್ದೇ ಇರಬೇಕು. ಭಾರತಿ ಕೇಳುತ್ತಾಳೆ, ಹಾಗಾದರೆ ನೀವು ಎಲ್ಲಿರುತ್ತೀರಿ? ಈ ಮಾತಿನಿಂದ ಶಂಕರರಿಗೆ ತಮ್ಮ ತಾಯಿಯ ನೆನಪು ಬಂದು ಮುಂದೆ ಕಾಲಟಿಗೆ ಪ್ರಯಾಣ, ತಾಯಿಯ ಮರಣ, ಆಕೆಯ ಸಂಸ್ಕಾರ, ಅಲ್ಲಿಂದ ಮುಂದೆ ಶಂಕರರ ವಿಜಯ ಯಾತ್ರೆ ಇವುಗಳ ವಿವರಗಳಿವೆ. ಕಾಪಾಲಿಕನ ಸಾವು, ಮೃತ್ಯುವು , ಗಂಗಾ ಸ್ನಾನದ ನಂತರ ಶಂಕರರು ಬದರಿಯಲ್ಲಿ ಗವಿಯೊಂದರಲ್ಲಿ ಗೋವಿಂದ ಭಗವತ್ಪಾದರಿದ್ದುದನ್ನು ತಿಳಿದು ಅವರ ಬಳಿಗೆ ಹೋಗಿ ತಮ್ಮ ಗ್ರಂಥಗಳನ್ನೆಲ್ಲ ತೋರಿಸುತ್ತಾರೆ ಶಂಕರರು . ಅವರಿಗೆ ತುಂಬ ಸಂತೋಷವಾಗುತ್ತದೆ. ಅವರು ಹೇಳುತ್ತಾರೆ, ನನಗೆ ಒಂದು ಆಕಾಂಕ್ಷೆಯಿದೆ. ಕಾಶ್ಮೀರದಲ್ಲಿ ಸರ್ವಜ್ಞ ಪೀಠವಿದೆ. ಅದನ್ನು ನೀನು ಅಲಂಕರಿಸಬೇಕು. ಅದು ಪ್ರತಿಷ್ಠೆಯ ಗುರುತಾಗಿ ಅಲ್ಲ, ಅದ್ವೈತತತ್ವದ ಪ್ರತಿಷ್ಠೆಗಾಗಿ. ಶಂಕರರು ಆ ಪೀಠವನ್ನು ಹತ್ತಿದಾಗ ಪುಷ್ಪವೃಷ್ಟಿಯಾಗುತ್ತದೆ. ಮುಂದೆ ಹಿಮಾಲಯದ ಮೇಲೆ ಹತ್ತುತ್ತಾ ಕಾಪಾಲಿಕ, ಜೈನ, ನೈಯಾಯಿಕರು ಸಿಗುತ್ತಾರೆ. ಅವರೆಲ್ಲರಿಗೂ ಶಂಕರರ ಒಂದೇ ಉತ್ತರ, ಸರ್ವ ಧರ್ಮಾನಂಗೀಕರೋಮಿ ಅಲ್ಲದೆ ನಿತ್ಯಶುದ್ಧಬುದ್ಧಮುಕ್ತಿ ಸ್ವಭಾವಂ ಆತ್ಮಾನಂ ಶರಣಂ ಗಚ್ಛಾಮಿ. ಹಿಮಾಲಯದ ಹಿಮದಲ್ಲಿ ಕೊನೆಯ ದೃಶ್ಯ, ಜ್ಞಾನ, ಮೃತ್ಯು ಪಕ್ಕದಲ್ಲೆ ಇದ್ದಾರೆ. ಶಂಕರರು ಮೃತ್ಯುವಿಗೆ ಹೇಳುತ್ತಾರೆ, ಏನು ನನ್ನನ್ನು ಹೆದರಿಸುತ್ತೀಯಾ ? ನಿನ್ನನ್ನು ಒಂದೇ ಕ್ಷಣದಲ್ಲಿ ಆಪೋಶನವಾಗಿ ಸ್ವೀಕರಿಸುತ್ತೇನೆ ಮೃತ್ಯು: ನನಗೆ ಗೊತ್ತು ಹೆದರಬೇಡ, ನಿರ್ಭಯವಾಗಿರು ನಾನು ಹೋಗುತ್ತೇನೆ. ಶಂಕರ: ಮೃತ್ಯು, ಬಾರಯ್ಯ ಹತ್ತಿರ. ನನ್ನ ಹುಟ್ಟಿನಿಂದ ಜೊತೆಯಲ್ಲಿಯೇ ಇದ್ದೆ. ಬಾ ಈಗ ನಾವು ಒಂದಾಗಿಬಿಡೋಣ! ಮೃತ್ಯುವು ಶಂಕರರ ಕಡೆಗೆ ತಿರುಗುತ್ತಿದ್ದಂತೆ ಮುಂದಿನ ಶ್ಲೋಕದ ಪಠಣವಾಗುತ್ತದೆ

ಆಕಾಶಾತ್ಪತಿತಂ ತೋಯಂ ಸಾಗರಂ ಪ್ರತಿ ಗಚ್ಛತಿ ಚಿತ್ರ ಮುಗಿಯುತ್ತದೆ. ಈ ಚಿತ್ರದ ಯಶಸ್ಸನ್ನು ಕಂಡು ಅಯ್ಯರ್ ಅವರು ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರ ಬಗ್ಗೆ ಇಷ್ಟೇ ಯಶಸ್ವಿಯಾದ ಚಲನಚಿತ್ರಗಳನ್ನುತಯಾರಿಸಿದ್ದಾರೆ. ರಾಮಾಯಣದ ಬಗ್ಗೆ ಬೃಹತ್ತಾದ ಯೋಜನೆ ಇತ್ತು. ಅವರ ಅನಿರೀಕ್ಷಿತ ಸಾವಿನಿಂದ ಅದು ನಿಂತು ಹೋಯಿತು . ಜಿ.ವಿ. ಅಯ್ಯರ್ ಅವರು ಇಲ್ಲ. ಅವರು ರಚಿಸಿರುವ ಚಿತ್ರಗಳು ಶಾಶ್ವತವಾಗಿ ನಮ್ಮ ಕಣ್ಣ ಮುಂದೆ ನಿಂತಿವೆ.

ಶೋಧ ವಿದ್ಯಾರ್ಥಿ:
**ಕೊಟ್ರೇಶ ಬಿ. ಎ.**
ಅಲಂಕಾರ ವಿಭಾಗ:
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜಪೇಟೆ, ಬೆಂಗಳೂರು– 560018
ಮೊಬೈಲ್ ನಂಬರ್: 7795058595
E-mail : kotreshba44@gmail.com

*************

**Volume XX : July to December – 2022, ISSN 2250-1711**
**Journal of Veda Samskrita Academy [Recognised in the UGC-CARE List]**

# ಗ್ರಹಣದ ದಿವಸ ಪ್ರತಿಸಾಂವತ್ಸರಿಕ ಶ್ರಾದ್ಧ : ಒಂದು ಶಾಸ್ತ್ರೀಯ ನೋಟ

**ಪ್ರೊ ॥ ವೆಂಕಟರಮಣ ಹೆಗಡೆ, ಮೈಸೂರು, ಕರ್ನಾಟಕ**

## ಪೀಠಿಕಾ / ಸಮಸ್ಯೆ

ದಿನಾಂಕ : 25–10–2022, ಶುಭಕೃತ್ ಸಂವತ್ಸರದ ಆಶ್ವೀನ ಕೃಷ್ಣ ಅಮಾವಾಸ್ಯೆಯ ದಿವಸ ಸೂರ್ಯಗ್ರಹಣ ಮತ್ತು ದಿನಾಂಕ : 08–11–2022, ಕಾರ್ತಿಕ ಶುಕ್ಲ ಪೂರ್ಣಿಮಾ ದಿನ ಚಂದ್ರಗ್ರಹಣವು ಸಂಭವಿಸಿದ್ದು ಈ ದಿನಗಳಂದು ಸೂರ್ಯನು ಗ್ರಸ್ತಾಸ್ತ ಮತ್ತು ಚಂದ್ರ ಗ್ರಸ್ತೋದಿತರಾಗುತ್ತಾರೆ. ಈ ಎರಡೂ ದಿನಗಳಂದು ಬಂದ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ತದ್ದಿನ ಉಪವಾಸವಿದ್ದು ಮರುದಿನ ಆಚರಿಸಲು ಪಂಚಾಂಗಕರ್ತರು ನಿರ್ದೇಶಿಸಿ ಬರೆದಿದ್ದರಿಂದ ಈ ವಿಷಯದಲ್ಲಿ ಜಿಜ್ಞಾಸೆ ಉಂಟಾಯಿತು.

ಪಂಚಾಂಗ ಕರ್ತರು ತಮ್ಮ ನಿರ್ಣಯಕ್ಕೆ ಪ್ರಮಾಣಗಳನ್ನು ನೀಡುತ್ತಾ ನಿರ್ಣಯಸಿಂಧು, ವೈದ್ಯನಾಥೀಯ, ಧರ್ಮಸಿಂಧು ಮೊದಲಾದ ಮಹಾನಿಬಂಧಗಳನ್ನು ಉದಾಹರಿಸಿರುತ್ತಾರೆ. ಆದರೆ ಸಮಸ್ಯೆಯೆಂದರೆ ನಿರ್ಣಯಸಿಂಧುಕಾರರು ತದ್ದಿವಸೀಯ ಶ್ರಾದ್ಧವನ್ನು ತದ್ದಿನವೇ ಮಾಡಲು ನಿರ್ಣಯಿಸಿರುತ್ತಾರೆ. ಆದ್ದರಿಂದ ಈ ವಿಷಯದಲ್ಲಿ ತದ್ದಿನದಲ್ಲಿಯೇ ಶ್ರಾದ್ಧವನ್ನು ಮಾಡಬೇಕೇ, ಮಾಡಿದಲ್ಲಿ ಹೇಗೆ ಮಾಡಬೇಕು ಅಥವಾ ಪರದಿನದಲ್ಲಿ ಶ್ರಾದ್ಧವನ್ನು ಮಾಡಬೇಕೇ, ಪರದಿನ ಶ್ರಾದ್ಧವನ್ನು ಹೇಗೆ ಮಾಡಬೇಕು, ತದ್ದಿನ ಶ್ರಾದ್ಧ ಮಾಡದಿದ್ದಲ್ಲಿ ದೋಷವೇನು ಎಂಬಿತ್ಯಾದಿ ಜಿಜ್ಞಾಸೆ ಇಲ್ಲಿ ಮೂಡುತ್ತದೆ. ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಶಾಸ್ತ್ರಾನುಗುಣವಾಗಿ ವಿವೇಚಿಸುತ್ತಾ ಒಂದು ನಿರ್ಣಯಕ್ಕೆ ಅನ್ವೇಷಿಸುತ್ತಾ ಈ ಲೇಖನವನ್ನು ಬರೆದು ಪ್ರಸ್ತುತಪಡಿಸಲಾಗುತ್ತಿದೆ.

## ಪ್ರಕರಣಾರಂಭ :

ಸೂರ್ಯ–ಚಂದ್ರಗ್ರಹಣವು ಅನೇಕ ಧಾರ್ಮಿಕ ಆಚರಣೆಗಳಿಗೆ ನಿಮಿತ್ತವಾಗಿದೆ. ಸೂರ್ಯಗ್ರಹಣವು ಅಮಾವಾಸ್ಯೆಯಲ್ಲೂ, ಚಂದ್ರಗ್ರಹಣವು ಹುಣ್ಣಿಮೆಯಲ್ಲೂ ಘಟಿಸುತ್ತದೆ. ಅಮಾವಾಸ್ಯೆ–ಹುಣ್ಣಿಮೆಗಳ ಅಂತ್ಯಪಾದ ಪ್ರತಿಪತ್ತಿನ ಮೊದಲ ಪಾದದಲ್ಲಿ ಗ್ರಹಣದ ಸಾಧ್ಯತೆ. ಎಲ್ಲಾ ಹುಣ್ಣಿಮೆ/ಅಮಾವಾಸ್ಯೆಯಲ್ಲೂ ಇದು ಘಟಿಸಲಾರದು. ಭೂಮಿ, ಸೂರ್ಯ, ಚಂದ್ರರು ತಮ್ಮ ತಮ್ಮ ಕಕ್ಷೆಗಳಲ್ಲಿ ಸುತ್ತುತ್ತಾ ಒಂದೇ ನೇರಕ್ಕೆ ಬಂದಾಗ ಅಮಾವಾಸ್ಯೆಯಲ್ಲಿ ಭೂಮಿ ಮತ್ತು ಸೂರ್ಯನ ನಡುವೆ ಚಂದ್ರ ಬಂದಾಗ ಸೂರ್ಯ ದರ್ಶನವು ಭೂಮಿಯ ಮೇಲಿರುವವರಿಗೆ ಬಾಧಿತವಾಗುತ್ತದೆ. ಇದೇ ಸೂರ್ಯಗ್ರಹಣ. ಹಾಗೇ ಈ ಮೂರೂ ಒಂದೇ ನೇರದಲ್ಲಿರುವಾಗ ಸೂರ್ಯನಿಂದ ಬೆಳಕನ್ನು ಪಡೆದು ಬೆಳಗುವ ಚಂದ್ರನು, ಭೂಮಿಯ ನೆರಳನ್ನು ಪ್ರವೇಶಿಸಿದಾಗ ಚಂದ್ರನು ಬೆಳಗಲಾರ. ಇದೇ ಚಂದ್ರಗ್ರಹಣ. ಅಂದರೆ ಬೆಳಕನ್ನು ಕೊಡುವ ಸೂರ್ಯ, ಬೆಳಕನ್ನು ಪಡೆಯುವ ಚಂದ್ರ ಇವರ ನಡುವೆ ಭೂಮಿ ಬಂದು ಸೂರ್ಯನ ಬೆಳಕಿನಿಂದುಂಟಾದ ಭೂಮಿಯ ನೆರಳಿನ ಕಾರಣದಿಂದ ಚಂದ್ರನು ಸೂರ್ಯನಿಂದ ಬೆಳಕನ್ನು ಪಡೆಯಲಾಗದ ಸ್ಥಿತಿ ಉಂಟಾಗುತ್ತದೆ. ಇದು ಒಂದು ಪ್ರಕೃತಿ ಸಾಂದರ್ಭಿಕ ಘಟನೆಯೆಂದೂ, ರಾಹುವಾಗಲೀ, ಕೇತುವಾಗಲೀ, ಸೂರ್ಯ–ಚಂದ್ರರನ್ನು ನುಂಗುತ್ತಾನೆನ್ನುವುದು "ಲೋಕಪ್ರಥಾ" ಎಂದೂ ವರಾಹಮಿಹಿರರು ಸಂಹಿತಾ ಗ್ರಂಥದಲ್ಲಿ ಹೇಳಿರುತ್ತಾರೆ. ಹಾಗಿದ್ದರೂ ಈ ಕಕ್ಷಾ ಸಂಪಾತ ಬಿಂದುಗಳಲ್ಲಿ ರಾಹು–ಕೇತುಗಳು ಸೂರ್ಯ–ಚಂದ್ರರನ್ನು "ಗ್ರಹಣ" ಮಾಡುತ್ತಾರೆ ನುಂಗುತ್ತಾರೆ ಎನ್ನುವುದೇ "ಗ್ರಹಣ" ಪದದ ಅರ್ಥ. ಈ ಸಂಬಂಧ ಪುರಾಣಗಳಲ್ಲಿ ಅನೇಕ ಕಥೆಗಳಿರುವುದು ವಿದಿತವಾಗಿದೆ. ಈ ಸೂರ್ಯ–ಚಂದ್ರರ ಗ್ರಹಣಾವಸ್ಥೆಯನ್ನು ಒಂದು ಅಪೂರ್ವ / ಅಲಭ್ಯ ಯೋಗವೆಂದು ಧರ್ಮಶಾಸ್ತ್ರಗಳು ಗ್ರಹಿಸುತ್ತವೆ. ಆದ್ದರಿಂದ ಇದೊಂದು ಪುಣ್ಯಸಂಪಾದಿಸುವ "ಪುಣ್ಯಕಾಲ" ಎಂದು ಗ್ರಹಿಸಲ್ಪಡುತ್ತದೆ. ಹಾಗೂ ಈ ಅವಸ್ಥೆಯಲ್ಲಿ ಸೂರ್ಯ–ಚಂದ್ರರನ್ನು ರಾಹು–ಕೇತುಗಳು ನುಂಗುವುದರಿಂದ "ಅಶೌಚ" ದ ಕಾಲವೆಂದೂ ಹೇಳಲ್ಪಟ್ಟಿದೆ. ಆದ್ದರಿಂದ ಈ ಸಮಯದಲ್ಲಿ ಕೆಲವು ಕರ್ಮಗಳನ್ನು ಮಾಡುವಂತೆ ಶಾಸ್ತ್ರಗಳು ವಿಧಿಸುತ್ತವೆ. ಇನ್ನು ಕೆಲವನ್ನು ಮಾಡಬಾರದೆಂಬುದಾಗಿ ನಿಷೇಧಿಸುತ್ತವೆ. ಆದ್ದರಿಂದ 'ಅಶೌಚ' ಪದದ ಅರ್ಥವನ್ನು ವಿವರಿಸುತ್ತಾ ವಿಜ್ಞಾನೇಶ್ವರರು ಮಿತಾಕ್ಷರಾದಲ್ಲಿ "ಅಶೌಚಶಬ್ದೇನ ಕಾಲಸ್ನಾನಾದ್ಯಪನೋದ್ಯಃ ಪಿಂಡೋದಕದಾನಾದಿವಿಧೇಃ ಅಧ್ಯಯನಾದಿ ಪರ್ಯುದಾಸಸ್ಯ ಚ ನಿಮಿತ್ತಭೂತಃ ಪುರುಷಗತಃ ಕಶ್ಚನ ಅತಿಶಯಃ ಕಥ್ಯತೇ" ಎಂದಿದ್ದಾರೆ. ಗ್ರಹಣನಿಮಿತ್ತಕ ಅಶೌಚದಲ್ಲಿಯೂ ಸ್ನಾನ, ದಾನ, ಜಪ, ಹೋಮ, ಶ್ರಾದ್ಧಗಳನ್ನು ಮಾಡುವಂತೆ ವಿಧಿಸಲಾಗುತ್ತದೆ ಮತ್ತು ಭೋಜನ, ಶಯನಾದಿಗಳನ್ನು ಮಾಡದಂತೆ ನಿಷೇಧಿಸಲಾಗುತ್ತದೆ. ಈ ಎಲ್ಲಾ ನೈಮಿತ್ತಿಕ ಆಚರಣೆಗಳಿಗೆ ಗ್ರಹಣವು ನಿಮಿತ್ತವಾಗುತ್ತದೆ. ಈ ನಿಮಿತ್ತವಾಗಿ ಉಪದಿಷ್ಟ ಕರ್ಮಗಳು ಮತ್ತು ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ಮಾಡುವ ನಿತ್ಯ ಕರ್ಮಗಳು ಇವೆರಡೂ ಒಟ್ಟೊಟ್ಟಿಗೆ ಪ್ರಾಪ್ತವಾದಾಗ (ಸಂಪಾತವಾದಾಗ) ಯಾವ ಕರ್ಮವನ್ನು ಹೇಗೆ ನಿರ್ವಹಣೆ ಮಾಡುವುದು ಎಂದು ಶಾಸ್ತ್ರಗಳು ವಿಮರ್ಶಿಸಿ ವ್ಯವಸ್ಥಾಪನೆಗೊಳಿಸುತ್ತವೆ. ಗ್ರಹಣದ ದಿನ ತಂದೆ–ತಾಯಿಯರ ಮೃತತಿಥಿ (ಶ್ರಾದ್ಧ) ಪ್ರಾಪ್ತವಾದಾಗ ಶ್ರಾದ್ಧಾಚರಣೆಯನ್ನು ಯಾವಾಗ ಹೇಗೆ ಅನುಷ್ಠಾನ ಮಾಡಬೇಕು ಎಂಬುದು ಈ ಲೇಖನದ ವಿಷಯ. ಈ ವಿಷಯ ಮಂಡನೆಗಾಗಿ ಶಾಸ್ತ್ರವಾಕ್ಯಗಳನ್ನು ಉದ್ಧರಿಸುತ್ತಾ ವಿವೇಚಿಸಲಾಗುತ್ತದೆ.

## ಗ್ರಹಣ ಸಂಬಂಧೀ ವಿಧಿ–ನಿಷೇಧಗಳು

'ಸೂರ್ಯಗ್ರಹೇ ತು ನಾಶ್ನೀಯಾತ್ ಪೂರ್ವಯಾಮಚತುಷ್ಟಯಮ್ । ಚಂದ್ರಗ್ರಹೇ ತು ಯಾಮಾನ್ತ್ರೀನ್ ಬಾಲವೃದ್ಧಾತುರೈರ್ವಿನಾ ॥

ಎಂದು ಕಾಲಮಾಧವ, ನಿರ್ಣಯಸಿಂಧು, ಧರ್ಮಸಿಂಧು ಮೊದಲಾದ ನಿಬಂಧಗಳಲ್ಲಿ ವೃದ್ಧಗೌತಮವಚನವನ್ನು ಉದಾಹರಿಸಲಾಗಿದೆ. ಇದು ಸಾಮಾನ್ಯ ವಚನ. ಬಾಲವೃದ್ಧಾತುರಾಶಕ್ತರು 'ಸಾಯಾಹ್ನೇ ಗ್ರಹಣಂ ಚೇತ್ ಸ್ಯಾತ್ ಅಪರಾಹ್ಣೇ ನ ಭೋಜನಮ್' ಎಂದು ಒಂದು ಯಾಮಾಂತರವನ್ನು ಬಿಟ್ಟು ಮೊದಲು ಭೋಜನ ಮಾಡಬಹುದು. ಗ್ರಹಣ ಪೂರ್ವಯಾಮದಲ್ಲಿ ನಿಷಿದ್ಧಾವರಿಗೂ ಕೂಡ. ಕಾಲಮಾಧವಧೃತ ಬ್ರಹ್ಮಾಂಡ ಪುರಾಣ ವಚನದಂತೆ 'ಅಶೌಚಂ ಜಾಯತೇ ನೃಣಾಂ ಗ್ರಹಣೇ ಚಂದ್ರ–ಸೂರ್ಯಯೋಃ ।' ಸರ್ವ ವರ್ಣದವರಿಗೂ ಅಶೌಚ ಉಂಟಾಗುತ್ತದೆ. ಷಟ್ ತ್ರಿಂಶನ್ಮತ ಹೇಳುವಂತೆ 'ಸ್ನಾತ್ವಾ ಕರ್ಮಾಣಿ ಕುರ್ವೀತ ಶೃತಮನ್ನಂ ವಿವರ್ಜಯೇತ್ ॥' ಸ್ನಾನಾನಂತರ ಶ್ರೌತ–ಸ್ಮಾರ್ತ ಕರ್ಮಗಳನ್ನು ಮಾಡಬೇಕು ಮತ್ತು ಬೇಯಿಸಿದ ಅನ್ನವನ್ನು ತ್ಯಜಿಸಬೇಕು. ಬ್ರಹ್ಮವೈವರ್ತ ಪುರಾಣವು 'ಸ್ನಾನಂ ಸ್ಯಾದುಪರಾಗಾದೌ ಮಧ್ಯೇ ಹೋಮಃ ಸುರಾರ್ಚನಮ್' ಎಂದು ಸ್ನಾನ, ಹೋಮ, ದೇವತಾರ್ಚನೆಗಳನ್ನು ಮಾಡಬೇಕು ಎನ್ನುತ್ತದೆ. ಶಿವರಹಸ್ಯ ವಚನದಂತೆ 'ಸೂರ್ಯೇಂದುಗ್ರಹಣಂ ಯಾವತ್ ತಾವತ್ ಕುರ್ಯಾಜ್ಜಪಾದಿಕಮ್ । ನ ಸ್ವಪೇನ್ನ ಚ ಭುಂಜೀತ ಸ್ನಾತ್ವಾ ಭುಂಜೀತ ಮುಕ್ತಯೋಃ ॥' ಜಪ, ಮೋಕ್ಷಾನಂತರ ಸ್ನಾನವನ್ನು ಮಾಡಬೇಕು. ದಾನವನ್ನು ಮಾಡುವಂತೆ ಮಹಾಭಾರತವು ಉಪದೇಶಿಸುತ್ತದೆ. ಯಥಾ– 'ಭೂಮಿರ್ಗಾವಃ ಸುವರ್ಣಂ ವಾ ಧಾನ್ಯಂ ವಾ ಯದ್ಯದೀಪ್ಸಿತಮ್ । ತತ್ಸರ್ವಂ ಗ್ರಹಣೇ ದೇಯಂ ಆತ್ಮನಃ ಶ್ರೇಯ ಇಚ್ಛತಾ ॥' ಇತಿ । ಈ ದಾನದ ಫಲವು ಲಕ್ಷಕೋಟಿಗುಣಿತ ಫಲ ಕೊಡುತ್ತದೆ. ಯಥೋಕ್ತಂ ಬ್ರಹ್ಮಪುರಾಣೇ– 'ಉಪಮರ್ದೇ ಲಕ್ಷಗುಣಂ ಗ್ರಹಣೇ ಚಂದ್ರ–ಸೂರ್ಯಯೋಃ । ಪುಣ್ಯಂ ಕೋಟಿಗುಣಂ ಮಧ್ಯೇ ಮುಕ್ತಿಕಾಲೇಽತ್ವನಂತಕಮ್ ॥' ಇತಿ । ಇದೇ ರೀತಿ ಗ್ರಸ್ತೋದಯಾಸ್ತಗಳಲ್ಲಿ ವಿಶೇಷ ನಿಯಮಗಳನ್ನು ಹೇಳಲಾಗಿದೆ. "ಗ್ರಸ್ತೋದಯೇ ವಿಧೋಃ ಪೂರ್ವಂ ನಾಹರ್ಭೋಜನಮಾಚರೇತ್ ।" ಎಂದೂ, "ಗ್ರಸ್ತಾವೇವಾಸ್ತಮಾನಂ ತು ರವೀಂದೂ ಪ್ರಾಪ್ನುತೋ ಯದಿ । ಪರೇದ್ಯುರುದಯೇ ಸ್ನಾತ್ವಾ ಶುದ್ಧೋಽಭ್ಯವಹರೇನ್ನರಃ ॥" ಎಂದೂ ವೃದ್ಧವಸಿಷ್ಠ ಮತ್ತು ಭೃಗು ಹೇಳುತ್ತಾರೆ. ಇಲ್ಲಿ ಉದಯವೆಂದರೆ ಸೂರ್ಯ–ಚಂದ್ರರ ಉದಯ. ಪರೇಽಹನಿ, ರಾತ್ರೌ ಕ್ರಮೇಣ ರವಿ ಚಂದ್ರರ ಉದಯವಾದ ಮೇಲೆ ಸ್ನಾನ ಮಾಡಿ ಭೋಜನ ಮಾಡಬೇಕು. ಈ ಗ್ರಹಣದಲ್ಲಿ ಗ್ರಹಣ ನಿಮಿತ್ತಕ ಶ್ರಾದ್ಧವನ್ನೂ ಹೇಳಲಾಗಿದೆ ಮತ್ತು ತದಕರಣದಲ್ಲಿ ದೋಷವನ್ನೂ ಹೇಳಲಾಗಿದೆ. ಯಥಾ– ನಿರ್ಣಯಸಿಂಧುವಿನಲ್ಲಿ ಭಾರತ ವಚನ– "ಸರ್ವಸ್ವೇನಾಪಿ ಕರ್ತವ್ಯಂ ಶ್ರಾದ್ಧಂ ವೈ ರಾಹುದರ್ಶನೇ । ಅಕುರ್ವಾಣಸ್ತು ನಾಸ್ತಿಕ್ಯಾತ್ ಪಂಕೇ ಗೌರಿವ ಸೀದತಿ ॥" ಇತಿ । ಈ ನೈಮಿತ್ತಿಕ ಶ್ರಾದ್ಧದಿಂದ ಸಮಸ್ತ ಭೂಮಿಯನ್ನೂ, ದಾನಮಾಡಿದಷ್ಟು ಪುಣ್ಯ ಫಲವೂ ಉಂಟು. ಅದನ್ನು ಋಷ್ಯಶೃಂಗ ವಚನವು ಹೇಳುತ್ತದೆ. "ಚಂದ್ರಸೂರ್ಯಗ್ರಹೇ ಯಸ್ತು ಶ್ರಾದ್ಧಂ ವಿಧಿವದಾಚರೇತ್ । ತೇನೈವ ಸಕಲಾ ಪೃಥ್ವೀ ದತ್ತಾ ವಿಪ್ರಸ್ಯ ವೈ ಕರೇ ॥" ಇತಿ । 'ಯೇನ ವಿಹಿತಕರ್ಮಣಾಆಚರಿತೇನ ಉಕ್ತಫಲಂ ಲಭ್ಯತೇ, ಅನಾಚರಿತೇನ ಚ ದೋಷಾವಾಪ್ತಿಃ, ತತ್ ನೈಮಿತ್ತಿಕಂ ಕರ್ಮ' ಎಂದು ನ್ಯಾಯಮಾಲಾವಿಸ್ತರಾದಿಗಳಲ್ಲಿ ನೈಮಿತ್ತಿಕ ಕರ್ಮದ ಸ್ವರೂಪವನ್ನು ವಿವರಿಸಲಾಗಿದೆ. ಹೀಗೆ ಚಂದ್ರ–ಸೂರ್ಯಗ್ರಹಣವು ನಿಮಿತ್ತವಾಗಿದ್ದು ತನ್ನಿಮಿತ್ತೇನ ವಿಹಿತವಾದ ಸ್ನಾನ, ದಾನ, ಜಪ, ಹೋಮಾದಿಗಳನ್ನು ಮಾಡದಿದ್ದಲ್ಲಿ ದೋಷವೂ, ಮಾಡಿದಲ್ಲಿ ಅಪೂರ್ವ ಪುಣ್ಯವೂ ಲಭಿಸುತ್ತದೆ. ಹಾಗೇ ನಿಷಿದ್ಧವಾದ ಭೋಜನವನ್ನು ಮಾಡಿದಲ್ಲಿ ದೋಷವು ಉಕ್ತವಾಗಿದ್ದು ಪ್ರಾಯಶ್ಚಿತ್ತವನ್ನೂ ವಿಧಿಸಲಾಗಿದೆ. "ಮೃತಕೇ ಸೂತಕೇ ಚೈವ ಗ್ರಹಣೇ ಚಂದ್ರ– ಸೂರ್ಯಯೋಃ । ಛಾಯಾಯಾಂ ಕುಂಜರಸ್ಯಾಥ ಭುಕ್ತ್ವಾ ತು ನರಕಂ ವ್ರಜೇತ್ ॥" ಎಂದು ಚತುರ್ವರ್ಗಚಿಂತಾಮಣಿಯಲ್ಲೂ "ಚಂದ್ರ–ಸೂರ್ಯಗ್ರಹೇ ಭುಕ್ತ್ವಾ ಪ್ರಾಜಾಪತ್ಯೇನ ಶುದ್ಧ್ಯತಿ । ತಸ್ಮಿನ್ನೇವ ದಿನೇ ಭುಕ್ತ್ವಾ ತ್ರಿರಾತ್ರೇಣೈವ ಶುಧ್ಯತಿ ॥" ಎಂದು ಕಾಲಮಾಧವೀಯದಲ್ಲೂ ಹೇಳಲಾಗಿದೆ.

## ಪ್ರತಿಸಾಂವತ್ಸರಿಕ ಶ್ರಾದ್ಧ :

ಮಾತಾ–ಪಿತೃಗಳ ಮರಣಾನಂತರ ಪುತ್ರರು ಮಾಡುವ ಪಿತೃಯಜ್ಞವನ್ನು 'ಶ್ರಾದ್ಧ' ಎಂದು ಕರೆಯುತ್ತಾರೆ. ಆದ್ದರಿಂದ "ಬ್ರಾಹ್ಮಣ–ಸ್ವೀಕಾರಾಂತಶ್ಚತುರ್ಥ್ಯಂತ ಪದೋಪನೀತ ಪಿತ್ರಾದ್ಯುದ್ದೇಶಕಃ ತ್ಯಾಗಃ ಶ್ರಾದ್ಧಮ್' ಎಂದು ಕಮಲಾಕರ ಭಟ್ಟರು ಶಾದ್ಧವನ್ನು ವಿವರಿಸುತ್ತಾರೆ. ಅಗ್ನೌಕರಣ, ಪಿಂಡದಾನ, ಬ್ರಾಹ್ಮಣ ಭೋಜನಗಳು ಶ್ರಾದ್ಧದಲ್ಲಿ ಪ್ರಧಾನ ಎಂದು ಹೇಮಾದ್ರಿ ಹೇಳುತ್ತಾನೆ. ಆದರೆ ಕೆಲವು ಶ್ರಾದ್ಧಗಳಲ್ಲಿ ಪಿಂಡದಾನ, ಬ್ರಾಹ್ಮಣಭೋಜನ, ಅಗ್ನೌಕರಣಗಳಲ್ಲಿ ಒಂದೆರಡನ್ನು ನಿಷೇಧಿಸಿರುವುದು ಕಂಡು ಬರುತ್ತದೆ. ನಿತ್ಯ ಶ್ರಾದ್ಧದಲ್ಲಿ ಅರ್ಘ್ಯ, ಪಿಂಡ, ವಿಶ್ವೇದೇವರನ್ನು ನಿಷೇಧಿಸಿದೆ. ಇಲ್ಲಿ ಭೋಜನ ಮಾತ್ರ ಪ್ರಧಾನ. ಮಘಾಶ್ರಾದ್ಧಾದಿಗಳಲ್ಲಿ ಪಿಂಡ ನಿಷಿದ್ಧ. ಜಾತಕರ್ಮ ಶ್ರಾದ್ಧದಲ್ಲಿ ಭೋಜನ ನಿಷಿದ್ಧ. ಹೀಗಿದ್ದರೂ ಸರ್ವಶ್ರಾದ್ಧಗಳಿಗೂ ಪ್ರಕೃತಿಯಾದ ಪಾರ್ವಣಶ್ರಾದ್ಧದಲ್ಲಿ ಈ ಮೂರೂ ಪ್ರಧಾನಗಳೇ ಆಗಿರುತ್ತವೆ. ಹೀಗೆ ಪ್ರತಿಸಾಂವತ್ಸರಿಕಶ್ರಾದ್ಧವೂ ಈ ಮೂರೂ ಪ್ರಧಾನಗಳಿಂದ ಕೂಡಿರುತ್ತದೆ. ಈ ಪ್ರತಿಸಾಂವತ್ಸರಿಕ ಶ್ರಾದ್ಧವು ದ್ವಾದಶ ವಿಧ ಶ್ರಾದ್ಧಗಳಲ್ಲಿ ಒಂದು. ಇದು 96 ನಿತ್ಯಶ್ರಾದ್ಧಗಳಲ್ಲಿ ಒಂದು. ಯಾವ ಶ್ರಾದ್ಧವನ್ನು ನಿತ್ಯತ್ವೇನ / ಸದಾ ಯಾವದಾಯು ಮಾಡಬೇಕೆಂದು ಹೇಳುತ್ತಾರೋ ಯಾವ ಶ್ರಾದ್ಧವನ್ನು ಮಾಡದಿದ್ದರೆ ಪ್ರತ್ಯವಾಯ ಶ್ರುತವಾಗುವುದೋ ಅದು ನಿತ್ಯ. ಅದನ್ನೇ ವಿಜ್ಞಾನೇಶ್ವರರು "ನಿತ್ಯಂ ನಿಯತನಿಮಿತ್ತೋಪಾಧೌ ಚೋದಿತಮಹರಹರಮಾವಾಸ್ಯಾಷ್ಟಕಾದಿಷು" ಎಂದಿದ್ದಾರೆ. ಈ ಶ್ರಾದ್ಧವನ್ನು ಮಾಡುವುದರಿಂದ ವಿಶಿಷ್ಟಸ್ವರ್ಗಾದಿ ಫಲಗಳು ಪ್ರಾಪ್ತವಾಗದಿದ್ದರೂ ಅಕರಣೇ ಪ್ರತ್ಯವಾಯ ಉಂಟಾಗುತ್ತದೆ. ಅದನ್ನೇ ಸ್ಮೃತಿವಾಕ್ಯ ಹೀಗೆ ಹೇಳುತ್ತದೆ. ಯಥಾ– ಮದನರತ್ನೇ ಭವಿಷ್ಯೇ–"ಸರ್ವೇಷಾಮೇವ ಶ್ರಾದ್ಧಾನಾಂ ಶ್ರೇಷ್ಠಂ ಸಾಂವತ್ಸರಂ ಪರಮ್ । ಭೋಜಕೋ ಯಸ್ತು ವೈ ಶ್ರಾದ್ಧಂ ನ ಕರೋತಿ ಖಗಾಧಿಪ ॥ ಮಾತಾಪಿತೃಭ್ಯಾಂ ಸತತಂ ವರ್ಷೇ ವರ್ಷೇ ಮೃತೇಽಹನಿ ॥ ಸ ಯಾತಿ ನರಕಂ ಘೋರಂ ತಾಮಿಸ್ರಂ ನಾಮ ನಾಮತಃ ॥" ಇತಿ । ಮರಣ ಹೊಂದಿದ ಪಿತೃಗಳಿಗೆ ಶ್ರಾದ್ಧವನ್ನು ಪುತ್ರರು ಪ್ರಯತ್ನ ಪೂರ್ವಕವಾಗಿ ಮಾಡ–

ಬೇಕೆಂದು ಶ್ರಾದ್ಧಪ್ರಕಾಶದಲ್ಲಿ ಹೇಳಲಾಗಿದೆ. ಯಥಾ– "ಪ್ರಮೀತಸ್ಯ ಪಿತುಃ ಪುತ್ರೈಃ ಶ್ರಾದ್ಧಂ ದೇಯಂ ಪ್ರಯತ್ನತಃ ।" ಇತಿ । ಪ್ರತಿ ಸಾಂವತ್ಸರಿಕ ಶ್ರಾದ್ಧವನ್ನು ಕ್ಷಯಾಹ ಶ್ರಾದ್ಧವೆಂದೂ ಹೇಳುತ್ತಾರೆ. ಅದರ ಸ್ವರೂಪವನ್ನು ಹೇಮಾದ್ರಿ ವ್ಯಾಸರ ವಚನದಿಂದ ದಾಖಲಿಸಿದ್ದಾನೆ. ಯಥಾ– "ಮಾಸ–ಪಕ್ಷ–ತಿಥಿ ಸ್ಪೃಷ್ಟೇ ಯೋ ಯಸ್ಮಿನ್ ಮ್ರಿಯತೇಽಹನಿ । ಪ್ರತ್ಯಬ್ದಂ ತು ತಥಾಭೂತಂ ಕ್ಷಯಾಹಂ ತಸ್ಯ ತಂ ವಿದುಃ ॥" ಇತಿ । "ಆಬ್ದಿಕೇ ಪಿತೃಕಾರ್ಯೇ ಚ ಚಾಂದ್ರೋ ಮಾಸಃ ಪ್ರಶಸ್ಯತೇ ।" ಎಂದು ಗರ್ಗರು ಚಾಂದ್ರಮಾನದಿಂದ ಪ್ರತ್ಯಾಬ್ದಿಕಾಚರಣೆಯನ್ನು ಹೇಳಿದ್ದಾರೆ. "ಏಕೋದ್ದಿಷ್ಟಂ ತು ಕರ್ತವ್ಯಂ ಪಿತ್ರೋಶ್ಚೈವ ಮೃತೇಽಹನಿ ।" ಎಂದು ಹಾಗೂ "ಸಪಿಂಡೀಕರಣಂ ಕೃತ್ವಾ ಕುರ್ಯಾತ್ ಪಾರ್ವಣವತ್ ಸದಾ । ಪ್ರತಿಸಂವತ್ಸರಂ ಶ್ರಾದ್ಧಂ ಛಾಗಲೇಯೋದಿತೋ ವಿಧಿಃ ॥" ಎಂದೂ, ಈ ಕ್ಷಯಾಹ ಶ್ರಾದ್ಧವನ್ನು ಪಾರ್ವಣ / ಏಕೋದ್ದಿಷ್ಟ ವಿಧಾನದಿಂದ ಮಾಡಲು ಉಪದೇಶಿಸಿದ್ದಾರೆ.

**ಶ್ರಾದ್ಧಕಾಲ :**

ಏಕೋದ್ದಿಷ್ಟಶ್ರಾದ್ಧವನ್ನು ಮಧ್ಯಾಹ್ನ ಮಾಡಬೇಕು. ಹಗಲನ್ನು ಐದು ಭಾಗ ಮಾಡಿದಾಗ ಮಧ್ಯದ ಭಾಗವನ್ನು 'ಮಧ್ಯಾಹ್ನ' ಎಂದು ಹೇಳಲಾಗಿದೆ. ಮಧ್ಯಾಹ್ನ ಕಾಲದಲ್ಲಿ 'ಕುತಪ' ಮತ್ತು 'ರೌಹಿಣ' ಮುಹೂರ್ತಗಳು ಮುಖ್ಯ ಕಾಲ. ಪಾರ್ವಣ ವಿಧಾನದಿಂದ ಮಾಡುವುದಾದರೆ 'ಅಪರಾಹ್ಣ' ಕಾಲದಲ್ಲಿ ಮಾಡಬೇಕು. "ಆಮಶ್ರಾದ್ಧಂ ತು ಪೂರ್ವಾಹ್ಣೇ ಏಕೋದ್ದಿಷ್ಟಂ ತು ಮಧ್ಯಮೇ । ಪಾರ್ವಣಂ ಚಾಪರಾಹ್ಣೇ ತು ಪ್ರಾತರ್ವೃದ್ಧಿನಿಮಿತ್ತಕಮ್ ॥" ಎಂದು ಕಾಲವನ್ನು ಹೇಳಲಾಗಿದೆ. ಒಂದು ವೇಳೆ ಕ್ಷಯಾಹವು ಅಮಾವಾಸ್ಯೆಯಂದು ಇದ್ದಲ್ಲಿ ಮೊದಲು ಪ್ರತಿಸಾಂವತ್ಸರಿಕವನ್ನು ಮಾಡಿ ನಂತರ ಪಿಂಡಪಿತೃಯಜ್ಞ ಮತ್ತು ದರ್ಶಶ್ರಾದ್ಧವನ್ನು ಮಾಡಬೇಕು.

**ಅನ್ನೇನೈವ ಸಾಂವತ್ಸರಿಕಶ್ರಾದ್ಧಮ್–**

ಈ ಪ್ರತಿಸಾಂವತ್ಸರಿಕ ಶ್ರಾದ್ಧವನ್ನು ಅನ್ನದಿಂದಲೇ ಮಾಡಬೇಕೆಂದು ಸ್ಮೃತಿಗಳು ಹೇಳುತ್ತವೆ. ಯಥಾಹ ಲೋಗಾಕ್ಷಿಃ – ಪುಷ್ಪವತ್ಸ್ವಪಿ ದಾರೇಷು ವಿದೇಶಸ್ಥೋಽಪ್ಯನಗ್ನಿಕಃ । ಅನ್ನೇನೈವಾಬ್ದಿಕಂ ಕುರ್ಯಾತ್ ಹೇಮ್ನಾ ವಾಮೇನ ನ ಕ್ವಚಿತ್ ॥ ಇತಿ । ಹಾಗೇ ಮರೀಚಿ ಕೂಡಾ –"ಅನಗ್ನಿಶ್ಚ ಪ್ರವಾಸೀ ಚ ಯಸ್ಯ ಭಾರ್ಯಾ ರಜಸ್ವಲಾ । ಆಮಶ್ರಾದ್ಧಂ ಪ್ರಕುರ್ವೀತ ನ ತತ್ ಕುರ್ಯಾತ್ ಮೃತೇಽಹನಿ ॥ ಎಂದು ಹೇಳಿದ್ದಾನೆ.

**ಮುಖ್ಯ ವಿಚಾರ– ಗ್ರಹಣದ ದಿನ ಸಾಂವತ್ಸರಿಕ ಶ್ರಾದ್ಧ ಬಂದಾಗ ?**

ಈ ಪ್ರತಿಸಾಂವತ್ಸರಿಕ ಶ್ರಾದ್ಧತಿಥಿಯು ಅಮಾವಾಸ್ಯೆಯಂದು ಇರುವಾಗ, ಸೂರ್ಯಗ್ರಹಣವೂ, ಹುಣ್ಣಿಮೆಯಂದು ಇರುವಾಗ ಚಂದ್ರಗ್ರಹಣವೂ ಬರುವ ಸಾಧ್ಯತೆ ಇರುತ್ತದೆ. ಹೀಗೆ ಗ್ರಹಣ ಪ್ರಾಪ್ತವಾದಾಗ ಪ್ರತಿಸಾಂವತ್ಸರಿಕಶ್ರಾದ್ಧವನ್ನು ಮಾಡುವುದು ಹೇಗೆ ಎಂಬುದು ಮುಖ್ಯ ಸಮಸ್ಯೆ. ಈ ಸೂರ್ಯಗ್ರಹಣದ ಪೂರ್ವದಲ್ಲಿ ನಾಲ್ಕು ಯಾಮಗಳೂ (12 ತಾಸು), ಚಂದ್ರಗ್ರಹಣದ ಪೂರ್ವದಲ್ಲಿ ಮೂರು ಯಾಮಗಳೂ (9 ತಾಸು) ಗ್ರಹಣ ವೇಧೆಯಿರುವುದರಿಂದ ಈ ಸಮಯದಲ್ಲಿ ಭೋಜನವು ನಿಷಿದ್ಧವಾಗಿರುತ್ತದೆ. ಇಂತಹ ದಿನ (ಗ್ರಹಣದ ದಿನ) ಪ್ರತಿಸಾಂವತ್ಸರಿಕ ಶ್ರಾದ್ಧವು ಪ್ರಾಪ್ತವಾಗಿದ್ದರೂ, ಅದನ್ನು ಅನ್ನದಿಂದಲೇ ಮಾಡಬೇಕೆಂದಿದ್ದು, ಅಸಂಭವದಲ್ಲಿ ಇದನ್ನು ಆಮ ಅಥವಾ ಹೇಮದಿಂದ ಮಾಡಬೇಕೆಂದು ಗೋಭಿಲವಚನವನ್ನು ಉದಾಹರಿಸಿ, ಪ್ರಯೋಗಪಾರಿಜಾತದಲ್ಲಿ ಹೇಳಿದೆ. "ದರ್ಶೇ ರವಿಗ್ರಹೇ ಪಿತ್ರೋಃ ಪ್ರತ್ಯಾಬ್ದಿಕಮುಪಸ್ಥಿತಮ್ । ಅನ್ನೇನಾಸಂಭವೇ ಹೇಮ್ನಾ ಕುರ್ಯಾದಾಮೇನ ವಾ ಸುತಃ ॥" ಇತಿ ।

ಇಲ್ಲಿ ರವಿ, ಪಿತೃ, ಸುತ ಶಬ್ದಗಳು ಕೇವಲ ಪ್ರದರ್ಶನಾರ್ಥ ಶಬ್ದಗಳು. ಚಂದ್ರಗ್ರಹಣದಲ್ಲಿ ಸಮಾನ ನ್ಯಾಯವಿರುವುದರಿಂದ ಸಪಿಂಡಾದಿ ವಾರ್ಷಿಕ ಶ್ರಾದ್ಧವನ್ನು ಅದೇ ದಿನವೇ ಅನ್ನಾದಿನಾ ಮಾಡಬೇಕು ಎಂದು ಮದನ ಪಾರಿಜಾತದಲ್ಲಿ ಹೇಳಲಾಗಿದೆ. ಪೃಥ್ವೀ ಚಂದ್ರೋದಯ– ದಲ್ಲೂ ಹೀಗೇ ಹೇಳಲಾಗಿದೆ. ಆದ್ದರಿಂದ ಗ್ರಹಣ ವೇಧಕಾಲೀನ ನಿಷೇಧವಿದ್ದರೂ ಅನ್ನದಿಂದ ಶ್ರಾದ್ಧವನ್ನು ಅದೇ ದಿನ ಮಾಡುವುದು ಪ್ರಥಮ ಪಕ್ಷ. ಗ್ರಹಣ ನಿಮಿತ್ತಕ ಮತ್ತು ಗ್ರಹಣ ಕಾಲದಲ್ಲಿ ಮಾಡುವ ಶ್ರಾದ್ಧವನ್ನೂ ಕೂಡ ಅನ್ನದಿಂದಲೇ ಮಾಡಲು ಅಪರಾರ್ಕನು ಹೇಳಿದ್ದಾನೆಂದು ನಿರ್ಣಯಸಿಂಧುವಿನಲ್ಲಿ ಹೇಳಲಾಗಿದೆ. ಯಥಾ–"ಅಪರಾರ್ಕಸ್ತು ಏತದ್ವಿಜಾತೀನಾಂ ಪಾಕಾಭಾವೇ ದ್ರಷ್ಟವ್ಯಂ, ತೀರ್ಥಶ್ರಾದ್ಧವತ್ । ಪಾಕಾಭಾವೇ ದ್ವಿಜಾತೀನಾಂ ಆಮಶ್ರಾದ್ಧಂ ವಿಧೀಯತೆ ॥" ಇತಿ । ಸುಮಂತೂಕ್ತೇಃ, "ಸೈಂಹಿಕೇಯೋ ಯದಾ ಸೂರ್ಯಂ ಗ್ರಸತೇ ಪರ್ವಸಂಧಿಷು । ಗಜಚ್ಛಾಯಾ ತು ಸಾ ಪ್ರೋಕ್ತಾ ತಸ್ಯಾಂ ಶ್ರಾದ್ಧಂ ಪ್ರಕಲ್ಪಯೇತ್ ॥ ಘೃತೇನ ಭೋಜಯೇತ್ ವಿಪ್ರಾನ್ ಘೃತಂ ಭೂಮೌ ಸಮುತ್ಸೃಜೇತ್ ।" ಎಂದೂ, ಮತ್ತು "ಗ್ರಹಣೇ ಶ್ರಾದ್ಧಭೋಕ್ತುರ್ದೋಷಃ, ದಾತುಸ್ತ್ವಭ್ಯುದಯಃ" ಎಂದು ವಿಜ್ಞಾನೇಶ್ವರರು ಹೇಳಿರುವುದರಿಂದ ಅನ್ನೇನೈವ ಶ್ರಾದ್ಧಮಾಡಲು ತಿಳಿಸಿದ್ದಾರೆ ಅಪರಾರ್ಕರು. ಹೀಗೆ ಗ್ರಹಣ ನಿಮಿತ್ತಕವಾಗಿ ಮಾಡುವ ಶ್ರಾದ್ಧವನ್ನೇ ಅನ್ನದಿಂದ ಹೇಳಿರುವಾಗ, ವೇಧಕಾಲದಲ್ಲಿ ಮಾಡುವ ಸಾಂವತ್ಸರಿಕ ಶ್ರಾದ್ಧವನ್ನು ಅನ್ನದಿಂದ ಮಾಡುವುದು ಶಾಸ್ತ್ರೀಯವೇ ಆಗಿದೆ. ಒಂದುವೇಳೆ ಪಾಕಾಭಾವ, ಅಗ್ನ್ಯಭಾವ, ಪಾತ್ರಾಭಾವ, ಪಾಚಕಾಭಾವ, ನಿಷೇಧ ಮೊದಲಾದ ಕಾರಣದಿಂದ ಅನ್ನೇನ ಶ್ರಾದ್ಧವನ್ನು ಮಾಡಲಾಗದಿದ್ದರೆ ಆಮೇನ ಹೇಮ್ನಾ ವಾ ಮಾಡಬೇಕು. ಇಲ್ಲಿ ಬ್ರಾಹ್ಮಣಾಭಾವವು 'ಅನ್ನೇನಾಸಂಭವೇ ಎನ್ನುವುದಕ್ಕೆ ಅರ್ಥವಲ್ಲ. ಅಥವಾ 'ಬ್ರಾಹ್ಮಣಾಭಾವೇ ಆಮೇನ ಕುರ್ಯಾತ್' ಎಂದು ವಿಧಿಯೂ ತೋರುವುದಿಲ್ಲ. ಬ್ರಾಹ್ಮಣಾಭಾವೇ ದರ್ಭ ಬಟುವಿನಿಂದಲೂ ಶ್ರಾದ್ಧವನ್ನು ನಿರ್ವಹಿಸಬಹುದು. ಆದರೆ ಹಿಂದೆ ಹೇಳಿದ ಪಾಚಕಾದ್ಯಭಾವದಿಂದ ಅನ್ನೇನ ಶ್ರಾದ್ಧ ಮಡಲು ಸಾಧ್ಯವಿಲ್ಲದಿದ್ದಾಗ ಆಮೇನ ಹೇಮ್ನಾ ವಾ ಮಾಡಬೇಕೆಂದು ಶಾಸ್ತ್ರ ಹೇಳುತ್ತದೆ. ಸಾಂವತ್ಸರಿಕವನ್ನು ಅನ್ನದಿಂದಲೇ ಮಾಡಬೇಕು ಮತ್ತು ತದ್ದಿನೇ ಏವ ಮಾಡಬೇಕೆನ್ನುವುದರ ಕಾರಣದಿಂದ ಗ್ರಹಣದ ದಿನ ಶ್ರಾದ್ಧ ವ್ಯವಸ್ಥೆ ಹೇಗೆಂದು ಸಂಗ್ರಹಕಾರರ

ವಚನದಿಂದ ವೈದ್ಯನಾಥರು ವಿವರಿಸುತ್ತಾರೆ. ಯಥಾ ಸಂಗ್ರಹೇ– "ಚಂದ್ರ–ಸೂರ್ಯೋಪರಾಗೇಷು ಪಿತ್ರೋಃ ಶ್ರಾದ್ಧೇ ಉಪಸ್ಥಿತೇ । ಹೇಮ್ನಾಽಽಮೇನ ವಾ ಕೃತ್ವಾ ಶ್ರಾದ್ಧಂ ಕುರ್ಯಾತ್ ಪರೇಽಹನಿ ॥" ಎಂಬುದಾಗಿ. ಹಾಗೇ "ಆಬ್ದಿಕೇ ಸಮನುಪ್ರಾಪ್ತೇ ಗ್ರಹಣೇ ಚಂದ್ರ–ಸೂರ್ಯಯೋಃ । ಉಪೋಷ್ಯ ತದ್ದಿನಂ ಸಮ್ಯಕ್ ಪರೇಽಹ್ನಿ ಶ್ರಾದ್ಧಮಾಚರೇತ್ ॥" ಎಂದು ಪರದಿನ ಶ್ರಾದ್ಧವನ್ನು ಮಾಡುವ ವಿಧಿಯನ್ನು ತಿಳಿಸಲಾಗಿದೆ. ಹಾಗೇ ಸ್ಮೃತ್ಯಂತರದಲ್ಲಿ "ಗ್ರಹಣೇ ತು ದ್ವಿತೀಯೇಽಹ್ನಿ ರಜೋ ದೃಷ್ಟೌ ತು ಪಂಚಮೇ ॥" ಎಂದೂ, "ಶ್ರಾದ್ಧವಿಘ್ನೇ ಸಮುತ್ಪನ್ನೇ ಸೂತಕಾನ್ಮೃತಕಾದಪಿ । ಸೋಮಸೂರ್ಯೋಪರಾಗಾಭ್ಯಾಂ ಶ್ರಾದ್ಧಂ ಕುರ್ಯಾತ್ ಪರೇಽಹನಿ ॥" ಎಂದೂ, "ಭುಜೇರ್ನಿಷೇಧಕಾಲೇ ತು ಶ್ರಾದ್ಧಕಾಲೋ ಭವೇತ್ತದಾ । ಆಮಶ್ರಾದ್ಧಂ ತು ಕರ್ತವ್ಯಂ ಹೇಮಶ್ರಾದ್ಧಮಥಾಪಿ ವಾ ॥" ಎಂದೂ ವ್ಯವಸ್ಥಾ ಪ್ರದರ್ಶನವನ್ನು ಹೇಳಲಾಗಿದೆ. ಭೋಜನ ನಿಷೇಧಕಾಲವನ್ನು ಬಾಲವೃದ್ಧಾತುರಾದಿಗಳನ್ನು ಹೊರತು ಪಡಿಸಿ, ಸೂರ್ಯ ಗ್ರಹಣದಲ್ಲಿ ಮೊದಲು ನಾಲ್ಕು ಯಾಮಗಳನ್ನೂ, ಚಂದ್ರಗ್ರಹಣದಲ್ಲಿ ಮೂರು ಯಾಮಗಳನ್ನೂ ಬಿಡಲು ತಿಳಿಸಲಾಗಿದೆ. ಸಂಧ್ಯಾಕಾಲದಲ್ಲಿ ಉಪರಾಗ ಉಂಟಾದಲ್ಲಿ "ಸಂಧ್ಯಾಕಾಲೇ ಯದಾ ರಾಹುರ್ಗ್ರಸತೇ ಶಶಿಭಾಸ್ಕರೌ । ತದಹರ್ನೈವ ಭುಂಜೀತ ರಾತ್ರಾವಪಿ ಕದಾಚನ ॥" ಎಂದು ವಿಶೇಷ ನಿಷೇಧವನ್ನು ಹೇಳಲಾಗಿದೆ. ಇವುಗಳನ್ನು ವಿವರಿಸುತ್ತಾ ವೈದ್ಯನಾಥರು ವಿಶೇಷ ವ್ಯಾಖ್ಯಾನವನ್ನು ಸ್ಪಷ್ಟಪಡಿಸುತ್ತಾರೆ. ಯಥಾ– "ದರ್ಶೇ ರವಿಗ್ರಹೇ ಪಿತ್ರೋಃ ಪ್ರತ್ಯಾಬ್ದಿಕಮುಪಸ್ಥಿತಮ್ । ಅನ್ನೇನಾಸಂಭವೇ ಹೇಮ್ನಾ ಕುರ್ಯಾದಾಮೇನ ವಾ ಸುತಃ ॥" ಎಂದಾಗ ಭೋಜನ ನಿಷೇಧದ ಕಾರಣದಿಂದ ಅನ್ನೇನ ಶ್ರಾದ್ಧಮಾಡಲು ಸಾಧ್ಯವಾಗದಿದ್ದಾಗ "ಹೇಮ್ನಾ, ಆಮೇನ ವಾ ಕುರ್ಯಾತ್ ಇತಿ ।" ಎಂದಿದ್ದಾರೆ. ಮತ್ತು "ಕರ್ಮಕಾಲಾತ್ ಪ್ರಾಗೇವ ಮುಕ್ತೇ ಸೂರ್ಯಗ್ರಹಣೇ ಅಪರಾಹ್ಣಶ್ರಾದ್ಧಮನ್ನೇನ ಕಾರ್ಯಮಿತ್ಯುಕ್ತಂ ಭವತಿ" ಎಂದಿದ್ದಾರೆ. ಅಂದರೆ ಪ್ರತಿಸಾಂವತ್ಸರಿಕಶ್ರಾದ್ಧದ ಕಾಲವಾದ ಅಪರಾಹ್ಣಕಾಲಕ್ಕಿಂತ ಮೊದಲು ಗ್ರಹಣವು ಪರಿಸಮಾಪ್ತಿಯಾಗುವಂತಿದ್ದರೆ ಆಗ ಅನ್ನೇನೈವ ಅದೇ ದಿನ ಮುಖ್ಯಕಾಲವನ್ನಾರಂಭಿಸಿ ಸಾಂವತ್ಸರಿಕಶ್ರಾದ್ಧವನ್ನು ಮಾಡಬೇಕೆಂದರ್ಥ. ಹೀಗೆ ಅಪರಾಹ್ಣಾದಿ ಪಾರ್ವಣ ಮುಖ್ಯಕಾಲ ಮತ್ತು ನಂತರ ಗ್ರಹಣವಿದ್ದಾಗ ಪೂರ್ವಯಾಮಚತುಷ್ಟಯದಲ್ಲಿ ಭೋಜನ ನಿಷೇಧವಿರುವುದರಿಂದ ಅನ್ನೇನಾಬ್ದಿಕಶ್ರಾದ್ಧವನ್ನು ಮಾಡಲಾಗದಿದ್ದಲ್ಲಿ ಆಮೇನ ಮಾಡಬೇಕು. ಅಥವಾ ತದಭಾವೇ ಹೇಮ್ನಾ ಮಾಡಬೇಕು ಎಂದು ವೈದ್ಯನಾಥರು ಹಾಗೂ ಮಾಧವಾಚಾರ್ಯರು ನಿರ್ಣಯಿಸಿದ್ದಾರೆ. ಇದನ್ನೇ ಅಭಿಪ್ರಾಯವನ್ನಾಗಿರಿಸಿಕೊಂಡು ಕಾಲಾದರ್ಶಕಾರರು ಗ್ರಹಣ ಮತ್ತು ಪ್ರತ್ಯಾಬ್ದಿಕ ಉಭಯ ಶ್ರಾದ್ಧಗಳನ್ನು ಮಾಡಲು ನಿರ್ಣಯಿಸಿದ್ದಾರೆ. ಯಥಾ– "ಪ್ರತ್ಯಾಬ್ದಿಕಸ್ಯ ಚಾಲಭ್ಯ ಯೋಗೇಷು ವಿಹಿತಸ್ಯ ಚ । ಸಂಪಾತೇ ದೇವತಾಭೇದಾತ್ ಶ್ರಾದ್ಧಯುಗ್ಮಂ ಸಮಾಚರೇತ್ ॥" ಇತಿ । "ಗ್ರಹಣಾರ್ಧೋದಯಾದಿರಲಭ್ಯಯೋಗಃ" ಎಂದು ವೈದ್ಯನಾಥರು ವಿವರಿಸಿದ್ದಾರೆ. ಧರ್ಮಸಿಂಧುಕಾರರು ಹೇಮಾದ್ರಿರತ್ನಾವಳ್ಯಾದಿಗಳ ಮತವನ್ನು ವಿವರಿಸುತ್ತಾ "ಚಂದ್ರ–ಸೂರ್ಯಗ್ರಹೇ ಚೈವ ದದ್ಯಾದಾಮಂ ವಿಶೇಷತಃ । ಭೋಜಯನ್ ಪ್ರತ್ಯವಾಯೀ ಸ್ಯಾನ್ನ ಚ ತಸ್ಯ ಫಲಂ ಲಭೇತ್ ॥" ಎಂದಿರು– ವುದರಿಂದ ಪೂರ್ವೋಕ್ತ ವೈದ್ಯನಾಥ, ಕಾಲಾದರ್ಶಕಾರರ ಅಭಿಪ್ರಾಯದಂತೆ ಪಾರ್ವಣದ ಮುಖ್ಯಕಾಲವಾದ ಅಪರಾಹ್ಣ ಮತ್ತು ನಂತರ ಸೂರ್ಯಗ್ರಹಣವಾದಾಗ ಅದೇ ದಿನ, ಮತ್ತು ಗ್ರಸ್ತಾಸ್ತ ಚಂದ್ರಗ್ರಹಣವಾದಾಗ ತದುತ್ತರಕಾಲದಲ್ಲಿ ಮಾಡಬೇಕಾದ ಪ್ರತ್ಯಾಬ್ದಿಕವನ್ನು ಆಮದಿಂದ ಮಾಡಬೇಕು. ಆಮದಿಂದ ಶ್ರಾದ್ಧಮಾಡುವಾಗ– "ಆಮಶ್ರಾದ್ಧಂ ತು ಪೂರ್ವಾಹ್ಣೇ" ಎಂದಿರುವುದರಿಂದ ದ್ವಿಜರು ಪೂರ್ವಾಹ್ಣದಲ್ಲಿ ಮಾಡಬೇಕು. ಈ ಶ್ರಾದ್ಧವನ್ನು ಪಾರ್ವಣವಿಧಿಯಿಂದ ಮಾಡಿ ಸಕ್ತು ಅಥವಾ ತಂಡುಲ, ಗ್ರಹಪಾಕ, ಪಾಯಸದಿಂದ ಪಿಂಡವನ್ನು ಮಾಡಲು ತಿಳಿಸಲಾಗಿದೆ. ಆಮಶ್ರಾದ್ಧವಿಧಿಯನ್ನು ನಿರ್ಣಯಸಿಂಧು, ಧರ್ಮಸಿಂಧು, ಹೇಮಾದ್ರ್ಯಾದಿ ಮಹಾನಿಬಂಧಗಳಿಂದ ತಿಳಿಯಬೇಕು. ಈ ಆಮಶ್ರಾದ್ಧದಲ್ಲಿ ಭೋಜನವು ಲೋಪವಾಗಿರುವುದರಿಂದ ತೃಪ್ತಿಪ್ರಶ್ನ, ಜುಷಪ್ರಶ್ನ, ಅವಗಾಹ, ಆಪೋಶನ ಮೊದಲಾದವುಗಳು ಲೋಪವಾಗುತ್ತವೆ. ಆದ್ದರಿಂದ ಕೆಲವು ಮಂತ್ರಗಳನ್ನು ಊಹೆ ಮಾಡಬೇಕಾಗುತ್ತದೆಂದು ಗ್ರಂಥಗಳಿಂದ ತಿಳಿದುಬರುತ್ತದೆ. ಧರ್ಮಸಿಂಧು ಮೊದಲಾದ ಮಹಾನಿಬಂಧಗಳಲ್ಲಿ ಸಪಿಂಡೀಕರಣ, ಮಾಸಿಕ, ಪ್ರತಿಸಾಂವತ್ಸರಿಕ, ಮಹಾಲಯಾಷ್ಟಕ, ಅನ್ವಷ್ಟಕಾದಿ ಶ್ರಾದ್ಧಗಳನ್ನು ಆಮಾನ್ನೇನ ಮಾಡಬಾರದು ಎಂದು ತಿಳಿಸಿರುವುದರಿಂದ ಮತ್ತು ಕ್ಷಯಾಹವನ್ನು ಶ್ರಾದ್ಧವಿಲ್ಲದೇ ಕಳೆಯ ಬಾರದೆಂದು ಪೂರ್ವತ್ರ ತೋರಿಸಿದ ವಚನವಿರುವುದರಿಂದ, ಕ್ಷಯಾಹಾತಿಕ್ರಮ ಮಾಡಿದಲ್ಲಿ ದೋಷವೂ, ನಿಕೃಷ್ಟ ಜನ್ಮವೂ ಉಕ್ತವಾಗಿರುವುದರಿಂದ, ಅದೇ ದಿನ ಅನ್ನದಿಂದ ಶ್ರಾದ್ಧವನ್ನು ಮಾಡಲು ಅಸಾಧ್ಯವಾದಾಗ ಆ ದಿನದಂದು ಸಾಂವತ್ಸರಿಕ ಶ್ರಾದ್ಧವನ್ನು ಆಮದಿಂದ ಮಾಡಿ ಆ ದಿನ ಉಪವಾಸವಿದ್ದು ಪರೇಽಹನಿ ಅನ್ನದಿಂದ ಮತ್ತೊಂದು ಶ್ರಾದ್ಧಮಾಡಲು ಹೇಳಲಾಗಿದೆ. ಅದನ್ನೇ ವೈದ್ಯನಾಥರು ಸಂಗ್ರಹಕಾರರ ವಚನವೆಂದು ಉಲ್ಲೇಖಿಸುತ್ತಾ– "ಚಂದ್ರ–ಸೂರ್ಯೋಪರಾಗೇಷು ಪಿತ್ರೋಃ ಶ್ರಾದ್ಧ ಉಪಸ್ಥಿತೇ । ಹೇಮ್ನಾ ವಾಮೇನ ವಾ ಕೃತ್ವಾ ಶ್ರಾದ್ಧಂ ಕುರ್ಯಾತ್ ಪರೇಽಹನಿ ॥" ಎಂದೂ, "ಆಬ್ದಿಕೇ ಸಮನುಪ್ರಾಪ್ತೇ ಗ್ರಹಣೇ ಚಂದ್ರ–ಸೂರ್ಯಯೋಃ । ಉಪೋಷ್ಯ ತದ್ದಿನಂ ಸಮ್ಯಕ್ ಪರೇಽಹ್ನಿ ಶ್ರಾದ್ಧಮಾಚರೇತ್ ॥" ಎಂದು ಸ್ಮೃತ್ಯಂತರ ವಚನವನ್ನೂ ಹೇಳಿದ್ದಾರೆ. ಹೀಗೆ ತದ್ದಿನೇ ಶ್ರಾದ್ಧವನ್ನು ಮಾಡದೇ ಇರಬಾರದು ಎಂದರ್ಥ. "ಆನ್ನೇನೈವಾಬ್ದಿಕಂ ಕುರ್ಯಾತ್ ಹೇಮ್ನಾ ವಾ ಆಮೇನ ನ ಕ್ವಚಿತ್" "ಆಮಶ್ರಾದ್ಧಂ ಪ್ರಕುರ್ವೀತ ಮಾಸಸಂವತ್ಸರಾದೃತೇ" ಎಂಬ ಮರೀಚಿಲೌಗಾಕ್ಷ್ಯಾದಿ ವಚನಗಳು ಗ್ರಹಣದಿನಾತಿರಿಕ್ತ ದಿನಗಳಲ್ಲಿ ಅನ್ವಯವಾಗುತ್ತವೆ ಎಂಬುದಾಗಿ ನಿರ್ಣಯಸಿಂಧುಕಾರರು ಹೇಳುತ್ತಾರೆ ಮತ್ತು "ಗ್ರಹಣಾತ್ತು ದ್ವಿತೀಯೇಽಹ್ನಿ ರಜೋದೋಷಾತ್ತು ಪಂಚಮೇ" "ಗ್ರಸ್ತೋದಯೇ ಯದಾ ಚಂದ್ರೇ ಪ್ರತ್ಯಬ್ದಂ ಸಮುಪಸ್ಥಿತಮ್ । ತದ್ದಿನೇ ಚೋಪವಾಸಃ ಸ್ಯಾತ್ ಪ್ರತ್ಯಬ್ದಂ ತು ಪರೇಽಹನಿ ॥" "ಗ್ರಸ್ತಾವೇವಾಸ್ತಮಾನಂ ತು ರವೀಂದೂ ಪ್ರಾಪ್ನುತೋ ಯದಿ । ಪ್ರತ್ಯಬ್ದಂ ತು ತದಾ ಕಾರ್ಯಂ ಪರೇಽಹನ್ಯೇವ ಸರ್ವದಾ ॥ ಚಂದ್ರ–ಸೂರ್ಯೋಪರಾಗೇ ಚ ತಥಾ ಶ್ರಾದ್ಧಂ ಪರೇಽಹನಿ ॥" ಇತ್ಯಾದಿ ವಚನಗಳು ಮಹಾನಿಬಂಧ–

ಗಳಲ್ಲಿ ಅನುಪಲಬ್ಧವಾಗಿರುವುದರಿಂದ 'ನಿರ್ಮೂಲ ವಚನಗಳು' ಎಂದು ನಿರ್ಣಯಸಿಂಧು ಕಾರರು ನಿರ್ಣಯಿಸಿದ್ದಾರೆ. ಒಂದು ವೇಳೆ ಅನ್ನೇನ ಶ್ರಾದ್ಧಾಸಂಭವದಲ್ಲಿ ಆಮೇನ ತದ್ದಿನೇ ಶ್ರಾದ್ಧವನ್ನು ಮಾಡಬೇಕೆಂದು ಅರ್ಥ. ಪ್ರತ್ಯಾಬ್ದಿಕದ ದಿನ ಯಥಾಕಥಂಚಿತ್ ಶ್ರಾದ್ಧವನ್ನು ಮಾಡದಿದ್ದಲ್ಲಿ, ಕಾಲಮಾಧವ ಮತ್ತು ಸ್ಮೃತಿತತ್ತ್ವಗಳಲ್ಲಿ ಹೇಳಿದ ದೋಷಪ್ರಾಪ್ತಿ ಯಾಗುತ್ತದೆ. ಯಥಾ–ಭವಿಷ್ಯಪುರಾಣ ಪ್ರಭಾಸಖಂಡಯೋಃ– "ಮೃತಾಹನಿ ಪಿತುರ್ಯಸ್ತು ನ ಕುರ್ಯಾತ್ ಶ್ರಾದ್ಧಮಾದರಾತ್ । ಮಾತುಶ್ಚೈವ ವರಾರೋಹೇ ವತ್ಸರಾಂತೇ ಮೃತೇಽಹನಿ ॥ ನಾಹಂ ತಸ್ಯ ಮಹಾದೇವಿ ಪೂಜಾಂ ಗೃಹ್ಣಾಮಿ ನೋ ಹರಿಃ ॥" ಎಂದೂ, ಮರೀಚಿಃ ಯಥಾ– "ಪತಿತಾ ಜ್ಞಾನಿನೋ ಮೂರ್ಖಾಃ ಸ್ತ್ರಿಯೋಽಥ ಬ್ರಹ್ಮಚಾರಿಣಃ । ಮೃತಾಹಂ ಸಮತಿಕ್ರಮ್ಯ ಚಾಂಡಾಲೇ– ಷ್ವಭಿಜಾಯತೇ ॥" ಎಂದೂ, ಹೇಳಲಾಗಿದೆ. ಹೀಗೆ ನಾನಾವಚನಗಳ ನಿರ್ಣಯವನ್ನು ವ್ಯವಸ್ಥಾಪನಗೊಳಿಸಿ ವಿವೇಚಿಸಿದಾಗ ಗ್ರಹಣದ ದಿನ ಪ್ರತಿಸಾಂವತ್ಸರಿಕವನ್ನು ಅನ್ನದಿಂದ ಸಾಧ್ಯವಿದ್ದಲ್ಲಿ ಅನ್ನದಿಂದಲೇ ಮಾಡಬೇಕು. ವೇಧಕಾಲದಲ್ಲಿ ಮುಖ್ಯಕಾಲಪ್ರಾಪ್ತವಾದಲ್ಲಿ ನಿಷೇಧಕಾರಣದಿಂದ ಅನ್ನೇನ ಶ್ರಾದ್ಧ ಅಸಂಭವವಾದಾಗ ಆಮ ಅಥವಾ ಹೇಮಶ್ರಾದ್ಧವನ್ನು ಆದ್ಯತೆಯ ಮೇರೆಗೆ ಪೂರ್ವಾಹ್ಣದಲ್ಲಿ ಮಾಡಬೇಕು. ಅಶಕ್ತ್ಯಾದಿ ಕಾರಣದಿಂದ ಅದನ್ನೂ ಮಾಡಲಾಗದಿದ್ದಲ್ಲಿ ಉಪವಾಸ ಇದ್ದು ಅನನ್ಯಗತ್ಯಾ ಪರೇಽಹನಿ ಮಾಡಬೇಕೆಂದೂ ಕಂಡುಬರುತ್ತದೆ.

॥ ಶಮ್ ॥

## ಗ್ರಂಥಋಣ


1) ನಿರ್ಣಯಸಿಂಧುಃ
2) ಧರ್ಮಸಿಂಧುಃ
3) ವೈದ್ಯನಾಥೀಯ
4) ಸ್ಮೃತಿತತ್ತ್ವ
5) ಕಾಲಮಾಧವೀಯ (ಮಾಧವಾಚಾರ್ಯ)
6) ಸೂರ್ಯಸಿದ್ಧಾಂತ (ಭಾಸ್ಕರಾಚಾರ್ಯ)
7) ಬೃಹತ್ ಸಂಹಿತಾ (ವರಾಹಮಿಹಿರ)
8) ಮಿತಾಕ್ಷರಸಂಹಿತಾ, ಯಾಜ್ಞವಲ್ಕ್ಯಸ್ಮೃತಿಃ
9) ಶ್ರಾದ್ಧಪ್ರಕಾಶಃ (ಮಿತ್ರಮಿಶ್ರ)



**ಪ್ರೊ ॥ ವೆಂಕಟರಮಣ ಹೆಗಡೆ**
ಧರ್ಮಶಾಸ್ತ್ರ ವಿಭಾಗ
ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು,
ನ್ಯೂ ಸಯ್ಯಾಜಿ ರಾವ್ ರೋಡ್–570024,
ಮೈಸೂರು, ಕರ್ನಾಟಕ
ಸಂಪರ್ಕ ಸಂಖ್ಯೆ : 9480476144
E-mail : vhegde@gmail.com


**********